ಮಿನುಗದ ಚುಕ್ಕೆ



ಎ. ಪಿ. ಮಾಲತಿ

ಮಿನುಗದ ಚುಕ್ಕೆ

(ಕಾದಂಬರಿ)

ಎ. ಪಿ. ಮಾಲತಿ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

MINUGADA CHUKKE (A Novel) by (Mrs.) A. P. Malathi. Published by Geetha Book House, K. R. Circle, Mysore 570 001, 1983.

ಪ್ರಥಮ ಮುದ್ರಣ 1983

ಮುದ್ರಕರು : ಜಿ. ಎಸ್. ನಾಗೇಂದ್ರ, ಕರ್ನಾಟಕ ಪ್ರೆಸ್,
ಬಜ್ಜಣ್ಣ ಲೇನ್, ಚಾಮರಾಜಪುರಂ, ಮೈಸೂರು 570 004

ಮೊದಲ ಮಾತು

ಗೇಣಿ ಪದ್ಧತಿ ಇನ್ನೂ ಜಾರಿಯಲ್ಲಿದ್ದ ಕಾಲದಲ್ಲಿ "ಉಳುವವನೇ ಭೂಮಿಯ ಒಡೆಯ" ಎಂಬ ಶಾಸನವನ್ನು ಸರಕಾರ ಘೋಷಿಸುವ ಮೊದಲೇ ಭೂಮಾಲೀಕರು ತಮ್ಮ ಭೂಮಿಯನ್ನು ಗೇಣಿದಾರರಿಂದ ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಸಿದಾಗ ಅದೆಷ್ಟೋ ಬಡ ಗೇಣಿದಾರರು ಭೂಮಾಲೀಕರ ಕಪಿಮುಷ್ಟಿಯಲ್ಲಿ ನಲುಗಿ, ಅವರ ಆಸೆ-ಆಮಿಷಗಳಿಗೆ ಬಲಿಯಾಗಿ, ತಮ್ಮ ಜೀವನಾಧಾರದ ಕೃಷಿಭೂಮಿಯನ್ನು ಅವರಿಗೇ ಹಿಂದಿರುಗಿಸಿ ನಿರ್ಗತಿಕರಾಗಬೇಕಾಯಿತು. ಈ ಹಿನ್ನೆಲೆಯಲ್ಲಿ ರಚಿಸಿದ ಕಾದಂಬರಿಯೇ "ಮಿನುಗದ ಚುಕ್ಕೆ".

ದೊಡ್ಡ ಸಂಸಾರಕ್ಕೆ ಗೃಹಿಣಿಯಾಗಿ ಬಂದು ತುಂಡು ಗೇಣಿಭೂಮಿಯಲ್ಲಿ ಚಿನ್ನವನ್ನು ಬೆಳೆಯುವ ಆಸೆ ತಳೆದು, ಹಗಲಿರುಳೂ ಕಷ್ಟಪಡುತ್ತ ತನ್ನ ಕುಟುಂಬವನ್ನು ಬಡತನದಿಂದ ಮೇಲೆತ್ತುವ ಛಲ ಹೊತ್ತ ಹೆಣ್ಣು ಈ ಕಾದಂಬರಿಯ ಕೇಂದ್ರ ಬಿಂದು. ಕುಟುಂಬ, ಪರಿಸರ, ವಿಧಿಯ ಮಾರಕ ಹೊಡೆತದಲ್ಲಿ ಜೀವನಾಧಾರದ ಭೂಮಿ ಕೈಬಿಟ್ಟಾಗ ಧೃತಿಗೆಡದೆ ಒಳಮುಖದ ಸೌಂದರ್ಯದಲ್ಲಿ, ಪ್ರತಿಭೆಯಲ್ಲಿ ಇಂದಲ್ಲ ನಾಳೆ, ಎಲ್ಲಾದರೂ ಒಂದೆಡೆ ತಾನು ಮಿನುಗಬೇಕೆಂಬ ಬಯಕೆ. ಅವಳ ಬಯಕೆ ಈಡೇರಿತೇ ?

ಕಾದಂಬರಿಯನ್ನು ಬರೆದಿರಿಸಿ ಬಹಳ ಸಮಯವಾಯಿತು. ಈಗ ಇದನ್ನು ವಿಶ್ವಾಸದಿಂದ ಪ್ರಕಟಿಸುತ್ತಿರುವ ಗೀತಾ ಬುಕ್ ಹೌಸ್ ಪ್ರಕಾಶಕರಿಗೆ ನನ್ನ ಅನಂತ ವಂದನೆಗಳು. ನನ್ನ ಹಿಂದಿನ ಎಲ್ಲ ಕಾದಂಬರಿಗಳಂತೆ ಈ ಕಾದಂಬರಿಯನ್ನೂ ಓದುಗರು ಮೆಚ್ಚುಗೆಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಎ. ಪಿ. ಮಾಲತಿ

ಆರ್ಯಾಪು
(ಪುತ್ತೂರು, ದ. ಕನ್ನಡ)
ನವೆಂಬರ್ 1, 1982

ಎ. ಪಿ. ಮಾಲತಿ ಅವರ ಇತರ ಕೃತಿಗಳು

ಕಥೆ-ಕಾದಂಬರಿ

ಸೋಲಿನಲ್ಲಿ ಗೆಲವು
ಅರ್ಧಾಂಗಿ
ಆಘಾತ
ಅತೃಪ್ತಿ
ಅನಿಶ್ಚಯ
ಹೊಸ ಹೆಜ್ಜೆ
ಸರಿದ ತೆರೆ
ಪುನರ್ಮಿಲನ
ನೂಪುರಗಾನ
ಬದಲಾಗದವರು

ಇತರೆ

ಗ್ರಾಮೀಣ ಮಹಿಳೆಯರು
(ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬಹುಮಾನಿತ ಕೃತಿ)
ಹಳ್ಳಿಗೆ ಬಂದ ಮಹಿಳೆಯರು (ಶಿಶು ಸಾಹಿತ್ಯ)
ಸುಖದ ಹಾದಿ (ಕೆಲವು ಚಿಂತನಗಳು)
ಮಕ್ಕಳ ಪಾಲನೆ (ಸಚಿತ್ರ)

ಮಿನುಗದ ಚುಕ್ಕೆ

1

ಏಳು ನಾರಾಯಣನೆ, ಏಳು ಲಕ್ಷ್ಮೀರಮಣ,
ಏಳು ಗಿರಿಯೊಡೆಯ ವೆಂಕಟೇಶಾ..!

ತನ್ನ ಸುಮಧುರವಾದ ಕಂಠದಿಂದ ಬೆಳಗಿನ ಸುಪ್ರಭಾತ ಹಾಡುತ್ತಿದ್ದಾನೆ ಹರಿನಾರಾಯಣ. ಅವನ ಇಂಪಾದ ಧ್ವನಿಗೆ ಎಂದಿನಂತೆ ಎಚ್ಚತ್ತ ಕೇಶವ ದಿಗ್ಗನೆ ಎದ್ದು ಕುಳಿತ. ಓ.....ಆಗಲೇ ಬೆಳಗಾಗಿಹೋಗಿದೆ. ತನಗಂತೂ ಎಚ್ಚರವಾಗಲೇ ಇಲ್ಲ, ಎಂದುಕೊಳ್ಳುತ್ತ ಸುತ್ತಲೂ ನೋಡಿದ, ಉಳಿದವರು ಯಾರೂ ಇನ್ನೂ ಎದ್ದಿಲ್ಲ. ಅತ್ತಿಗೆಯೊಬ್ಬಳು ಅಡಿಗೆಕೋಣೆಯಲ್ಲಿ ಏನೋ ಮಾಡುತ್ತಿದ್ದಾಳೆ.

ಇವತ್ತು ಜನಾರ್ದನ ಶಾಸ್ತ್ರಿಗಳ ಮನೆಯಲ್ಲಿ ಮದುವೆ. ಆ ಮದುವೆಗೆ ತಮಗೆಲ್ಲಾ ಹೋಗಲಿಕ್ಕಿದೆಯೆನ್ನುವದು ನೆನಪಾಗಿ ಆ ಕ್ಷಣವೇ ಎದ್ದು ಹೊದಿಕೆಯನ್ನು ಝಾಡಿಸಿ ಒದ್ದು ಅಡಿಗೆಕೋಣೆಯತ್ತ ಬಂದು ಒಳಗೆ ಹಣಿಕಿ ಕೇಳಿದ :

“ಎಷ್ಟು ಹೊತ್ತಿಗೆ ನಾವೆಲ್ಲರೂ ಅಲ್ಲಿಗೆ ಹೋಗುವದು ?”

ಕೆಲಸದಲ್ಲಿದ್ದ ಅತ್ತಿಗೆ ಉತ್ತರಿಸಲಿಲ್ಲ. ಅವನು ಮತ್ತೊಮ್ಮೆ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಂತೆ ಮಲಗಿದ್ದ ವೇದಮ್ಮ ಹೊದಿಕೆಯೊಳಗಿನಿಂದ ಗುರುಗುಟ್ಟಿದಳು : “ಮದುವೆ ಮುಹೂರ್ತವಿರುವದು ಮಧ್ಯಾಹ್ನ ಹನ್ನೊಂದು ಗಂಟೆಗೆ. ಈ ಮಂಗ ನಸುಕಿನಲ್ಲಿಯೇ ಹೊರಟಿದ್ದಾನೆ! ನಿಂಗೇನು ಈಗಲೇ ಅಲ್ಲಿ ಯಾರೂ ಎಲೆ ಹಾಕಿ ಬಡಿಸುವದಿಲ್ಲ. ಹಾಳಾದವನು, ಬೆಳಿಗ್ಗೆ ಸುಖವಾಗಿ ನಿದ್ರೆಮಾಡುವದಕ್ಕೂ ಬಿಡಲಾರ.”

ಸಹಜವಾಗಿ ಕೇಶವನ ಎಡಗೈ ಹೆಬ್ಬೆರಳು ಬಾಯಿಗೆ ಹೋಯಿತು. ಹೆಬ್ಬೆರಳನ್ನು ಚೀಪುತ್ತ ನಿಧಾನವಾಗಿ ಹೊರಗೆ ನಡೆದು ಅಂಗಳದಲ್ಲಿ ಬಂದು ನಿಂತ. ಮದುವೆಗೆ ಹೋಗುವದನ್ನೇ ಚಿಂತಿಸುತ್ತ, ಅಲ್ಲಿಯ ರುಚಿಯಾದ ಊಟವನ್ನು ಸ್ಮರಿಸುತ್ತ ಬಾಯಲ್ಲಿ ನೀರೂರಿ ‘ಆಹಾ, ಇವತ್ತು ಒಂದು

ದಿನವಾದರೂ ಹೊಟ್ಟೆತುಂಬಾ ಊಟ ಸಿಗುತ್ತಲ್ಲ' ಎಂದುಕೊಂಡ. ಹದಿಮೂರು ವರ್ಷದ ತೆಳ್ಳಗೆ ಕಡ್ಡಿಯಂತೆ ದೇಹವಿದ್ದ ಪೀಚಲು ಮುಖದ ಕೇಶವ ಹೆಬ್ಬೆರಳನ್ನು ಚೀಪುತ್ತ ಯೋಚಿಸುತ್ತಿದ್ದಂತೆ ಅವನಿಗಿಂತ ಎರಡು ವರ್ಷ ಹಿರಿಯುವನಾದ ಮಾಧವ ಅವನ ಹತ್ತಿರ ಬಂದು ನಿಂತುಕೊಂಡ. ಮದುವೆಗೆ ಹೋಗುವ ಆತುರ ಅವನ ಮುಖದ ಮೇಲೆಯೂ ಕಾಣಿಸುತ್ತಿದೆ.

ಕೇಶವ ತನ್ನ ಹೆಬ್ಬೆರಳನ್ನು ಬಾಯಿಂದ ತೆಗೆಯುತ್ತ ಅಣ್ಣನೊಡನೆ ಮದುವೆ ವಿಷಯವನ್ನೇ ಎತ್ತಿಕೊಂಡು ಮಾತನಾಡಲಾರಂಭಿಸಿದ. ಅಲ್ಲಿ ಮಾಡಲಿರುವ ವಿಶೇಷ ಅಡಿಗೆಗಳನ್ನೂ ನೆನೆಸಿಕೊಂಡರು ಇಬ್ಬರೂ.

"ಶಾರದೆ ಹೇಳಿದ್ದು, ಇವತ್ತು ಜಿಲೇಬಿ ಮತ್ತು ಹೋಳಿಗೆಯಂತೆ! ಎರಡನ್ನೂ ಒಟ್ಟಿಗೇ ತಿನ್ನುವದು ಸ್ವಲ್ಪ ಕಷ್ಟ, ಅಲ್ಲವೇನಣ್ಣಾ ?"

"ಎಲ್ಲಾ ನಾಲಿಗೆಯ ಮೇಲಿರಿಸಿ ತಿನ್ನುವಷ್ಟೇ ಹೊತ್ತು. ಹೊಟ್ಟೆ ತುಂಬಿದ ಮೇಲೆ ಯಾವ್ದೂ ಬೇಡ."

"ಹೀಗೆ ಮಾಡೋಣ—" ಉತ್ಸಾಹಗೊಂಡ ಕೇಶವ, "ಹೊಟ್ಟೆತುಂಬಾ ಅನ್ನ ಪಾಯಸ ತಿನ್ನೋಣ. ಹೋಳಿಗೆ, ಜಿಲೇಬಿ ಬಂದಾಗ ನಮ್ಮ ಎಡಗೈ ಅವರ ಮುಂದೆ ನೀಡೋಣ. ಎಡಗೈಮೇಲೆ ಹಾಕ್ತಾರೆ ಬಡಿಸುವವರು."

"ವಾಹ್, ಚೆನ್ನಾಗಿದೆ ಸಲಹೆ. ಈಶ್ವರಿ ಎಲ್ಲಿ? ಅವಳಿಗೂ ಹೇಳು, ಎಡಗೈ ಮೇಲೆ ತೆಗೆದುಕೊಂಡದ್ದು ನಾಳೆ ತಿನ್ನಲಿಕ್ಕಾಯ್ತು."

ಅಷ್ಟರಲ್ಲಿ ಕಣ್ಣು ಜುಜ್ಜುತ್ತಾ ಬಂದಳು ಎಂಟು ವರ್ಷದ ಈಶ್ವರಿ. ಅವಳಿಗೂ ಗುಟ್ಟಾಗಿ ಈ ಉಪಾಯ ಹೇಳಿದಾಗ ಅವಳು ಅಗಲವಾಗಿ ಬಾಯಿ ತೆರೆದು ನಗುತ್ತ "ಆಹೋ, ನಾನು ಐದು ಹೋಳಿಗೆ ಎಂಟು ಜಿಲೇಬಿಯನ್ನು ಅಂಗೈ ಮೇಲೆ ಕೇಳಿ ಹಾಕಿಸಿಕೊಳ್ತೇನೆ, ನೋಡ್ತಿರಿ" ಎಂದಳು.

ಜನಾರ್ದನ ಶಾಸ್ತ್ರಿಗಳ ಏಕೈಕ ಪುತ್ರಿ ತನ್ನ ಕೈ, ಕಾಲಬೆರಳುಗಳಿಗೆ ಮದರಂಗಿ ಹಚ್ಚಿಸಿಕೊಳ್ಳುತ್ತ ಆಭರಣಗಳನ್ನು ಮೈತುಂಬಾ ತೊಟ್ಟು ಭಾವೀ ಪತಿಯ ಕನಸಿನಲ್ಲಿ ಮುಳುಗಿದ್ದರೆ ನಮ್ಮ ಈ ಮಕ್ಕಳಿಗೆ ಅವಳ ಮದುವೆ ಊಟದ ಚಿಂತೆ! ಯಾವಾಗಲೂ ಗಂಜಿ, ಉಪ್ಪು ಊಟ ಮಾಡಿ ಬೆಳೆದಿರುವ ಇವರಿಗೆಲ್ಲಾ ಇವತ್ತು ಸಿಗಲಿರುವ ಮದುವೆಯ ಮೃಷ್ಟಾನ್ನಭೋಜನದ ಹಗಲುಗನಸು! ತಪ್ಪೇನಿಲ್ಲ, ಆ ಸಡಗರದಲ್ಲಿಯೇ ಮುಳುಗಿದ್ದಾರೆ ಮಕ್ಕಳು!!

ನಿಧಾನವಾಗಿ ಬಿಸಿಲೇರಿತು. ಮದುವೆಗೆ ಹೋಗುವವರು ಒಬ್ಬೊಬ್ಬರಾಗಿ ಈ ಮನೆಯ ಎದುರಿನಿಂದಲೇ ಹೋಗಲಾರಂಭಿಸಿದರು. ಜನರನ್ನು ತುಂಬಿಸಿ

ಕೊಂಡ ಕಾರುಗಳು ಒಂದರ ಹಿಂದೆ ಒಂದು ಬರಲಾರಂಭಿಸಿದವು. ದೂರದಲ್ಲಿ ಸುಶ್ರಾವ್ಯವಾಗಿ ಮಂಗಳವಾದ್ಯವೂ ಕೇಳಿಸಲಾರಂಭಿಸಿತು. ಜನರ ಓಡಾಟ, ಬಣ್ಣಬಣ್ಣದ ಉಡುಪು, ಓಲಗದ ಧ್ವನಿ ಕೇಳಿದ ಕೇಶವನ ಕಾಲುಗಳು ನೆಲದ ಮೇಲೆ ನಿಲ್ಲಲಿಲ್ಲ. ಪದೇ ಪದೇ ಒಳಗೆ ಹೋಗುತ್ತ "ಅತ್ತಿಗೆ, ಬೇಗ ಬೇಗ ತಯಾರಾಗು, ಹೋಗೋಣ" ಎನ್ನುತ್ತಿದ್ದಾನೆ.

ಈ ದಿನ ಏಕೋ ಅವನ ಅತ್ತಿಗೆ ತುಂಬಾ ನುಂಕಳಾಗಿದ್ದಾಳೆ. ಮಾಧವ ಅವಳ ಮಾತು ಮೀರಿ ಈಗತಾನೇ ಹೊರಟುಹೋಗಿದ್ದಾನೆ ಶಾಸ್ತ್ರಿಗಳ ಮನೆಗೆ. ಅವನ ಜೊತೆಯಲ್ಲಿಯೇ ಹೋಗುವ ಆಸೆಯಿದ್ದರೂ "ನಾನೂ ನಿನ್ನ ಜೊತೆ ಬರುತ್ತೇನೆ" ಎಂದು ಅತ್ತಿಗೆ ಹೇಳಿದಮೇಲೆ ಅವನು ಹಾಗೇ ಹೊರಟುಹೋಗಲಾರ. ಇನ್ನು ಅಮ್ಮನಂತೂ ಬಹಳ ನಿಧಾನ. ಹೊರಡುವ ತಯಾರಿಯಲ್ಲೇ ಇದ್ದಾಳೆ ಇನ್ನೂ.

ಅಣ್ಣನಿಗೆ ಮದುವೆಯಾಗಿ ಈ ಹೊಸ ಅತ್ತಿಗೆ ಮನೆತುಂಬಿದಂದಿನಿಂದ ಕೇಶವನಿಗೆ ಅವಳ ಮೇಲೆ ಎಲ್ಲಿಲ್ಲದ ಅಭಿಮಾನ. ತನ್ನ ಅತ್ತಿಗೆ ತಮ್ಮೆಲ್ಲರಿಗಿಂತಲೂ, ಅಣ್ಣನಿಗಿಂತಲೂ ತುಂಬಾ ಕಲಿತವಳು ಎನ್ನುವ ಹೆಮ್ಮೆ. ಅವಳ ಮೃದು ಮಾತು, ಸಹನೆಗೆ ಮನದಲ್ಲೇ ಅಚ್ಚರಿಯಾಗಿದೆ. ತನ್ನ ಅಮ್ಮನಂತೆ ಇಲ್ಲ, ಯಾವುದೋ ವಿಶೇಷ ಗುಣ, ಆಕರ್ಷಣೆ ಅವಳಲ್ಲಿದೆ ಎಂದು ಯಾವಾಗಲೋ ತಿಳಿದು ಹೋಗಿದೆ. ತನ್ನ ಅಮ್ಮ ಹೇಳಿದ ಒಂದು ಕೆಲಸವನ್ನೂ ಅವನಿಂದ ಮಾಡಲಾಗುವದಿಲ್ಲ. ಆದರೆ ಅತ್ತಿಗೆ ಹೇಳಿದರೆ ತನ್ನಿಂದ ಸಾಧ್ಯವಿಲ್ಲ ಎನ್ನಲಾರ.

"ಯಾಕೆ ಅತ್ತಿಗೇ, ಮೈ ಚೆನ್ನಾಗಿಲ್ಲವೇ?" ಮತ್ತೊಂದು ಬಾರಿ ಒಳಗೆ ಬಂದು ಪ್ರಶ್ನಿಸಿದ ಕಳಕಳಿಯಿಂದ.

ಅತ್ತಿಗೆ ತಾನುಟ್ಟ ಸೀರೆಯಿಂದ ಕಣ್ಣುಗಳನ್ನು ಒರೆಸಿಕೊಂಡಾಗ ಕೇಶವ ಇನ್ನೂ ಹತ್ತಿರ ಬಂದ. ತನ್ನ ಅತ್ತಿಗೆ ಅಳುತ್ತಿದ್ದಾಳಲ್ಲ, ಅಮ್ಮ ಬಿರುನುಡಿಯಾಡಿದಳೇ, ತಮ್ಮ ಮೇಲೆ ಅಸಮಾಧಾನವಾಯಿತೇ? ಯಾಕೆ ಅಳುತ್ತಿದ್ದಾಳೆ ಎಂದು ಕಸಿವಿಸಿಗೊಂಡ. ಹೊಸ ಸೀರೆ ಅವಳ ಮುಖಕ್ಕೆ ಒಂದಿನಿತೂ ಶೋಭೆಕೊಡದಿದ್ದರೂ ಕೇಶವನಿಗೆ ಅತ್ತಿಗೆ ಈ ಸೀರೆಯುಲ್ಲಿ ತುಂಬಾ ಚೆನ್ನಾಗಿ ಕಾಣಿಸುತ್ತಾಳೆ ಎಂದೆನಿಸಿತು.

"ಅಳ್ತಾ ಇದ್ದೀಯಾ, ಅತ್ತಿಗೇ?" ಮೃದುವಾಗಿ ಕೇಳಿದಾಗ ಅವಳು ಮೆಲ್ಲನೆ ನಕ್ಕಳು, "ಇಲ್ಲಪ್ಪ, ಅಳೋದಕ್ಕೆ ನಂಗೇನಾಗಿದೆ?"

"ಹಾಗಾದರೆ ಬೇಗ ಹೋಗೋಣ ಬಾ." ಕೇಶವನಿಗೆ ಅವಸರ.

ಅತ್ತಿಗೆ ಕೈತುಂಬಾ ಗಾಜಿನ ಬಳೆಗಳನ್ನು ಧರಿಸಿಕೊಂಡು ತುಟಿಯ ಮೇಲೆ ಒಂದು ಬಾರಿ ಕೈಯಾಡಿಸಿ ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡಿಕೊಳ್ಳುತ್ತ "ನಡಿ ಹೋಗೋಣ. ಎಲ್ಲಿ ಈಶ್ವರಿ, ನಿನ್ನ ಅಮ್ಮ? ಎಲ್ಲರೂ ಒಟ್ಟು ಗೂಡಿಯೇ ಹೋಗೋಣ" ಎಂದಳು.

2

ಜನಾರ್ದನ ಶಾಸ್ತ್ರಿಗಳ ಮನೆಯೆದುರು ತಲೆ ಎತ್ತಿ ನಿಂತ ಮದುವೆ ಚಪ್ಪರ ವೆಲ್ಲ ಅತಿಥಿಗಳಿಂದ, ಆತ್ಮೀಯ ಬಳಗದವರಿಂದ ತುಂಬಿಹೋಗಿದೆ. ಹೊಸ ಹೊಸ ಆಭರಣಗಳನ್ನು ತೊಟ್ಟ ಮಹಿಳಾಮಣಿಗಳ ಠೀವಿಯನ್ನು ಕಂಡು ದಿಗಿಲಾಗಬೇಕು. ನಾನಾರೀತಿಯ ಬೆಲೆಬಾಳುವ ಸೀರೆಗಳ ಪ್ರದರ್ಶನ. ತಮ್ಮ ಸೀರೆ ಎಲ್ಲಿ ಮಾಸಿಹೋಗುತ್ತವೋ ಎಂಬ ಭೀತಿಯಿಂದ ಜಾಗರೂಕರಾಗಿ ಬಳಕುವ ಲತೆಯಂತೆ ತಿರುಗುತ್ತಿದ್ದಾರೆ ಹಲವರು.

ಹರಿನಾರಾಯಣನ ಹದಿನೇಳು ವರ್ಷದ ತಂಗಿ ಶಾರದೆ ತನ್ನ ಪ್ರಾಯದ ಹುಡುಗಿಯೊಬ್ಬಳ ಜೊತೆಯಲ್ಲಿ ಬಂದವರನ್ನು ಉಪಚರಿಸಲು ನಿಂತಿದ್ದಾಳೆ. ಒಳಗಿನಿಂದ ಕಾಫಿ ತಿಂಡಿ ತರುವದು, ಗ್ಲಾಸು ತೆಗೆಯುವದು, ಹೂವು ಕೊಡು ವದು ಇವೇ ಅವಳ ಕೆಲಸಗಳು. ಕೆಲವು ದಿನಗಳ ಮೊದಲು ಜನಾರ್ದನ ಶಾಸ್ತ್ರಿಗಳು 'ಶಾರದೆಯನ್ನು ಒಂದೆಂಟುದಿನಗಳಿಗಾಗಿ ನಮ್ಮ ಮನೆಗೆ ಕೆಲಸಕ್ಕೆ ಕಳುಹಿಸಿಕೊಡು' ಎಂದು ವೇದಮ್ಮನನ್ನು ಕೇಳಿದಾಗ ಸಂತೋಷದಿಂದ ಒಪ್ಪಿದ್ದಳು. ಶ್ರೀಮಂತರ ಮನೆಯಲ್ಲಿ ಹೇಗೆ ಕೆಲಸ ಮಾಡುವದು ಎಂದು ಶಾರದೆ ಅಳುಕಿದ್ದರೂ ವೇದಮ್ಮ 'ಹೂಂ' ಎಂದಿದ್ದಳು ಧೈರ್ಯದಿಂದ.

ಈಗ ತುಂಬಿದ ಚಪ್ಪರದಲ್ಲಿ ಚುರುಕಿನಿಂದ ಆಚೀಚೆ ಓಡಾಡುತ್ತ ಕೆಲಸ ಮಾಡುವ ಮಗಳನ್ನು ನೋಡಿ ವೇದಮ್ಮನ ಹೃದಯ ತುಂಬಿಬಂದಿತು. ಸೊಸೆಯ ಕಿವಿಯಲ್ಲಿ ಪಿಸುಗುಟ್ಟಿದಳು: "ಈ ಮನೆಯವರ ಕರುಣೆ ಅವಳ ಮೇಲೆ ಬೀಳಬೇಕಾದರೆ ಎಷ್ಟೋ ಪುಣ್ಯ ಮಾಡಿರಬೇಕು!"

ಕೇಶವನಿಗಂತೂ ಆನಂದವೇ ಆನಂದ. ಮಾಧವ ಅಲ್ಲಿ ಎಲ್ಲಿ ಅಲೆಯು ತ್ತಿದ್ದನೋ ಅವನು ಹುಡುಕುವುದಕ್ಕೆ ಹೋಗಲಿಲ್ಲ. ತಾನು ಮಾತ್ರ ದೊಡ್ಡ

ಚಪ್ಪರದ ಬದಿಯಲ್ಲಿ ಹಾಕಿದ ಸಣ್ಣ ಅಡಿಗೆಚಪ್ಪರದ ಬಾಗಿಲಲ್ಲಿ ನಿಂತಿದ್ದಾನೆ ಆಸೆಯ ಕಣ್ಣುಗಳನ್ನು ಅರಳಿಸಿಕೊಂಡು. ಅಡಿಗೆ ತಯಾರಿ ನಡೆದಿದೆ ಒಳಗೆ. ಇಬ್ಬರು ಅರೆಯುತ್ತಿದ್ದಾರೆ, ಇಬ್ಬರು ಕಾಯಿ ಹೆರೆಯುತ್ತಿದ್ದಾರೆ. ಇಬ್ಬರು ಇಬ್ಬರು ಪದಾರ್ಥವನ್ನು ಮಗುಚುತ್ತಿದ್ದಾರೆ. ಇನ್ನಿಬ್ಬರು ಜಿಲೇಬಿ ಮಾಡು ವದರಲ್ಲಿ ಮಗ್ನರಾಗಿದ್ದಾರೆ. ಒಂದು ಬದಿಯಲ್ಲಿ ರಾಶಿ ಅನ್ನ ಸುರಿದಿದ್ದಾರೆ, ಇನ್ನೊಂದು ಬದಿಯಲ್ಲಿ ಹೋಳಿಗೆಯ ಗೆರಸಿಗಳು. ಇದ್ದಕ್ಕಿದ್ದಂತೆ ಅವನಿಗೆ ಮಾಯಾಬಜಾರದ ಹಾಡು ನೆನಪಿಗೆ ಬಂದಿತು.

"ವಿವಾಹ ಭೋಜನವಿದು, ವಿಚಿತ್ರ ಭಕ್ಷ್ಯಗಳಿವು! ಬೀಗರಿಗೆ ಔತಣ ವಿದು, ದೊರಕೊಂಡಿತೆಮಗೆ ಬಂದು!! ಅಹಹ್ಹಹ್ಹಾ...."

ಅದನ್ನು ಯೋಚಿಸುತ್ತ ಎಡಹೆಬ್ಬೆರಳನ್ನು ಬಾಯಲ್ಲಿರಿಸಿ ಚೀಪಲಾರಂಭಿ ಸಿದ. ಜೊಲ್ಲು ತುಂಬಿತು ಬಾಯಲ್ಲಿ.

"ಇಲ್ಲೇನ್ಮಾಡ್ತಾ ಇದ್ದಿ?" ಅತ್ತಿಗೆ ಕೈ ಹಿಡಿದಾಗ ಬೆಚ್ಚಿಬಿದ್ದ, "ಹೀಗೆ ಆಸೆಪಡ್ತಾ ಇಲ್ಲಿ ನಿಂತಿರಬಾರದು. ಬಾ, ನನ್ನ ಹತ್ತಿರ ಕುಳಿತುಕೋ. ನಿನ್ನನ್ನು ನೋಡಿದರೆ ಹೊಟ್ಟೆಗಿಲ್ಲದ ನಾಯಿ ಅನ್ತಾರೆ, ಬಾಪ್ಪ...."ಅವಳು ತನ್ನೊಂದಿಗೆ ಅವನನ್ನು ಕರೆದುಕೊಂಡು ಚಪ್ಪರದಲ್ಲಿ ಎಲ್ಲ ಹೆಂಗಸರ ಹಿಂಭಾಗದಲ್ಲಿ ಮುದುಡಿಕೊಂಡು ಕುಳಿತಳು.

ಮರುಮಾತಿಲ್ಲದೆ ಕೇಶವನೂ ಸಣ್ಣ ಮೋರೆ ಮಾಡಿ ಕುಳಿತುಬಿಟ್ಟ. ಅವನ ಕಣ್ಣೆದುರು ವಿವಿಧ ಭಕ್ಷ್ಯಗಳು ಕುಣಿಯುತ್ತಾ ಇವೆ. ತಾನೂ ದೊಡ್ಡವ ನಾದರೆ? ಅವನು ಕೈಬೆರಳನ್ನು ಎಣಿಸಿಕೊಂಡ, "ಹಾಂ, ಇನ್ನು ಏಳು ವರ್ಷಕ್ಕೆ ನಾನು ದೊಡ್ಡವನಾಗುತ್ತೇನೆ. ಆಗ ದೊಡ್ಡ ಹೋಟೆಲ್‌ನ್ನು ಇರಿಸಿ ಪ್ರತಿದಿನವೂ ಭಕ್ಷ್ಯಮಾಡಿ ತಿನ್ನುತ್ತೇನೆ. ಅಥವಾ ದೊಡ್ಡ ಶ್ರೀಮಂತ ನಾಗಿ ನನಗೆ ಬೇಕಾದುದನ್ನೆಲ್ಲ ಮಾಡಿ ತಿಂದು ತೇಗ್ತೇನೆ."

ಅಷ್ಟರಲ್ಲಿ ಯಾರೋ ಕಿಸಕ್ಕನೆ ನಕ್ಕ ಸದ್ದು ಕೇಳಿಸಿದಂತಾಗಲು ಮೆಲ್ಲನೆ ಅಲ್ಲಿಂದೆದ್ದು ಹೊರಗೆ ನಡೆದ, ಮಾಧವ ಎಲ್ಲಿದ್ದಾನೋ ಎಂದು ಹುಡುಕುತ್ತಾ.

"ಹೇಯ್, ಅಲ್ಲಿ ನೋಡಿದ್ಯೇನೇ ಅವಳನ್ನು, ಅದೇ ಆ ಕೆಂಪು ಸೀರೆ ಯನ್ನುಟ್ಟು ಕುಳಿತವಳನ್ನು, ಹೇಗಿದ್ದಾಳೆ ನೋಡು."

"ಓಹೋ, ಬಹಳ ಚೆಂದವಾಗಿದ್ದಾಳಲ್ಲ, ಯಾರವಳು?"

"ಚೆಂದವಾಗಿದ್ದಾಳೆ ಅಲ್ಲವೇ. ಅಪರೂಪಕ್ಕೆ ಬ್ರಹ್ಮ ಸೃಷ್ಟಿಮಾಡಿದ ಹೆಣ್ಣು ಅದು! ಹಹ್ಹ....ಅದೇ ನಮ್ಮ ಹುಚ್ಚನ ಹೆಂಡತಿ."

"ಏನಂದೆ?" ಮೊದಲಿನಾಕೆ ಹುಬ್ಬೇರಿಸಿದಳು, "ಯಾರು....ಆ ಹುಚ್ಚ ಹರಿನಾರಾಯಣ, ಅವನಿಗೆ ಮದುವೆಯಾಯ್ತೇ? ಯಾವ ಕರ್ಮಕ್ಕೆ ಅವನು ಮದುವೆಯಾದ?"

"ಅವನು ಅರೆಪಿರಕಿ ಹುಚ್ಚ, ಇವಳು ನೋಡು ಹೀಗೆ! ಏನೇ, ಜೊತೆ ಬಹಳ ಚೆನ್ನಾಗಿದೆಯಲ್ಲ?"

"ರೂಪದಲ್ಲಿ ಆ ಹುಚ್ಚ ಮನ್ಮಥನಂತೆ ಇದ್ದಾನೆ", ಇಬ್ಬರ ಮಾತಿನಲ್ಲಿ ಆಸಕ್ತಿ ತಳೆದ ಇನ್ನಿಬ್ಬರು ಇತ್ತ ಹೊರಳಿದರು, "ಅಂದವಾದ ಪೈಕಟ್ಟು, ಅಚ್ಚಬಿಳಿ ಬಣ್ಣ, ತೀಡಿಟ್ಟ ಕಣ್ಣು ಮುಖ, ಒಳ್ಳೆಯ ಉಡುಪು ಹಾಕಿ ಬಿಟ್ಟರೆ ಆಹ್....ಎಷ್ಟು ಚೆನ್ನಾಗಿ ಕಾಣಬಲ್ಲ. ನಮ್ಮ ಸೀಮೆಯಲ್ಲೇ ಅವನಷ್ಟು ರೂಪವಂತರು ಸಿಗಲಾರರು. ಅಲ್ನೋಡು, ಚಪ್ಪರದ ತುದಿಯಲ್ಲಿ ಕುಳಿತಿದ್ದಾನಲ್ಲ, ಪಾಪ, ಒಂದೇ ಕೊರತೆ, ಬುದ್ಧಿ ಶೂನ್ಯ! ಅವನು ಸರಿಯಾಗಿದ್ದರೆ ನನ್ನ ಮಗಳನ್ನೇ ಕೊಟ್ಟುಬಿಡ್ತಿದ್ದೆ."

"ಹೊ ಹೋ....ನಿನ್ನ ಮಗಳು ಅವನ ಹೆಂಡತಿಯಷ್ಟು ರೂಪವತಿಯಾಗಿರಲಿಕ್ಕಿಲ್ಲ. ಅದಕ್ಕೇ ಅವನು ಮದುವೆಯಾಗಿಲ್ಲ!"

ನಗೆಯ ತರಂಗಗಳು ಎದ್ದವು ಸುತ್ತಲೂ. ಇನ್ನೊಮ್ಮೆ ಎಲ್ಲರೂ ತಮ್ಮ ಕಣ್ಣತುದಿಯಿಂದ ಹಿಂದೆ ಕುಳಿತವಳನ್ನು ನೋಡಿದರು. ಅವಳೋ ನಾಚಿಗೆ ಅವಮಾನದಿಂದ ಮುಖ ತಗ್ಗಿಸಿಬಿಟ್ಟಿದ್ದಳು.

"ಆ ಸೀರೆಯನ್ನು ಉಟ್ಟ ಕ್ರಮ ನೋಡು, ಒಂದು ನಿರಿಗೆ ಮೇಲೆ, ಇನ್ನೊಂದು ನೆಲಗುಡಿಸುತ್ತಾ ಇದೆ. ಅಲ್ಲೇ, ಆ ಕೂದಲು ಬಾಚಿದ ಕ್ರಮ ನೋಡು. ನಾರದನ ಜುಟ್ಟು ಕೂಡಾ ಇದಕ್ಕಿಂತ ಚೆನ್ನಾಗಿರಲಾರದು! ಎಲ್ಲೀದಂತೆ ಹುಡುಗಿ? ಹಳ್ಳಿಮೂಲೆಯದ್ದೋ?"

"ಆ ಹುಚ್ಚನಿಗೆ ಗುರುಪುರದಲ್ಲಿ ಯಾರೂ ಹೆಣ್ಣು ಕೊಡ್ಲಿಲ್ಲ. ಅದ್ಯಾಕೆ ಮಂಗಳೂರು, ಬಜ್ಪೆ, ಎಲ್ಲಿಯೂ ಹೆಣ್ಣು ಸಿಗಲಿಲ್ಲ. ಏನಿದೆ ಅವನಿಗೆ ಯೋಗ್ಯತೆ? ಅವನಿಗೆ ಹೆಣ್ಣು ಕೊಡುವ ಬದಲು ಹುಡುಗಿಯನ್ನು ಕಲ್ಲು ಕಟ್ಟಿ ಬಾವಿಗೆ ಎಸೆಯುವದು ಎಷ್ಟೋ ಕ್ಷೇಮ. ಈ ಹುಡುಗಿಯನ್ನು ಸಾಗರದ ಮೂಲೆಯಿಂದ....ಯಾವದೋ ಹಳ್ಳಿಯಿಂದ ತಂದರಂತೆ, ಪಾಪ, ಹುಡುಗಿಗೆ ಮದ್ವೆ ಆದ್ಮೇಲೆ ಗೊತ್ತಾಯ್ತು ಇವನ ಹಣೆಬರಹ."

"ಇವಳ ರೂಪಕ್ಕೆ ಮರುಳಾಗಿ ಕಲೆಕ್ಟರ್ ಬರ್ತಾ ಇದ್ದನೇ? ಅಥವಾ ರಾಜಕುಮಾರನೇ? ಇಂಥವನು ಸಿಕ್ಕಿದ್ದೇ ಅವಳ ಪುಣ್ಯ!"

"ಅವನು ಹುಚ್ಚ ಹೆಡ್ಡ...." ಒಬ್ಬಾಕೆ ಕಿಸಕ್ಕನೆ ನಕ್ಕಳು, "ಆದರೆ ಈ ಮುಸುಡಿಯವಳನ್ನು ಯಾಕೆ ಮದುವೆಯಾದ? ಆ ಕಣ್ಣುಗಳನ್ನು ನೋಡು —ಒಂದಕ್ಕೊಂದು ತಾಳಮೇಳವಿಲ್ಲದ ಕಣ್ಣುಗೊಂಬೆಗಳು. ಒಂದು ಮೇಲೆ ಹೋದರೆ ಇನ್ನೊಂದು ಕೆಳಗೆ. ಎಲ್ಲಿ ಅವಳು ನೋಡ್ತಾಳೋ ತಿಳಿಯುವದೇ ಇಲ್ಲ."

"ಕಣ್ಣುಗಳ ಕಥೆ ಹಾಗಿರಲಿ, ಆ ಹಣೆ ನೋಡಬಾರದೇ? ದೊಡ್ಡ ಗೆರಸಿಯ ಹಾಗಿದೆ. ಉಬ್ಬುಹಲ್ಲುಗಳನ್ನು ನೋಡು, ಮೋಂಡುಮೂಗು ಹೇಗಿದೆಯೆಂದು ವರ್ಣಿಸುವದಕ್ಕೂ ಸಾಧ್ಯವಿಲ್ಲ. ಆಗಲೇ ಹೇಳಿದೆನಲ್ಲ, ದೇವರು ಅಪರೂಪಕ್ಕೆ ಸೃಷ್ಟಿಮಾಡಿದ ಅಪರೂಪದ ಹೆಣ್ಣು ಇದು!"

ಅವಳು ತನ್ನ ಉಬ್ಬುಹಲ್ಲಿನ ಮೇಲೆ ಕೈಯಾಡಿಸಿಕೊಂಡಳು. ರೂಪ ಹೇಗೇ ಇರಲಿ, ಕಿವಿಗಳು ಸೂಕ್ಷ್ಮವಾಗಿದ್ದವು.

"ಅವಳ ಹತ್ತಿರ ಕುಳಿತವರು ಯಾರು?"

"ಅವಳು ಹುಚ್ಚನ ಕಿರಿಯ ತಂಗಿ. ಥೇಟ್ ಹುಚ್ಚನ ಹಾಗೇ ಚೆಂದವಾಗಿದ್ದಾಳೆ, ಅಲ್ಲವೇ. ಮತ್ತೆ ಅಲ್ಲಿ ನೋಡು, ಕಮಲಮ್ಮ ಆಗಿನಿಂದಲೂ 'ಶಾರದೇ' ಅಂತ ಕೂಗ್ತಾ ಇದ್ದಾರಲ್ಲ, ಅವಳೂ ಹುಚ್ಚನ ತಂಗಿ."

"ಹೌದೇ, ಬಹಳ ಚುರುಕಿನ ಹುಡುಗಿ. ಅವಳ ರೂಪವನ್ನು ನೋಡಿಯೇ ಯಾರೂ ಮದುವೆಯಾದಾರು." ಸ್ಥೂಲ ಶರೀರದವಳೊಬ್ಬಳು ಮಾತಿನಲ್ಲಿ ಆಸಕ್ತಿ ತೋರಿಸಿದಳು, "ಅಂದ್ಹಾಗೆ ಹುಚ್ಚನ ಹೆಂಡತಿಯ ಹೆಸರೇನು?"

"ಅವಳಂತೆ ಅವಳ ಹೆಸರೂ ಚೆನ್ನಾಗಿದೆ. ಶಾಂಭವಿ ಅಂತ ಹೆಸರು."

"ಏನು....?" ನಾಲ್ಕಾರುಮುಖಗಳ ಮೇಲೆ ಕೆಟ್ಟಕುತೂಹಲ ಕಾಣಿಸಿತು, "ಆ ಮುಖಕ್ಕೆ ಸರಿಯಾಗಿ ಶಾಂಭವಿ ಅಂತ ಹೆಸರು! ಆಹಾ....ಶಾಂಭವಿ!!"

ಅವಳಿಗೆ ಇನ್ನು ಒಂದು ನಿಮಿಷವೂ ಅಲ್ಲಿ ಕುಳಿತುಕೊಳ್ಳಲು ಆಗಲಿಲ್ಲ. ಎದ್ದು ಹೋಗುವದಾದರೂ ಎಲ್ಲಿಗೆ? ಕೇಶವನಿಗಾಗಿ ಅತ್ತಿತ್ತ ನೋಡಿದಳು. ಅವನು ಯಾವಾಗಲೋ ಎದ್ದು ಹೋಗಿದ್ದ. ಅವಳು ಮುಖ ತಿರುಗಿಸಿಕೊಂಡು ಕುಳಿತುಬಿಟ್ಟಳು.

ಕೇಶವ ಈ ಸಮಯದಲ್ಲಿ ಅಡಿಗೆಚಪ್ಪರದ ಹಿಂಬದಿಯಲ್ಲಿದ್ದ. ಮಾಧವನನ್ನು ಹುಡುಕುತ್ತ ಅವನು ಅಡಿಗೆಚಪ್ಪರದ ಹಿಂಭಾಗಕ್ಕೆ ಬಂದಾಗ ಮಾಧವ ಐದಾರು ಜಿಲೇಬಿಗಳನ್ನು ಕೈಯಲ್ಲಿ ಹಿಡಿದುಕೊಂಡು ಆತುರದಲ್ಲಿ ತಿನ್ನುವದು ಕಾಣಿಸಿತು. ರಸತುಂಬಿದ ಜಿಲೇಬಿ. ಕೇಶವನ ಬಾಯಲ್ಲಿ

ನೀರೂರಿ ಹತ್ತಿರ ಬಂದು ತನ್ನ ಕೈಚಾಚಿದರೆ ಒಂದು ತುಂಡನ್ನೂ ಅವನಿಗಾಗಿ ಕೊಡಲಿಲ್ಲ ಮಾಧವ. "ಧಾರೆ ಸಮಯ, ಅಡಿಗೆಚಪ್ಪರದಲ್ಲಿ ಯಾರೂ ಇಲ್ಲ. ಬೇಕಿದ್ದರೆ ನೀನೇ ಹೋಗಿ ತೆಗೆದುಕೊಂಡು ಬಾ" ಎಂದುಬಿಟ್ಟ.

ಆಸೆ ತಡೆಯಲಾರದೆ ಕೇಶವ ಕಳ್ಳಹೆಜ್ಜೆಯನ್ನಿಡುತ್ತ ಅಡಿಗೆಚಪ್ಪರದತ್ತ ಬಂದಾಗ ನಿಜವಾಗಿಯೂ ಅಲ್ಲಿ ಯಾರೂ ಇರಲಿಲ್ಲ. ಧಾರೆ ನೋಡುವ ಕುತೂಹಲದಿಂದ ಎಲ್ಲರೂ ವಿವಾಹದ ಚಪ್ಪರಕ್ಕೆ ಹೊರಟುಹೋಗಿದ್ದಾರೆ. ಅವನ ಕಣ್ಣುಗಳು ಜಿಲೇಬಿ ಬುಟ್ಟಿಯತ್ತ ಹೊರಳಿತು. ತಡಮಾಡದೆ ಕಳ್ಳ ನಾಯಿಯಂತೆ ಒಳಗೆ ನುಗ್ಗಿ ತನ್ನ ಎರಡೂ ಕೈಗಳಿಂದ ಜಿಲೇಬಿಯನ್ನು ಎತ್ತಿಕೊಂಡು ಇನ್ನೇನು ಓಡಿಹೋಗಬೇಕು, ಯಾರೋ ಷರ್ಟಿನ ಕಾಲರ್‌ನ್ನು ಬಿಗಿಯಾಗಿ ಹಿಡಿದು ದಬ್ ಎಂದು ಗುದ್ದಿದರು ಬೆನ್ನಮೇಲೆ.

"ಪೋಕರೀ ! ಜಿಲೇಬಿ ಕದೀತಾ ಇದ್ದಿಯೇನೋ." ಭೀಮಕಾಯದ ಇನ್ನೊಬ್ಬ ಅಡಿಗೆಯವನು ಓಡುತ್ತಲೇ ಬಂದ, "ಅರರೆ, ನೀನು ಚಂದ್ರಯ್ಯ ಮಾಸ್ತರರ ಮಗನಲ್ಲವೇ ?"

"ಮುಖ ನೋಡಿದರೆ ಗೊತ್ತಾಗುವದಿಲ್ಲವೇ ? ಅದೇ ಆ ಹುಚ್ಚನ ತಮ್ಮ, ಹಾಕಿ ಹಾಕಿ ಬೆನ್ನಿಗೆರಡು." ಇನ್ನಿಬ್ಬರು ಅಡಿಗೆಯವರು ಗುಡುಗುತ್ತ ಅವನ ಕೈಯಿಂದ ಜಿಲೇಬಿಯನ್ನು ಕಸಿದು ಬುಟ್ಟಿಗೆ ಬಿಸಾಡಿ ದಬದಬನೆ ಗುದ್ದಿದರು. ಛಟೀರನೆ ಹೊಡೆದರು ಕೆನ್ನೆಯ ಮೇಲೆ. ಕೇಶವ ಅವರ ಕೈಯಿಂದ ತಪ್ಪಿಸಿಕೊಂಡು ಇನ್ನೂ ನಾಲ್ಕಾರು ಏಟುಗಳ್ನೂ ಪಡೆದುಕೊಂಡು ಓಡಿದ ಹೊರಗೆ.

ಜಿಲೇಬಿಯಂತೂ ಸಿಗಲಿಲ್ಲ. ಅಳುಮೋರೆ ಮಾಡಿಕೊಂಡು ಅಣ್ಣ ನಿಂತ ಸ್ಥಳಕ್ಕೆ ಬಂದಾಗ ಅವನು ಇನ್ನೂ ಎರಡು ಜಿಲೇಬಿ ಹಿಡಿದುಕೊಂಡು ತಿನ್ನುತ್ತಿದ್ದಾನೆ ತೃಪ್ತಿಯಲ್ಲಿ. "ನನಗೊಂದು ಕೊಡು." ಯಾಚಿಸಿದಾಗ 'ಛೊಟ್ಟಿ' ಎಂದು ಕೈಸನ್ನೆಮಾಡಿ ಎಲ್ಲವನ್ನೂ ಬಾಯಿಗೆ ತುರುಕಿಕೊಂಡ. ಕೈತನಕ ಬಂದ ಜಿಲೇಬಿ ಬಾಯಿಗೆ ಹೋಗಲಿಲ್ಲ. ಕೇಶವನ ಆಸೆಯ ಅಗ್ನಿ ಇನ್ನಷ್ಟು ಜಹಿಸಿತು. ತನ್ನೆರಡೂ ಕೈಗಳಲ್ಲಿ ಮೆತ್ತಿಕೊಂಡಿದ್ದ ಜಿಲೇಬಿಯ ರಸವನ್ನೇ ನೆಕ್ಕಿಕೊಂಡು ತೃಪ್ತಿಪಡಿಸಿಕೊಂಡ ತನ್ನನ್ನೇ. ಅವನಿಗೆ ಕ್ರೋಧ ಬಂದುಬಿಟ್ಟಿತು ಅಣ್ಣನ ಮೇಲೆ.

ಈ ಸುದ್ದಿ ಹಬ್ಬಿದ್ದು ಊಟದನಂತರ.

"ಚಂದ್ರಯ್ಯ ಮಾಸ್ತರರ ಮೂರನೆಯ ಮಾಣಿ ಎಲ್ಲರಿಗಿಂತ ಮೊದಲೇ

ಜಿಲೇಬಿ ಕದ್ದು ತಿಂದ!" ಬಾಯಿಂದ ಬಾಯಿಗೆ ಈ ಸುದ್ದಿಯ ಗಾತ್ರ, ತೂಕ ಬೆಳೆದು ಎಲ್ಲರೂ ಅತ್ತೆಸೊಸೆಗೆ ಹಿಡಿಶಾಪ ಹಾಕಿದರು.

ವೇದಮ್ಮನಿಗೆ ಮೊದಲೇ ಕೇಶವನೆಂದರೆ ಅಷ್ಟಕ್ಕಷ್ಟೆ. ಅವನು ಹೆಬ್ಬೆರಳು ಚೀಪುವದು, ತಿನಪಾಂಡಿ ಸ್ವಭಾವ ಅವಳಿಗಾಗದು. ಈ ದಿನ ಇವನಿಂದಾಗಿ ಅವಮಾನ ಪಡುವಂತಾಯಿತಲ್ಲ ಎಂಬ ಖೇದದಲ್ಲಿ ಆ ಕ್ಷಣವೇ ಎದ್ದು ಬಿಟ್ಟಳು. ಅತ್ತಿಗೆಯ ಬದಿಯಲ್ಲಿ ಮುಖ ಬಾಡಿಸಿಕೋಂಡು ಕುಳಿತ ಕೇಶವನ ಕೈಹಿಡಿದುಕೊಂಡು ದರದರನೆ ಎಳೆದುಕೊಂಡೇ ಹೊರಟಳು ಅಲ್ಲಿಂದ. "ಇನ್ನೂ ಸಣ್ಣವ, ಹೋಗ್ಲಿಬಿಡು." ಕೆಲವರು ಸಮಾಧಾನ ಹೇಳಲು ನೋಡಿದರೂ ವೇದಮ್ಮ ಕೇಳಲಿಲ್ಲ.

"ನಿನ್ನ ಹೆಸರು ಶಾಂಭವಿ ಅಲ್ಲವೇ?" ಯಾರೋ ಒಬ್ಬಳು ಅವಳತ್ತ ತಿರುಗಿ ಅಂದರು, "ಇನ್ನಾದರೂ ನಿನ್ನ ಆ ಮೈದುನಂದಿರಿಗೆ ಸರಿಯಾಗಿ ಪಾಠ ಹೇಳಿಕೊಡು. ಉಂಡಾಡಿಗುಂಡಗಳಾಗಿದ್ದಾರೆ."

ಶಾಂಭವಿಯ ಮೈಯೆಲ್ಲ ಕಂಪಿಸಿತು. ಅಪಮಾನದಿಂದ ತಗ್ಗಿಸಿದಳು ತಲೆಯನ್ನು. ತಾನು ಯಾರೊಂದಿಗೂ ಮಾತನಾಡಲು ಇಚ್ಛಿಸಲಿಲ್ಲ, ಬೆರೆಯಲಿಲ್ಲ. ಆದರೂ ನೆರೆದ ಜನರಿಗೆ ತನ್ನ ಮೇಲೇ ಕಣ್ಣು. ತನ್ನ ರೂಪ, ಬಡತನ, ಹುಚ್ಚ ಗಂಡ, ತಂಟೆಪೋರ ಮೈದುನಂದಿರ ಬಗ್ಗೆ ಇವರಿಗೆಲ್ಲಾ ತಮಾಷೆಯೆನಿಸಿದೆ. ಇಂತಹ ಸ್ಥಳಕ್ಕೆ ತಾನೇಕೆ ಬಂದೆ? ಅವಳಿಗೆ ಕೇಶವನ ಮೇಲೆ ಬಹಳ ಸಿಟ್ಟು ಬಂದುಬಿಟ್ಟಿತು.

ಆದರೆ ಅಲ್ಲಿಂದ ಹಿಂದಿರುಗಿ ಮನೆಗೆ ಬಂದು ಮೇಲೆ ನೋಡುತ್ತಾಳೆ— ಕೇಶವನ ಎಳೆ ಶರೀರದ ಮೇಲೆಲ್ಲ ಪೆಟ್ಟಿನ ಗುರುತುಗಳು. ಅಲ್ಲಲ್ಲಿ ಚರ್ಮ ಊದಿಕೊಂಡಿದ್ದು ರಕ್ತಚಿಮ್ಮಿದೆ. ಅಡಿಗೆಯವನಿಂದಲೂ ಹೊಡೆಸಿಕೊಂಡಾಗ ತುಟಿಯಲ್ಲಿ ರಕ್ತಬಂದಿದ್ದು ಅದು ಅಲ್ಲಿಯೇ ಹೆಪ್ಪುಗಟ್ಟಿತ್ತು. ಅವನ ತಪ್ಪುಗಳು ಹೇಗೇ ಇರಲಿ, ಈ ರೀತಿ ಹೊಡೆಯುವದೇ, ತನ್ನ ಅತ್ತೆ ಕಟುಕಳೋ, ಮಾನವಳೋ, ಎಂಬ ಅನುಮಾನಪಡುತ್ತ ಮೈದುನನ ಹತ್ತಿರ ಬಂದು ಕುಳಿತಳು. ಅತ್ತಿಗೆಯನ್ನು ನೋಡಿ ಕೇಶವನ ಅಳು ಇನ್ನೂ ಹೆಚ್ಚಿತು. ಅಲ್ಲೇ ಕಲ್ಲುಬೆಂಚಿನ ಮೇಲೆ ಕುಳಿತ ವೇದಮ್ಮ,

"ಇನ್ನೊಮ್ಮೆ ಅತ್ತು ಗಲಾಟೆಮಾಡಿದರೆ ಬೆನ್ನಮೂಳೆ ಹುಡಿಮಾಡ್ತೇನೆ, ಹುಷಾರು" ಎಂದಳು ಏರಿದ ಸ್ವರದಲ್ಲಿ.

ಬೆದರುಗಣ್ಣುಗಳಿಂದ ನೋಡಿದ ಅತ್ತಿಗೆಯನ್ನು. ಅವಳು ಒಳಗಿನಿಂದ ತೆಂಗಿನೆಣ್ಣೆಯನ್ನು ತಂದು ಅವನ ಊದಿದ ಭಾಗಕ್ಕೆ ಸವರಿದಳು.

"ನಿಜವಾಗಿಯೂ ನಾನು ಕದಿಯಲಿಲ್ಲ ಅತ್ತಿಗೇ, ಜಿಲೇಬಿ ತೆಗೆಯಲು ಹೋಗಿದ್ದೆ. ಸಿಕ್ಕಿಬಿದ್ದೆ. ಕದ್ದು ತಿಂದದ್ದು ಅಣ್ಣ."

"ತಿಂದದ್ದು ಮಾಧವ, ಅಡಿಗೆಯವರ ಕೈಗೆ ಸಿಕ್ಕಿಬಿದ್ದವ ನೀನು. ನಿಜ ಸಂಗತಿ ಹೇಳು."

ಕೇಶವ ಅಲ್ಲಿ ನಡೆದುದನ್ನೆಲ್ಲ ಹೇಳುತ್ತಿದ್ದಂತೆ ಯಾಕೋ ತಳಮಳ ವಾಯಿತು ಶಾಂಭವಿಗೆ. ವೇದಮ್ಮ ನಿಜಸಂಗತಿ ತಿಳಿದುಕೊಂಡರೂ ಮಾಧವ ನನ್ನು ಗದರಿಸದೆ 'ಥತ್' ಎಂದು ಕೋಲನ್ನು ಬಿಸಾಕಿ ಅಲ್ಲಿಂದೆದ್ದುಬಿಟ್ಟಳು. ಅತ್ತಿಗೆಯ ಕಣ್ಣುತಪ್ಪಿಸಿ ಮಾಧವನೂ ಜಾರಿಕೊಂಡ. ಹರಿನಾರಾಯಣ ತಮ್ಮನ ಊದಿದ ಮೈಯನ್ನು ನೋಡಿದರೂ ನೋಡದಂತೆ "ಕಲಿಯುಗದಲಿ ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವವೋ !" ಎಂದು ಹಾಡುತ್ತ ತನ್ನ ಕೋಣೆಗೆ ಹೊರಟುಹೋದ. ಮೈದುನನನ್ನು ಸಮಾಧಾನಪಡಿಸಲು ಅಲ್ಲಿ ಕುಳಿತವಳು ಶಾಂಭವಿ ಒಬ್ಬಳೇ !

3

ದಿವಂಗತ ಚಂದ್ರಯ್ಯ ಮಾಸ್ತರರ ಸೊಸೆಯಾಗಿ ಈ ಮನೆಯ ಹೊಸ್ತಿಲನ್ನು ದಾಟಿ ಯಾವಾಗ ಶಾಂಭವಿ ಒಳಗೆ ಕಾಲಿರಿಸಿದಳೋ ಆಗಲೇ ಅವಳಿಗೆ ಮನೆಯ ಸ್ಥಿತಿಗತಿಗಳ ಸಂಪೂರ್ಣ ಪರಿಚಯವೂ ಆಗಿಹೋಗಿದೆ. ಗೃಹ ಪ್ರವೇಶಕ್ಕೆ ಬಂದ ಅವಳ ತಂದೆತಾಯಿ, ಬಳಗಕ್ಕೂ ಅವಳು ಎಂತಹ ಮನೆ ಸೇರಿದ್ದಾಳೆಂಬ ಸ್ಪಷ್ಟ ಕಲ್ಪನೆ ಮೂಡಿತು. ಆದರೆ ಮಗಳನ್ನು ಧಾರೆ ಎರೆದು ಕೊಟ್ಟಾಗಿದೆ, ಇನ್ನು ಅದೃಷ್ಟದಲ್ಲಿ ಬರೆದಂತಾಗಲಿ ಎಂದು "ಎಲ್ಲರೊಡನೆ ಹೊಂದಿಕೊಂಡು ಹೋಗು" ಎಂದರು ತಮ್ಮೊಳಗೆ ಕಣ್ಣೀರಿಡುತ್ತ. ಅದಕ್ಕಿಂತ ಹೆಚ್ಚಿಗೆ ಹೇಳಲು ಅವರಿಗೆ ಬಾಯಿ ಬಾರದು !

ತಾನು ನೋಡಲು ಚೆನ್ನಾಗಿರದಿದ್ದರೂ ಶಾಂಭವಿಗೆ ತನ್ನ ಪತಿ ಬಹಳ ಚೆಂದವಾಗಿದ್ದಾನೆಂಬ ಹೆಮ್ಮೆ. "ಇವಳ ರೂಪಕ್ಕೆ ಎಂತಹ ಸುಂದರ ಹುಡುಗ

ಸಿಕ್ಕಿದ್ದಾನಲ್ಲ !" ಎಂದು ಅನೇಕರ ವಿಸ್ಮಯ ಉದ್ಗಾರ. ಆದರೆ ನಿಜರೂಪ ತಿಳಿದದ್ದು ಅವಳು ಗುಡುಪುರದ ಪುಟ್ಟ ಗುಡಿಸಲಿಗೆ ಕಾಲಿರಿಸಿದಾಗಲೇ.

"ಆಸ್ತಿ ಇದೆ, ಬತ್ತದ ಗದ್ದೆಯಿದೆ. ತೆಂಗಿನಕಾಯಿ ನಮಗೆ ಸಾಕಾಗಿ ಮಾರುವಷ್ಟು ಸಿಗುತ್ತದೆ" ಹುಡುಗಿಯನ್ನು ನೋಡಲು ಬಂದಾಗ ಹೇಳಿದ್ದಳು ವೇದಮ್ಮ. ಮದುವೆ ಸಮಯದಲ್ಲಿ ಕುತ್ತಿಗೆಗೆ ಸರ, ಕೈಗೆ ಬಳೆಗಳು, ಬೆರಳಿಗೆ ಉಂಗುರ ಹಾಕಿದಾಗ ಅನುಕೂಲವಂತರಿರಬಹುದು ಎಂದುಕೊಂಡರು ಎಲ್ಲರು. ಆದರೆ ಯಾವಾಗ ಗೃಹಪ್ರವೇಶ ಮುಗಿಯಿತೋ ಅಂದೇ ರಾತ್ರಿ ವೇದಮ್ಮ ಕಸಿದುಕೊಂಡಳು ಆಭರಣಗಳನ್ನು. "ನಿನ್ನ ಮೈಮೇಲೆ ಹಾಕಲು ನಾನು ಎರವಲು ತಂದದ್ದು" ಎಂದಾಗ ಅವಳ ಎಳೆ ಹೃದಯಕ್ಕೆ ನೋವಾದರೂ ನೂಲಿನಲ್ಲಿ ಕಟ್ಟಿದ ಕರಿಮಣಿ ತಾಳಿಯೊಂದನ್ನು ಬಿಟ್ಟು ಉಳಿದೆಲ್ಲವನ್ನೂ ಕಳಚಿಕೊಟ್ಟಳು ಅತ್ತೆಯ ಕೈಯಲ್ಲಿ.

ದಿನಸರಿದಂತೆ ಇಲ್ಲಿನ ರೀತಿನೀತಿಗಳ ಅರಿವಾಗದಂತೆ ತನ್ನ ಗಂಡ ಅರೆ ಹುಚ್ಚ ಎನ್ನುವದು ತಿಳಿದಾಗ ನೂರು ಸಿಡಿಲುಗಳು ಬಡಿದಂತೆ ತಲ್ಲಣಿಸಿದಳು ತನ್ನಲ್ಲೇ. ಉಣ್ಣಲು ತಕ್ಕಮಟ್ಟಿನದಾಗಿತ್ತು ಅವಳ ತಂದೆಯ ಮನೆ. ಅಲ್ಲಿಗೂ ಇಲ್ಲಿಗೂ ಹೆಚ್ಚಿನ ವ್ಯತ್ಯಾಸಗಳಿಲ್ಲ. ಆದರೆ ಅಮೂಲ್ಯವಾದ ಸಂಪತ್ತಿನಲ್ಲಿಯೇ ಬಹುದೊಡ್ಡ ಕೊರತೆ. ಸುಂದರನಾದ ಪತಿಯಿಂದ ಅವಳು ಏನೇನು ನಿರೀಕ್ಷಿಸಿದ್ದಳೋ, ಯಾವ ಹಗಲುಗನಸು ಕಟ್ಟಿದ್ದಳೋ, ಅವೊಂದೂ ದೊರೆಯಲಿಲ್ಲ. ಆ ಸುಂದರ ವಿಗ್ರಹ ಅವಳ ಪಾಲಿಗೆ ಒಗಟು. ಒಂದೇ ಒಂದು ಒಳ್ಳೆಯ ಮಾತಿಲ್ಲ. ಪ್ರೇಮದ ನೋಟವಿಲ್ಲ. ರಸನಿಮಿಷಗಳಿಲ್ಲ. ಎಲ್ಲಾ ಮೌನದಲ್ಲಿ ! ಹೊರಗೆ ಇರುವ ಕಲ್ಲುಬೆಂಚಿನ ಮೇಲೆ ದಿನವೆಲ್ಲ ಸುಮ್ಮನೆ ಕುಳಿತುಕೊಳ್ಳುತ್ತಾನೆ. ಕೆಲವೊಮ್ಮೆ ಪುರಂದರದಾಸರ ಹಾಡನ್ನು ತನ್ನ ಸುಮಧುರ ಕಂಠದಿಂದ ಹಾಡುತ್ತಾನೆ. ಅವನು ಹಾಡುವದನ್ನೇ ಕೇಳಿ ಅವಳು ಸಂತೋಷಿಸಬೇಕು. ಅದರ ಹೊರತಾಗಿ ಅ ಆ ಇ ಎಂದೂ ಹೇಳಲು ತಿಳಿಯದಷ್ಟು ಮೂಕ. ಅವನು ಆಡಿದರೂ ಅಸ್ಪಷ್ಟ ಉಚ್ಚಾರ. ತನ್ನ ಪತಿಗೆ ಏನಾಗಿದೆ ಎನ್ನುವದೂ ಸರಿಯಾಗಿ ತಿಳಿಯದು ಶಾಂಭವಿಗೆ. ಅವನು ಎಲ್ಲ ಹುಚ್ಚರಂತೆ ಕೂಗಾಡುವದಿಲ್ಲ, ಅಳುವದಿಲ್ಲ. ಕೇಕೆಹಾಕಿ ನಗುವದಿಲ್ಲ. ಯಾರನ್ನೂ ವಿಚಿತ್ರವಾಗಿ ನೋಡುವದಿಲ್ಲ. ತನ್ನ ಪಾಡಿಗೆ ತಾನು ಕರೆದಾಗ ಊಟಕ್ಕೆ ಬರುತ್ತಾನೆ. ಎದ್ದು ಹೊರಗೆ ಹೋಗುತ್ತಾನೆ. ಒಂದೇ ಒಂದು ಗೊಣಗಾಟ

ವಿಲ್ಲ. ತಾನು ಮದುವೆಯಾಗಿದ್ದೇನೆ, ತನ್ನ ಜೊತೆ ಶಾಂಭವಿ ಇದ್ದಾಳೆ ಎನ್ನುವ ಅರಿವೂ ಅವನಿಗೆ ಇದ್ದಂತಿಲ್ಲ.

ಅವನ ಸ್ವಭಾವ ಹೀಗಾದರೆ ಉಳಿದವರದು ಅವನಿಗಿಂತ ಭಿನ್ನ. ಶಾಲೆ ಕಲಿಯಲು ಮನಸ್ಸಿಲ್ಲದೆ ಮನೆಯಲ್ಲೇ ಕಾಲಹರಣಮಾಡುವ ಮೈದುನರು, ಸದಾ ಕಾಹಿಲಸ್ಥೆಯಾದ ಸಿಂಬಳಬುರುಕಿ ನಾದಿನಿ, ಪ್ರಾಯಕ್ಕೆ ಬಂದ ಇನ್ನೋರ್ವ ನಾದಿನಿ, ವಿಧವೆಪಟ್ಟ ಹೊತ್ತು ಯಾವಾಗಲೂ ಗೊಣಗಾಡುವ ಅತ್ತೆ ಇವರೆಲ್ಲರ ನಿಕಟಪರಿಚಯ ಹೆಚ್ಚಿದಂತೆ ಅವಳಿಗೆ ಒಂದು ವಿಷಯ ಸ್ಪಷ್ಟವಾಗಿ ತಿಳಿಯಿತು—ಇವರಿಗೆ ಯಾರಿಗೂ ದುಡಿಯುವ ಮನಸ್ಸಿಲ್ಲ, ರಾಜರಂತೆ ಕುಳಿತು ತಿನ್ನುವದೊಂದೇ ಗೊತ್ತು.

ಕುಳಿತು ತಿನ್ನುವಷ್ಟು ಭೂಮಿ ಇವರಿಗಿಲ್ಲ. ಒಂದು ಎಕರೆಯಷ್ಟು ದೊಡ್ಡದಾದ ಬತ್ತ ಬೆಳೆಯುವ ಗದ್ದೆ ಜನಾರ್ದನ ಶಾಸ್ತ್ರಿಗಳದು. ಅದನ್ನು ಗೇಣಿಗೆ ಮಾಡಿಕೊಂಡು ಎಷ್ಟೋ ವರ್ಷಗಳಾದವು. ಚಂದ್ರಯ್ಯ ಮಾಸ್ತರರು ಬದುಕಿದ್ದಾಗ ಒಂದು ಬೆಳೆಯನ್ನು ಆ ಭೂಮಿಯಲ್ಲಿ ತೆಗೆದು ಗೇಣಿ ಬತ್ತವನ್ನು ಸರಿಯಾಗಿ ಕ್ರಮದಂತೆ ಶಾಸ್ತ್ರಿಗಳ ಮನೆಗೆ ತಲುಪಿಸುತ್ತಿದ್ದರು. ಅವರು ಸತ್ತು ಮೂರು ವರ್ಷಗಳಾದವು. ಈ ಮೂರು ವರ್ಷಗಳೂ ಗೇಣಿಯನ್ನು ಮನೆಯವರು ಕೊಟ್ಟಿಲ್ಲ. ಶಾಸ್ತ್ರಿಗಳು ತಗಾದೆ ಮಾಡುತ್ತಿದ್ದರೂ ಬೆಳೆ ತೆಗೆಯುವ ಹುಮ್ಮಸ್ಸು ಯಾರಿಗೂ ಇಲ್ಲ. ಉದ್ದು, ಹೆಸರು, ತರಕಾರಿಯನ್ನು ಬೆಳೆಯಬಹುದಿತ್ತು. ಅದನ್ನು ಬೆಳಸಲಾರದಷ್ಟು ಸೋಮಾರಿಗಳು. ದುಡಿಯುವವರು ಯಾರೂ ಇಲ್ಲ. ಆದರೆ ತಿನ್ನುವದಕ್ಕೆ ಎಲ್ಲರೂ ಮುಂದೆ! ಕಷ್ಟಪಟ್ಟು ದುಡಿದರೆ ಇಲ್ಲಿ ಹೊಟ್ಟೆತುಂಬ ಕೂಳು ಸಿಗುವದು ಕಷ್ಟವೇನಿಲ್ಲ.

ಹುಚ್ಚ ಗಂಡ, ಸೋಮಾರಿ ಮೈದುನರು, ಅತ್ತೆ ನಾದಿನಿಯರಿದ್ದ ದೊಡ್ಡ ಸಂಸಾರದ ಹೊಣೆಯನ್ನು ತಪ್ಪಿಸಿಕೊಳ್ಳುವದಂತೂ ಅಸಾಧ್ಯದ ಮಾತು. ಇವರನ್ನೆಲ್ಲ ಹೇಗೆ ನೋಡಿಕೊಳ್ಳಬೇಕು? ಮುಂದೇನು ಮಾಡಬೇಕು? ನೂರು ಹೊಂಗನಸುಗಳನ್ನು ಕಟ್ಟಿಕೊಂಡು ಪತಿಗೃಹವನ್ನು ಸೇರಿದ ಶಾಂಭವಿಗೆ ಇಲ್ಲಿ ದೊರೆತದ್ದು ನಿರಾಶೆಯ ತುತ್ತು. ಸಂತೋಷದ ಬದಲು ಬೇಸರದ ಛಾಯೆ. ನೆರೆಹೊರೆಯವರ ವಿಚಿತ್ರ ನೋಟ, ಕುಹಕ ನಗೆ. ಅವಳ ವಿಕಾರ ರೂಪವನ್ನು ಬಣ್ಣಿಸಿ ಬಣ್ಣಿಸಿ ಅವಳಿಗೆ ಕೇಳಿಸುವಂತೆ ಹೇಳುವಾಗ ಮೈಮೇಲೆ ಚೇಳು ಹರಿದಾಡಿದಂತಾಗುತ್ತದೆ. ಎಲ್ಲಿಯಾದರೂ

ಮುಖ ಮರೆಯಿಸಿಕೊಂಡು ಬಿಡುವ ಇಚ್ಛೆ. ಅಥವಾ ಮುಖಕ್ಕೊಂದು ಬಟ್ಟೆ ಹೊದ್ದುಕೊಳ್ಳೋಣ ಎನ್ನಿಸುತ್ತದೆ. ಈ ದಿನ ಜನಾರ್ದನ ಶಾಸ್ತ್ರಿಗಳ ಮನೆಯಲ್ಲಿ ಅದೂ ಮದುವೆ ಚಪ್ಪರದ ಮಧ್ಯದಲ್ಲಿ ಅನುಕೂಲವಂತರ ಮನೆಯ ಹೆಂಗಸರು ತನ್ನ ರೂಪದ ಬಗ್ಗೆ ಹೀಗೆ ಕೀಳು ರೀತಿಯಲ್ಲಿ ಆಡಿಕೊಳ್ಳುತ್ತಾರೆಂಬ ಕಲ್ಪನೆ ಅವಳಿಗಿರಲಿಲ್ಲ. ಕ್ರೋಧದಿಂದ ಅವರನ್ನೆಲ್ಲ ಚೆನ್ನಾಗಿ ಬೈದುಬಿಡಬೇಕು ಎಂದೆನಿಸಿದ್ದರೂ, ತನ್ನ ಅಂತಸ್ತು, ಸ್ಥಾನವನ್ನು ನೆನೆದು ಹಲ್ಲುಕಚ್ಚಿಕೊಂಡೇ ಹಿಂದಿರುಗಿದ್ದಾಳೆ. ಮನಸ್ಸಿನಲ್ಲಿ ಹೊಗೆಯಾಡುತ್ತಿದೆ ಛಲ, "ನೋಡೋಣ, ಒಂದಲ್ಲ ಒಂದಲ್ಲ ಒಂದು ದಿನ ನಾನೂ ಸ್ಥಿತಿವಂತಳಾಗಿ ಎಲ್ಲರ ಗೌರವ ಆದರಗಳನ್ನೂ ಸಂಪಾದಿಸಿಕೊಳ್ಳಬಲ್ಲೆ!

4

ಮಳೆಗಾಲ ಪ್ರಾರಂಭವಾದಾಗ ಶಾಂಭವಿ ಗುರುಪುರದಿಂದ ಎರಡು ಮೈಲು ದೂರದಲ್ಲಿರುವ ತನ್ನ ಹಳ್ಳಿಯಲ್ಲಿ ಎಲ್ಲರಿಗೂ ಚಿರಪರಿಚಿತಳಾದಳು. ಮದುವೆಯಾಗಿ ಕೇವಲ ಎರಡು ತಿಂಗಳಾಗಿದ್ದವು ಅಷ್ಟೆ. ಆದರೂ ಅವಳು ತನ್ನ ರೂಪ, ಮಾತು, ಕೆಲಸಗಳಿಂದ ಎಲ್ಲರ ಗಮನವನ್ನೂ ತನ್ನತ್ತ ಸೆಳೆದುಕೊಂಡುಬಿಟ್ಟಳು. ತನ್ನ ರೂಪದ ಬಗ್ಗೆ ಯಾರೇನು ಹೇಳಿದರೂ ಅವಳು ಅಳಕುವದಿಲ್ಲ, ಕ್ರೋಧಗೊಳ್ಳುವದಿಲ್ಲ. ಸಮಯ ದೊರೆತಾಗ ಹತ್ತಿರದ ಕಾಡಿಗೆ ನಡೆದು ಸೊಪ್ಪು ಹೆರೆದು ಜನಾರ್ದನ ಶಾಸ್ತ್ರಿಗಳ ಮನೆಗೆ ಹೊತ್ತು ತಂದರೆ ಅಲ್ಪಸ್ವಲ್ಪ ಪುಡಿಗಾಸು ದೊರೆಯುತ್ತದೆ. ಶಾಸ್ತ್ರಿಗಳ ಹೆಂಡತಿ ಕಮಲಮ್ಮ ಅವಳನ್ನು ನೋಡಿದಾಕ್ಷಣ ಏನಾದರೂ ಕೆಣಕು ನುಡಿ ಆಡದೆ ಇರಲಾರರು. ಅವಳು ನಗುಮುಖದಲ್ಲೇ ಮಾತನ್ನು ತಳ್ಳಿಬಿಡುತ್ತಾಳೆ.

ಮಳೆಗಾಲದ ಬೇಸಾಯ ಎಲ್ಲ ಕಡೆಗೂ ಪ್ರಾರಂಭವಾದರೂ ವೇದಮ್ಮನ ಮನೆಯಲ್ಲಿ ಯಾರಿಗೂ ಅದರ ಚಿಂತೆಯಿಲ್ಲ. ಮೊದಲ ಮಳೆಗೇ ಬತ್ತ ಬಿತ್ತಬೇಕಿತ್ತು. ಅದಂತೂ ದೂರವೇ ಉಳಿಯಿತು. ಸರಿಯಾಗಿ ಮಳೆ ಬಂದು ಗದ್ದೆಯೆಲ್ಲ ನೀರಿನಿಂದ ತುಂಬಿದರೂ ಅವರ ಮನೆಯ ಎರಡು ಬಡಕಲಾದ, ಏಳಲಾರದ ಎತ್ತುಗಳು ನೀರಿಗಿಳಿಯಲಿಲ್ಲ. ಗದ್ದೆ ಬೇಸಾಯ ಮಾಡದೆ

ಇರುವದಾದರೂ ಯಾಕೆ? ಎಂದು ಶಾಂಭವಿಗೆ ವಿಸ್ಮಯ. ಅತ್ತೆಯನ್ನು ಕೇಳಿದರೆ 'ಬೇಸಾಯದ ಕೆಲಸ ತುಂಬಾ ಕಷ್ಟ' ಎಂದಳು. ಕೆಲಸದಿಂದ ಜಾರಿಕೊಳ್ಳುವ ನೆವ ಇದು. ಒಂದು ಎಕರೆ ಗದ್ದೆಯನ್ನು ಬೇಸಾಯ ಮಾಡುವದು ಸುಲಭವೇನಲ್ಲ. ಗೊಬ್ಬರ ಸಾಕಷ್ಟಿದ್ದರೂ ಬಿತ್ತಲು ಬತ್ತವಿರಲಿಲ್ಲ. ಎಂದೋ ತಿಂದು ತೇಗಿಯಾಗಿತ್ತು. ಆದರೂ ಹತ್ತಿರ ಒಂದೆರಡು ಕಡೆಗಳಿಂದ ನೇಜಿ ಸಸಿಗಳು ಸಿಗಬಹುದೋ ಏನೋ. ಶಾಂಭವಿಯ ತಲೆ ಚುರುಕಾಯಿತು. ತನಗೆ ತೀರ ಇತ್ತೀಚೆಗೆ ಪರಿಚಿತರಾದ ಮನೆಗಳಿಗೆ ಓಡಿ ಅವರಿಗೆ ನೇಜಿ ನೆಟ್ಟು ಉಳಿದ ಬತ್ತದ ಸಸಿಗಳನ್ನು ತನಗೆ ಕೊಡಬೇಕೆಂದು ಕೇಳಿಕೊಂಡು ಬಂದಳು. ಹಳ್ಳಿಯಲ್ಲಿ ಪರಸ್ಪರ ಸಹಕಾರದಿಂದಲೇ ಬೇಸಾಯದ ಕೆಲಸ ನಡೆಯುತ್ತವೆ. ಯಾರೂ ಇಲ್ಲವೆನ್ನಲಿಲ್ಲ. ಶಾಂಭವಿಯ ಉತ್ಸಾಹ ಗರಿಗೆದರಿತು. ಗದ್ದೆಗೆ ಗೊಬ್ಬರ ಹಾಕಿ ಹೂಟಿ ಮಾಡಿಕೊಂಡರೆ ಮುಂದಿನ ಕೆಲಸ ಬಹಳ ಸುಲಭ. ಹೇಗೂ ಇಬ್ಬರು ಮೈದುನರು ಇದ್ದಾರೆ. ತಾನು ಕೆಲಸಕ್ಕೆ ಕರೆದರೆ ಬರಲಾರೆ ಎನ್ನಲಾರರು. ಶಾರದೆಯೂ ಜೊತೆಗೂಡಬಹುದು.

ಆದರೆ ಅವಳು ಯೋಚಿಸಿದಷ್ಟು ಸುಲಭದಲ್ಲಿ ಗದ್ದೆಗೆ ಗೊಬ್ಬರ ಹೊರಲು ಮನೆಮಕ್ಕಳು ಸಿದ್ಧರಾಗಲಿಲ್ಲ. ಅವಳು ಕರೆದರೂ ಕುಳಿತ ಸ್ಥಳದಿಂದ ಯಾರೂ ಏಳಲಿಲ್ಲ.

"ಬನ್ನಿ, ನಮ್ಮ ಭೂಮಿಗೆ ನಾವೇ ಕೆಲಸದವರು, ನಾವೇ ಒಡೆಯರು. ಯಾಕೆ ನಿಮಗೆಲ್ಲಾ ನಾಚಿಗೆ? ಎರಡು ತಾಸಿನೊಳಗೆ ಗದ್ದೆ ತುಂಬಾ ಗೊಬ್ಬರ ಹಾಕಿಯಾಗುತ್ತದೆ." ಉತ್ತರಕ್ಕೆ ಕಾಯದೆ ಅವಳು ಎರಡು ಗೊಬ್ಬರದ ಬುಟ್ಟಿಗಳನ್ನೆತ್ತಿಕೊಂಡು ದನದ ಕೊಟ್ಟಿಗೆಯತ್ತ ನಡೆದಳು.

ದಿಗಿಲುಗೊಂಡ ಕೇಶವ ಹೆಬ್ಬೆರಳನ್ನು ಬಾಯಲ್ಲಿರಿಸಿಕೊಂಡ. ತಾನು ತಲೆಯ ಮೇಲೆ ಗೊಬ್ಬರ ಹೊರಬೇಕೇ? ಎಂತಹ ಅನ್ಯಾಯ ಇದು. ಅವನ ದೃಷ್ಟಿ ಹೊರಳಿತು ಮಾಧವನತ್ತ. ಅವನು ಹಲಸಿನ ಬೀಜಗಳನ್ನು ಒಲೆಯಲ್ಲಿ ಸುಡುತ್ತ 'ಬೇಡ ಸುಮ್ಮನಿರು' ಎನ್ನುವಂತೆ ಕಣ್ಸನ್ನೆ ಮಾಡಿದ. ಗೊಬ್ಬರ ಹೊರುವಂತಹ ಕೊಳಕು ಕೆಲಸ ಇನ್ನಾವದೂ ಇಲ್ಲ.

ಶಾಂಭವಿ ಕೊಟ್ಟಿಗೆಯಿಂದಲೇ ಕರೆದಳು ಕೇಶವ ಮತ್ತು ಮಾಧವನನ್ನು. ಇಬ್ಬರೂ ಓಗೊಡಲಿಲ್ಲ. "ಏನು, ನಿಮ್ಮ ಕೈಲಾಗುವದಿಲ್ಲವೇ?" ಸೀರೆಯ ನೆರಿಗೆಗಳನ್ನು ಕಟ್ಟಿಕೊಳ್ಳುತ್ತ ಅಂಗಳಕ್ಕೆ ಬಂದ ಶಾಂಭವಿ ಇಬ್ಬರನ್ನೂ

ತೀಕ್ಷ್ಣವಾಗಿ ನೋಡಿದಳು. ಆಗ ಅವಳ ದೃಷ್ಟಿ ಅಲ್ಲಿಯ ಮಣ್ಣಿನಲ್ಲಿ ಕುಳಿತಿದ್ದ ಹರಿನಾರಾಯಣನತ್ತ ಹರಿಯಿತು.

"ಬನ್ನಿ, ನೀವು ಸಹಾಯ ಮಾಡಿದರೆ ಗದ್ದೆಗೆ ಗೊಬ್ಬರ ಹೊತ್ತು ಹಾಕುವದು ಎಷ್ಟು ಹೊತ್ತಿನ ಕೆಲಸ?" ಅವಳು ಮೃದುವಾಗಿ ಕರೆದಳು, "ನಾಳೆ ಎತ್ತುಗಳನ್ನು ನೀರಿಗಿಳಿಸಿದರೆ ಇನ್ನೊಂದೆರಡು ದಿನಗಳಲ್ಲಿ ನೇಜಿ ನೆಡಬಹುದು."

ಒಂದು ಕ್ಷಣ ಅವಳನ್ನೇ ವಿಚಿತ್ರವಾಗಿ ನೋಡಿದ ಹರಿನಾರಾಯಣ. ಸಣ್ಣ ಮಳೆಯಲ್ಲಿ ನೆನೆಯುತ್ತ ನಿಂತವಳನ್ನು ನೋಡುತ್ತಿದ್ದಂತೆ ಅವನಿಗೆ ಏನನಿಸಿತೋ, ಧಡಕ್ಕನೆ ಎದ್ದು ತನ್ನ ಪಂಚೆಯನ್ನು ಮೇಲಕ್ಕೆತ್ತಿ ಕಟ್ಟಿಕೊಂಡು ಸೀದಾ ಕೊಟ್ಟಿಗೆಯತ್ತ ಹೆಜ್ಜೆಹಾಕಿದ. ತಾನೇ ಬುಟ್ಟಿಯಲ್ಲಿ ಗೊಬ್ಬರ ತುಂಬಿಸಿ ಹೆಂಡತಿಯ ತಲೆಯ ಮೇಲಿರಿಸಿದ. ಶಾಂಭವಿಗೆ ಆಶ್ಚರ್ಯ, ದಿಗಿಲು! ಆದರೂ ತೋರಿಸಿಕೊಡದೆ ಅತ್ಯಾನಂದದಿಂದ ಗೊಬ್ಬರ ಹೊತ್ತು ಕೊಂಡು ನಡೆದಳು ಗದ್ದೆಯತ್ತ. ಬೆರಳು ಚೀಪುತ್ತ ನಿಂತಿದ್ದ ಕೇಶವನ ಕಣ್ಣುಗಳಲ್ಲಿ ದಿಗ್ಭ್ರಾಂತಿ!

"ಬಾ ಅಣ್ಣಾ, ನಾವೂ ಸಹಾಯ ಮಾಡೋಣ."

"ಹೋಗ್ಹೋಗೋ, ಆ ಗೊಬ್ಬರ ಹೊರುವ ಕೆಲಸ ನನಗೆ ಬೇಡ."

ಕೇಶವ ಕ್ಷಣಹೊತ್ತು ಚಿಂತಿಸಿ "ಹೋಯ್....ನಾನೂ ಬಂದೇ...." ಎಂದವನೇ ಜಾರುತ್ತಿದ್ದ ಚಡ್ಡಿಯನ್ನು ಮೇಲೇರಿಸಿಕೊಳ್ಳುತ್ತ ಇನ್ನೊಂದು ಬುಟ್ಟಿಯನ್ನು ಎತ್ತಿಕೊಂಡು ನಡೆದ ಅತ್ತಿಗೆಯ ಹಿಂದೆ ಹಿಂದೆ. ಹರಿನಾರಾಯಣ ಉತ್ಸಾಹದಿಂದ ಗೊಬ್ಬರ ತುಂಬಿಸಿ ಇಬ್ಬರ ತಲೆಯ ಮೇಲೆ ಹೊರಿಸಿದ.

"ಎಲ್ಲರೂ ಮಾಡುವದು ಹೊಟ್ಟೆಗಾಗಿ ಆಹಾ, ಗೇಣು ಹೊಟ್ಟೆಗಾಗಿ, ನಮ್ಮ ಶ್ರೀಹರಿಯನು ನೆನೆಯುವದು ಮುಕ್ತಿಗಾಗಿ!"

ಅವನ ಬಾಯಿಯಿಂದ ಮಧುರವಾಗಿ ಹೊರಹೊಮ್ಮಿತು ದಾಸರ ಪದ. ಬುಟ್ಟಿಯ ಮೇಲೆ ಬುಟ್ಟಿ ತುಂಬಿಸಿಕೊಟ್ಟ. ಶಾಂಭವಿ, ಕೇಶವ ಹೊತ್ತರು. "ಕುತ್ತಿಗೆ ನೋವಾಗಿದೆ, ಅತ್ತಿಗೆ." ಅಭ್ಯಾಸವಿಲ್ಲದೆ ಎಳೆಯ ಗೋಗರೆದಾಗ ಅತ್ತಿಗೆ ಸಮಾಧಾನ ಹೇಳಿದಳು. ಮಾಧವ ಮುಂಗನಂತೆ ಹಲ್ಕಿರಿಯುತ್ತ ತಮಾಷೆ ಮಾಡಿದ ಕೇಶವನನ್ನು.

"ಬಾರೋ, ಗಿಡಮುಂಗಸಾಟ ಆಡೋಣ. ಗೊಬ್ಬರ ಹೀಗೆ ಹೊರಲು ನಿಂಗೆ ನಾಚ್ಕೆಯಾಗುವದಿಲ್ಲವಲ್ಲ."

ನಿಜವಾಗಿಯೂ ನಾಚಿಗೆಯಾಗುತ್ತಿತ್ತು ಕೇಶವನಿಗೆ. ಹುಟ್ಟಿದಮೇಲೆ ಗೊಬ್ಬರವನ್ನು ಕೈಯಿಂದ ಮುಟ್ಟಿ ನೋಡಿದವನಲ್ಲ. ಈಗಲೋ ಪ್ಯೆಯಲ್ಲಿ ವಾಸನೆ ಬರುತ್ತಿದೆ. ಕುತ್ತಿಗೆ ಬೇರೆ ನೋವು. ಸಾಯಲಿ ಈ ಕೆಲಸ.

"ಏಯ್, ಕೆಲಸ ಮಾಡಲು ಮನಸ್ಸಿಲ್ಲದಿದ್ದರೆ ಸುಮ್ಮನೆ ಕಾಲುಚಾಚಿ ಬಿದ್ದುಕೋ." ಗದರಿದಳು ಶಾಂಭವಿ, "ಕೆಲಸಕ್ಕೆ ಬಾ ಅಂದ್ರೆ ಸೋಮಾರಿ ನೀನೊಬ್ಬ. ಊಟದ ಹೊತ್ತಿಗೆ ರಾಗಿ ಅನ್ನ ಮಾತ್ರ ಬೇಕು."

ಸೊಸೆಯ ಧ್ವನಿ ಕೇಳಿ ಒಳಗಿನಿಂದ ವೇದಮ್ಮನೂ ಹೊರಗೆ ಬಂದು ನೋಡುತ್ತಾಳೆ, ಏನಿದು ಆಶ್ಚರ್ಯ! ತನ್ನ ಹುಚ್ಚಮಗ ಗೊಬ್ಬರದ ರಾಶಿಯಲ್ಲಿದ್ದಾನೆ. ಸೊಸೆಯೂ ಇನ್ನೊಬ್ಬ ಮಗನೂ ಗೊಬ್ಬರ ಹೊರುತ್ತಿದ್ದಾರೆ! ಅವಳಿಗೆ ತನ್ನ ಕಣ್ಣುಗಳನ್ನು ನಂಬುವದಕ್ಕೆ ಆಗಲಿಲ್ಲ.

ಹನ್ನೊಂದುವರೆ ತನಕ ಇದೇ ಕೆಲಸ ಆಗಿಹೋಯಿತು. "ಇನ್ನು ಕೆಲಸ ಸಾಕು, ಹಸಿವೆಯಾಗ್ತಿದೆ" ಎಂದು ಗೋಗರೆದ ಕೇಶವ, ಶಾಂಭವಿಗೂ ಬಹಳ ಆಯಾಸವಾಗಿತ್ತು. ಕೆಲಸ ನಿಲ್ಲಿಸಿ, ಸ್ನಾನ ಮುಗಿಸಿ ಅಡಿಗೆ ಕೋಣೆಗೆ ಬಂದರೆ ಒಲೆಯ ಬೆಂಕಿ ತಣ್ಣಗೆ ಮಲಗಿಬಿಟ್ಟಿದೆ. ಮಡಕೆಗಳು ಅಲ್ಲೊಂದು ಇಲ್ಲೊಂದು ಬಿದ್ದಿವೆ. ಇನ್ನೂ ಅಡಿಗೆ ಆಗಿಲ್ಲ! ತಾನು ಕೆಲಸದಲ್ಲಿದ್ದೇನೆಂದು ತಿಳಿದರೂ ಅತ್ತೆ ಅಡಿಗೆ ಮಾಡಿ ಮುಗಿಸಬಾರದಿತ್ತೇ? ಇನ್ನು ಅನ್ನ ಆಗ ಬೇಕು. ನೆಂಜಿಕೊಳ್ಳಲು ಖಾರದ ಪದಾರ್ಥವಾಗಬೇಕು. ಉಕ್ಕಿಬಂದ ಸಿಟ್ಟನ್ನು ಹಾಗೇ ನುಂಗಿಕೊಂಡು ಬೆಂಕಿ ಉರಿಸಿದಳು.

ಹರಿನಾರಾಯಣ ಸ್ನಾನ ಮುಗಿಸಿ ಸೀದಾ ತನ್ನ ತಟ್ಟೆಯನ್ನೆತ್ತಿಕೊಂಡು ಊಟಕ್ಕೆ ಕುಳಿತಾಗ ಹೃದಯ ಬಾಯಿಗೆ ಬಂದಂತಾಯಿತು. ಒಂದು ನಿಮಿಷ ಮಾತನಾಡಲು ತಿಳಿಯದೆ ಪೆದ್ದುಪೆದ್ದಾಗಿ ನೋಡಿದಳು. ಮೊದಲ ಬಾರಿ ಕೆಲಸಕ್ಕಿಳಿದಿದ್ದ, ಮುಖ ಆಯಾಸದಿಂದ ಸೋತಿದೆ. ಎರಡು ಹಸ್ತಗಳೂ ಕೆಂಪಾಗಿವೆ. ಅವನ ಹತ್ತಿರವೇ ಕುಳಿತು ಅಂದಳು ನಲ್ಮೆಯಲ್ಲಿ,

"ಕೆಲಸ ಮಾಡಿ ತುಂಬಾ ಆಯಾಸವಾಯಿತಲ್ಲವೇ?"

ಅವನು ಮುಗುಳ್ನಕ್ಕ. ಆ ನಗೆಯಲ್ಲಿ ಹೊಸ ಆತ್ಮೀಯತೆಯ ಸುಖವನ್ನು ಕಂಡ ಅವಳು ರೋಮಾಂಚನಗೊಂಡಳು. "ಯಾವಾಗಲೂ ಹೀಗೆ

ಒಟ್ಟಾಗಿ ಕೆಲಸ ಮಾಡಿದರೆ ನಮ್ಮ ಗದ್ದೆಯಲ್ಲಿ ಚಿನ್ನದ ಬೆಳೆ ತೆಗೆಯ ಬಹುದು."

ಅವನು ತಲೆಯಲ್ಲಾಡಿಸಿ ಸಮ್ಮತಿ ಸೂಚಿಸಿದ.

"ಬತ್ತ ಕುಯ್ದು ರಾಶಿಹಾಕಿದಮೇಲೆ ಉದ್ದು, ಹೆಸರು ಬೆಳೆಸೋಣ. ನಮ್ಮ ಖರ್ಚಿಗೆ ಸಾಕಾಗಿ ಮಾರುವದಕ್ಕೂ ಸಿಗಬಹುದು."

ಅವನು ಮತ್ತೆ ನಗುತ್ತ ತಲೆಯಲ್ಲಾಡಿಸಿದ. ಅವಳು ಮಾತು ಮುಂದು ವರಿಸಿದಳು: "ಮನೆ ಅಂಗಳದಲ್ಲಿ ನಮಗೆ ಬೇಕಾದ ತರಕಾರಿ ಬೆಳೆಸೋಣ. ಬರಿಯ ಗಂಜಿ ತಿಂದುಂಡರೆ ಈ ದೇಹಕ್ಕೆ ಯಾವ ಪೌಷ್ಟಿಕಾಂಶವೂ ಸಿಗ ಲಾರದು. ತುಂಬಾ ತರಕಾರಿ ಮಾಡೋಣ."

ಅಷ್ಟರಲ್ಲಿ ವೇದಮ್ಮ ಕೈಗಳಲ್ಲಿ ನಾಲ್ಕು ಹರಿವೆದಂಟನ್ನು ಹಿಡಿದುಕೊಂಡು ಬಂದಳು ಒಳಗೆ. ಮಗ ಸೊಸೆಯನ್ನು ಪ್ರಶ್ನಾರ್ಥಕವಾಗಿ ನೋಡುತ್ತ ದಂಟನ್ನು ಬಿಸಾಡಿದಳು ಅವಳತ್ತ. "ಪದಾರ್ಥಕ್ಕೆ ಏನೂ ಇಲ್ಲ ಅಂತ ಬೊಬ್ಬೆ ಹಾಕ್ತಾ ಇದ್ದೀಯಲ್ಲ, ಹಿಡಿ, ರಂಗಪ್ಪಾಚಾರಿ ಮನೆಯಿಂದ ಇದನ್ನು ಕೇಳಿ ತಂದೆ. ಬೇಗ ಏನಾದರೂ ಮಾಡಿ ಬಡಿಸು. ಬಹಳ ಹಸಿವೆ."

ರೇಗಿಹೋಯಿತು ಸೊಸೆಗೆ. "ತರಕಾರಿ ಇಲ್ಲವೆಂದು ನಾನೇನು ತಲೆ ಹೊಡ್ಕೊಂಡಿದ್ದೇನೆಯೇ? ಇನ್ನೊಬ್ಬರು ಕಷ್ಟಪಟ್ಟು ಬೆಳೆದದ್ದನ್ನು ನಾವ್ಯಾಕೆ ಕೇಳಿ ತರಬೇಕು? ಸ್ವಲ್ಪ ಜಡತ್ವ ಬಿಟ್ಟರೆ ನಮಗೂ ಬೇಕಾದ ತರಕಾರಿ ಬೆಳೆಯಬಹುದು ಅಂಗಳದಲ್ಲಿ."

"ಯಾರೇ ಸೋಮಾರಿಗಳು?" ಅಬ್ಬರಿಸಿದಳು ಅತ್ತೆ.

"ಎಲ್ಲರೂ. ಈ ಸಾರೆ ನೋಡಿ, ತಿಂದು ಹಾಳಾಗುವಷ್ಟು ತರಕಾರಿ ಬೆಳೆ ಸ್ತೇನೆ, ನೀವೆಲ್ಲ ಹಾಯಾಗಿ ಕುಳಿತು ತಿನ್ನಿರಿ."

ವೇದಮ್ಮ ಬೆಕ್ಕಿನಂತೆ ಗುರುಗುಡುತ್ತ, "ಹಂಡೆಯಲ್ಲಿ ಬಿಸಿನೀರು ಇದೆಯೋ, ಎಲ್ಲಾ ಮುಗಿಸಿದರೋ" ಎನ್ನುತ್ತ ಸರಿದಳು ಅಲ್ಲಿಂದ.

"ನಿನಗ್ಯಾಕೆ ಚಿಂತೆ?" ಹರಿನಾರಾಯಣನ ಬಾಯಿ ತೆರೆಯಿತು: "ನಾನಿ ಲ್ಲವೇ ನಿನ್ನ ಜೊತೆಯಲ್ಲಿ? ನಾನಿಲ್ಲವೇ? ನಾನು ಕಲಿಯುಗದ ಭೀಮ. ಅಹ್ಹಹ್ಹಾ...."

"ಇವತ್ತು ನೀವು ಕೆಲಸ ಮಾಡಿದಿರಲ್ಲ, ಅತ್ತೆಗೆ ಕೋಪ ಬಂತು."

"ಹಹ್ಹ....ಅತ್ತೆಗೆ ಕೋಪ ಬಂದಿತೇ?" ಅಟ್ಟಹಾಸದ ನಗೆ ನಗುತ್ತ ಅವನು ಅಲ್ಲಿಂದೆದ್ದ. "ಸೊಸೆ ಎತ್ತಿನಂತೆ ದುಡಿಯಬೇಕು, ಮಗ ಕುಳಿತು

ತಿನ್ನಬೇಕು, ಉಳಿದವರು ಮಜಾ ಮಾಡಬೇಕು. ಹ್ಹಾಹ್ಹಾ, ಇದೇ ಕಲಿಯುಗ, ಇದುವೇ ಕಲಿಯುಗ...."

ಹಾಗೆ ಹೇಳುತ್ತ ಮೊದಲು ಬಹಳ ನಿಧಾನವಾಗಿ ನಗತೊಡಗಿದ, ಆಮೇಲೆ ಜೋರಾಗಿ. ಅವನ ದುಂಡುಮುಖ ಕ್ಷಣದಿಂದ ಕ್ಷಣಕ್ಕೆ ಭಾವಗಳನ್ನು ಬದಲಾಯಿಸುತ್ತ ವಿಕಾರವಾದ ನಗೆಯನ್ನು ಚಿಮ್ಮತೊಡಗಿತು. ಶಾಂಭವಿಗೆ ಮೊದಲು ಅರ್ಥವಾಗಲಿಲ್ಲ. ಅವನೋ, ಬಿದ್ದು ಬಿದ್ದು ನಗಲು ಆರಂಭಿಸಿದ. ಅವನ ಕಣ್ಣುಗಳಲ್ಲಿ ವಿಚಿತ್ರ ನೋಟ—ಹೆದರಿದಂತೆ, ಹೆದರಿಸುವವರಂತೆ!

"ಅತ್ತೆ" ಜೋರಾಗಿ ಸ್ವರ ಏರಿಸಿದಳು ಶಾಂಭವಿ, "ಕೇಶವಾ, ಮಾಧವಾ ಯಾರಿದ್ದೀರಿ? ಎಲ್ಲರೂ ಬನ್ರೋ....ಬನ್ರೋ...."

ಆದರೆ ಅಲ್ಲಿ ಯಾರೂ ಇದ್ದಿರಲಿಲ್ಲ. ಅವನ ನಗೆ ನಿಲ್ಲುವ ಲಕ್ಷಣವೂ ಕಾಣಿಸಲಿಲ್ಲ. ಆಮೇಲೆ ಅವಳೇ ಧೈರ್ಯದಿಂದ ಒಂದು ತಂಬಿಗೆ ನೀರನ್ನು ಎರಚಿದಳು ಅವನ ಮುಖದ ಮೇಲೆ. ಇನ್ನೂ ಒಂದು ತಂಬಿಗೆ ನೀರು ಸುರಿದಳು ತಲೆಯ ಮೇಲೆ. ಮತ್ತೆರಡು ನಿಮಿಷದಲ್ಲಿ ಸಾವಕಾಶವಾಗಿ ನಗು ಕಡಿಮೆಯಾಗುತ್ತಿದ್ದಂತೆ ಅವನ ಕೈ ಹಿಡಿದು ಬದಿಯ ಸಣ್ಣ ಕೋಣೆಯಲ್ಲಿ ಮಲಗಿಸಿದಳು. ಆಗ ಅವನ ಮುಖದ ಮೇಲೆ ಹಿಂದೆ ಎಂದೂ ಕಾಣದ ಭೀತಿಯ ಛಾಯೆ ತುಂಬಿತ್ತು.

ಅಷ್ಟರಲ್ಲಿ ಒದ್ದೆ ಬಟ್ಟೆಯನ್ನುಟ್ಟುಕೊಂಡೇ ಓಡಿಬಂದಳು ವೇದಮ್ಮ. ಅಷ್ಟುಹೊತ್ತಿಗೆ ಹರಿನಾರಾಯಣ ಸುಮ್ಮನೆ ಮಲಗಿದ್ದ.

"ನೀನೇನು ಹೇಳಿದಿ?" ಸೊಸೆಯನ್ನು ಬದಿಗೆ ಕರೆದಳು ವೇದಮ್ಮ.

"ಏನೂ ಹೇಳ್ಲಿಲ್ಲ. ಕಲಿಯುಗ, ಕಲಿಯುಗ ಅಂತ ನಗುವದಕ್ಕಾರಂಭಿಸಿದರು. ನಗು ನಿಲ್ಲಲೇ ಇಲ್ಲ."

ವೇದಮ್ಮ ನಿಟ್ಟುಸಿರು ತೆಗೆದಳು. "ಆ ದಿನದಿಂದಲೂ ಅವನು ಹೀಗೆ ಕಲಿಯುಗ ಎಂದು ನಗುವದಕ್ಕೆ ಪ್ರಾರಂಭಿಸಿದ್ದಾನೆ. ಒಟ್ಟಿನಲ್ಲಿ ನಮ್ಮ ಗ್ರಹಚಾರ. ಅದರ ನೆನಪು ಬಂದರೆ ಸಾಕು."

"ಯಾವ ನೆನಪು, ಅತ್ತೇ? ಯಾಕೆ ಹೀಗೆ ನಗ್ತಾರೆ?"

"ಅದೆಲ್ಲ ಹಳೆ ಕಥೆ. ನೀನಿನ್ನು ಯಾರ ಹತ್ತಿರವೂ ಹೇಳಬೇಡ. ಇವನ ಅಪ್ಪನಿಂದಲೇ ಹೀಗಾದದ್ದು. ಇವನ ಹುಚ್ಚಿಗೆ ಅವರೇ ಕಾರಣರು. ಮೊದಲು ಉಂಡಾಡಿಯಂತೆ ಊರೆಲ್ಲಾ ಅಲೀತಾ ಇರ್ತಿದ್ರು, ಅವನ ಅಪ್ಪನ

ಬಲಗೈಯಿದ್ದಂತೆ ಕೆಲಸ ಮಾಡಿಕೊಂಡಿದ್ದ. ಒಂದು ದಿನವೂ ಯಾರೊಡನೆಯೂ ಜಗಳವಾಡಲಿಲ್ಲ, ಸುಳ್ಳು ಹೇಳ್ಲಿಲ್ಲ. ಆದರೆ ನೋಡು, ನಮ್ಮ ಗ್ರಹಚಾರ ಚೆನ್ನಾಗಿರದಿದ್ದರೆ ಒಳ್ಳೆಯವರೂ ಕೆಟ್ಟವರಾಗ್ತಾರೆ. ಒಂದು ದಿನ ಏನಾಯ್ತು ಅಂದರೆ....ಅದೇ...."

ವೇದಮ್ಮ ಮಾತಿಗೆ ಅಲ್ಲೇ ತಡೆಹಾಕಿದಳು. ಶಾಂಭವಿಗೆ ಕೇಳುವ ಕುತೂಹಲವಿದ್ದರೂ "ಇನ್ನೊಮ್ಮೆ ಹೇಳ್ತೀನೆ" ಎಂದುಬಿಟ್ಟಳು. ಅರ್ಧಕ್ಕೆ ಮಾತು ನಿಂತುದರಿಂದ ಶಾಂಭವಿಯ ಮನದಲ್ಲಿ ಅಸ್ಪಷ್ಟ ಕಲ್ಪನೆಯ ಭೀತಿ ತಲೆದೋರಿ ತಲ್ಲಣಿಸಿದಳು ತನ್ನಲ್ಲೇ. ಮೌನವಾಗಿ ಮಲಗಿದ್ದ ಅವನ ಬಳಿಯಲ್ಲಿ ಕುಳಿತು ಸೆರಗಿನಿಂದ ಅವನ ಒದ್ದೆಯಾದ ತಲೆಗೂದಲನ್ನು ಒರಸಿದಳು. "ಕುಡಿಯಲು ಏನಾದರೂ ತಂದುಕೊಡಲೇ ? "

ಬೇಡ ಎಂಬಂತೆ ಸನ್ನೆಮಾಡುತ್ತ ಇಲ್ಲೇ ತನ್ನ ಹತ್ತಿರವೇ ಕುಳಿತುಕೋ ಎಂದ. ಅವನ ಹಸ್ತ ಅವಳ ಬಲಹಸ್ತವನ್ನು ಬಿಗಿಯಾಗಿ ಹಿಡಿದುಕೊಂಡಿತು. ಶಾಂಭವಿಗೆ ಮನದಲ್ಲೇ ನಾಚಿಗೆ. ಅವನ ಮೃದುವಾದ ಬಿಳಿಹಸ್ತದ ಮೇಲೆ ತನ್ನ ಒರಟಾದ ಕಪ್ಪುಹಸ್ತ ಹೇಗೆ ಒಪ್ಪುತ್ತದೋ. ಅದೆಷ್ಟು ಆತ್ಮೀಯತೆಯಿಂದ 'ಇಲ್ಲೇ ಕುಳಿತುಕೋ' ಎನ್ನುತ್ತಿದ್ದಾರೆ. ತಾನು ಹತ್ತಿರದಲ್ಲಿದ್ದರೆ ಅವರಿಗೆ ಧೈರ್ಯ.

ಮತ್ತೆ ಅರ್ಧಗಂಟೆಯಲ್ಲಿ ಮಕ್ಕಳ ಗಲಾಟೆಯೋ ಗಲಾಟೆ. ಆಗಲೇ ಮಧ್ಯಾಹ್ನ ಕಳೆದಿದೆ. ಈಶ್ವರಿ, ಶಾರದೆ, ಕೇಶವ, ಮಾಧವ ಊಟಕ್ಕಾಗಿ ಬೊಬ್ಬೆಹಾಕುತ್ತಿದ್ದಾರೆ. "ನಾನೀಗಲೇ ಬಂದೆ" ಎಂದೆಂದು ಹರಿನಾರಾಯಣನ ಬದಿಯಿಂದ ಎದ್ದು ಒಳಗೆ ಹೋದಾಗ ಮಡಿಕೆಯಲ್ಲಿಟ್ಟ ಅನ್ನ ಬೆಂದು ಪಾಯಸವಾಗಿದೆ. ಹರಿನಾರಾಯಣನ ನಗುವಿನಲ್ಲಿ ಮಡಿಕೆ ಇಳಿಸಲು ಮರೆತಿತ್ತು. ಆದರೂ ಅದನ್ನೇ ಬಡಿಸಿದಳು ಎಲ್ಲರಿಗೂ.

"ನನಗೆ ಈ ಮಣ್ಣು ಬೇಡ—" ಮಾಧವ ನೂಕಿದ ತಟ್ಟೆಯನ್ನು.

ಶಾಂಭವಿ ಮಾತನಾಡದೆ ಬಟ್ಟಲಿನ ತುದಿಯಲ್ಲಿ ಉಪ್ಪಿನಕಾಯಿ ಬಡಿಸಿ ತೆಳ್ಳಗೆ ನೀರಿನಂತಿದ್ದ ಮಜ್ಜಿಗೆಯನ್ನು ಸುರಿದಳು. ಶಾರದೆ ಅನ್ನವನ್ನು ನೋಡಿ ಮುಖ ಸಿಂಡರಿಸಿದಳು. "ಯಾವಾಗಲೂ ಒಂದೇ ತರಹದ ಊಟ. ಸಪ್ಪೆ ಸಪ್ಪೆ. ಒಂದು ಪದಾರ್ಥವಿಲ್ಲ."

"ನಾಲ್ಕು ದಿನ ಶ್ರೀಮಂತರ ಮನೆಯಲ್ಲಿ ಕೂಳು ಸಿಕ್ಕಿತೆಂದು ಇವಳಿಗೆ

ಬಂತು ದರ್ಬಾರು!" ವೇದಮ್ಮ ತಲೆಗೆ ಕುಟ್ಟಿದಳು. "ಬೇಕಾದರೆ ತಿನ್ನು, ಇಲ್ಲಾ ಎದ್ದು ಹೋಗು ಹೊರಗೆ."

"ಗಂಜಿಗೆ ಗತಿಯಿಲ್ಲದವರೂ ಒಂದು ಚಟ್ನಿ ಮಾಡ್ಕೊಂಡು ಊಟ ಮಾಡ್ತಾರೆ. ಇಲ್ಲಿ ಅದಕ್ಕೂ ಗತಿಯಿಲ್ಲ."

"ಯಾಕೆ ಹಟ ಮಾಡ್ತಿ, ಶಾರದೆ." ಶಾಂಭವಿಗೆ ಅವಳನ್ನು ಸಮಾಧಾನ ಪಡಿಸುವ ತಾಳ್ಮೆಯಿರದಿದ್ದರೂ ಅವಳು, "ಶಾಸ್ತ್ರಿಗಳ ಮನೆಯಲ್ಲಿ ಸಿಗು ವಂತಹ ಹಾಲು ಮೊಸರು, ದಿನಕ್ಕೊಂದು ಬಗೆಯ ತಿಂಡಿಪದಾರ್ಥಗಳನ್ನು ಹೇಗೆ ಮಾಡಿ ಬಡಿಸಲಿ? ಅಂತಹ ಕಾಲ ಬಂದಾಗ ಖಂಡಿತಾ ಮಾಡಿ ಕೊಡ್ತೇನೆ" ಎಂದಳು.

ತೆಪ್ಪಗಾದ ಅವಳು ಊಟ ಪ್ರಾರಂಭಿಸುತ್ತಿದ್ದಂತೆ ಮಾಧವನ ರಗಳೆ ಎದ್ದುಕೊಂಡಿತು. ಈಗ ಅವನನ್ನು ಸಮಾಧಾನಪಡಿಸುವ ಸರದಿ.

"ಇನ್ಮೇಲೆ ಈ ಹಟವನ್ನು ಬಿಡು ಮಾಧವಾ, ಎಲ್ಲರಂತೆ ನಮಗೂ ರುಚಿ ರುಚಿ ಊಟ ಸಿಗಬೇಕಾದರೆ ನಮ್ಮ ಕೈ ಕೆಸರಾಗಬೇಕು. ಶ್ರಮಪಟ್ಟು ದುಡೀಬೇಕು. ಈ ಸಲದ ಬೇಸಾಯಕ್ಕೆ ನೀನೂ ಹೆಗಲುಕೊಡು. ಆ ತ್ಯಾಂಪ, ತುಕ್ರನಿಗೆ ಕೊಡುವ ಸಂಬಳದಲ್ಲಿ ನಿನಗೆ ಮೃಷ್ಟಾನ್ನಭೋಜನ ವನ್ನು ಮಾಡಿ ಬಡಿಸ್ತೇನೆ."

ಅವನು ಮರುಮಾತಿಲ್ಲದೆ ಎಳೆದುಕೊಂಡ ತಟ್ಟೆಯನ್ನು.

"ಊಟಕ್ಕೆ ಬಂದಾಕ್ಷಣ ನಿಮಗೆಲ್ಲರಿಗೂ ಕೋಪ. ಈ ಊಟ ಎಲ್ಲಿಂದ ಬರುತ್ತದೆ ಎನ್ನುವ ಆಲೋಚನೆ ನಿಮಗ್ಯಾರಿಗೂ ಇಲ್ಲ." ನೀರಿನ ಗ್ಲಾಸಿಗೆ ನೀರು ಹಾಕುತ್ತ ಹೇಳಿದಳು ಅತ್ತಿಗೆ: "ಸರಿಯಾದ ಗದ್ದೆಯಿದೆ. ತರಕಾರಿ, ತೆಂಗು, ಬಾಳೆ ನೆಡಲು ಬೇಕಾದ ಸ್ಥಳವಿದೆ. ಎಲ್ಲಾ ಬೆಳೆಸೋಣ. ನಿಮಗೆಲ್ಲ ಹೊಟ್ಟೆತುಂಬಾ ಆಹಾರ ಬೇಕಿದ್ದರೆ ನಾಳೆಯಿಂದ ನಾನು ಹೇಳಿದ್ಹಾಗೆ ಕೇಳ್ಬೇಕು. ಕೇಳ್ತೀರೇನ್ರೋ?"

"ಓಹೋ, ನೀನು ಹೇಳಿದ್ಹಾಗೆ ಕೇಳ್ತೇನೆ." ಕೈ ಎತ್ತಿದ ಕೇಶವ. ಶಾರದೆ, ಮಾಧವ ತುಟಿ ಎರಡು ಮಾಡಲಿಲ್ಲ.

"ಮಾವಿನ ಸಸಿ ನೆಟ್ಟರೆ ಮೂರು ವರ್ಷಗಳಲ್ಲಿ ಮಾವಿನ ಹಣ್ಣನ್ನು ತಿನ್ನಬಹುದು. ನಿಂಬೆ ಸಸಿ ನೆಟ್ಟರೆ ಮಾಡುವುದಕ್ಕೂ ಸಿಕ್ಕೀತು. ಬಾಳೆಗಿಡ ಗಳನ್ನು ಧಾರಾಳವಾಗಿ ನೆಡೋಣ. ಜೀವ ಬಿಡ್ತೀರಲ್ಲ ಬಾಳೆಹಣ್ಣುಗಳಿಗಾಗಿ, ನಾವೇ ಬೆಳೆಯಿಸಿ ನಾವೇ ತಿನ್ನೋಣ. ಕೇಳ್ತೀರಾ ನಾನು ಹೇಳಿದ್ಹಾಗೆ?"

ಈಗಲೂ ಕೇಶವನೇ ಕೈ ಮೇಲೆತ್ತಿದ. ಶಾರದೆ 'ಹೂಂ' ಎಂದಳು ತುಸು ಬಿಗುವಿನಲ್ಲಿ. ಮಾಧವ ಸಿಡುಕುತ್ತ "ಇನ್ನಷ್ಟು ಗಂಜೀ" ಎಂದ. ಅತ್ತಿಗೆ ದುರುದುರು ನೋಡಿದಳು ಮೈದುನನನ್ನು.

ಕೇಶವ ಹರ್ಷದಿಂದ ಕೇಕೆಹಾಕಿದ. "ನೀನ್ಹೇಳಿದ್ಹಾಗೆ ಕೇಳ್ತೀನೆ, ಅತ್ತಿಗೆ. ಎಲ್ಲಾ ಬೆಳೆಸೋಣ, ಎಲ್ಲಾ ತಿನ್ನೋಣ, ಬುಟ್ಟಿತುಂಬಾ ಮಾರೋಣ. ಆಮೇಲೆ ಕೈತುಂಬಾ ಝಣ. ಝಣ, ಝಣ...."

ಶಾಂಭವಿ ಇನ್ನೊಂದು ತಟ್ಟೆಯಲ್ಲಿ ಹರಿನಾರಾಯಣನಿಗೆ ಊಟ ಬಡಿಸಿ ಅವನ ಕೋಣೆಗೆ ತೆಗೆದುಕೊಂಡು ಹೋದಳು. ಅವಳು ಅತ್ತ ಹೋದೊಡನೆ ಮಾಧವ ಡಿಬ್ ಎಂದು ತಮ್ಮನ ಬೆನ್ನಮೇಲೆ ಗುದ್ದಿದ. "ಆಹಾಹಾ, ಝಣಝಣ ಎಂದು ಹಣ ಎಣಿಸ್ತಾನಂತೆ, ನಿನ್ನ ತಲೆಯೊಳಗೆ ಏನಾದರೂ ಸಾಮಾನು ಇದೆಯೊ ಅಥವಾ ಪೂರ್ತಿ ಗೋಳಿಯಾ ?"

"ಯಾತಕ್ಕೋ ?"

"ಅತ್ತಿಗೆ ಹೇಳಿದುದನ್ನು ಈ ಬುದ್ಧಿವಂತ ನಂಬಿಬಿಟ್ಟ. ಆ ಮಾವಿನ ಗಿಡ, ನಿಂಬೆ ಸಸಿ, ಆ ತರಕಾರಿಯನ್ನೆಲ್ಲ ನೆಟ್ಟು ಬೆಳೆಸಿ ಅವುಗಳ ಕಾಯಿ ಕುಯ್ದು ತಿನ್ನುವಾಗ ನಮ್ಮ ತಲೆ, ಗಡ್ಡ ಹಣ್ಣಾಗಿರುತ್ತದೆ !"

"ಹಾಗಾದರೆ ನಾವ್ಯಾಕೆ ಕೆಲಸ ಮಾಡಬೇಕು ?" ಶಾರದೆಯತ್ತ ತಿರುಗಿ ಕೇಳಿದ ಕೇಶವ.

"ಬಡವರ ಹಣೆಬರಹವೇ ಇಷ್ಟು : ದುಡಿದರೂ ಒಂದೇ, ದುಡಿಯದೆ ಇದ್ದರೂ ಒಂದೆ." ತಿಳಿದವಳಂತೆ ಅಂದಳು ಶಾರದೆ : "ಎಲ್ಲಿಯಾದರೂ ಶಾಸ್ತ್ರಿಗಳಂತಹ ಶ್ರೀಮಂತರ ಮನೇಲಿ ಕೆಲ್ಸ ಸಿಕ್ಕಿದರೆ ಹೇಗೋ ಮಾಡ್ಕೊಂಡು ಹೋಗಬಹುದು."

"ಹಾಗೇ ಮಾಡಿ." ಕೋಣೆಯಿಂದ ಹೊರಗೆ ಬರುತ್ತ ಶಾಂಭವಿ ಸ್ವರ ಏರಿಸಿದಳು : "ನಾಳೆಯಿಂದ ಯಾರೂ ಕೆಲಸಮಾಡದೆ ಆ ಹೊಟ್ಟೆಗೂ ಕೆಲಸ ಕೊಡದೆ, ಒಂದೊಂದು ತಣ್ಣೀರಿನ ಪಟ್ಟಿಯನ್ನು ಹೊಟ್ಟೆಯ ಮೇಲಿಟ್ಟು ಕೊಂಡು ತೆಪ್ಪಗೆ ಮಲಗಿಬಿಡಿ. ನಾನೂ ಹಾಗೇ ಮಲಗ್ತೇನೆ. ಆಮೇಲೆ ನಿಶ್ಚಿಂತೆ !"

5

ಆಡಿದ ಮಾತಿಗೆ ತಪ್ಪಲಿಲ್ಲ ಹರಿನಾರಾಯಣ. ಗೊಬ್ಬರವನ್ನು ಗದ್ದೆಯ ತುಂಬಾ ಹರಡಿ ತನ್ನ ನೇಗಿಲನ್ನು ಸರಿಪಡಿಸಿಕೊಂಡು ತಾನೇ ಗದ್ದೆಯನ್ನು ಉಳಲು ಪ್ರಾರಂಭಿಸಿದ. ಎಡಬಿಡದೆ ಬರುತ್ತಿರುವ ಮಳೆಯಲ್ಲಿ ತಲೆಗೊಂದು ಗೊರಬೆ ಹಾಕಿಕೊಂಡು 'ನೇಗಿಲಯೋಗಿ ನಾನಯ್ಯ' ಎನ್ನುತ್ತ ಸಂತೋಷದಲ್ಲಿ ಉಳುವುದನ್ನು ನೋಡಿದರೆ ಯಾರಿಗಾದರೂ ಅಚ್ಚರಿಯಾದೀತು. ಆಗಾಗ ಕೇಶವ ಜೊತೆಗೂಡುತ್ತಾನೆ, ಶಾಂಭವಿ ಮನೆಗೆಲಸವನ್ನು ಸಾಧ್ಯವಾದಷ್ಟು ಬೇಗನೆ ಮುಗಿಸಿ ಗದ್ದೆ ಬದಿಯಲ್ಲಿರುವ ಸೊಪ್ಪು, ಕಾಡನ್ನು ಕತ್ತರಿಸಲು ಹೋಗುತ್ತಾಳೆ. ಕೇಶವನಿಗೆ ಗದ್ದೆಯ ದಂಡೆಯನ್ನು ಸರಿಪಡಿಸುವಂತೆ ಹೇಳುತ್ತಾಳೆ.

ಕೇವಲ ತಮ್ಮ ಎತ್ತುಗಳಿಂದ ಇಡೀ ಗದ್ದೆ ಉಳುವುದು ಸಾಧ್ಯವಿಲ್ಲವೆಂದೆನಿಸಿ ತಾನೇ ಮೂರು ಜೊತೆ ಎತ್ತುಗಳನ್ನು ಬೇರೆಯವರಿಂದ ನೀರಿಗೆ ಇಳಿಸುವಂತೆ ಕೇಳಿಕೊಂಡಳು. ಬೇಸಾಯದ ದಿನಗಳಾಧುದರಿಂದ ಎತ್ತು ಇರುವವರು ಮರುಮಾತಿಲ್ಲದೆ ಬಂದರು ಉಳಲೆಂದು. ಕೆಲಸ ಸಾಗಿತು ತ್ವರೆಯಿಂದ.

ವೇದಮ್ಮ ತೀರಾ ಬೆರಗಾಗಿಹೋದಳು. ಕಲ್ಲುಬಂಡೆಯಂತಿದ್ದ ಹುಚ್ಚ ಮಗ ನೇಗಿಲನ್ನು ಹಿಡಿದು ಗದ್ದೆ ಉಳುತ್ತಿದ್ದಾನೆ. ಅವನ ಮುಖದ ತುಂಬಾ ಹರ್ಷದ ಹೊನಲು. ಸೊಸೆ ಏನಾದರೂ ಪವಾಡ ಮಾಡಿದಳೇ? ಅವಳೇನು ಯಕ್ಷಿಣಿಯೇ? ಮಾತನಾಡದವನೂ ಒಂದೆರಡು ಮಾತು ಕಲಿತಿದ್ದಾನೆ ಈಗೀಗ. ಆದರೆ ಶಾಂಭವಿ ಉಳಿದ ಹೆಂಗಸರೊಡನೆ ಕೇಶವನನ್ನೂ ಜೊತೆಮಾಡಿಕೊಂಡು ನೇಜಿ ನೆಡಲೆಂದು ಗದ್ದೆಗೆ ಇಳಿಯಲು ಸಿದ್ಧಳಾದಾಗ ವೇದಮ್ಮ ಅವಳನ್ನು ತಡೆದಳು.

"ಈಗ ನೀನು ಮಾಡಿದ ಕೆಲಸ ಸಾಕು. ಇನ್ನುಳಿದುದನ್ನು ಕೆಲಸದವರು ನೋಡಿಕೊಳ್ತಾರೆ."

"ಯಾಕೆ? ನಾನು, ಕೇಶವ, ಇವರು ಮೂರು ಜನರಿದ್ದೇವೆ. ಈ ಮೂವರ ಸಂಬಳ ಉಳಿಯಿತಲ್ಲ."

"ನಮ್ಮ ಹೆಂಗಸರಲ್ಲಿ ಯಾರೂ ಈ ಕೆಲಸಕ್ಕೆ ಇಳಿಯುವದಿಲ್ಲ."

"ಓಹೋ, ಅವರಿಗೆ ಊಟ ಮಾಡುವದು ಮಾತ್ರ ಗೊತ್ತು ಅಲ್ಲವೇ

ಅತ್ತೆ, ಯಾರು ಹೋಗಲಿ ಹೋಗದಿರಲಿ, ನಮ್ಮ ಗದ್ದೆಯಲ್ಲಿ ದುಡಿಯಲು ಯಾರನ್ನೂ ನಾವು ಕೇಳಬೇಕಾಗಿಲ್ಲ."

"ನಿಮ್ಮ ಊರಿನಲ್ಲಿ ನೀನು ಮಾಡಿದ್ದಿಯೇನೋ. ಇಲ್ಲಿ ಮಾತ್ರ ಬೇಡ."

"ಕೆಲಸ ಮಾಡಲು ಮನೆ, ಊರು ನೋಡ್ತಾರೇನೇ? ನಡಿ ಕೇಶವಾ, ಆಗಲೇ ಹೊತ್ತಾಗಿಹೋಯಿತು" ಎನ್ನುತ್ತ ಅವಳು ಹೊರಟು ಸಿದ್ಧಳಾದಾಗ ಅವಳ ಜೊತೆಯಲ್ಲಿಯೇ ಹೊರಟ ಹರಿನಾರಾಯಣ.

ವೇದಮ್ಮನ ಸಿಟ್ಟು ಭುಗಿಲ್ಲನೆ ಹೊತ್ತಿಕೊಂಡಿತು. "ನೀನೆಲ್ಲಿಗೆ ಹೋಗ್ತಿ? ನೀನೂ ಅವಳ ದಾಸನಾಗಿಹೋದೆಯಲ್ಲ."

"ಹೌದಮ್ಮ, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತೀ" ಎಂದು ಹಾಡುತ್ತ ಹೊರಟುಹೋದ.

ಹತ್ತಾರು ಜನರು ಜೊತೆಗೂಡಿ ಮಾಡುವ ಕೆಲಸದಲ್ಲಿಯೂ ಒಂದು ಆನಂದವಿದೆ. ಎಂತಹ ಮಳೆಯೇ ಇರಲಿ, ಅದರ ಪರವೆಯಿಲ್ಲದೆ ಮಳೆಗಾಳಿಗೆ ನೆನೆಯುತ್ತ ಕೆಲಸ ಮಾಡುತ್ತಾರೆ. ಕೆಸರಿನಲ್ಲಿ ಹೂತುಹೋದ ಕಾಲುಗಳನ್ನು ಆಗಾಗ ತುರಿಸಿಕೊಳ್ಳುತ್ತ ಕಿತ್ತ ನೇಜಿಗಳನ್ನು ಊಳಿದ ಗದ್ದೆಯಲ್ಲಿ ನೆಡುವಾಗ ಅವರ ಹಾಡೇನು? ಮಾತೇನು? ಗಲಾಟೆಯೇನು? ನೇಜಿ ನೆಡುತ್ತಿದ್ದಂತೆ ಯಾರೋ ಒಬ್ಬಳು ಅಂದಳು :

"ಧನಿ ಮನೆಗೆ ಕೆಲಸದವಳು ಬೇಕಂತೆ. ಹುಡುಕ್ತಾ ಇದ್ದಾರೆ."

"ಮೊದಲಿದ್ದವಳಿಗೆ ಮದುವೆಯಾಯ್ತಲ್ಲ, ಆಗಿನಿಂದಲೂ ಹುಡುಕ್ತಾ ಇದ್ದಾರೆ. ನಾನೂ ಬಹಳ ಕಡೆ ವಿಚಾರಿಸಿದ್ದೇನೆ, ಯಾರೂ ಸಿಗಲಿಲ್ಲ—" ಕೀರಲು ಧ್ವನಿಯ ಹುಡುಗಿಯೊಬ್ಬಳು ಸ್ವರ ಎತ್ತಿದಳು.

"ಅವರಿಗೆಂತಹ ಕಷ್ಟವೋ." ಕಿಸಕ್ಕನೆ ನಕ್ಕಳು ಮತ್ತೊಬ್ಬಳು. "ಅವರು ಇರುವುದು ಐದೇ ಜನ. ಆದರೂ ದೊಡ್ಡ ಮನುಷ್ಯರು. ಬೇಕಲ್ಲ ನಮ್ಮಂತಹ ಕೆಲಸದವರು. ಯಾರಾದರೂ ಸಿಗ್ತಾರೆ ಬಿಡಿ. ನಮಗ್ಯಾಕೆ ಚಿಂತೆ."

ಹತ್ತಾರು ಕೆಲಸದವರು ಸೇರಿದರೆ ಕೆಲಸ ಬಹಳ ಹಗುರ. ಎರಡು ದಿನಗಳಲ್ಲಿ ಮುಗಿಯಿತು ನೇಜಿ ನೆಡುವ ಕೆಲಸ. ತಮ್ಮ ಗದ್ದೆಗೆ ಇಳಿದ ಕೆಲಸದವರಿಗೆ ಸಂಬಳ ಹಂಚಲು ಶಾಸ್ತ್ರಿಗಳ ಮನೆಯಿಂದಲೇ ಕೆಲವು ರೂಪಾಯಿಗಳ ಸಾಲ ಮಾಡಬೇಕಾಯಿತು.

ಗದ್ದೆಯ ಕೆಲಸ ಮುಗಿದಮೇಲೆ ಶಾಂಭವಿಗೆ ಎಣೆಯಿಲ್ಲದಷ್ಟು ಸಂತೋಷ. ಇನ್ನು ಮನೆಯ ಹತ್ತಿರ ಏನಾದರೂ ಉತ್ಪನ್ನ ತೆಗೆಯಬೇಕು. ತಾನೇ

ಗುರುಪುರದ ಪೇಟೆಗೆ ಹೋಗಿ ನಾಲ್ಕು ಮಾವಿನ ಸಸಿಗಳನ್ನು, ನಾಲ್ಕು ನಿಂಬೆ ಸಸಿಗಳನ್ನು ಕೊಂಡುತಂದಳು. ಶಾಸ್ತ್ರಿಗಳ ತೋಟದಿಂದ ಬಾಳೆ ಸಸಿಗಳೂ ಬಂದವು. ಅವಳು ತೋರಿಸಿದ ಸ್ಥಳಗಳಲ್ಲೆಲ್ಲ ಹರಿನಾರಾಯಣ ಗುಂಡಿ ಅಗೆದು ಅವಳೊಂದಿಗೆ ವಿಚಾರಿಸಿ ನೆಟ್ಟ ಉತ್ಸಾಹದಲ್ಲಿ. ಅಲಸಂದೆ, ಪಡವಲ, ಬೆಂಡೆ, ಇನ್ನೂ ಏನೇನೋ ತರಕಾರಿ ಸಾಲುಗಳನ್ನೂ ಮಾಡಿಯಾಯ್ತು. ರಂಗಪ್ಪಾಚಾರಿ ಮನೆಯಿಂದ ಕೆಲವು ಹೂವಿನ ಗಿಡಗಳ ಕುಂಡಗಳೂ ಬಂದವು.

ತನ್ನ ಮನೆ! ಇಲ್ಲಿ ಯಾವಾಗಲೂ ಸುಖಶಾಂತಿ ನೆಲೆಸಬೇಕು. ದವಸ ಧಾನ್ಯಗಳಿಂದ ತುಂಬಿಕೊಂಡು ಧನಲಕ್ಷ್ಮಿ ಓಡಾಡುತ್ತಲೇ ಇರಬೇಕು. ಇದು ಶಾಂಭವಿಯ ಕನಸು! ಮನೆ ಎಂದರೆ ಈಗಿರುವದು ತೀರಾ ಚಿಕ್ಕ ಗುಡಿಸಲು. ಮುಳಿಹುಲ್ಲು ಸೋಗೆ ಹೊದೆಯಿಸಿದ ಮಾಡು, ಮಣ್ಣಿನ ಗೋಡೆ. ಮಳೆಗಾಲದಲ್ಲಿ ವಿಪರೀತ ಸೋರುತ್ತದೆ. ಒಂದು ಸಣ್ಣದಾದ ಅಡಿಗೆಕೋಣೆ. ಅದರ ಎದುರು ಎರಡು ಅಡಿ ತಗ್ಗಿನಲ್ಲಿ ಒಂದು ಉದ್ದದ ಜಗಲಿ, ಬದಿಯಲ್ಲಿ ಸಣ್ಣ ಕೋಣೆ, ಅದರಾಚೆ ಸ್ವಲ್ಪ ದೊಡ್ಡ ಕೋಣೆ, ಸಣ್ಣ ಸಣ್ಣ ಕಿಟಕಿ ಬಾಗಿಲುಗಳು, ಬಿದಿರು ಬಾಗಿಲು. ಬೇಸಿಗೆಯಲ್ಲಿ ಸಾಕಷ್ಟು ತಂಪಾಗಿಡುವ ಈ ಮನೆ ಮಳೆಗಾಲದಲ್ಲಿ ದೇವ್ರಿಗೇ ಪ್ರೀತಿ. ಮನೆಯಲ್ಲಿ ಹರಿನಾರಾಯಣ ಮಲಗುವ ಒಂದು ಕೋಣೆಯು ಹೊರತಾಗಿ ಮಿಕ್ಕಿದ್ದೆಲ್ಲವೂ ಸೋರುತ್ತದೆ. ದೊಡ್ಡ ಕೋಣೆಯಲ್ಲಿ ಹೇಗೋ ಒತ್ತಿಕೊಂಡು ಸೋರದಿರುವ ಭಾಗದಲ್ಲಿ ಮಲಗಬೇಕು. ಅಡಿಗೆಕೋಣೆಯಲ್ಲಿ ಯಾರಾದರೂ ಮಲಗಬಹುದಿತ್ತು. ಊಹೂಂ, ಕೇಶವ ಹೆದರುಪುಕ್ಕಲ. ಮಾಧವನಿಗೆ ಅಲ್ಲಿರುವ ಜಿರಲೆ ಕಂಡರೆ ಆಗದು. ಈಶ್ವರನಿಗೆ ವೇದಮ್ಮನ ಮಗ್ಗಲು ಬೇಕು. ಉಳಿದವಳು ಶಾರದೆ.

"ನಾನು ನೀರಿನಲ್ಲಿಯಾದರೂ ಮಲಗಬಲ್ಲೆ. ಆದರೆ ಒಲೆಕಟ್ಟೆ ಹತ್ರ ಮಲಗಲಾರೆ" ಎನ್ನುವ ಹಟ.

ಪ್ರತಿದಿನವೂ ಸೋರಿ ಒದ್ದೆಯಾಗುವ ನೆಲ, ಮುದ್ದೆ ಮಾಡಿಕೊಂಡು ಮಲಗುವ ಮಕ್ಕಳನ್ನು ನೋಡಿದಾಗ ಕನಿಕರ ಶಾಂಭವಿಗೆ. "ಒಂದಲ್ಲ ಒಂದು ದಿನ ಈ ಮನೆಯನ್ನು ಅಳಿದು ಹಂಚಿನ ಮನೆ ಕಟ್ಟಿಸಬೇಕು. ನಿಧಾನವಾಗಿ ಹಣ ಕೂಡಿಸಿಕೊಂಡು ಆಮೇಲೆ...." ದೃಢನಿರ್ಧಾರ ರೂಪು

ಗೊಳ್ಳುತ್ತದೆ ಅವಳ ಮನದಲ್ಲಿ. ಹಸಿದು ವರ್ಣಕ್ಕೆ ತಿರುಗುತ್ತಿರುವ ಗದ್ದೆ ಅವಳ ಮನದ ತುಂಬಾ ಹೊಸ ಆಶಾವಾದದ ಬೆಳಕನ್ನು ಮಿನುಗಿಸುತ್ತದೆ.

6

ಚಕ್ಕುಲಿ ಜಗಿಯುತ್ತ ಜಗಲಿಯ ಹೊರಗೆ ಆರಾಮಕುರ್ಚಿಯಲ್ಲಿ ಕುಳಿತ ಜನಾರ್ದನ ಶಾಸ್ತ್ರಿಗಳು ಹೊರ ಅಂಗಳದಲ್ಲಿ ಅದೇ ಆಗ ಬಂದು ನಿಂತ ಶಾಂಭವಿಯತ್ತ ಕಣ್ಣಾಡಿಸಿ "ಏಯ್ ಇವಳೇ, ಇಲ್ಲಿ ಶಾಂಭವಿ ಬಂದಿದ್ದಾಳೆ. ಏನಾಗ್ಬೇಕು ಕೇಳು" ಎಂದರು ಹೆಂಡತಿಯನ್ನು ಕರೆದು.

ಶಾಂಭವಿ ವಿನಯದಿಂದ ಕೈಜೋಡಿಸುತ್ತ ತಾನು ನಿಮ್ಮನ್ನು ಕಾಣ ಬೇಕೆಂದು ಬಂದಿದ್ದೇನೆ, ತಾವು ಒಪ್ಪಿದರೆ ದಿನಗೂಲಿಗೆ ಬರುತ್ತೇನೆಂದೂ ಕೇಳಿಕೊಂಡಾಗ ಅವರು ಅಗೆಯುತ್ತಿದ್ದ ಚಕ್ಕುಲಿಯನ್ನು ಅಲ್ಲೇ ಬಿಸಾಕಿ ಚಕಿತರಾಗಿ ನೋಡಿದರು ಅವಳನ್ನು.

"ವೇದಮ್ಮನ ಸೊಸೆ ನೀನು....ದಿನಗೂಲಿಗೆ ಬರ್ತೀಯಾ ?"

"ದೊಡ್ಡ ಸಂಸಾರ ನನ್ನದು. ಅವರೆಲ್ಲರ ಹೊಟ್ಟೆ ತುಂಬಿಸುವದೇ ಪ್ರಯಾಸದ ಕೆಲಸವಾಗಿದೆ. ಕೆಲಸ ಇದ್ದರೆ ಕೊಡಿ."

"ಎರಡು ವರ್ಷದ ಗೇಣಿ ಇನ್ನೂ ಬಾಕಿ ಇದೆ. ಯಾವಾಗ ಅದನ್ನು ಕೊಟ್ಟು ಮುಗಿಸ್ತೀರಿ ?"

"ಈ ಸಲ ನಾನೇ ಬೇಸಾಯ ಮಾಡಿಸಿದ್ದೇನೆ. ಗೇಣಿ ಬತ್ತಕ್ಕೆ ಚಿಂತೆ ಮಾಡ್ಬೇಡಿ, ಅರ್ಧದಷ್ಟಾದರೂ ತಂದು ಹಾಕ್ತೇನೆ. ಆದರೆ ಅಮ್ಮ, ಯಾವ ಕೆಲಸವಿಲ್ಲದೆ, ಸಂಪಾದನೆಯಿಲ್ಲದೆ ಏನು ಮಾಡಬೇಕೋ ತಿಳಿಯದಾಗಿದೆ."

"ಏಯ್ ಇವಳೇ ?" ಶಾಸ್ತ್ರಿಗಳು ಮತ್ತೆ ಕರೆದರು ಹೆಂಡತಿಯನ್ನು. "ನಮ್ಮ ಮನೆಕೆಲಸಕ್ಕೆ ಇವಳು ಆಗಬಹುದೋ ಏನೋ."

ಹೊರಗೆ ಬಂದ ಕಮಲಮ್ಮ ಶಾಂಭವಿಯನ್ನು ಅಡಿಯಿಂದ ಮುಡಿಯ ವರೆಗೆ ದಿಟ್ಟಿಸಿದರು. ತೇಪೆಹಚ್ಚಿದ ಮಾಸಲು ಬಣ್ಣದ ಸೀರೆ, ಸರಿಯಾಗಿ ತಲೆ ಬಾಚದೆ ಗಂಟುಹಾಕಿದ ಕೂದಲು, ತನ್ನನ್ನೇ ನೋಡುತ್ತಿದ್ದರೂ ಇನ್ನೆಲ್ಲೋ ನೋಡುವಂತಿದ್ದ ವಿಕಾರ ಕಣ್ಣುಗಳನ್ನು ನೋಡುತ್ತ ಪಕಪಕನೆ ನಕ್ಕುಬಿಟ್ಟರು.

"ಆ ಹುಚ್ಚನ ಹೆಂಡತಿಗೆ ಯಾವ ಕೆಲಸ ಕೊಡಲಿ ?"

"ಮನೆ ಕೆಲಸ, ಅಡಿಗೆ ಕೆಲಸ ಮಾಡಿಕೊಡ್ತಾಳೆ. ಶಾರದೆಯನ್ನೂ ಆಗಾಗ ಕರೆಯುವ ಅಗತ್ಯವಿಲ್ಲ. ನಿನಗೂ ಬ್ಲಡ್‌ಪ್ರೆಶರ್ ಜಾಸ್ತಿಯಾಗ್ತಾ ಇದೆ. ಏನ್ಹೇಳ್ತಿ ?"

"ಸಾರ್ಥಕವಾಯ್ತು ಬಿಡಿ. ಇವಳನ್ನು ಇಟ್ಟುಕೊಂಡರೆ ಒಬ್ಬರೇ ಒಬ್ಬರು ಈ ಮನೆಯ ನೀರನ್ನು ಕುಡಿಯಲಾರರು."

"ಏನಾಗಿದೆ ಇವಳಿಗೆ ?"

"ಕರಿಮೂತಿ ಮುಖದವಳನ್ನು ಅಡಿಗೆಗೆ ಇರಿಸಿಕೊಳ್ಳಬೇಕೇ? ನನಗಂತೂ ಜನ್ಮದಲ್ಲಿ ಒಗ್ಗಲಾರದು. ಹಾಳುರೂಪದ ಕೋತಿ ಮುಸುರೆ ತಿಕ್ಕಿಕೊಂಡಿದ್ದರೂ ಮನೆಗೊಂದು ಅನಿಷ್ಟ. ಹೋಗು, ಹೋಗು." ಕಮಲಮ್ಮ ಸೀದಾ ಒಳಗೆ ಹೊರಟುಹೋದರು.

ಶಾಂಭವಿಯ ಮುಖ ಕಪ್ಪಿಟ್ಟುಹೋಯಿತು. ಇದೀಗ ಎರಡನೆಯ ಬಾರಿ ಅವಮಾನ! ದೀನಳಾಗಿ ನೋಡಿದಳು ಶಾಸ್ತ್ರಿಗಳನ್ನು. ಅವರ ಮುಖವೂ ತಗ್ಗಿತ್ತು.

"ನಾನೇನು ಮಾಡಲಮ್ಮ, ಅವಳಿಗೆ ಇಷ್ಟವಿಲ್ಲ. ಇನ್ನು ಅಡಿಕೆ ತೋಟಕ್ಕೆ ಬೇರೆ ಹೆಣ್ಣಾಳುಗಳು ಬೇಕಾದಷ್ಟು ಜನರಿದ್ದಾರೆ. ನಿನಗೆ ಅನುಕೂಲವಾದರೆ ಸೊಪ್ಪು ಹುಲ್ಲು ಮಾಡಿ ತಂದುಹಾಕು."

ಮರುಮಾತಿಲ್ಲದೆ ಹೊರಟಳು ಮನೆಯತ್ತ. ಮಳೆಗಾಲದ ದಿನಗಳಲ್ಲಿ ಏನಾದರೂ ದಿನಗೂಲಿ ಸಿಕ್ಕಿದರೆ ನೋಡೋಣವೆಂದು ಇಲ್ಲಿ ಕೇಳಿಕೊಂಡು ಬಂದರೆ ಮರ್ಯಾದೆಯಿಂದ ಹೋಗು, ಇಲ್ಲ ಎನ್ನುವ ಬದಲು ಅವಮಾನದ ಚುಚ್ಚುನುಡಿ. ತನ್ನ ಮುಖದ ಮೇಲೆ ಕೈಯಾಡಿಸಿಕೊಂಡಳು. ನಿಜವಾಗಿಯೂ ತಾನು ಕುರೂಪಿ, ಅನಿಷ್ಟಮುಖದವಳೇ? ಉಬ್ಬುಹಲ್ಲಿನ ಮೇಲೆ ಬೆರಳನ್ನಾಡಿಸುತ್ತ ತುಟಿಗಳಿಂದ ಹಲ್ಲುಗಳು ಮುಚ್ಚುತ್ತವೆಯೇ ಎಂದೂ ನೋಡಿಕೊಂಡಳು. ಇಲ್ಲ, ಇದು ಯಾರ ತಪ್ಪು ?

"ಅರರೆ, ಏನು ಯೋಚ್ನೆ ಮಾಡ್ತಾ ಬಿರಬಿರನೆ ಓಡ್ತಾ ಇದ್ದೀಯಲ್ಲೇ, ನಿಲ್ಲು ನಿಲ್ಲು."

ಯಾರೋ ಕರೆದದ್ದು ಕೇಳಿಸಿದಾಗ ಹೊರಳಿ ನೋಡಿದಳು. ಕೈಯಲ್ಲಿ ಒಂದು ಚೀಲ ಹಿಡಿದುಕೊಂಡು ಬರುತ್ತಿದ್ದಾಳೆ ರಂಗಪ್ಪಾಚಾರಿಯ ಸೊಸೆ ಗಂಗಾ. ತನ್ನದೇ ಚಿಂತೆಯಲ್ಲಿದ್ದ ಶಾಂಭವಿಯನ್ನು ಸಮೀಪಿಸುತ್ತ ಕೇಳಿದಳು :

"ಎಲ್ಲಿಗ್ಹೋಗಿದ್ದೆ ?"

"ಶಾಸ್ತ್ರಿಗಳ ಮನೆಗೆ ಹಾಕಿದ ಸೊಪ್ಪು, ಹುಲ್ಲಿನ ಹಣ ಬಾಕಿ ಇತ್ತು. ತೆಗೆದುಕೊಂಡು ಬರಲು ಹೋಗಿದ್ದೆ."

"ಬೇಸಾಯ ಆಯ್ತಾ ?" ಗಂಗಾ ಮುಂದೆ ನಡೆಯುತ್ತ ಅಂದಳು: "ನಮ್ಮ ಗದ್ದೆಗೆಲ್ಲ ಎಂಥದೋ ಮಾರೀ ಕಾಹಿಲೆ ಬಡಿದಿದೆ. ಔಷಧಿ ಬಿಡಬೇಕು ಅಂತಿದ್ರು ಮಾವ. ಈ ಹಾಳು ಬೇಸಾಯದ ಹಣೆಬರಹವೇ ಇಷ್ಟು. ಬತ್ತ ಸಿಗುವಾಗ ಎಷ್ಟು ಕಷ್ಟಪಡಬೇಕೊ !"

ಗಂಗಾನಿಗೆ ಇನ್ನೂ ಇಪ್ಪತ್ತೆರಡು ವರ್ಷ. ಶಾಂಭವಿಯ ಸಮವಯಸ್ಸಿನವಳು. ಶಾಂಭವಿ ಗುರುಪುರಕ್ಕೆ ಬಂದು ಸೇರಿದಂದಿನಿಂದ ಅವಳ ಪರಿಚಯ ಬೆಳೆಯುತ್ತ ಸ್ನೇಹರೂಪಕ್ಕೆ ತಿರುಗಿದೆ. ಎಲ್ಲರಂತೆ ಗಂಗಾ ಒಂದು ದಿನವೂ ಶಾಂಭವಿಯ ರೂಪವನ್ನು ಕೆಣಕದಿದ್ದುದೇ ಅವರ ಸ್ನೇಹಕ್ಕೆ ನಾಂದಿಯಾಗಿದೆ. ಆಗಾಗ ಶಾಂಭವಿಯ ಮನೆಗೆ ಬರುತ್ತಾಳೆ ಅವಳನ್ನು ಮಾತನಾಡಿಸಲು.

"ಕೈಯಲ್ಲಿ ಚೀಲವಿದೆಯಲ್ಲ, ಏನಿದೆ ಅದರಲ್ಲಿ ?"

"ಬೀಡಿ ಎಲೆಗಳನ್ನು ತಂದೆ. ಪ್ರತಿವಾರ ಬ್ಯಾರಿ ಅಂಗಡಿಯಲ್ಲಿ ಕೊಡ್ತಾರೆ. ಬೀಡಿ ಕಟ್ಟಿಕೊಡಬೇಕು."

"ಹೇಗಿದೆ ನಿನ್ನ ಸಂಪಾದನೆ? ದಿನವೆಲ್ಲ ಕಟ್ತೀಯಲ್ಲ ಬೀಡಿ ?"

"ಹೋ, ಸಂಪಾದನೆ ವಿಷಯ ಕೇಳಬೇಡ. ದಿನಕ್ಕೆ ಸರಾಸರಿ ಎರಡು ಮೂರು ರೂಪಾಯಿಗಳಷ್ಟು ಬೀಡಿ ಗಳಿಕೆ ಬರುತ್ತದೆ." ನಡೆಯುತ್ತ ಅಂದಳು ಗಂಗಾ,"ಬೀಡಿ ಕಟ್ಟುವದರಿಂದಲೇ ನಮ್ಮಂತಹ ಬಡವರಿಗೆ ಎಷ್ಟೋ ಆಧಾರ. ನಮಗಿರುವದು ಎರಡು ಎಕರೆ ಗದ್ದೆ. ಅದನ್ನು ನಂಬಿಕೊಂಡರೆ ನಮ್ಮ ಉದ್ಧಾರವಾಗುವದು ಅಷ್ಟರಲ್ಲೇ ಇದೆ. ಬೆಳೆದದ್ದು ಅರ್ಧಪಾಲು ಧನಿಗಳಿಗೆ, ಕಾಲುಭಾಗ ಖರ್ಚಿಗೆ. ಕೆಲವೊಮ್ಮೆ ನಮ್ಮ ಪಾಲಿಗೆ ಏನೂ ಉಳಿಯುವದಿಲ್ಲ."

"ಹಾಗಾದರೆ ಬೀಡಿ ಸಂಪಾದನೆಯೇ ಮುಖ್ಯ ಅಲ್ಲವೇ ?"

"ಇಲ್ನೋಡು, ಈ ಚಿನ್ನದ ಕರೀಮಣಿಸರವನ್ನು ಕಳೆದ ವರ್ಷ ನಾನೇ ಮಾಡಿಸಿಕೊಂಡೆ, ಬೀಡಿ ಕಟ್ಟಿ ಸಂಪಾದಿಸಿದ ಹಣದಿಂದ! ಈ ವರ್ಷ ಮನೆಗೆ ಹಂಚು ಹೊದೆಯಿಸಬೇಕು ಎಂದುಕೊಂಡಿದ್ದೇನೆ."

"ನಾನೂ ಕಟ್ಟಬಹುದೇ ?"

"ಇದೇನು ಮಹಾವಿದ್ಯೆ ಅಂದ್ಕೊಂಡಿದ್ದೀಯಾ. ಕಲಿತರೆ ಸಣ್ಣ ಮಕ್ಕಳೂ ಕಟ್ಟಬಹುದು." ಗಂಗಾ ಕ್ಷಣಹೊತ್ತು ತಡೆದು ಅಂದಳು : "ಅಲ್ಲ, ನಿನಗ್ಯಾಕೆ

ಬೇಕು ಈ ಬೀಡಿ ಕಟ್ಟುವ ರೋಗ? ಅಂದ್ಹಾಗೆ ಶಾಸ್ತ್ರಿಗಳ ಮನೆಗೆ ನೀನು ಹೋದಾಗ ಅವರೇನೂ ಹೇಳಲಿಲ್ಲವೇ? ಮನೆಕೆಲಸಕ್ಕೆ ನಂಬಿಕೆಯ, ಕದಿಯುವ ಸ್ವಭಾವವಿಲ್ಲದ ಹೆಂಗಸು ಬೇಕು ಅಂತಿದ್ರು."

"ನನ್ನನ್ನು ಬರ್‍ತೀಯಾ ಎಂದು ಕಮಲಮ್ಮ ಕೇಳಿದ್ದರು. ಇಲ್ಲ ಅಂದೆ."

"ಯಾಕೆ? ಹೊಟ್ಟೆ ತುಂಬಾ ಬೆಳಗಿನ ತಿಂಡಿ ಕಾಫಿ ಕೊಡ್ತಾರೆ. ಕೆಲಸವೂ ಹೆಚ್ಚಿಗೆ ಇರಲಾರದು. ಗುಡಿಸಿ, ಒರಸಿ, ಬಟ್ಟೆ ಒಗೆಯುವುದು ಅಷ್ಟೇ ತಾನೆ?"

"ಮನೆಯಲ್ಲೇ ನನಗೆ ಬೇಕಾದ ಕೆಲಸಗಳಿವೆ. ಹೇಗೂ ಶಾರದೆ ಆಗಾಗ ಹೋಗ್ತಾ ಇರ್ತಾಳೆ." ತನ್ನ ತುಟಿಯಿಂದ ಹಲ್ಲುಗಳನ್ನು ಮುಚ್ಚಿಕೊಳ್ಳುತ್ತ ಅವಳೆಂದಳು, "ಮನೆಗೆ ಬರ್‍ತ್ಯಾ?"

"ಇಲ್ಲ. ಇನ್ನೊಂದಿನ ಬರ್‍ತೇನೆ. ಬೀಡಿ ಕಟ್ಟುವ ಮನಸ್ಸಿದ್ದರೆ ತಿಳಿಸು. ನಾನೇ ಹೇಳಿಕೊಡ್ತೇನೆ."

ಕಾಡುದಾರಿಯಲ್ಲಿ ತನ್ನ ಮನೆಯ ಜಾಡುಹಿಡಿದು ಹೊರಟುಹೋದಳು ಗಂಗಾ. ಇನ್ನೊಂದು ಕಾಲುದಾರಿಯಲ್ಲಿ ಮುಂದುವರಿದಳು ಶಾಂಭವಿ. ಏನೇನೋ ಅಸ್ಪಷ್ಟ ಬಯಕೆಗಳು. ತನ್ನ ಕೈತುಂಬಾ ಹಣವಾಗಬೇಕು. ಈ ಕುತ್ತಿಗೆಯಲ್ಲಿ ಚಿನ್ನದಿಂದ ಕಟ್ಟಿದ ಕರಿಮಣಿಸರ ಇರಬೇಕು. ಕೈಗೆ ಎರಡೆರಡು ಚಿನ್ನದ ಬಳೆಗಳು. ಹೇಗೆ? ನಾನೂ ಯಾಕೆ ಗಂಗಾನಂತೆ ಬೀಡಿ ಕಟ್ಟಿ ಸಂಪಾದಿಸಬಾರದು? ಕುಳಿತಲ್ಲಿಯೇ ದಿನಕ್ಕೆ ಎರಡು, ಎರಡೂವರೆ ರೂಪಾಯಿ ಸಂಪಾದನೆ. ಹೇಗಾದರೂ ತಾನೂ ಬೀಡಿ ಕಟ್ಟಲು ಕಲಿತುಕೊಳ್ಳಬೇಕು.

ಅವಳ ಹೊಸ ನಿರ್ಧಾರವನ್ನು ಕೇಳಿದ ವೇದಮ್ಮ ಹೌಹಾರಿಹೋದಳು. "ನಿನ್ನ ಜನ್ಮ ಸಾರ್ಥಕವಾಯ್ತು. ಇನ್ನು ಈ ಹೊಸ ವಿದ್ಯೆ ಪ್ರಾರಂಭ ಮಾಡಿದಿಯೋ, ನಾನೇನು ಸುಮ್ಮನಿರಲಾರೆ. ಬೀಡಿ ಎಲೆ, ಸೊಪ್ಪು, ಎಲ್ಲಾ ತೆಗೆದು ತೋಡಿಗೆ ಬೀಸಾಡ್ತೇನೆ, ನೋಡ್ಕೋ."

ಅತ್ತೆಯ ಧ್ವನಿಗೆ ಹೆದರಿದ ಶಾಂಭವಿ ಮೆಲುಧ್ವನಿ ತೆಗೆದಳು: "ಇದೇನು ನಾಚಿಗೆ ಕೆಲಸವಲ್ಲ, ಅತ್ತೆ. ಒಂದೆರಡು ತಿಂಗಳು ಗಂಗಾನ ಮನೆಗೆ ಹೋಗಿ ಬೀಡಿ ಕಟ್ಟಲು ಅಭ್ಯಾಸ ಮಾಡಿದರೆ, ಮುಂದೆ...."

"ಆಹಾಹಾ....ಇದಕ್ಕಿಂತ ಅವಮಾನದ ಕೆಲಸ ಬೇರೆ ಯಾವದೂ ಇಲ್ಲವೇ ನಿನಗೆ? ಆ ಬ್ಯಾರಿ ತನ್ನ ಅಂಗಡಿಯಲ್ಲಿ ಗ್ಲಾಸು ತೊಳೆಯಲು ಯಾರೂ

ಇಲ್ಲ ಎನ್ನುತ್ತಿದ್ದ. ಅಲ್ಲಿಗ್ಹೋಗು ! ದಿನಕ್ಕೆ ಎಂಟಾಣೆ ಮಜೂರಿ ಕೊಡ್ತಾನೆ. ಹೋಗ್ತಾಳಂತೆ, ಹೆಂಗಸಿಗೆ ಮರ್ಯಾದೆ ಎನ್ನುವದೂ ಬೇಕು. ಯಾವ ಕೆಲಸ ಮಾಡಬೇಕು, ಯಾವುದನ್ನು ಮಾಡಬಾರದು ಅನ್ನುವ ಯೋಚನೆ ಇಲ್ಲ ನಿನಗೆ."

ಅತ್ತೆಗೆ ಎದುರು ವಾದಿಸಲಿಲ್ಲ ಶಾಂಭವಿ. ಆದರೆ ಮನದಲ್ಲಿ ಮೂಡಿದ ಆಸೆ ಹಾಗೇ ಅಳಿದುಹೋಗಲಿಲ್ಲ. ತನ್ನಂತೆ ಹಳ್ಳಿಯಲ್ಲಿ ಬೀಡಿ ಕಟ್ಟುವವರು ಅನೇಕರಿದ್ದಾರೆ. ತಾನೊಬ್ಬಳು ಕಟ್ಟಿದರೆ ಅವಮಾನವೇ ? ಗದ್ದೆಯಲ್ಲಿ ಬೆಳೆಯುವ ಬತ್ತದಲ್ಲಿ ಗೇಣಿಯನ್ನು ಸಲ್ಲಿಸಿ ಉಳಿದದ್ದು ವರ್ಷಪೂರ್ತಿ ಸಾಕೇ? ಬೇರೆ ಉಪಸಂಪಾದನೆ ಬೇಕೇ ಬೇಕು. ಅತ್ತೆಗೆ ದುಡಿಯುವ ಮನಸ್ಸಿಲ್ಲ, ಕುಂಟನೆಪ ಹಾಕುತ್ತಾರೆ, ಅಷ್ಟೇ. ಶಾಸ್ತ್ರಿಗಳ ಮನೆಯಲ್ಲಿ ಕೆಲಸ ಸಿಗಲಿಲ್ಲ, ಆದರೇನಂತೆ, ನನ್ನ ಸ್ವಂತ ಕಾಲಮೇಲೆ ನಿಲ್ಲುವ ಶಕ್ತಿಯೂ ನನಗಿಲ್ಲವೇ ?

7

ಏನೋ ನಾಲ್ಕು ಕಾಸು ಸಿಗಲಿ ಎಂದುಕೊಂಡು ತರಕಾರಿಯನ್ನು ಬೆಳೆಸಿದ್ದರೂ ಗುರುಪುರದ ಪೇಟೆಯಲ್ಲಿ ಯೋಗ್ಯ ಬೆಲೆಗೆ ಗಿರಾಕಿಗಳೇ ಇಲ್ಲ. ಗೊಬ್ಬರ ಸುರಿದು ತರಕಾರಿ ಬೆಳೆಸಿದರೆ ಅದೇನು ಲಾಭ ತರುವಂತಹದಲ್ಲ ಎಂದು ಬಹಳ ಬೇಗನೆ ತಿಳಿದುಹೋಯಿತು. ಈ ನಡುವೆ ಹರಿನಾರಾಯಣ ಶಾಂಭವಿಯ ಸಲಹೆಯಂತೆ ಶಾಸ್ತ್ರಿಗಳ ಮನೆಗೆ ದಿನಗೂಲಿಗೆ ಹೋಗಲಾರಂಭಿಸಿದ. ನೋಡಲು ದೃಢಕಾಯನಾದರೂ ಬುದ್ಧಿ ಸರಿಯಿಲ್ಲದ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಹಿಂದೆಮುಂದೆ ನೋಡಿದರು ಶಾಸ್ತ್ರಿಗಳು. ಆದರೆ ದಿನ ಸರಿದಂತೆ ಅವನು ಬೇರೆಯವರಿಗಿಂತಲೂ ನಂಬಿಕೆ, ಪ್ರಾಮಾಣಿಕತನದಿಂದ ದುಡಿಯುವದನ್ನು ನೋಡಿ ತಮ್ಮಲ್ಲೇ ಮೆಚ್ಚಿದರು. ಸಂಬಳದಲ್ಲಿ ಹೆಚ್ಚಿತು ಎಂಟಾಣೆ.

ಮಳೆಗಾಲ ಮುಗಿಯುತ್ತ ಬಂದಿತು. ಬತ್ತದ ತೆನೆಗಳು ತಲೆ ಎತ್ತಿ ನಿಂತವು. ಶಾಂಭವಿಗೆ ಎಷ್ಟು ನೋಡಿದರೂ ತೃಪ್ತಿಯಿಲ್ಲ ಗದ್ದೆಯನ್ನು. ತನ್ನ ಶ್ರಮದಲ್ಲಿ ಮಾಡಿದಂತಹ ಗದ್ದೆಯಲ್ಲಿ ಬೆಳೆ ಕುಯ್ಯುವಾಗ ಹರಿನಾರಾಯಣ, ಕೇಶವ, ಶಾಂಭವಿಗೆ ಉತ್ಸಾಹವೇ ಉತ್ಸಾಹ. ಸಹಾಯಕ್ಕೆಂದು ಬಂದರು

ಇನ್ನೂ ಏಳೆಂಟು ಜನರು. ಕೊಯ್ದು ಪೈರನ್ನು ಅಂಗಳದಲ್ಲಿ ರಾಶಿಹಾಕಿ ಹುಲ್ಲಿನಿಂದ ಬೇರ್ಪಡಿಸಿ ಬತ್ತವನ್ನು ಸರಿಯಾಗಿ ಬಿಸಲಿಗೆ ಒಣಗಿಸಿ ಒಳಗೆ ತುಂಬಿದ್ದಾಯಿತು. ಒದ್ದೆ ಹುಲ್ಲನ್ನು ಅಂಗಳದಲ್ಲಿಯೇ ಹರವಿದರು ಒಣಗ ಲೆಂದು. ಈ ಸಮಯದಲ್ಲಿ ಮಾಧವನಾಗಲಿ, ವೇದಮ್ಮನಾಗಲಿ ಕಡ್ಡಿಯನ್ನು ಆಚೆ ಈಚೆ ಸರಿಸಲಿಲ್ಲ. ಶಾರದೆಗೆ ಜನಾರ್ದನ ಶಾಸ್ತ್ರಿಗಳ ಮನೆಯಿಂದ ಮತ್ತೆ ಬಂದಿದೆ ಕರೆಯೋಲೆ, ಹದಿನೈದು ದಿನಗಳವರೆಗೆ ಅಡಿಗೆಕೆಲಸಕ್ಕೆ ಬರಲಿ, ಎಂದು. ಅವಳು ಬೆಳಗ್ಗೆ ಆರುವರೆಗೆ ಹೊರಟುಹೋದರೆ ಬರುವದು ಸಾಯಂ ಕಾಲ ಆರು ಗಂಟೆಗೆ. ಆದರೆ ಶಾಂಭವಿಯ ಹೊಸ ಛಲದ ಉತ್ಸಾಹದಲ್ಲಿ ಬೇರೆಯವರು ತನಗೆ ಸಹಾಯ ಮಾಡಲಿ ಎಂದು ನಿರೀಕ್ಷಿಸುತ್ತ ಕೈಕಟ್ಟಿ ಕುಳಿತುಕೊಳ್ಳಲಿಲ್ಲ.

ಗೇಣಿ ಬತ್ತವನ್ನು ಶಾಸ್ತ್ರಿಗಳ ಮನೆಗೆ ತಲುಪಿಸಲು ಹರಿನಾರಾಯಣನ ಜೊತೆಯಲ್ಲಿಯೇ ಹೊರಟಳು ಶಾಂಭವಿ. ಗಂಡ ಹೆಂಡತಿ ಜೊತೆಗೂಡಿ ಬಂಧಾಗ ಕಮಲಮ್ಮ ಹುಬ್ಬೇರಿಸಿ ನೋಡಿದರು. ಮೂರು ವರ್ಷಗಳ ನಂತರ ಮೊದಲ ಬಾರಿ ಗೇಣಿ ಬತ್ತವನ್ನು ಸಂದಾಯಮಾಡಲು ಬಂದಿದ್ದಾರೆ. ಕೃತಕ ನಗುವಿನ ಉಪಚಾರ ನೀಡುತ್ತ ಕುಡಿಯಲು ಹಿತ್ತಾಳೆ ತಂಬಿಗೆ ಯಲ್ಲಿ ನೀರು ತಂದಿಟ್ಟರು. ಜನಾರ್ದನ ಶಾಸ್ತ್ರಿಗಳು ಮನೆಯಲ್ಲಿಲ್ಲದಿದ್ದುದರಿಂದ ಅವರಿಗಾಗಿ ಕಾದು ನಿಂತರು ಇಬ್ಬರೂ.

"ಜಯರಾಮಾ...." ಕಮಲಮ್ಮ ಯಾರನ್ನೋ ಕರೆದರು. ಕ್ಷಣದಲ್ಲಿ ಒಬ್ಬ ನವಯುವಕ ಒಳಗಿನಿಂದ ಹೊರಗೆ ಬಂದ. ನೋಡಲು ತೆಳ್ಳಗಾಗಿ ಎತ್ತರವಾಗಿದ್ದ ಬಿಳಿ ವರ್ಣದ ಯುವಕ. ಸಣ್ಣ ಕಿರುಮೀಸೆಯಿರಿಸಿದ್ದಾನೆ, ಆಧುನಿಕ ಮಾದರಿಯಲ್ಲಿ ಬೆಳಸಿದ್ದಾನೆ ಕೂದಲನ್ನು. ಚೆಲ್ಲಾಟದ ನಗು ಮುಖ.

"ಇವಳೇ ನೋಡು ಅವನ ಹೆಂಡತಿ, ಹೇಗಿದ್ದಾಳೆ?" ಹುಬ್ಬು ಹಾರಿಸಿ ಕಮಲಮ್ಮ ಕಿಸಕ್ಕನೆ ನಕ್ಕಾಗ ಶಾಂಭವಿಯ ಮುಖವೂ ತಗ್ಗಿತು. ಜಯ ರಾಮನೂ ತನ್ನನ್ನು ನೋಡಿ ನಗುತ್ತಾನೆ ಎಂದುಕೊಂಡಳು. ಆದರೆ ಅವನು ನಗಲಿಲ್ಲ. ಗಂಭೀರವಾಗಿ ನೋಡಿದ ಇಬ್ಬರನ್ನೂ.

"ಅಕ್ಕ, ಕಾಫಿ ಮಾಡಲಿಲ್ಲವೇ?

"ಇವರಿಗೆ ಕಾಫಿ ಯಾಕೆ?" ಕಣ್ಸನ್ನೆಯಲ್ಲೇ ಕೇಳಿದ ಕಮಲಮ್ಮ, "ಶಾರದೇ" ಎಂದು ಕೂಗಿದರು ಜೋರಾಗಿ: "ಸ್ವಲ್ಪ ಮಜ್ಜಿಗೆ ನೀರು ತಾ."

ಕಮಲಮ್ಮನ ಸಹಾಯಕ್ಕೆ ಬಂದ ಶಾರದೆ ಸ್ವಲ್ಪ ಹೊತ್ತಿನಲ್ಲಿ ಮಜ್ಜಿಗೆ ನೀರಿನೊಂದಿಗೆ ಹೊರಗೆ ಬಂದಳು. ಅತ್ತಿಗೆಯನ್ನು ನೇರವಾಗಿ ನೋಡುವುದು ಅವಳಿಂದಾಗದೆ ಒಳಗೆ ಹೊರಟುಹೋದಳು. ಜಯರಾಮ ತಾನೇ ಹತ್ತು ಬಾಳೇಹಣ್ಣುಗಳನ್ನು ತಂದು ಇರಿಸಿದ ಅವರ ಮುಂದೆ. ಕಮಲಮ್ಮನಿಗೆ ಈ ಉಪಚಾರ ಅತಿಯಾದಂತೆ ಅನ್ನಿಸಿತು. ಜಯರಾಮ ಅವರ ಗದ್ದೆ ಬೇಸಾಯದ ವಿಷಯ, ಆದ ಬೆಳೆಯ ಕಷ್ಟನಷ್ಟವನ್ನು ಆತ್ಮೀಯವಾಗಿ ವಿಚಾರಿಸಿಕೊಂಡ. ಶಾಂಭವಿಯೇ ಮಾತನಾಡಿದಳು.

"ಅವನಿಗೆ ಮಾತು ಬಹಳ ಕಡಿಮೆ." ಕಮಲಮ್ಮ ಬಿಗುಮುಖದಲ್ಲಿ ಅಂದರು. "ಏನೋ ಹುಚ್ಚು...."

"ಏನಕ್ಕ ಹೀಗೆ ಮಾತನಾಡ್ತೀ? ಹರಿನಾರಾಯಣ ನೋಡು ಥೇಟ್ ಶ್ರೀಮನ್ನಾರಾಯಣನಂತೆ ಇದ್ದಾನೆ. ಅವನಿಗೆ ಹುಚ್ಚು ಅನ್ತೀಯಾ." ಅವನು ಒಳಗೆ ಹೋಗಿ ಇನ್ನೂ ಒಂದಿಷ್ಟು ಬಾಳೆಹಣ್ಣನ್ನು ತಂದು ಅವರ ಮುಂದಿಟ್ಟ. "ಮನೆಯಲ್ಲಿ ಉಳಿದ ಮಕ್ಕಳಿಗೆ ಕೊಡಿ."

ಅಷ್ಟರಲ್ಲಿ ಜನಾರ್ದನ ಶಾಸ್ತ್ರಿಗಳೂ ಬಂದರು ಅಲ್ಲಿಗೆ. ಅವರ ಎದುರಿನಲ್ಲಿಯೇ ಬತ್ತವನ್ನು ಅಳೆದಳು ಶಾಂಭವಿ.

"ವರ್ಷಕ್ಕೆ ಹನ್ನೆರಡು ಮುಡಿ ಬತ್ತ ಸಂದಾಯವಾಗಬೇಕು ನನಗೆ. ಮೂರು ವರ್ಷದ ಬಾಕಿ ಸೇರಿ ಒಟ್ಟು ನಲ್ವತ್ತೆಂಟು ಮುಡಿ. ಎಷ್ಟಿದೆ ಈಗ ಇದರಲ್ಲಿ?" ಕೇಳಿದರು ಶಾಸ್ತ್ರಿಗಳು ಠೀವಿಯಲ್ಲಿ.

"ಈ ವರ್ಷದ ಹನ್ನೆರಡು ಮುಡಿ ಇದೆ. ಉಳಿದುದನ್ನು ಮುಂದಿನ ವರ್ಷ ಹೆಚ್ಚಿನ ಬೆಳೆ ತೆಗೆದು ತೀರಿಸ್ತೇವೆ."

ಶಾಸ್ತ್ರಿಗಳು ರಸೀದಿಯನ್ನು ಬರೆಯುತ್ತ, "ಗೇಣಿ ಕಾನೂನನ್ನು ರದ್ದು ಮಾಡುವ ಯೋಚನೆಯಲ್ಲಿದೆ ಸರಕಾರ. ನೀವೇನು ತೀರಿಸುತ್ತೀರೋ ನಾನರಿಯೆ" ಎಂದರು.

ಅಲ್ಲಿಂದ ಹಿಂದಿರುಗುತ್ತ ಶಾಂಭವಿ ತನ್ನ ಅಸಮಾಧಾನವನ್ನು ಹೊರ ಹಾಕಿದಳು : "ದೊಡ್ಡ ಮನುಷ್ಯರಿಗೆಲ್ಲಾ ಒಂದು ವಿಧದ ಸಣ್ಣ ಬುದ್ಧಿ. ಯಾರ ಸಂಗಡ ಹೇಗೆ ಮಾತನಾಡಬೇಕು ಎನ್ನುವುದೂ ತಿಳಿಯದು."

"ಹೇಳುವವರು ಹೇಳ್ತಾರೆ. ನಮ್ಮ ಕಿವಿ ಮುಚ್ಚಿಕೊಳ್ಳೋಣ."

"ಹೇಳುವುದಕ್ಕೂ ಮಿತಿ ಬೇಡವೇ? ನನ್ನ ಪಾಡಿಗೆ ನಾನಿದ್ದೇನೆ,

ಆದರೂ ಅವರ ಕಣ್ಣಲ್ಲಿ ಎಂತಹ ಕುಹಕ ನಗೆ. ಇನ್ಮೇಲೆ ಅವರ ಮನೆ ಬದಿಗೆ ತಲೆಯನ್ನೇ ಹಾಕಲಾರೆ."

ಮನೆ ಸೇರಿದ ಅರ್ಧಗಂಟೆಯಲ್ಲೇ ಅಂಗಳದಲ್ಲಿ ಜಯರಾಮ ಕಾಣಿಸಿಕೊಂಡ. ಶಾಂಭವಿಗೆ ಎಲ್ಲಿಲ್ಲದ ದಿಗಿಲು. ಹೆದರುತ್ತಲೇ ಒಳಗೆ ಕರೆದಳು. ಕಲ್ಲು ಬೇಂಚಿನಲ್ಲಿ ಕುಳಿತ ಹರಿನಾರಾಯಣ "ಬನ್ನಿ ಒಳಗೆ ಹೋಗೋಣ" ಎಂದ.

"ಬೇಡ, ಇಲ್ಲೇ ಅಂಗಳದಲ್ಲಿ ಕುಳಿತುಕೊಳ್ಳೋಣ—" ಜಯರಾಮ ತಾನೂ ಕಲ್ಲುಬೇಂಚಿನ ತುದಿಯಲ್ಲಿ ಕುಳಿತ. "ನೀನು ಬಹಳ ಚೆನ್ನಾಗಿ ಹಾಡುತ್ತಿಯಂತೆ. ಒಂದೆರಡು ಹಾಡನ್ನು ಕೇಳಿ ಹೋಗೋಣವೆಂದು ಬಂದೆ."

ಹರಿನಾರಾಯಣ ಯಾವ ದಾಕ್ಷಿಣ್ಯವೂ ಇಲ್ಲದೆ ಕಾಲುಗಳನ್ನು ಮಡಿಸಿ ಕುಳಿತ. ಸಾಯಂಕಾಲದ ಸಮಯ, ಹಕ್ಕಿಗಳು ಗೂಡಿಗೆ ಹಿಂದಿರುಗುವ ಹೊತ್ತು. ಹಿನ್ನೆಲೆಯ ವಾದ್ಯಗಳಿಲ್ಲ, ತಬಲದ ಸದ್ದಿಲ್ಲ. ಕೇಳಲು ನೂರಾರು ಶ್ರೋತೃಗಳೂ ಇಲ್ಲ. ಅವನು ಕಣ್ಣುಗಳನ್ನು ಮುಚ್ಚಿಕೊಂಡು ದಾಸರ ಪದವನ್ನು ಪ್ರಾರಂಭಿಸಿದ :

"ದಾಸನ ಮಾಡಿಕೋ ಎನ್ನ...ಸ್ವಾಮಿ,
ಸಾಸಿರ ನಾಮದ ವೆಂಕಟರಮಣಾ !"

ಜಯರಾಮ ಅವನ ಸಂಗೀತಸುಧೆಯಲ್ಲಿ ತನ್ಮಯನಾಗಿಹೋದ. ಇನ್ನೂ ಒಂದೆರಡು ದೇವರ ನಾಮಗಳನ್ನು ಹೇಳಿದ.

"ಆಹ್, ನೀನು ಇಷ್ಟು ಚೆನ್ನಾಗಿ ಹಾಡುತ್ತಿಯಾ ಅನ್ನುವದು ನನಗೆ ತಿಳಿದಿರಲೇ ಇಲ್ಲ. ಶಾರದೆ ತಮಾಷೆಗಾಗಿ ಹೇಳಿದ್ದಳು ಎಂದುಕೊಂಡಿದ್ದೆ. "ನಾನು ಯಾರು ಅಂತ ಗೊತ್ತಾಯ್ತೇ ? ಕಮಲಮ್ಮನ ತಮ್ಮ. ಬೆಂಗಳೂರಿನಲ್ಲಿ ಇಂಜಿನೀಯರ್‌ನಾಗಿದ್ದೇನೆ."

ಶಾಂಭವಿಗೆ ಇನ್ನೂ ವಿಸ್ಮಯ. ಹರಿನಾರಾಯಣ ಇನ್ನೂ ನಾಲ್ಕಾರು ಹಾಡುಗಳನ್ನು ಅವನಿಗಾಗಿ ಸುಶ್ರಾವ್ಯಕಂಠದಲ್ಲಿ ಹೇಳಿದ.

"ಬೆಂಗಳೂರಿನ ರೇಡಿಯೋ ಸ್ಟೇಶನ್‌ನಲ್ಲಿ ನಿನ್ನ ಹಾಡನ್ನು ಇರಿಸಿದರೆ ಖಂಡಿತ ಶ್ರೋತೃಗಳು ಮೆಚ್ಚಿಕೊಳ್ತಾರೆ. ನಿನ್ನಂಥವರು ಕಾನನದ ಮಲ್ಲಿಗೆಯಂತೆ ಇರುವದು ಯಾರಿಗೂ ಗೊತ್ತಾಗುವದಿಲ್ಲ. ಎಷ್ಟು ವರ್ಷ ಸಂಗೀತ ಕಲಿತಿದ್ದೀ ?"

"ಯಾರ ಹತ್ತಿರವೂ ಕಲಿಯಲಿಲ್ಲ."

"ಓ !....ಹುಟ್ಟಿನಿಂದ ಬಂದ ಪ್ರತಿಭೆ ಇದು" ಎಂದು ಚಪ್ಪಾಳೆ ತಟ್ಟಿದ ಜಯರಾಮು, "ವರ್ಷಗಟ್ಟಲೆ ಸಂಗೀತ ಕಲಿಸಿದರೂ ಯಾರಿಗೂ ಇಷ್ಟು ಚೆನ್ನಾಗಿ ಹಾಡಲು ಬರಲಾರದು. ರಾಗಜ್ಞಾನದೊಡನೆ ನೀನು ಹಾಡ ಬೇಕಿದ್ದರೆ ಎಲ್ಲೋ ಪೂರ್ವಜನ್ಮದಲ್ಲಿ ದೊಡ್ಡ ವಿದ್ವಾಂಸನಾಗಿರಬೇಕು."

ಅವನು ಅಲ್ಲಿಂದ ಹೊರಟು ನಿಂತಾಗ ಶಾಂಭವಿ ವಿಷಾದಪ ಧ್ವನಿ ತೆಗೆ ದಳು : "ಸುಧಾಮನ ಮನೆಗೆ ಕೃಷ್ಣ ಬಂದಂತಾಯಿತು. ನಿಮಗೆ ನಾವು ಏನೂ ಕೊಡಲಿಲ್ಲವಲ್ಲ."

"ಕಿವಿಗಳಿಗೆ ಬೇಕಾದ ಊಟ ಸಿಕ್ಕಿತು. ನಾನು ಇನ್ನೂ ನಾಲ್ಕು ದಿನ ಇದೇ ಊರಿನಲ್ಲಿದ್ದೇನೆ. ದಿನವೂ ಇವನ ಹಾಡು ಕೇಳಿ ತೃಪ್ತಿಪಡ್ತೇನೆ. ಮುಂದಿನ ಸಾರಿ ಟೇಪ್‌ರೆಕಾರ್ಡ್‌ನ್ನು ತಂದು ಎಲ್ಲಾ ಹಾಡುಗಳನ್ನು ಟೇಪ್ ಮಾಡಿ ಕೊಂಡು ಹೋಗ್ತೇನೆ."

ಶಾಂಭವಿ, ಹರಿನಾರಾಯಣ ಆಶ್ಚರ್ಯ ವ್ಯಕ್ತಪಡಿಸಿದರು.

"ನಿಜ ಅಮ್ಮಾ. ಇಂಥವರ ಸಂಗೀತ, ಹಾಡು ಕೇಳಲು ಸಿಗುವದೇ ಅಪರೂಪ. ನಾನಿನ್ನು ಬರಲೇ ?"

ವಿನಯದಿಂದ ಕೂಡಿದ ಮಾತಿಗೆ ಶಾಂಭವಿ ಮನದಲ್ಲೇ ವಂದಿಸಿದಳು. ಆ ಕೂಡಲೇ ಓಡಿಹೋಗಿ ಒಂದಿಷ್ಟು ಬದನೆ, ಹಸಿಮೆಣಸಿನ ಕಾಯಿಗಳನ್ನು ಕುಯ್ದು ಸಣ್ಣ ಚೀಲದಲ್ಲಿ ಹಾಕಿ ಕೊಡುತ್ತ "ತಗೊಳ್ಳಿ, ಇದು ಬಡವರ ಕಾಣಿಕೆ. ಆಗಾಗ ಬರ್ತಾ ಇರಿ" ಎಂದಳು.

"ಓಹೋ, ಯಾವಾಗಲೂ ಬರುತ್ತಾ ಇರ್ತೇನೆ."

8

ಗದ್ದೆಯಲ್ಲಿ ಇನ್ನೊಂದು ಬೆಳೆಯನ್ನು ತೆಗೆಯಬಹುದಾಗಿದ್ದರೂ ಅದಕ್ಕೆ ಬೇಕಾದ ನೀರಿನ ಸೌಕರ್ಯವಿರದ ಕಾರಣ ಒಂದೇ ಬೆಳೆಯಲ್ಲಿ ತೃಪ್ತರಾಗ ಬೇಕಾಯಿತು. ಚಳಿಗಾಲದ ಸಮಯದಲ್ಲಿ ಅಲ್ಲಿ ಉದ್ದನ್ನು ಬೆಳೆಯಲಾಯಿತು. ಒಂದು ಸ್ವಲ್ಪ ಭಾಗ ಖಾಲಿಯಿರಿಸಿ ಅಲ್ಲಿ ಮೆಣಸಿನ ಸಸಿಗಳನ್ನು ನೆಡ ಲಾಯಿತು. ವೇದಮ್ಮನಿಗೆ ಸೊಸೆಯ ಕೆಲಸಗಳು ಇಷ್ಟವಾದರೂ ಮಾತಿ ಗೊಮ್ಮೆ 'ಯಾಕೆ ನಿನಗೆ ಸುಮ್ಮನೆ ಶ್ರಮ' ಎನ್ನುತ್ತಾಳೆ.

"ಮೆಣಸಿನ ಗಿಡಗಳಿಗೆ ನಾಲ್ಕು ಕೊಡ ನೀರು ಹಾಕು" ಎಂದು ಮಾಧವನಿಗೆ ಹೇಳಿದರೆ ಅವನೆಲ್ಲಿ ಕೇಳುತ್ತಾನೆ? ದಿನೇ ದಿನೇ ಸೋಮಾರಿಯಾಗುವ ಅವನಿಂದ ಒಂದೇ ಒಂದು ಕೆಲಸ ಮಾಡಲು ಸಾಧ್ಯವಿಲ್ಲ.

ಇದೇ ಸಮಯದಲ್ಲಿ ಶಾಂಭವಿಯಲ್ಲಿ ತಾಯಿಯಾಗುವ ಲಕ್ಷಣಗಳು ಕಾಣಿಸಿಕೊಂಡವು. ವೇದಮ್ಮ ಹಿರಿಹಿರಿ ಹಿಗ್ಗುತ್ತ ಎಲ್ಲ ಕಡೆಗೂ ಹೇಳಿಕೊಂಡು ಬಂದರು. ಆದರೆ ಅವಳಿಗೆ ಯಾರಿಂದ ಹೆಚ್ಚಿನ ನಿರೀಕ್ಷೆ, ಆನಂದ ಸಂತೋಷದ ಪ್ರತಿಕ್ರಿಯೆ ದೊರೆಯಬೇಕಿತ್ತೋ ಅಲ್ಲಿ ಏನೂ ಸಿಗಲಿಲ್ಲ. ಅವನು ಯಾವ ಹೊಸದೂ ಆಗದವನಂತೆ ಸಮಾನ ತಳೆದ. ತವರುಮನೆಯವರಿಗೂ ಆದ ಸಂತೋಷ ಅಷ್ಟಿಷ್ಟಲ್ಲ. ಮಗಳ ಬಡತನ, ಇಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರೆ ನೋಡಿದ್ದ ತಂದೆ–ತಾಯಿಗೆ ಎಲ್ಲಿ ಅವಳು ತಮ್ಮನ್ನು ನಿಂದಿಸುತ್ತಾಳೋ ಎನ್ನುವ ಹೆದರಿಕೆಯಿತ್ತು. ಶಾಂಭವಿ ನಿಂದಿಸಲಿಲ್ಲ. ಅದಕ್ಕೆ ಬದಲಾಗಿ.

"ಪಾರ್ವತಿದೇವಿ ದಟ್ಟದರಿದ್ರನನ್ನು ಮದುವೆಯಾದರೂ ಸಕಲೈಶ್ವರ್ಯಗಳನ್ನು ಪಡೆದಳು. ನಿಮ್ಮ ಶಾಂಭವಿ ಸೇರಿದ ಮನೆ ಒಂದಲ್ಲ ಒಂದು ದಿನ ಅರಮನೆಯಾಗಿ ಅವಳ ಅಂಗೈಮೇಲೆ ಶ್ರೀಲಕ್ಷ್ಮಿ ನಲಿಯಬಹುದು—" ಎಂದಿದ್ದಳು ವಿಜಯದ ಗರ್ವದಲ್ಲಿ.

ಮೊದಲ ಬಾಣಂತನ, ತವರುಮನೆಗೆ ಹೋಗಬೇಕಾದುದು ಅನಿವಾರ್ಯ. ತಂದೆ ಕರೆದೊಯ್ಯಲೆಂದು ಬಂದಾಗ ಎಂಟು ತಿಂಗಳ ಗರ್ಭಿಣಿ ಶಾಂಭವಿಗೆ ಇಲ್ಲಿಂದ ಹೋಗುವ ಮನಸ್ಸಿಲ್ಲ. ತಾನಿಲ್ಲದೆ ಮನೆಯವರೆಲ್ಲ ಹೇಗಿರುತ್ತಾರೋ, ಹೇಗೆ ಕೆಲಸ ಮಾಡತ್ತಾರೋ ಎನ್ನುವ ಚಿಂತೆ. ಈ ದಿನಗಳಲ್ಲೆಲ್ಲ ಎಲ್ಲರಿಗೂ ಶಾಂಭವಿ ಅತಿ ಅಗತ್ಯ. ಸಣ್ಣ ಪುಟ್ಟ ಕೆಲಸಗಳಿಗೂ ಅವಳನ್ನೇ ಕೇಳಬೇಕು. ಹರಿನಾರಾಯಣನಿಗೆ ಅವಳು ಅರೆನಿಮಿಷವೂ ತನ್ನಿಂದ ದೂರ ಹೋಗಬಾರದು. ಹಿಂದೆ ಕುಳಿತಲ್ಲಿಯೇ ಜಡಭರತನಂತೆ ಇದ್ದ ಅವನು ಅವಳಿಂದಲೇ ಹೊಸ ಗೆಲವು ಪಡೆಯುತ್ತಿದ್ದಾನೆ. ಅಯೋಗ್ಯನೆಂದು ಮೂಲೆಗುಂಪಾದ ಈತ ಈಗ ಎಲ್ಲರಿಗೂ ಬೇಕು. ಶಾಂಭವಿ ನಿಧಾನವಾಗಿ ಅವನ ಮೇಲೆ ಯಾವದೋ ಹೊಸ ಬೆಳಕನ್ನು ಅವನಿಗೆ ಅರಿಯದ ರೀತಿಯಲ್ಲಿ ಚೆಲ್ಲುತ್ತಾ ಇದ್ದಾಳೆ. ಅವಳಿಲ್ಲದೆ ಮೂರುನಾಲ್ಕು ತಿಂಗಳು ಈಗ ಅವನೊಬ್ಬನೇ ಕಳೆಯಬೇಕಾಗಿದೆ. ಆದರೂ ಅವನ ಮುಖದ ಮೇಲೆ ಅದೇ ಮೊದಲಿನ ಮಂದಹಾಸ. ಅವಳ ವಿಷಯವನ್ನು ಮಂದಬುದ್ಧಿಗೆ ಅರ್ಥೈಸಿಕೊಂಡವನಂತೆ ಅವನು ಮೌನವಾಗಿ ನಗು ಚೆಲ್ಲಿದ.

'ನೀನು ಹೋಗಿ ಬಾ. ಗದ್ದೆ ಕೆಲಸದ ಬಗ್ಗೆ ಚಿಂತೆ ಬೇಡ. ನೀನಿದ್ದಿಯಾ ಎಂಥುಕೊಂಡೇ ಕೇಶವನೂ ನಾನೂ ಎಲ್ಲಾ ಕೆಲಸ ಮಾಡ್ತೇವೆ. ಯಾವಾಗ ನೀನು ಬರುತ್ತಿ ಎಂದೂ ಕಾಯುತ್ತಿರುತ್ತೇನೆ' ಎನ್ನುವ ಪ್ರೀತಿಯ ನುಡಿಗಾಗಿ ಹಾರೈಸಿದಳು. ಅವನು ಏನೂ ಹೇಳಲಿಲ್ಲ!

ಆದರೂ ಅವನ ನಗು ಅವಳ ಮನಕ್ಕೆಷ್ಟೋ ತಂಪನ್ನೆರೆಯಿತು. ಎಲ್ಲರಿಗೂ ಒಂದೊಂದು ಬುದ್ಧಿವಾದ ಹೇಳಿ ಅವಳು ತಂದೆಯೊಡನೆ ಹೊರಟು ನಿಂತಾಗ ನಿಜವಾಗಿಯೂ ತಾನು ತನ್ನ ಪತಿ ಮತ್ತು ಕುಟುಂಬವನ್ನು ಎಷ್ಟು ಪ್ರೀತಿಸುತ್ತಿದ್ದೇನೆ, ಎಲ್ಲರೊಡನೆ ಅನಿವಾರ್ಯವಾಗಿ ಹೇಗೆ ಬಂಧಿತಳಾಗಿದ್ದೇನೆ ಎಂದು ಅನ್ನಿಸಿಬಿಟ್ಟಿತು. ಕೇಶವ ಕಣ್ಣೀರು ತುಂಬಿ ಬೀಳ್ಕೊಟ್ಟ ಅತ್ತಿಗೆಯನ್ನು.

ಮುಂದೆ ಒಂದೇ ತಿಂಗಳಲ್ಲಿ ಹೆಣ್ಣು ಮಗುವಿನ ತಾಯಾದಳು. ನಾಲ್ವತ್ತು ದಿನ ತಾಯಿಯಿಂದ ಆರೈಕೆ ಮಾಡಿಸಿಕೊಂಡು ಮಗು ಸುಮನಳನ್ನು ಎತ್ತಿಕೊಂಡು ಹಿಂದಿರುಗಿದಳು ಗುರುಪುರಕ್ಕೆ. ಅವಳು ಬಂದ ದಿನವೇ ವೇದಮ್ಮ ಅಡಿಗೆಕೋಣೆಯ ಮತ್ತು ಇಡೀ ಮನೆಯ ಭದ್ರವಾದ ಕೀಲಿಕೈಯನ್ನು ಅವಳ ಕೈಗಿತ್ತು ತಾನು ನಿಶ್ಚಿಂತಳಾದಳು.

ಶಾಂಭವಿಯ ಗೈರುಹಾಜರಿಯಲ್ಲಿ ಮಳೆಗಾಲದ ಬತ್ತ ಕುಯ್ದು ಒಣಗಿಸಿ ಒಳಗೆ ತುಂಬಿಸಿಟ್ಟಾಗಿತ್ತು. ಈ ಸಾರೆ ಬಂದ ಬೆಳೆ ಕಡಿಮೆ. ಅದರಲ್ಲಿ ವಾಡಿಕೆಯ ಗೇಣಿ ಸಂದಾಯಮಾಡಿ ಉಳಿದದ್ದು ಸ್ವಲ್ಪ. ಎರಡು ತಿಂಗಳಿಗೆ ಅಕ್ಕಿ ಸಾಲದು. ಜೋಪಾನವಾಗಿರಿಸಿದ ಉದ್ದು ಯಾವಾಗಲೋ ಮುಗಿದು ಹೋಗಿದ್ದು ಬಿತ್ತಲೆಂದು ಇರಿಸಿದ ಉದ್ದನ್ನೂ ವೇದಮ್ಮ ಖರ್ಚುಮಾಡಿಬಿಟ್ಟಿದ್ದಾಳೆ. ತರಕಾರಿ ಮಾರಿದ ಸ್ವಲ್ಪ ಹಣವೂ ಮುಗಿದಿದೆ. ಹೀಗೆ ಮನೆ ಸೇರುತ್ತಿದ್ದಂತೆ ಭವಿಷ್ಯದ ಭೂತ ಆವರಿಸಿಕೊಂಡಿತು ಅವಳನ್ನು.

ಎಂದಿನಂತೆ ಹರಿನಾರಾಯಣ ಕೆಲಸಕ್ಕೆ ಹೋಗುತ್ತಿದ್ದರೂ ಅವನಿಗೆ ದೊರೆಯುವ ಸಂಬಳ ದೊಡ್ಡ ಸಂಸಾರಕ್ಕೆ ಎಲ್ಲಿಗೂ ಸಾಲದು. ಎಳೆಶಿಶುವನ್ನು ಮನೆಯಲ್ಲಿ ಬಿಟ್ಟು ಅವಳಂತೂ ಕೆಲಸಕ್ಕೆ ಹೋಗಲಾರಳು. ದಿನಸರಿದಂತೆ ಒಳಗೆ ಇರಿಸಿದ ಧಾನ್ಯದ ಚೀಲ ಬರಿದಾಗುತ್ತ ಬಂದಿತು. ಮಧ್ಯಾಹ್ನ ಹೊಟ್ಟೆ ತುಂಬಾ ಊಟ. ರಾತ್ರಿಗೆ ಮಾಡಿದ ಸ್ವಲ್ಪ ಗಂಜಿಯನ್ನೇ ಹಂಚಿ ಊಟ ಮಾಡುವ ಏರ್ಪಾಟು ಮಾಡಿದಳು ಶಾಂಭವಿ. ಹೊಟ್ಟೆತುಂಬಾ ಸಾಲದೆ ಇದ್ದಾಗ ಎಲ್ಲರ ಸಿಟ್ಟು, ಅತೃಪ್ತಿಯ ಮುಖವನ್ನು ನೋಡಿ ಅಯ್ಯೋ ಎನ್ನಿಸಿದರೂ ಏನಾದರೊಂದು ಪರಿಹಾರದ ಮಾರ್ಗವನ್ನು ಕಂಡುಹಿಡಿಯಲು

ಅವಳಿಂದಾಗಲಿಲ್ಲ. ಕೇಶವ ತನ್ನ ಹೆಬ್ಬೆರಳನ್ನು ಚೀಪಿ ಚೀಪಿ ಮನಸ್ಸಿನ ಮಂಡಿಗೆಯಲ್ಲಿ ಹೊತ್ತು ಕಳೆಯಲಾರಂಭಿಸಿದ.

ಈ ಮಧ್ಯೆ ಇನ್ನೊಮ್ಮೆ ಗಂಗಾನ ಭೇಟಿಯಾದಾಗ ಅವಳಿಗೆ ಮತ್ತೆ ಬೀಡಿ ಕಟ್ಟುವ ಆಸೆ ಚಿಗುರೊಡೆಯಿತು. ತಾನೂ ಕೇಶವನೂ ಜೊತೆಗೂಡಿದರೆ ತನ್ನ ಸಂಸಾರಕ್ಕೆ ಎಷ್ಟೋ ಸಹಾಯವಾಗಬಲ್ಲದು. ಆದರೆ ಇದೇ ಸಮಯದಲ್ಲಿ ಅನಿರೀಕ್ಷಿತವಾಗಿ ಎಗರಿಬಂದ ಜ್ವರದ ಗಾಳಿಯಲ್ಲಿ ಕೆಲವು ದಿನ ಮನೆ ಬಿಟ್ಟು ಎಲ್ಲಿಯೂ ಹೋಗಲಾಗಲಿಲ್ಲ ಶಾಂಭವಿಗೆ.

ಮೊದಲು ಗೋಣಿಯನ್ನು ಹಾಸಿಕೊಂಡು ಜ್ವರದಲ್ಲಿ ಮಲಗಿದವಳು ಶಾರದೆ. ಮರುದಿನ ಕೇಶವ ತಲೆನೋವು ಗಂಟಲುನೋವು ಎನ್ನುತ್ತ ಹಾಸಿಗೆ ಯನ್ನು ಬಿಟ್ಟೇಳಲಿಲ್ಲ. ಅಂದೇ ಸಾಯಂಕಾಲ ಹರಿನಾರಾಯಣ ಮತ್ತು ಈಶ್ವರಿಯೂ ಹಾಸಿಗೆ ಹಿಡಿದು ಮಲಗಿಬಿಟ್ಟರು. ನಾಲ್ವರಿಗೂ ಜ್ವರ ನೂರಾ ಎರಡು ಡಿಗ್ರಿಗಳ ಮೇಲೆಯೇ ಇದೆ. ತನಗೆ ತಿಳಿದ ಕಷಾಯ, ಬೇರು ಮದ್ದನ್ನು ಕೊಟ್ಟು ನೋಡಿದಳು. ಜ್ವರ ಆರು ದಿನಗಳಾದರೂ ಒಬ್ಬರೂ ಹಾಸಿಗೆ ಬಿಟ್ಟೇಳಲಿಲ್ಲ. ಹರಿನಾರಾಯಣನ ಕೂಲಿ ಹಣ ಕೈಗೆ ಬರುವದೂ ತಪ್ಪಿಹೋಯಿತು. ಜೋಪಾನವಾಗಿರಿಸಿದ ಅಕ್ಕಿಯು ಮುಗಿದು ಕೇವಲ ಒಂದು ಸೇರಿನಷ್ಟು ಉಳಿದುಕೊಂಡು ಅಣಕಿಸಿತು ಅವಳನ್ನು.

"ಈ ಸಾರೆ ಗೇಣಿ ಕೊಡುವದು ಬೇಡಾ ಅಂತ ಬಡ್ಕೊಂಡೆ ನಾನು. ಆದ್ರೆ ನಾರಾಯಣ ಕೇಳಲೇ ಇಲ್ಲ. ಆ ಬತ್ತ ಇದ್ದಿದ್ದರೆ ಈಗ ಉಣ್ಣಬಹು ದಿತ್ತು" ಎಂದಳು ವೇದಮ್ಮ.

"ಡಾಕ್ಟರರ ಔಷಧಿ ತಂದಿದ್ದರೆ ನಾಲ್ವರಿಗೂ ಈ ರೀತಿಯ ನಿತ್ರಾಣ ಇರುತ್ತಿರಲಿಲ್ಲ. ಅತ್ತೆ, ಅವರಿಗಂತೂ ಇನ್ನು ಹದಿನೈದು ದಿನ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲ. ಆತನಕ ಊಟಕ್ಕೇನು ಗತಿ?"

ಇನ್ನು ನಾಲ್ಕು ದಿನಗಳು ಸರಿದವು. ಮನೆಯಲ್ಲಿದ್ದ ಕೊನೆಯ ಕಾಳು ಅಕ್ಕಿಯೂ ತೀರಿಹೋಯಿತು. ಶಾಂಭವಿ ಸಾಲ ಸಿಗಬಹುದೇನೋ ಎಂದು ಕೊಂಡು ಶಾಸ್ತ್ರಿಗಳ ಮನೆಗೆ ಬಂದರೆ ಅವರೂ ಅವರ ಹೆಂಡತಿಯೂ ನಾಲ್ಕು ದಿನಗಳ ಹಿಂದೆಯೇ ಮಗಳ ಮನೆಗೆ ಹೋಗಿರುವದು ತಿಳಿಯಿತು. ದೊಡ್ಡ ಮನೆ ಬಾಗಿಲಿನ ಬೀಗ ನಗುತ್ತ ಕುಳಿತಿತ್ತು. ರಂಗಪ್ಪಾಚಾರಿಯ ಮನೆಗೆ ಹೋದರೆ ಗಂಗಾ ಊರಲ್ಲಿ ಇರಲಿಲ್ಲ. ಅವಳ ಅತ್ತೆ ತನ್ನ ಹತ್ತಿರ ಒಂದು ಪೈಸೆಯೂ ಇಲ್ಲವೆಂದಳು ಯಾವ ದಾಕ್ಷಿಣ್ಯವೂ ಇಲ್ಲದೆ.

ತನ್ನ ಹಣೆಬರಹವನ್ನು ಶಪಿಸುತ್ತ ಹಿಂದಿರುಗಿ ಬಂದಾಗ ಹರಿನಾರಾಯಣ ಖಿನ್ನವದನನಾಗಿ ಕೇಳಿದ, "ಎಲ್ಲಿಯೂ ಸಾಲ ಸಿಗಲಿಲ್ಲವೇ ?"

"ಪಾಪಿ ಹೋದಲ್ಲಿ ಮೊಣಕಾಲು ನೀರೇ ಗತಿ !"

"ಯಾರೇನು ಮಾಡುವರು ತಾ ಪಾಪಿಯಾದರೆ,
ಊರೆಲ್ಲ ನೆಂಟರು ಉಣಬಡಿಸುವರ ಕಾಣೆ !"

ಹರಿನಾರಾಯಣ ಪ್ರಾರಂಭಿಸಿದ್ದ ಹಾಡನ್ನು. ಶಾಂಭವಿ ತಕ್ಷಣ ಅವನ ಬಾಯಿ ಮುಚ್ಚಿಸಿದಳು. "ಈಗ ಹಾಡ್ಬೇಡಿ ಇದನ್ನು. ನಾನು ಎಲ್ಲಿಂದಾದರೂ ಸಾಲ ಕೇಳಿ ತರ್ತೇನೆ."

ಅವಳೆಲ್ಲಿಂದ ತರುತ್ತಾಳೆ ? ಸುಮನಗಳಿಗೆ ಬೇರೆ ಜ್ವರ ಪ್ರಾರಂಭವಾಗಿದ್ದು ಅಳು ನಿಲ್ಲಿಸುತ್ತಲೇ ಇರಲಿಲ್ಲ. ವೇದಮ್ಮ ತನಗೂ ಸೊಂಟನೋವು ಎನ್ನುತ್ತ ತಾನೂ ಮಲಗಿಬಿಟ್ಟಳು. ಶಾಂಭವಿಗೆ ದಿಕ್ಕುತೋಚದಂತಾಯಿತು. ಹತ್ತಿರ ದಿಂದ ಒಂದಷ್ಟು ಅಕ್ಕಿಯನ್ನು ಸಾಲವಾಗಿ ತರೋಣವೆಂದರೆ ಎಲ್ಲರ ಮನೆಯ ದೋಸೆಯೂ ತೂತು ! ಶಾಸ್ತ್ರಿಗಳೂ ಮಗಳ ಮನೆಯಿಂದ ಹಿಂದಿರುಗಿರಲಿಲ್ಲ. ಏನಾದರೂ ಅಡವು ಇಡೋಣವೆಂದರೆ ಮೈಮೇಲೆ ಚಿನ್ನದ ತುಂಡಿಲ್ಲ. ಒಳಗೆ ಒಂದೇ ಒಂದು ಬೆಲೆಬಾಳುವ ಸಾಮಾನಿಲ್ಲ.

"ಈಗ ನೀನೇ ಗತಿ, ಮಾಧವಾ" ಎಂದು ಅವಳು ಮೈದುನನನ್ನು ಕರೆದು ಬೇಡಿಕೊಂಡಳು. "ಒಂದು ಕೆಲಸಮಾಡು. ನಿನಗೊಂದು ಪಾತ್ರೆ ಕೊಡ್ತೇನೆ, ಗುರುಪುರಕ್ಕೆ ಹೋಗಿ ಭಿಕ್ಷೆ ಬೇಡಿ ತಾ."

ಮಾಧವ ದಿಗಿಲುಗೊಂಡ. "ಏನ್ಹೇಳ್ತಿ ಅತ್ತಿಗೇ, ನಾನು ಭಿಕ್ಷೆ ಬೇಡ ಬೇಕಾ ? ಏನ್ಹೇಳ್ತಿ ನೀನು ?"

"ಈಗ ಉಳಿದಿರುವ ದಾರಿ ಅದೊಂದೇ. ಗುರುಪುರದ ಪೇಟೆಯಲ್ಲಿ ಯಾರಿಗೂ ನಿನ್ನ ಪರಿಚಯವಿಲ್ಲ."

"ಹಾಗೆಂದು ಮರ್ಯಾದೆ ಬಿಟ್ಟು ಹೋಗಿ ಭಿಕ್ಷೆ ಎತ್ತಲೇ ? ಒಳಗಿರುವ ಅಕ್ಕಿಮೂಟೆಯನ್ನು ಯಾಕೆ ಇಷ್ಟು ಬೇಗ ಮುಗಿಸಿಬಿಟ್ಟೆ ?"

ತನಗೇ ಸವಾಲನ್ನು ಹಾಕಿದ ಮೈದುನನ ಮಾತು ಕೇಳಿ ರೇಗಿಹೋಯಿತು ಅತ್ತಿಗೆಗೆ. "ಹೌದಪ್ಪ, ಈ ಭೂತದಂತಹ ಅತ್ತಿಗೆಯೊಬ್ಬಳೇ ಎಲ್ಲಾ ಅಕ್ಕಿ ಮೂಟೆಯನ್ನು ತಿಂದು ತಿಂದು, ತೇಗಿ ತೇಗಿ ನಿಮ್ಮನ್ನೆಲ್ಲರನ್ನೂ ಉಪವಾಸ ಕೆಡವಿದ್ದಾಳೆ ಅಲ್ಲವೇ ? ನೀನೀಗ ಹೋಗುತೀಯೋ ಅಥವಾ ನಾನೇ ಹೋಗಿ ಬೇಡಿ ತರಲೇ ?"

ಹೌಹಾರಿದ ಅವನು ನೋಡಿದ ಅತ್ತಿಗೆಯನ್ನು. ಅವಳ ಕಣ್ಣುಗಳಲ್ಲಿ ದಿಟ್ಟತನ ತುಂಬಿದೆ. 'ನೀನು ಹೋಗದಿದ್ದರೆ ನಾನೇ ಹೋಗಿಬರುತ್ತೇನೆ' ಎನ್ನುತ್ತಿದೆ ಅವಳ ಮುಖಭಾವ. ಅವಳ ಮಾತನ್ನು ವಿರೋಧಿಸಿ ನಿಲ್ಲುವ ಧೈರ್ಯ ಅವನಿಗಿಲ್ಲ. ಹಸಿದ ಹೊಟ್ಟೆ ತನ್ನ ಇರುವಿಕೆಯನ್ನು ನೆನಪು ಮಾಡಿಕೊಟ್ಟಿತು. ಮರುಮಾತಿಲ್ಲದ ಹರಕು ಅಂಗಿ ತೊಟ್ಟಾಗ ಅತ್ತಿಗೆ ಅವನ ಮೈದಡವಿದಳು.

"ಹೇಗೆ ಭಿಕ್ಷೆ ಕೇಳ್ತಿ? ಸುಮ್ಮನೆ ಮನೆ ಮುಂದೆ ನಿಂತರೆ ಯಾರೂ ಕೊಡರು. 'ಅಮ್ಮಾ, ಧರ್ಮ ನೀಡಿ' ಎಂದು ನಯವಾಗಿ ಕೇಳು. ಹಾಕಿದರೆ ಮಾತ್ರ ಭಿಕ್ಷೆ ಹಾಕಿಸಿಕೋ. ಇಲ್ಲಾಂದ್ರೆ ಜಗಳವಾಡದೆ ಹಿಂದೆ ಬಾ."

ಅವನು ಹೊರಟುಹೋದಮೇಲೆ ತನ್ನ ತಲೆಯನ್ನು ಜಜ್ಜಿಕೊಂಡಳು. ಇದೆಂತಹ ಜೀವನ ತನ್ನದು? ಹೇಗೆ ಕಷ್ಟಪಟ್ಟರೂ ಹೊಟ್ಟೆತುಂಬಿಸುವದೇ ದುಸ್ತರವಾಗಿಹೋಗಿದೆ. ಇನ್ನೇನು ಮಾಡಲಿ? ಒಳಗೆ ಕೇಶವ ಗೋಗರೆಯುತ್ತಿದ್ದಾನೆ. ಜ್ವರ ಇಳಿದಮೇಲೆ ಅವನ ನಾಲಿಗೆಯು ಚಪಲ ಏಂದೆ.

"ಹಸಿವಾಗ್ತಿದೆ, ಏನಾದರೂ ತಿನ್ನಲು ಕೊಡು, ಅತ್ತಿಗೇ. ಅವಲಕ್ಕಿ ಕೊಡು, ಚೂರು ಉಪ್ಪಿನಕಾಯಿ ಕಲಿಸಿಕೊಂಡು ತಿಂತೇನೆ. ಬೆಲ್ಲ ಇದ್ದರೆ ಕೊಡು. ಬಾಯಿ ಆಡಿಸಿಕೊಳ್ಳುತ್ತ ಮಲಗ್ತೇನೆ. ಅದೂ ಇಲ್ಲವೇ, ಗೋದಿಯೋ ಜೋಳವೋ ಡಬ್ಬಿಯ ತಳದಲ್ಲಿ ಇದ್ದೀತು, ಅದನ್ನಾದರೂ ಕೊಡು" ಎನ್ನುತ್ತ ತನ್ನ ಬೆರಳು ಚೀಪುತ್ತಿದ್ದಾನೆ.

ಸಾಯಂಕಾಲ ಐದು ಗಂಟೆಯ ಹೊತ್ತಿಗೆ ಹಿಂದಿರುಗಿದ ಮಾಧವ. ಅವನು ತೆಗೆದುಕೊಂಡು ಹೋದ ಚೀಲದ ಹೊಟ್ಟೆ ಸಾಕಷ್ಟು ತುಂಬಿತ್ತು. ಎಲ್ಲರ ಹಸಿವೆಯ ಕಣ್ಣುಗಳೂ ಬೆಳಗಿದವು. ಮಾಧವ ಮುಖ ಅರಳಿಸುತ್ತ ಚೀಲದಿಂದ ಒಂದು ಲಕೋಟೆಯನ್ನು ಹೊರತೆಗೆದ. ಅದರ ತುಂಬಾ ಜಿಲೇಬಿ ಮತ್ತು ಉಂಡೆಗಳು. ಇನ್ನೊಂದು ಬಾಡಿಸಿದ ಬಾಳೆ ಎಲೆಯಲ್ಲಿ ಅನ್ನ! ಚೀಲದಲ್ಲಿ ದಪ್ಪಕ್ಕಿ, ಕಡಿ ಅಕ್ಕಿ, ಸಣ್ಣ ಅಕ್ಕಿ ಎಲ್ಲಾ ಮಿಶ್ರವಾಗಿದೆ.

"ಯಾರೋ ಬ್ರಾಹ್ಮಣರ ಮನೆಯಲ್ಲಿ ಶ್ರಾದ್ಧವಿತ್ತು. ನನಗೂ ಊಟ ಹಾಕಿ ಇವನ್ನೆಲ್ಲ ಕೊಟ್ಟರು ಆ ಪುಣ್ಯಾತ್ಮರು. ಒಂದು ರೂಪಾಯಿ ದಾನವನ್ನು ಕೊಟ್ಟರು. ಹಿಡಿ ಅತ್ತಿಗೇ. ನೀನೇ ಎಲ್ಲಾ ಹಂಚಿಬಿಡು."

ಅಪರೂಪದಲ್ಲಿ ಸಿಕ್ಕಿದ ತಿಂಡಿಗಳು, ಎಲ್ಲರಿಗೂ ಸಾಕಾಗದೆ ಹೋದರೂ ನಾಲಿಗೆ ಚಪಲ ತೀರಿಸುವದಕ್ಕೆ ಸಾಕು. ಅನ್ನ ಹೊಟ್ಟೆ ತಂಪಾಗುವಷ್ಟು

ಇತ್ತು. ಯಾರ ಮನೆಯ ಅನ್ನವೋ ಹೀಗೆ ತಿನ್ನುವ ಋಣ ತಮ್ಮ ಹಣೆಯಲ್ಲಿ ಬರೆದಿದೆಯಲ್ಲವೇ ?

"ಇದೇ ಕೊನೆ, ಮಾಧವಾ, ಇನ್ನೇಲೆ ಭಿಕ್ಷೆ ಬೇಡುವ ಸ್ಥಿತಿ ನಮ್ಮದಾಗ ಬಾರದು" ಎಂದಳು ಅತ್ತಿಗೆ ನಿರ್ಧಾರದ ಸ್ವರದಲ್ಲಿ.

9

ಮನೆಯಿಂದ ಕೇವಲ ಅರ್ಧಮೈಲು ದೂರದಲ್ಲಿದೆ ರಂಗಸ್ವಾಚಾರಿಯ ಮನೆ. ರಂಗಸ್ವಾಚಾರಿ, ಅವನ ಹೆಂಡತಿ, ಮಗ ಮತ್ತು ಸೊಸೆ ಇಷ್ಟೇ ಜನ ಆ ಮನೆಯಲ್ಲಿ. ಬೇಸಾಯಕ್ಕೆ ಗದ್ದೆಯಿದ್ದರೂ ಉಪವೃತ್ತಿಯಾಗಿ ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ ಅತ್ತೆ ಮತ್ತು ಸೊಸೆ.

ಶಾಂಭವಿ ಗಂಗಾನಿಂದ ಬೀಡಿ ಕಟ್ಟುವ ಕೆಲಸವನ್ನು ಕಲಿಯಲು ಅವರ ಮನೆಗೆ ಹೋಗಲಾರಂಭಿಸಿದಮೇಲೆ ವೇದಮ್ಮನ ಸಿಡುಕು ಹೆಚ್ಚಿತು. ಬೇರೆ ಯವರ ಮನೆಯಲ್ಲಿ ದಿನವೆಲ್ಲ ಕುಳಿತು ಬೀಡಿ ಕಟ್ಟುವದು ಅತ್ತೆಗೆ ಸಹನೆ ಯಾಗಲಿಲ್ಲ. ಸೊಸೆ ಕೇಳಲಿಲ್ಲ. ಘರ್ಷಣೆಗಳು ಏಳುತ್ತಿದ್ದಂತೆ ಒಂದು ದಿನ ತಡೆಯಲಾರದೆ ಅಂದಳು ಶಾಂಭವಿ :

"ನೀವು ಬಾಯಿಮುಚ್ಚಿಕೊಂಡು ನಿಮ್ಮ ಪಾಡಿಗೆ ನೀವಿರಿ, ಅತ್ತೆ. ಯಾವ ಕೆಲಸ ನನಗೆ ಸರಿಯೆನಿಸುತ್ತದೋ ಅದನ್ನು ನಾನು ಮಾಡ್ತೇನೆ, ಬೇಡ ಅಂದ್ರೆ ಬಿಡ್ತೇನೆ. ನನ್ನ ಕೆಲಸಕ್ಕೆ ನೀವು ಕೈಹಚ್ಚಬೇಡಿ !"

ಒಂದು ತಿಂಗಳು ಪೂರ್ತಿಯಾಗುವ ಮೊದಲೇ ಎಲೆ ಕತ್ತರಿಸುವದು, ಕಟ್ಟುವದು, ನೂಲುಹಾಕುವದು ಇವೇ ಮೊದಲಾದ ಕೆಲಸಗಳಲ್ಲಿ ಶಾಂಭವಿಯ ಕೈ ಪಳಗಿತು. ಬೀಡಿ ಕಟ್ಟುವ ಕೆಲಸವನ್ನು ಕಲಿಯುವ ನೆವದಲ್ಲಿ ಅವಳ ಮತ್ತು ಗಂಗಾನ ಸ್ನೇಹದ ಕೊಂಡಿಯೂ ಇನ್ನಷ್ಟು ಗಾಢವಾಗಿ ಬೆಸೆದು ಕೊಂಡಿತು.

ಆ ದಿನ ರಂಗಸ್ವಾಚಾರಿಯ ಮನೆಗೆ ಬಂದಾಗ ಒಳಬಾಗಿಲಿನಲ್ಲಿಯೇ ಕೇಳಿಸಿತು ಗಲಾಟೆ. ಗಂಗಾನ ಅತ್ತೆ ಸ್ವರ ಏರಿಸಿ ಹೇಳುತ್ತಿದ್ದಾಳೆ :

"ಧರ್ಮಕ್ಕೆ ಬರುತ್ತದಾ ಕಾಫಿ ? ಇನ್ಮೇಲೆ ಅವಳಿಗೆ ಕಾಫಿ ಗೀಫಿ ಏನೂ

ಕೊಡಬಾರದು. ಈಗಂತೂ ಕಾಫಿಹುಡಿಗೆ ವಿಪರೀತ ಕ್ರಯ. ನಮ್ಮ ಜೀವ ನಕ್ಕೇ ಏಳು ಹನ್ನೊಂದು, ಇನ್ನು ಅವಳಿಗೆ ಬೇರೆ ಉಪಚಾರ."

"ಇನ್ನೆಷ್ಟು ದಿನ ಶಾಂಭವಿ ಇಲ್ಲಿಗೆ ಬರ್‍ತ್ತಾಳೆ? ಅವಳಿಗೆ ಒಂದು ತೊಟ್ಟು ಕಾಫಿ ಕೊಟ್ಟರೆ ಮನೆ ದಿವಾಳಿಯಾಗಲಾರದು." ಗಂಗಾನ ಸ್ವರ ಕೇಳಿಸಿತು. "ಮೂಗಿನಲ್ಲಿ ಊಟ ಮಾಡ್ತೇನೆ ಅಂದರೆ ಯಾರ ಹೊಟ್ಟೆಯೂ ತುಂಬ ಲಾರದು."

ಅಷ್ಟರಲ್ಲಿ ಬಾಗಿಲಲ್ಲಿ ನೆರಳು ಕಾಣಿಸಿಕೊಂಡಾಗ ಮಾತು ಅರ್ಧಕ್ಕೇ ನಿಂತಿತು. ಅತ್ತೆ ನಗುಮುಖದಲ್ಲಿ 'ಬಾ ಒಳಗೆ' ಎಂದಳು. ಗಂಗಾನ ಮುಖ ಕಪ್ಪಿಟ್ಟುಹೋಗಿತ್ತು. ಶಾಂಭವಿ ಏನೂ ಅರಿಯದವಳಂತೆ ಹೊರಜಗಲಿಯಲ್ಲಿ ಬೀಡಿ ಕಟ್ಟಲು ಪ್ರಾರಂಭಿಸಿದಾಗ ಅವಳ ಸಮೀಪ ಮೌನವಾಗಿಯೇ ಬಂದು ಕುಳಿತಳು ಗಂಗಾ. ತಮ್ಮ ಮಾತನ್ನು ಅವಳು ಕೇಳಿಸಿಕೊಂಡಿದ್ದಾಳೆನ್ನುವುದೂ ತಿಳಿದು ಒಳಗೊಳಗೇ ಕ್ರೋಧಗೊಂಡಳು. ಶಾಂಭವಿ ಬೀಡಿ ಎಲೆಗಳನ್ನು ಸುರುಳಿ ಸುತ್ತಲು ಯತ್ನಿಸಿದಷ್ಟೂ ಮುದ್ದೆಮುದ್ದೆಯಾಯಿತು. ಮನಸ್ಸು ಕಟ್ಟುವ ಕೆಲಸದಲ್ಲಿರಲಿಲ್ಲ.

ರಂಗಪ್ಪಾಚಾರಿಯ ಹೆಂಡತಿ ಬಿಸಿ ಕಾಫಿ ತಂದು ಅವಳ ಮುಂದೆ ಇರಿಸಿ ದಾಗ ಅದರತ್ತ ಕಣ್ಣೆತ್ತಿಯೂ ನೋಡಲಿಲ್ಲ. "ಯಾರ ಮನೆಯ ಭಿಕ್ಷೆಯನ್ನೂ ಬೇಡಬಾರದು ಎಂದುಕೊಂಡು ಈ ಉದ್ಯೋಗ ಕಲಿಯಲು ಬರ್‍ತಾ ಇದ್ದೇನೆ. ನನಗೆ ಕಾಫಿ ಕೊಟ್ಟು ಕೊಟ್ಟು ನೀವು ಭಿಕ್ಷೆ ಎತ್ತುವ ಸ್ಥಿತಿಗೆ ಬರಬಾರದು."

ಆಮೇಲೆ ಹೆಚ್ಚು ಹೊತ್ತು ಕುಳಿತುಕೊಳ್ಳಲು ಅವಳಿಂದಾಗಲಿಲ್ಲ. ಹಾಗೇ ಎದ್ದು ಹೊರಟುನಿಂತಾಗ ಗಂಗಾ ವಿಷಾದದಲ್ಲಿ ಅಂದಳು : "ನಿನ್ನ ಮನಸ್ಸಿಗೆ ಬೇಸರವಾಯಿತಲ್ಲವೇ? ನಾನೇನು ಮಾಡಲಿ? ನನ್ನ ಅತ್ತೆಯ ಸ್ವಭಾವವೇ ಹಾಗೆ. ಬೇಸರಿಸಬೇಡ. ನಾಳೆ ಬಾ."

'ಇಲ್ಲ, ಇದೇ ಕೊನೆ.' ಮನದಲ್ಲೇ ಅಂದುಕೊಂಡಳು ಶಾಂಭವಿ. ದಾರಿ ಯಲ್ಲಿ ತಲೆತುಂಬಾ ಇದೇ ಯೋಚನೆ. ಅಯ್ಯೋ, ಎಂತಹ ಅವಮಾನವಾಗಿ ಹೋಯಿತು? ತಾನೇಕೆ ಪ್ರತಿದಿನವೂ ಅಲ್ಲಿ ಕಾಫಿಕುಡಿಯಬೇಕಿತ್ತು? ಇದೇ ತನ್ನ ಮೊದಲನೆಯ ತಪ್ಪು. ಇನ್ನೆಂದಿಗೂ ಅವರ ಮನೆಗೆ ಹೋಗ ಲಾರೆ. ಮನೆಯಲ್ಲೇ ಕೆಲಸ ಪ್ರಾರಂಭಿಸುತ್ತೇನೆ.

ರಾತ್ರೆ ಮಲಗಿದಮೇಲೆಯೂ ಇದೇ ಚಿಂತೆ. ತಾನು ಕೇಶವ, ಮಾಧವ, ಈಶ್ವರಿಯನ್ನು ಜೊತೆಸೇರಿಸಿಕೊಂಡು ಬೀಡಿ ಕಟ್ಟಲು ಪ್ರಾರಂಭಿಸಿದ ಕನಸು.

ದಿನಕ್ಕೆ ಆರು ರೂಪಾಯಿ ಸಂಪಾದನೆ. ಹರಿನಾರಾಯಣನ ಐದು ರೂಪಾಯಿ ಸೇರಿದರೆ ಒಟ್ಟು ಹನ್ನೊಂದು ರೂಪಾಯಿ. ತಿಂಗಳಿಗೆ ಮುನ್ನೂರ ಮೂವತ್ತು ರೂಪಾಯಿಗಳು. ಅಮೇಲೆ ತನ್ನ ಮೈಮೇಲೆ ಚಿನ್ನದ ಒಡವೆಗಳು !— ತನ್ನದೇ ಅದ ಹಂಚಿನ ಮನೆ !

"ನಿನ್ನ ಕೈ ಯಾಕೆ ಇಷ್ಟು ಒರಟು ?" ಬದಿಯಲ್ಲಿ ಮಲಗಿದ್ದ ಹರಿನಾರಾಯಣ ಅವಳ ಕೈ ಒತ್ತಿದಾಗಲೇ ಎಚ್ಚರ.

ತನ್ನ ಚಿಂತೆಯಲ್ಲಿದ್ದ ಅವಳು ಉತ್ತರಿಸಿದಳು ಒರಟಾಗಿ, "ದೊರೆಮಗಳಾಗಿದ್ದರೆ ಹೂವಿನಂತೆ ಇರುತ್ತಿತ್ತು ಈ ಹಸ್ತ."

"ನೀನು ದೊರೆಮಗಳಲ್ಲ. ಒಡನಾರಾಯಣನ ಹೆಂಡತಿ ಅಲ್ಲವೇ ? ಆದರೆ ನನ್ನ ಮೇಲೆ ನಿನಗ್ಯಾಕೆ ಸಿಟ್ಟು ?"

"ನಿಮ್ಮ ಮೇಲೆ ಸಿಟ್ಟು ಬಲ್ಲಲ್ಲ. ಗದ್ದೆಕೆಲಸ, ಮನೆಕೆಲಸ ಮಾಡುವಾಗ ಕೈ ಹೂವಿನ್ಹಾಗೆ ಇರುತ್ತದಾ ?"

"ನಿನ್ನ ಕೆಲಸ ಏನಿದೆಯೋ ಅದನ್ನು ನನಗೆ ಕೊಡು. ಹರಿನಾರಾಯಣ ನನ್ನು ಏನಂತೆ ತಿಳಿದಿದ್ದೀಯ ಹೇಳು ?"

"ನೀವೇನೋ ಭೀಮನೇ ಸರಿ. ಆದರೆ ದೊಡ್ಡ ಸಂಸಾರದ ಹೊಣೆ ನಮ್ಮ ಮೇಲಿದೆಯಲ್ಲ. ಕೆಲವೊಮ್ಮೆ ನಾವಿಬ್ಬರೇ ಇದ್ದರೆ ಈ ಕಷ್ಟ ಇರ್ತಾ ಇರ್ಲಿಲ್ಲ ಅನ್ನಿಸುತ್ತದೆ."

"ಹೌದು, ಆದರೆ ನಾನು ಮನೆಗೆ ಹಿರಿಯವನು. ಅಮ್ಮ, ತಮ್ಮ, ತಂಗಿ ಇವರನ್ನು ಎಲ್ಲಿಗೆ ಕಳುಹಿಸೋಣ ?"

"ಛೀಛೀ, ಕನಸಿನಲ್ಲಿಯೂ ಹಾಗೆ ಯೋಚಿಸಬಾರದು. ಶಾರದೆ ದೊಡ್ಡವಳಾಗಿದ್ದಾಳೆ. ಅವಳಿಗೆ ಮದುವೆ ಮಾಡಬೇಕು."

"ಹೌದಲ್ಲ, ನನಗೆ ಆ ಯೋಚನೆ ಬರಲೇ ಇಲ್ಲ. ನೀನು ಯಾವ ಹುಡುಗನನ್ನು ಹುಡುಕುತ್ತೀಯೋ, ಅವನಿಗೇ ಮದುವೆ ಮಾಡಿಕೊಡೋಣ. ಎಲ್ಲಿ ಯಾದರೂ ಸಂಬಂಧ ನೋಡಿದ್ದೀಯಾ ?"

"ಇನ್ನೂ ಇಲ್ಲ. ಅಂತೂ ಎಲ್ಲಾ ಭಾರ ನನ್ನ ಮೇಲೇ ಅನ್ನಿ !"

"ಭಾರ ನಿನ್ನ ಮೇಲಿದ್ದರೂ ಹೆಗಲು ಕೊಡಲು ನಾನು ಇದ್ದೇನೆ. ನಿನಗ್ಯಾಕೆ ಚಿಂತೆ ?" ಮೃದುವಾಗಿ ನುಡಿದ ಅವನು ಹೆಂಡತಿಯನ್ನು ಬಳಸಿ ಸಮೀಪಕ್ಕೆ ಎಳೆದುಕೊಂಡ.

ಅವನ ಎದೆಯಲ್ಲಿ ಮುಖವಿರಿಸಿದ ಶಾಂಭವಿಯ ಹೃದಯ ಹೂವಿನಂತೆ ಹಗುರವಾಯಿತು. ಏನಿದೀ ವಿಸ್ಮಯ! ತನ್ನ ಹುಚ್ಚ ಗಂಡ ಈ ದಿನ ಮಾತನಾಡಿದ್ದು ಕೇಳಿದರೇ ಅಚ್ಚರಿಯಾಗುತ್ತಿದೆ. ಈವರೆಗೆ ಕೇಳಿದವಳೇ ಅಲ್ಲ. ಇತ್ತೀಚೆಗೆ ಹರಿನಾರಾಯಣನ ರೀತಿಯಲ್ಲಿ, ಸ್ವಭಾವ ನಡವಳಿಕೆಯಲ್ಲಿ ಎಷ್ಟೋ ಬದಲಾವಣೆಯಾಗಿದೆ. ಆದರೆ ಇನ್ನೊಬ್ಬರನ್ನು ಅರಿತು ಮಾತನಾಡಲು ಅವನಿಗೆ ತಿಳಿಯದು. ಪ್ರತಿಯೊಂದು ಶಬ್ದ ಬಾಯಿಂದ ಹೊರಬೀಳುವಾಗ ಅವನು ಕಷ್ಟಪಡುತ್ತಿದ್ದ. ತನ್ನ ಭಾವನೆಗಳನ್ನು ಹೇಗೆ ವ್ಯಕ್ತಪಡಿಸಬೇಕು ಎನ್ನುವುದನ್ನೂ ಅವನು ಅರಿಯ. ಶಾಂಭವಿಯಲ್ಲಿ ಅವನಿಗೆ ಯಾವ ವಿಧದ ಪ್ರೀತಿ, ಅನುರಾಗಗಳು ಇದ್ದವೋ ಸ್ವತಃ ಅವನಿಗಾಗಲಿ, ಅವಳಿಗಾಗಲಿ ತಿಳಿದಿಲ್ಲ. ಇಂದು ಮೊದಲ ಬಾರಿ ಅವಳನ್ನು ಅರಿತವನಂತೆ ಎಷ್ಟು ಆತ್ಮೀಯವಾಗಿ ಮಾತನಾಡಿಸಿದ್ದಾನೆ. ಇವನು ಜೊತೆಯಲ್ಲಿದ್ದರೆ ಎಂತಹ ಕಷ್ಟವನ್ನೂ ತಾನು ಜಯಿಸಬಲ್ಲೆ ಎಂದೆನಿಸಿತು ಶಾಂಭವಿಗೆ.

ಮರುದಿನ ತಾನೇ ಇಬ್ರಾಹಿಂನ ಅಂಗಡಿಗೆ ಹೋಗಿ ತನ್ನ ಹೆಸರನ್ನು ಅಲ್ಲಿ ನೋಂದಾಯಿಸಿ ಎಲೆ, ಹೊಗೆಸೊಪ್ಪು, ನೂಲು ಇತ್ಯಾದಿಗಳನ್ನು ಪಡೆದುಕೊಂಡು ಶಾಂಭವಿ ನೇರವಾಗಿ ಮನೆಗೆ ಬಂದಳು. ವೇದಮ್ಮನಿಗಿದು ಅನಿರೀಕ್ಷಿತ. ಸೊಸೆಗೆ ಏನು ಹೇಳಬೇಕು ಎನ್ನುವುದೂ ತಿಳಿಯಲಿಲ್ಲ. ಎರಡು ದಿನಗಳನಂತರ ಕೇಶವ, ಮಾಧವನನ್ನೂ ಕರೆದು ನೂಲುಹಾಕುವ, ಎಲೆ ಕತ್ತರಿಸುವ ವಿಧಾನವನ್ನು ಹೇಳಿಕೊಟ್ಟಳು. ಜೊತೆಯಲ್ಲಿ ಶಾರದೆಯೂ ಬಂದು ಕುಳಿತಳು ಕೆಲಸ ಕಲಿಯಲು.

ಈಗ ಉತ್ಸಾಹದ ದುಡಿತ. ಮನೆಮಂದಿಗೆಲ್ಲಾ ಬೀಡಿ ಕಟ್ಟುವ ಹುಮ್ಮಸ್ಸು. ಕೈತುಂಬಾ ಹಣ ದೊರಕಿತು ಎನ್ನುವ ದೂರದ ಆಸೆ! ಹರಿನಾರಾಯಣ ಸಾಯಂಕಾಲ ಸ್ನಾನ ಮುಗಿಸಿ ಇವರೊಡನೆ ಬಂದು ಕುಳಿತುಕೊಳ್ಳುತ್ತಾನೆ. ನಿದ್ರೆ ತೂಗುವ ತನಕ ಸುಶ್ರಾವ್ಯವಾಗಿ ಹಾಡುತ್ತಾ ಇರುತ್ತಾನೆ. ಅವನ ಹಾಡಿನ ತನ್ಮಯತೆಯಲ್ಲಿ ಮುಂದುವರಿಯುತ್ತದೆ ಕೆಲಸ. ವೇದಮ್ಮ ಒಬ್ಬಳಿಗೇ ಇದರಲ್ಲಿ ನಿರಾಸಕ್ತಿ. ಚಾಪೆ ಹಾಸಿಕೊಂಡು ತನ್ನ ಪಾಡಿಗೆ ತಾನು ದೂರ ಮಲಗಿಬಿಡುತ್ತಾಳೆ.

ಗಂಗನಿಗೆ ಶಾಂಭವಿ ತನ್ನ ಮನೆಗೆ ಬರುವುದನ್ನು ನಿಲ್ಲಿಸಿದಾಗಲೇ ಸಂಶಯ ಬಂದು ಅವಳ ಮನೆಗೆ ಬಂದು ನೋಡುತ್ತಾಳೆ, ನಿಜ, ಶಾಂಭವಿ ಮನೆಯಲ್ಲಿಯೇ ಉದ್ಯೋಗವನ್ನು ಪ್ರಾರಂಭಿಸಿದ್ದಾಳೆ.

"ಭೇಷ್, ಇದ್ದರೆ ನಿನ್ನಂತಹ ತಲೆ ಇರಬೇಕು. ನಾಲ್ಕು ತಿಂಗಳು ಕಲಿತರೂ ಸರಿಯಾಗಿ ನೂಲು ಹಾಕಲು ಅನೇಕರಿಗೆ ತಿಳಿಯದು. ನೀನು ಕೇವಲ ಒಂದೇ ತಿಂಗಳಲ್ಲಿ ಎಲ್ಲಾ ಕಲಿತುಬಿಟ್ಟಿದ್ದಿ" ಎಂದು ಪ್ರಶಂಸೆಯ ನುಡಿಗಳನ್ನಾಡುತ್ತ ಅತ್ತಿತ್ತ ನೋಡಿದಳು, "ಎಲ್ಲಿ ನಿನ್ನ ಮಗು ?"

ಶಾಂಭವಿ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಎತ್ತಿ ಅವಳ ಕೈಯಲ್ಲಿರಿಸಿದಳು. ಮಗು ಮೈಕೈ ತುಂಬಿಕೊಂಡು ಬಹಳ ಮುದ್ದಾಗಿತ್ತು. "ಆಹಾ, ಮಗುವಿಗೆ ನಿನ್ನ ರೂಪ ಬಂದಿಲ್ಲ. ಪೂರಾ ನಿನ್ನ ಗಂಡನ ಪಡಿಯಚ್ಚು."

"ಹಾಗೆ ಇರುವದು ನನ್ನ ಪುಣ್ಯ !"

"ಇಂತಹ ಸುಂದರ ಮಗುವನ್ನು ಪಡೆಯಲು ನೀನೆಂತಹ ಪುಣ್ಯ ಮಾಡಿದ್ದೀಯೋ. ಈ ಅಂಗಿಯನ್ನು ನೀನು ಹೊಲಿದದ್ದೇ ?"

"ಹೂಂ, ತಾಯಿಮನೆಯಲ್ಲಿ ಸ್ವಲ್ಪ ಕಲಿತಿದ್ದೆ. ಏನೋ ನಮ್ಮವನ್ನು ಹೊಲಿದುಕೊಳ್ತೀನೆ ಕೈಯಲ್ಲೇ"

ಗಂಗಾ ಬೆರಗಾಗಿ ನೋಡಿದಳು. "ಹಾಗಾದರೆ ಒಂದು ಹೊಲಿಗೆಯಂತ್ರ ತೆಗೆದುಕೋ. ಗುರುಪುರದ ದರ್ಜಿಗಳಿಗಿಂತ ಎಂಟಾಣೆ ಕಡಿಮೆಗೆ ಹೊಲಿದು ಕೊಟ್ಟರೂ ನಿನಗೆ ಇಲ್ಲಿ ಪುರುಸೊತ್ತು ಇಲ್ಲದಷ್ಟು ಹೊಲಿಗೆ ಬರಬಹುದು."

ಮತ್ತೆ ಸ್ವಲ್ಪಹೊತ್ತಿನಲ್ಲಿ ಗಂಗಾ ಹೊರಟುನಿಂತಾಗ ಶಾಂಭವಿ ಒಂದಷ್ಟು ತರಕಾರಿಯನ್ನು ಅವಳಿಗೆ ಕೊಟ್ಟಳು. ಬೇಡ ಬೇಡವೆಂದೆನ್ನುತ್ತ ಅದನ್ನು ತೆಗೆದುಕೊಂಡ ಗಂಗಾ, "ನಿನ್ನ ಮನಸ್ಸು ತುಂಬಾ ವಿಶಾಲವಾಗಿದೆ. ನಿಜ ಹೇಳ್ಲಾ, ನಿನ್ನ ಅತ್ತೆ ಒಂದು ದಿನವೂ ಇಂತಹ ತರಕಾರಿಯನ್ನು ಬೆಳಸಿದವಳಲ್ಲ. ಹೀಗೆ ಕೈಯೆತ್ತಿ ಕೊಟ್ಟವಳೂ ಅಲ್ಲ" ಎಂದಳು.

"ಹೇಳ್ತಾರಲ್ಲ, ನೀನೆಷ್ಟು ಕೊಡುತ್ತೀಯೋ ಅದರ ಹತ್ತರಷ್ಟು, ನೂರರಷ್ಟು ನಮಗೆ ಹಿಂದಕ್ಕೆ ಬರುತ್ತದೆ. ಬರಲಿ ಎನ್ನುವ ಉದ್ದೇಶದಿಂದ ನಾನು ಕೊಡಲಿಲ್ಲ. ಅವತ್ತು ನಿಮ್ಮಲ್ಲಿಗೆ ಬಂದೆನಲ್ಲ, ಆಗ ಮನೆ ಬದಿಯಲ್ಲಿ ತರಕಾರಿ ಕಾಣಿಸಲಿಲ್ಲ. ಈಗ ಹೇಗೂ ಬಂದಿದ್ದಿ, ತಗೊಂಡು ಹೋಗು."

ನ್ಯಾಯದ ದುಡಿತವಾದರೆ ಅದಕ್ಕೆ ತಕ್ಕ ಬೆಲೆ ಇದ್ದೇ ಇದೆ. ತನ್ನ ಆಯಾಸ, ಆರೋಗ್ಯವನ್ನೂ ಗಮನಿಸದೆ ಬೀಡಿ ಕಟ್ಟುವದರಲ್ಲಿ ನಿರತಳಾದಳು ಶಾಂಭವಿ. ಕೇಶವ, ಈಶ್ವರಿಯರೂ ಕ್ರಮೇಣ ಕೈಪಳಗಿ ಚುರುಕಾಗಿ ಬೀಡಿ ಕಟ್ಟಲಾರಂಭಿಸಿದರು. ಉಪಸಂಪಾದನೆಯಾಗಿ ಅಷ್ಟಿಷ್ಟು ದೊರೆಯಲಾರಂಭಿಸಿತು, ಈ ಬಡಕುಟುಂಬಕ್ಕೆ.

ತಿಂಗಳು ಸಂದಂತೆ ಇನ್ನೊಂದು ಹೊಸ ಆಸೆಯ ಅಲೆ ಎದ್ದಿತು ಅವಳ ಮನದಲ್ಲಿ. ತಾನೇಕೆ ಹೊಲಿಗೆ ಯಂತ್ರವನ್ನು ತೆಗೆಯಬಾರದು? ಮನೆಯವರ ಮತ್ತು ಹೊರಗಿನವರ ಬಟ್ಟೆಗಳನ್ನು ಹೊಲಿದುಕೊಡಬಹುದು. ಬೀಡಿ ಸಂಪಾದನೆಯ ಜೊತೆಯಲ್ಲಿ ಹೊಲಿಗೆ ಸಂಪಾದನೆಯೂ ದೊರೆತರೆ ಆರ್ಥಿಕವಾಗಿ ಎಷ್ಟೋ ಸುಧಾರಿಸಿಕೊಳ್ಳಬಹುದು. ಗಂಗಾನ ಸಲಹೆ ಕೇಳಿದಾಗ ಅಂಗಡಿಯವರು ತಿಂಗಳ ಕಂತುಗಳಲ್ಲಿ ಹೊಲಿಗೆಯಂತ್ರ ಕೊಡುತ್ತಾರೆ ಎನ್ನುವುದೂ ತಿಳಿಯಿತು. ಮುಂದೆ ಒಂದೇ ವಾರದಲ್ಲಿ 'ಉಷಾ ಹೊಲಿಗೆ ಯಂತ್ರ' ಕಾಲಿಟ್ಟಿತು, ಬಡವರ ಭಾಗ್ಯಲಕ್ಷ್ಮಿಯಂತೆ ಆ ಮನೆಗೆ. ಹರಿನಾರಾಯಣ ತಾನೇ ಹೆಂಡತಿಯೊಡನೆ ಗುರುಪುರಕ್ಕೆ ಹೋಗಿ ತೆಗೆದುಕೊಂಡು ಬಂದ.

ಸುತ್ತಲಿನ ಅನೇಕರಿಗೆ ಅತೀವ ವಿಸ್ಮಯ. ಬಂದು ನೋಡಿ ಹೋದರು ಹೊಲಿಗೆಯಂತ್ರವನ್ನು. ಮುರುಕು ಗುಡಿಸಲಿನಲ್ಲಿ ಫಳಫಳನೆ ಬೆಳಗುತ್ತಿತ್ತು ಆ ಯಂತ್ರ. ಕಮಲಮ್ಮನಿಗೆ ನಂಬಲಾಗಲೇ ಇಲ್ಲ. ಸ್ವತಃ ಅವರು ತಾವೂ ಒಂದು ಹೊಲಿಗೆ ಯಂತ್ರ ತೆಗೆಯಬೇಕೆಂದು ಯೋಚಿಸುತ್ತಾ ಇದ್ದರು, ಎಷ್ಟೋ ಸಮಯಗಳಿಂದ. ಆಗಿರಲೇ ಇಲ್ಲ. ಈಗ ಬಡ ಶಾಂಭವಿ ಹೊಲಿಗೆ ಯಂತ್ರ ತೆಗೆದಿದ್ದಾಳೆ ಎಂದಮೇಲೆ ಅಷ್ಟು ಹಣ ಅವಳಿಗೆ ಹೇಗೆ ಕೂಡಿತು? ಏನನ್ನು ಅವಳು ಹೊಲಿಯುತ್ತಾಳೆ? ಶಾರದೆಯನ್ನು ಕೆಲಸದ ನೆಪದಲ್ಲಿ ಮನೆಗೆ ಕರೆಯಿಸಿ ಎಲ್ಲಾ ಬಿಡಿಸಿ ಬಿಡಿಸಿ ಕೇಳಿಕೊಂಡರು. ಒಂದು ದಿನ ತಾವೇ ಅವಳ ಮನೆಗೆ ಹೋಗಿ ನೋಡಿಬರಬೇಕು ಎಂದೂ ಅಂದುಕೊಂಡರು. ಆದರೆ ಶ್ರೀಮಂತಿಕೆಯ ಅಭಿಮಾನ ತಡೆಯಿತು ಅವರನ್ನು.

ಹೊಲಿಗೆ ಯಂತ್ರ ತಂದದ್ದು ವ್ಯರ್ಥವಾಗಲಿಲ್ಲ. ಹಳ್ಳಿಯ ಜನರ ಒಂದೊಂದು ಎರಡೆರಡು ಬಟ್ಟೆಗಳು ಬರಲಾರಂಭಿಸಿದವು ಶಾಂಭವಿಯ ಕೈಗೆ. ಗುರುಪುರದ ದರ್ಜಿಗಳಿಗಿಂತ ಕಡಿಮೆ ದರದಲ್ಲಿ ಅಂದವಾಗಿ ಹೊಲಿದುಕೊಡಲು ಪ್ರಾರಂಭಿಸಿದ ಮೇಲೆ ಬರುವ ಬಟ್ಟೆಗಳ ಸಂಖ್ಯೆಯೂ ಅಧಿಕವಾಯಿತು. ಬೆಳಗ್ಗೆ ಮನೆಕೆಲಸ, ಮಧ್ಯಾಹ್ನ ಹೊಲಿಗೆ, ರಾತ್ರಿ ಬೀಡಿ ಕಟ್ಟುವ ಕೆಲಸ —ಹೀಗೆ ಶಾಂಭವಿಯ ದುಡಿತ ಹೆಚ್ಚಿತು. ಅಂಗೈಮೇಲೆ ಲಕ್ಷ್ಮಿ ಓಡಾಡಲಾರಂಭಿಸಿದಳು. ಮನೆಮಂದಿಗೆ ಉಪವಾಸ ಎಂದರೇನು ಎನ್ನುವುದೂ ಮರೆತುಹೋಯಿತು.

ದಿನಗಳು ಸರಿದಂತೆ ದುಡಿತದ ಪ್ರತಿಫಲದಿಂದ ಶಾಂಭವಿಯ ಕುತ್ತಿಗೆಯನ್ನು ಅಲಂಕರಿಸಿತು ಚಿನ್ನದಲ್ಲಿ ಕಟ್ಟಿದ ಕರಿಮಣಿಸರ, ಕಿವಿಗೆ ಕೆಂಪು ಕಲ್ಲಿನ ಬೆಂಡೋಲೆ ಮತ್ತು ಕೈಗೆ ಒಂದು ಜೊತೆ ಚಿನ್ನದ ಬಳೆಗಳು. ಕಮಲಮ್ಮನಿಗೆ ಇನ್ನೂ ವಿಸ್ಮಯ, ಶಾಂಭವಿಯ ಬುದ್ಧಿವಂತಿಕೆಯನ್ನು ಮನದಲ್ಲಿ ಮೆಚ್ಚಿದರೂ ಹೇಗೆ ಇವನ್ನು ಮಾಡಿಸಿಕೊಂಡಳು ? ತನ್ನ ಮನೆಗೆ ಕೆಲಸಕ್ಕೆಂದು ಆಗಾಗ ಬರುವ ಶಾರದೆ ಗುಟ್ಟಾಗಿ ಹಣ ಕದಿಯುತ್ತಿರಬಹುದೆಂಬ ಸಂಶಯ. ಆದರೆ ಎದುರಿನಲ್ಲಿ ನೂರರ ನೋಟುಗಳನ್ನು ಇರಿಸಿದರೂ ಕೈಯಿಂದ ಮುಟ್ಟುವ ಸಾಹಸ ಮಾಡುವವಳಲ್ಲ ಅವಳು. ಹಾಗಾದರೆ....?

ಈ ನಡುವೆ ಜಯರಾಮ ಎರಡು ಬಾರಿ ಬಂದ ಗುರುಪುರಕ್ಕೆ. ಕಮಲಮ್ಮನಿಗೆ ಅವನು ಬಂದನೆಂದರೆ ಎಲ್ಲಿಲ್ಲದ ಸಂಭ್ರಮ. ತನ್ನ ತವರಿನ ಕುಡಿಯಲ್ಲಿ ಇರುವವನು ಇವನೊಬ್ಬನೇ, ಅಚ್ಚುಮೆಚ್ಚಿನ ತಮ್ಮ. ಅವನಿಗೂ ಅಷ್ಟೇ, ಅಕ್ಕನಲ್ಲಿ ಎಲ್ಲಿಲ್ಲದ ಆತ್ಮೀಯತೆ. ವರ್ಷಕ್ಕೆ ಎರಡುಮೂರು ಬಾರಿ ಬಂದು ಹೋಗುವನು.

ಈ ಸಲ ಬಂದಾಗ ಅವನು ತನ್ನ ಜೊತೆಯಲ್ಲಿ ಟೇಪ್‌ರೆಕಾರ್ಡನ್ನು ತೆಗೆದುಕೊಂಡು ಬಂದಿದ್ದ. ಹರಿನಾರಾಯಣನ ಕೆಲವು ಹಾಡುಗಳನ್ನು ಧ್ವನಿ ಮುದ್ರಣ ಮಾಡಿಕೊಳ್ಳುವ ಬಯಕೆ ಅವನಿಗೆ. "ನಿನಗೊಂದು ಬೇರೆ ಕೆಲಸವಿಲ್ಲ. ಹುಚ್ಚನ ಕತ್ತೆಧ್ವನಿಗಾಗಿ ಯಾಕೆ ಅಷ್ಟು ಆಸೆ" ಎಂದರು ಕಮಲಮ್ಮ. ಅವರಿಗೆ ತನ್ನ ತಮ್ಮ ಬಡಸಂಸಾರದ ಸಮೀಪ ಸುಳಿಯುವ ಇಷ್ಟವಿರಲಿಲ್ಲ. ಆದರೆ ತಮ್ಮ ಕೇಳುವವನಲ್ಲ. ಬೆಂಗಳೂರಿನಿಂದ ಬಂದ ಮರುದಿನವೇ ಹರಿನಾರಾಯಣನನ್ನು ಹುಡುಕಿಕೊಂಡು ಬಂದ ಅವನ ಮನೆಗೆ.

ಎರಡು ದಿನಗಳಿಂದಲೂ ಹರಿನಾರಾಯಣ ಶಾಸ್ತ್ರಿಗಳ ಮನೆಗೆ ಹೋಗಿರಲಿಲ್ಲ. ತರಕಾರಿಯ ಗಿಡಗಳನ್ನು ಸರಿಪಡಿಸುತ್ತಿದ್ದವನು ಜಯರಾಮನನ್ನು ನೋಡಿ ಸಂತೋಷವನ್ನು ವ್ಯಕ್ತಪಡಿಸುತ್ತ "ಬನ್ನಿ, ಬನ್ನಿ" ಎಂದಂದು ಅವಸರದಲ್ಲಿ ಕೈಕಾಲು ತೊಳೆದುಕೊಂಡು ಬಂದ. ಹೊರಜಗಲಿಯ ಕಿಟಕಿಯ ಬದಿಯಲ್ಲಿ ಹೊಲಿಯುತ್ತಿದ್ದ ಶಾಂಭವಿ ತನ್ನ ಕೆಲಸಕ್ಕೆ ವಿರಾಮವನ್ನಿತ್ತು ಅವನನ್ನು ಎದುರುಗೊಂಡಳು. ಜಯರಾಮ ಹೊಲಿಗೆ ಯಂತ್ರದತ್ತ ಕಣ್ಣರಳಿಸಿ ನೋಡಿದ; ಬೀಡಿ ಕಟ್ಟುತ್ತಿದ್ದ ಕೇಶವ, ಈಶ್ವರಿಯನ್ನೂ ಮಾತನಾಡಿಸಿದ. ಅವನ ಕೈಯಲ್ಲಿ ಸಣ್ಣ ಚರ್ಮದ ಚೀಲವಿತ್ತು. ಅದರಿಂದ ಪುಟ್ಟದಾದ ರೇಡಿಯೋ ತೆಗೆದು ನೆಲದ ಮೇಲಿರಿಸಿದ.

"ನಿನ್ನ ಕೆಲವು ಹಾಡುಗಳ ಧ್ವನಿಮುದ್ರಣ ಮಾಡಿಕೊಳ್ಳಲು ಬಂದೆ. ನಿನಗಿಷ್ಟವಾದ ಕೆಲವು ಹಾಡು ಹೇಳು."

ಹರಿನಾರಾಯಣ ತಬ್ಬಿಬ್ಬಾದ. ಟೇಪ್‌ರೆಕಾರ್ಡನ್ನು ಸಂಪಡಿಸುತ್ತಿದ್ದವ ನನ್ನು ವಿಸ್ಮಿತನಾಗಿ ನೋಡುತ್ತ, 'ನನಗೆ ಹಾಡಲು ತಿಳಿಯದು. ನೀವೊಬ್ಬರು ಹೊಗಳಿ ಹೊಗಳಿ ನನ್ನನ್ನು ಅಟ್ಟಕ್ಕೆ ಏರಿಸ್ತಾ ಇದ್ದೀರಿ" ಎಂದ.

"ನಿಮಗೆ ತಿಳಿದಂತೆ ಹೇಳಿ. ಹುಶ್....' ಬಾಯ ಮೇಲೆ ಬೆರಳಿರಿಸಿದ ಜಯರಾಮ, "ಯಾರೂ ಗಲಾಟೆ ಮಾಡಬಾರದು. ಗಪ್‌ಚಿಪ್ ಅಂತ ಕುಳಿತುಕೊಳ್ಳಿ. ಪುರಂದರದಾಸರ ಯಾವ ಹಾಡನ್ನು ಬೇಕಾದರೂ ಹೇಳು."

ಹರಿನಾರಾಯಣ ಸಂಕೋಚದಿಂದ ಮುದುರಿದ. "ಶಾಸ್ತ್ರಿಗಳ ಮನೆ ಯಲ್ಲೇ ಇದ್ದಾಳಲ್ಲ ಶಾರದೆ. ಅವಳ ಹತ್ರ ನನಗೆ ಹೇಳಿಕಳುಹಿಸಿದ್ದರೆ ನಾನೇ ನಿಮ್ಮಲ್ಲಿಗೆ ಬರ್‍ತಾ ಇದ್ದೆ."

"ಆದರೆ ಈ ಸ್ಥಳದಲ್ಲಿ ನೀನು ಹಾಡಿದಷ್ಟು ಬೇರೆಯವರ ಮನೆಯಲ್ಲಿ ಹಾಡಲು ಸಾಧ್ಯವಿಲ್ಲ. ಪ್ರಾರಂಭಮಾಡು."

ಹರಿನಾರಾಯಣ ಅಳುಕುತ್ತ ಪ್ರಾರಂಭಿಸಿದ ದಾಸರ ಪದವನ್ನು. ಸುಮಾರು ಏಳೆಂಟು ದೇವರ ನಾಮಗಳನ್ನು ಹಾಡಿದ ತನ್ಮಯತೆಯಲ್ಲಿ. ಆಗಾಗ ಟೇಪ್‌ನ್ನು ಸರಿಪಡಿಸಿಕೊಳ್ಳುತ್ತ ಜಯರಾಮ ಎಲ್ಲವನ್ನೂ ಧ್ವನಿ ಮುದ್ರಣ ಮಾಡಿಕೊಂಡ. ಅನಂತರ ಹರಿನಾರಾಯಣನ ಎದುರಿನಲ್ಲಿಯೇ ಆ ಧ್ವನಿಮುದ್ರಣವನ್ನು ಇಟ್ಟು ತೋರಿಸಿದ.

ಅರ್ಧಗಂಟೆ ಮೊದಲು ಹಾಡಿದ ಹಾಡುಗಳು ಒಂದು ಪುಟ್ಟ ಯಂತ್ರದಿಂದ ಹೊರಹೊಮ್ಮಲಾರಂಭಿಸಿದವು. ಶಾಂಭವಿ, ಹರಿನಾರಾಯಣ, ಉಳಿದವರೆಲ್ಲ ನಿಶ್ಶಬ್ದರಾಗಿ ಹೋದರು. ಅವನ ಕಂಠಮಾಧುರ್ಯ ಗುಡಿಸಲಲ್ಲಿ ಪ್ರತಿಧ್ವನಿ ಗೈದು ಅವನಿಗೇ ವಿಸ್ಮಯವನ್ನುಂಟುಮಾಡಿತು. ಶಾಂಭವಿಯ ಕಣ್ಣುಗಳಲ್ಲಿ ನೀರು. ಬಿಸಿ ಕಾಫಿ ತಂದಿರಿಸಿದಳು ಜಯರಾಮನ ಮುಂದೆ.

"ನೀನೊಬ್ಬ ಅಸಾಧಾರಣ ಸಂಗೀತಗಾರ ! ಎಲೆಮರೆಯ ಹೂವು !! ಈ ಹಾಡುಗಳನ್ನು ಬೆಂಗಳೂರಿನ ಆಕಾಶವಾಣಿಯಲ್ಲಿ ಪ್ರಸಾರಮಾಡಲು ಪ್ರಯತ್ನಿ ಸುತ್ತೇನೆ. ಒಂದುವೇಳೆ ಪ್ರಸಾರವಾದರೆ ನಿನಗೆ ಸಂಭಾವನೆ ಸಿಗುತ್ತದೆ."

ಶಾಂಭವಿಯ ಮನಸ್ಸು ತುಂಬಿತ್ತು. ರೇಡಿಯೋದಲ್ಲಿ ತನ್ನ ಪತಿಯ ಹಾಡುಗಳನ್ನು ಕೇಳುವ ಭಾಗ್ಯ ತನಗುಂಟೇ ? ಅವಳ ಓರೆಕಣ್ಣುಗಳು ಹರಿನಾರಾಯಣನನ್ನೇ ದಿಟ್ಟಿಸಿ ನೋಡಿದವು.

10

ಚಳಿಗಾಲ ಕಾಲಿಟ್ಟಿತು. ಈ ಅವಧಿಯಲ್ಲಿ ಮನೆಮಾಡಿಗೆ ಹುಲ್ಲು ಹೊದೆಯಿಸುವ ತಾಪತ್ರಯ. ಗುಡ್ಡಕಾಡುಗಳಲ್ಲಿ ಆಳೆತ್ತರಕ್ಕೆ ಬೆಳೆಯುವ ಹುಲ್ಲನ್ನು ಹೆರೆದು ತಂದು ರಾಶಿಹಾಕಿಕೊಳ್ಳಬೇಕು. ನಾಲ್ಕೆಂಟು ದಿನ ಅದೇ ಕೆಲಸ, ಶಾಂಭವಿಯ ಕೈಯಲ್ಲಿ ಇತ್ತೀಚೆಗೆ ಕೆಲವು ರೂಪಾಯಿಗಳೂ ಸಂಗ್ರಹವಾಗಿವೆ. ಹೋಲಿಗೆಯಂತ್ರದ ಸಾಲದ ಕಂತನ್ನು ಸಂಪೂರ್ಣ ತೀರಿಸಿದಮೇಲೆ ಅವಳಲ್ಲಿ ಹೊಸ ಧೈರ್ಯದ ಭರವಸೆ ಮೂಡಿದೆ : ಅಲ್ಪಸ್ವಲ್ಪ ಸಾಲ ಮಾಡಿದರೆ ತೀರಿಸುವುದು ಹೆಚ್ಚಿಗೆ ಕಷ್ಟವೇನಿಲ್ಲ ಎಂದು. ಮುಂದಿನ ವರ್ಷ ಮಳೆಯಲ್ಲಿನ ತಾಪತ್ರಯಕ್ಕಿಂತ ಹಂಚು ಹೊದೆಯಿಸಿಕೊಳ್ಳುವದು ಮೇಲು. ರೀಪು, ಪಕಾಸು, ಬಾಗಿಲಿಗೆ ಮರ, ಹಂಚು ಇತ್ಯಾದಿ ಸೇರಿ ಒಂದು ಸಾವಿರಕ್ಕಿಂತ ಹೆಚ್ಚಿಗೆಯೇ ಬೇಕಾಗಬಹುದು. ಶಾಸ್ತ್ರಿಗಳು ಸಹಾಯ ಮಾಡಿದರೆ ಈ ಕೆಲಸ ಬಹಳ ಸುಲಭ. ಎಂದೋ ಒಂದು ದಿನ ಗುರುಪುರದ ಪೇಟೆಯಲ್ಲಿ ಶಾಸ್ತ್ರಿಗಳು ಸಿಕ್ಕಿದಾಗ ತನ್ನ ಆಲೋಚನೆಯನ್ನು ಹೇಳಿದ್ದಳು ಅವರ ಮುಂದೆ,

"ಅದಕ್ಕೇನಂತೆ, ಹಂಚಿನ ಮನೆಯನ್ನು ಮುಂದಿನ ಮಳೆಗಾಲ ಕಳೆದ ಮೇಲೆ ಆರಾಮವಾಗಿ ಕಟ್ಟಿಸಿಕೋ. ಸಾಲ ಎಷ್ಟು ಬೇಕೋ ನಾನು ಕೊಡ್ತೀನೆ—" ಅವರು ಅವಳ ಮುಖವನ್ನು ಓದುತ್ತ ಅಂದಿದ್ದರು, "ನೀನು ಎಲ್ಲರಂತೆ ಸಾಮಾನ್ಯ ಹೆಂಗಸಲ್ಲ !"

ಅವರ ಮಾತು ಅವಳಲ್ಲಿ ಅದೆಷ್ಟೋ ಭರವಸೆಯನ್ನು ಹುಟ್ಟಿಸಿದೆ. ಮುಂದಿನ ವರ್ಷ ತನ್ನದೇ ಆದ ಪುಟ್ಟ ಹಂಚಿನ ಮನೆಯನ್ನು ಕಟ್ಟಿಕೊಳ್ಳುವ ಕನಸಿನಲ್ಲಿಯೇ ಆ ದಿನ ಅವಳು ಜನಾರ್ದನ ಶಾಸ್ತ್ರಿಗಳ ಮನೆಗೆ ಬಂದಿದ್ದಾಳೆ. ಸಾಲಕ್ಕಾಗಿ ಅಲ್ಲ, ಮರುದಿನ ಅವಳ ಮಾವನವರ ಶ್ರಾದ್ಧ, ತೆಂಗಿನಕಾಯಿ ಮತ್ತು ಮಜ್ಜಿಗೆಯನ್ನು ಕೇಳಲೆಂದು.

ಆಗಿನ್ನೂ ಬೆಳಗಿನ ಹೊತ್ತು. ಕಮಲಮ್ಮ ದೇವರಿಗಾಗಿ ಹೂವು ಕುಯ್ಯುತ್ತಿದ್ದರು. ಶಾಂಭವಿಯ ಮುಖ ನೋಡಿದಾಕ್ಷಣ "ಓಹೋಹೋ, ಬಹಳ ಅಪರೂಪವಾಗಿದ್ದೀಯಲ್ಲ, ಬಾ....ಬಾ...." ಎಂದರು ನಗುತ್ತ.

ತಾನು ಬಂದ ಕಾರಣವನ್ನು ತಿಳಿಸುತ್ತಿದ್ದಂತೆ ಕಮಲಮ್ಮ ಒಂದು ತಂಬಿಗೆ ತುಂಬಾ ಮಜ್ಜಿಗೆಯನ್ನು ತುಂಬಿಸಿ ತಂದಿರಿಸಿದರು ಅವಳ ಮುಂದೆ. "ನೀನು

ಕೇಳಿದಾಗ ಇಲ್ಲಾ ಎಂದು ಯಾವ ಬಾಯಲ್ಲಿ ಹೇಳಲಿ? ಹಾಲು ಕರೆಯುವ ಹಸು ಇಲ್ಲವೇ ಈಗ?"

"ಅದು ಸಂಪೂರ್ಣ ಬತ್ತಿಹೋಗಿದೆ." ಜಗಲಿಯ ತುದಿಯಲ್ಲಿ ಕುಳಿತಳು ಶಾಂಭವಿ.

"ಅದೇನು, ನೀನಂತೂ ಈಚೆಕಡೆ ತಲೆಯೇ ಹಾಕುವದಿಲ್ಲ? ಹೊಲಿಗೆ ಯಂತ್ರ ಬೇರೆ ಇಟ್ಟುಕೊಂಡಿದ್ದೀಯಂತೆ. ಮಗು ಹೇಗಿದೆ? ಎಷ್ಟು ವರ್ಷ ಆಯ್ತು?"

"ಬರುವ ಮಳೆಗಾಲಕ್ಕೆ ಮೂರು ವರ್ಷವಾಗುತ್ತದೆ."

ಕಮಲಮ್ಮ ಕಣ್ಣುಗಳನ್ನು ಕಿರಿದುಗೊಳಿಸಿದರು. "ಏನು, ಹೊಸ ಸರ ಮಾಡಿಸಿದ್ದಿಯಾ? ಕಿವಿಯಲ್ಲಿ ಅದೇನು ಬೆಂಡೋಲೆಗಳೇ?"

"ಹೂಂ. ಏನೋ ನಾಲ್ಕು ಕಾಸು ಆಯ್ತು, ಮಾಡಿಸಿಕೊಂಡೆ."

"ಶುದ್ಧ ಚಿನ್ನದ್ದೋ, ಬೆಳ್ಳಿಗೆ ಒಪ್ಪಹಾಕಿಸಿ ಮಾಡಿಸಿದ್ದೊ?"

"ಬೆಳ್ಳಿಗೆ ಒಪ್ಪಹಾಕಿಸಿ ಶುದ್ಧ ಚಿನ್ನ ಎಂದು ಸುಳ್ಳು ಯಾಕೆ ಹೇಳಲಿ? ನೋಡಿ ಕರಿಮಣಿಸರವನ್ನು" ಎಂದು ಶಾಂಭವಿ ಮನದಲ್ಲೇ ರೇಗಿ ಕುತ್ತಿಗೆ ಯಲ್ಲಿದ್ದುದನ್ನು ತೆಗೆದು ಅವರ ಕೈಯಲ್ಲಿರಿಸಿದಳು.

ಕಮಲಮ್ಮ ತಿರುಗಿಸಿ ತಿರುಗಿಸಿ ನೋಡಿದರು, ಕೈಯಿಂದ ತಿಕ್ಕಿ ತಿಕ್ಕಿ ನೋಡಿದರು. ಚಿನ್ನದ ಒಡವೆ ಎನ್ನುವದರಲ್ಲಿ ಸಂಶಯವಿಲ್ಲ.

"ಹೊಟ್ಟೆಬಟ್ಟೆಯನ್ನು ಕಟ್ಟಿ ಇವನ್ನೆಲ್ಲ ಮಾಡಿಸಿದ್ದೀಯಾ? ಅಂದ್ಹಾಗೆ ಎಲ್ಲಾ ಬಿಟ್ಟು ನೀನ್ಯಾಕೆ ಮಾಡಿಸಿಕೊಂಡೆ? ಶಾರದೆಗೆ ಮಾಡಿಸಬೇಕಿತ್ತು. ಅವಳ ಮುಖಕ್ಕೆ ಸರ, ಬೆಂಡೋಲೆ ತುಂಬ ಚೆನ್ನಾಗಿ ಒಪ್ಪುತ್ತದಲ್ಲ. ಹೇಗೂ ನಮ್ಮ ಮನೆಗೆ ಕೆಲಸಕ್ಕೆ ಬರ್ತಾ ಇರ್ತಾಳೆ. ಬೋಳು ಕುತ್ತಿಗೆ, ಕಿವಿಯಲ್ಲಿ ಅವಳ ರೂಪ ಮುಚ್ಚಿಹೋಗಿದೆ."

ಶಾಂಭವಿಗೆ ಕೆಣಕು ಮಾತಿನ ಧಾಟಿ ಅರ್ಥವಾಯಿತು. "ಯಾರೋ ಅಂದ್ರು, ಚಿನ್ನ ಹಾಕಿಕೊಂಡರೆ ನೀನು ತುಂಬಾ ಚೆಂದ ಕಾಣಿಸುತ್ತೀ ಎಂದು. ಅದಕ್ಕೆ ಎಲ್ಲಾ ನನಗೇ ಮಾಡಿಸಿಕೊಂಡೆ, ನಾನೇ ಹಾಕಿಕೊಳ್ತೇನೆ."

"ಹ್ಹೇಹ್ಹೇ....ನಿನ್ನ ಮುಖಕ್ಕೆ ಇವು ಒಂದೂ ಒಪ್ಪುವದಿಲ್ಲ. ನಿನ್ನ ಮಗು ಸುಮನಾ, ಅವಳಿಗೆ ಮಾಡಿಸಬೇಕಿತ್ತು."

"ಅದಿನ್ನೂ ಎರಡೂವರೆ ವರ್ಷದ ಮಗು. ಅದಕ್ಯಾಕೆ ಚಿನ್ನದ ಒಡವೆ? ಎಷ್ಟು ದಿನಗಳ ಆಸೆಯೋ....ನಾನೇ ಮಾಡಿಸಿಕೊಂಡೆ."

"ಅದೆಲ್ಲ ಸರಿ. ನಿನ್ನ ಹುಚ್ಚ ಗಂಡನ ಆರೋಗ್ಯ ಹೇಗಿದೆ ಈಗ?"

ಶಾಂಭವಿ ಒಳಗೊಳಗೇ ಕೆರಳಿದಳು. ತನ್ನ ಗಂಡನನ್ನು 'ಹುಚ್ಚ' ಎಂದು ಯಾರು ಆಡಿಕೊಂಡರೂ ಅವಳು ಸೈರಿಸಲಾರಳು. ಮುಖ ಉಬ್ಬಿಸಿದಳು.

"ನಿನ್ನಂತಹ ಹೆಂಡ್ತಿಯನ್ನು ಕಟ್ಟಿಕೊಂಡು ಇನ್ನೆಲ್ಲಿ ಪೂರ್ಣ ಹುಚ್ಚನಾಗಿ ಹುಚ್ಚರಾಸ್ಪತ್ರೆ ಸೇರಿಬಿಡ್ತಾನೋ ಎಂದುಕೊಂಡಿದ್ದೆ. ನಿಜ ಹೇಳು, ನೀನು ಅವನಿಗೇನೋ ಮೋಡಿಮಾಡಿರಬೇಕು. ಅವನ ಹುಚ್ಚು ಕಡಿಮೆಯಾಗಿ ಈಗ ಎಲ್ಲರಂತೆ ಆಗಿಹೋಗಿದ್ದಾನಲ್ಲ?"

ಶಾಂಭವಿ ವ್ಯಂಗ್ಯನಗೆ ನಕ್ಕಳು. ಆ ನಗುವಿನಿಂದ ಉಬ್ಬು ಹಲ್ಲುಗಳು ಇನ್ನಷ್ಟು ವಿಕಾರವಾಗಿ ಕಾಣಿಸಿಕೊಂಡವು.

"ಹ್ಞೋಹ್ಞೋ...." ಕಮಲಮ್ಮ ಚುಚ್ಚುನುಡಿ ಆಡಿದರು: "ನಿನ್ನ ಉಬ್ಬು ಹಲ್ಲುಗಳೇ ಅವನಿಗೇನೋ ಮಂತ್ರ ಮೋಡಿ ಹಾಕಿವೆ. ನಿನ್ನ ಅದೃಷ್ಟವೇ ಅದೃಷ್ಟ."

ಮತ್ತೆ ಅರೆಗಳಿಗೆ ಅವಳಿಂದ ಕುಳಿತುಕೊಳ್ಳಲಾಗಲಿಲ್ಲ. ಮಜ್ಜಿಗೆಯ ತಂಬಿಗೆಯನ್ನೆತ್ತಿಕೊಂಡು "ತೆಂಗಿನಕಾಯಿ ಚೀಲ ಇಲ್ಲಿಟ್ಟಿದ್ದೇನೆ. ಬರುವಾಗ 'ಅವರು' ತರ್ತಾರೆ" ಎಂದೆಂದು ಹೊರಟುಹೋದಳು.

ಅವಳು ಹೋಗುತ್ತಿದ್ದ ದಿಕ್ಕನ್ನು ನೋಡುತ್ತಿದ್ದ ಕಮಲಮ್ಮನ ಮನಸ್ಸಿನಲ್ಲಿ ಅರಿಯದೆ ಹೊಗೆಯಾಡಿತು ಅಸೂಯೆ. ನಾಲ್ಕು ದಿನಗಳನಂತರ ತನ್ನ ಕುತೂಹಲವನ್ನು ಹತ್ತಿಕ್ಕಿಕೊಳ್ಳಲಾರದೆ ಅವರು ಇಳಿಹೊತ್ತಿನಲ್ಲಿ ಆಗಮಿಸಿದರು ಶಾಂಭವಿಯ ಪರ್ಣಕುಟೀರಕ್ಕೆ.

ಶಾಂಭವಿ ಮನೆಯಲ್ಲಿರಲಿಲ್ಲ. ಸಾಮಾನು ತರಲೆಂದು ಹೊರಟುಹೋಗಿದ್ದಾಳೆ ಗುರುಪುರಕ್ಕೆ. ಬಾವಿಕಟ್ಟೆಯ ಬದಿಯಲ್ಲಿ ಸೀತಾಫಲದ ಹಣ್ಣನ್ನು ತಿನ್ನುತ್ತಿದ್ದ ವೇದಮ್ಮ ಅವರನ್ನು ನೋಡಿ ಕೈಯಲ್ಲಿದ್ದುದನ್ನು ಹಾಗೇ ಕೆಳಗೆ ಬಿಸಾಡಿ ಧಡಕ್ಕನೆ ಎದ್ದು ಹತ್ತಿರ ಬಂದಳು. ಈವರೆಗೂ ಮನೆ ಅಂಗಳ ತುಳಿಯದ ಸಿರಿವಂತ ಒಡತಿಯನ್ನು ಹೇಗೆ ಸ್ವಾಗತಿಸಬೇಕೆನ್ನುವುದು ತಿಳಿಯದೆ ಸುಮ್ಮನೆ ನಿಂತಳು ನಡುಗುತ್ತ. ಕಮಲಮ್ಮ ತಾವೇ ಒಳಗೆ ಬಂದು ಮನೆಯೆಲ್ಲಾ ಪರೀಕ್ಷಿಸಿ ಬೀಡಿ ಕಟ್ಟುತ್ತಿರುವ ಹುಡುಗನನ್ನು ನೋಡುತ್ತ ಹೊಲಿಗೆಯಂತ್ರದತ್ತ ದೃಷ್ಟಿಹಾಯಿಸಿದರು. ಹೊಲಿಯಲು ಬಂದ ರಾಶಿಬಟ್ಟೆಯನ್ನು ನೋಡಿ ಅವಾಕ್ಕಾದರು ತಮ್ಮಲ್ಲೇ. ವೇದಮ್ಮ ಅವರ ಹಿಂದೆಯೇ

ಬಂದು ಮೂಲೆಯನ್ನೆಲ್ಲ ಹುಡುಕಿ ಒಂದು ಹರಕು ಚಾಪೆಯನ್ನು ಹಾಸಿದಳು. ಬಂದ ಕಾರಣ ತಿಳಿಯಲಿಲ್ಲ.

"ಮನೆಯಲ್ಲಿ ಬೇಸರವಾಯ್ತೆಂದು ತೋಟ ತಿರುಗಲು ಬಂದಿದ್ದೆ. ಹಾಗೇ ಶಾಂಭವಿಯನ್ನು ಮಾತನಾಡಿಸಿ ಹೋಗೋಣವೆಂದು ಬಂದೆ. ಇಷ್ಟೊಂದು ಬಟ್ಟೆಗಳು ಹೊಲಿಯಲು ಬರುತ್ತವೆಯೇ? ಎಷ್ಟುಹೊತ್ತಿಗೆ ಹೊಲೀತಾಳೆ?"

"ನನಗೂ ಪ್ರಾಯ ಆಯ್ತಲ್ಲ, ಮೊದಲಿನಂತೆ ಮೈಯಲ್ಲಿ ಶಕ್ತಿಯಿಲ್ಲ. ಆದರೂ ಅಡಿಗೆ, ಮನೆಕೆಲ್ಸ ಎಲ್ಲಾ ನಾನೇ ಮಾಡ್ತೇನೆ. ಅವಳು ಹೊಲೀತಾಳೆ ಅಷ್ಟೆ."

"ಎಲ್ಲಾ ಸುಳ್ಳು." ಬೀಡಿ ಕಟ್ಟುತ್ತಿದ್ದ ಕೇಶವ ಸ್ವರ ಏರಿಸಿದ: "ಅತ್ತಿಗೆ ಬಂದ್ಮೇಲಿನಿಂದ ನೀನು ಗಟ್ಟಿಯೋ ನಿನ್ನ ಹಾಸಿಗೆ ಗಟ್ಟಿಯೋ ಎಂದು ನೋಡ್ತಾ ಇದ್ದಿ!"

"ಎಷ್ಟು ಕಲಿತಿದ್ದಾಳೆ ನಿನ್ನ ಸೊಸೆ?"

"ಹತ್ತನೇ ಕ್ಲಾಸಿನವರೆಗೆ ಓದಿದ್ದಾಳಂತೆ. ಯಾವ ಕರ್ಮಕ್ಕೆ ಈ ಓದು?"

ಕಮಲಮ್ಮನ ಹುಬ್ಬುಗಳು ಮೇಲೇರಿದವು. ಓದಿದ ಹುಡುಗಿ ಈ ಹಳ್ಳಿಗಾಡಿನಲ್ಲಿ! ಈಗ ತಿಳಿಯಿತು ತಾನು ಯಾರನ್ನು ತುಚ್ಛವಾಗಿ ನೋಡುತ್ತಾ ಇದ್ದೆನೋ ಅವಳು ತುಂಬಿದ ಕೊಡ!

"ಊರವರೆಲ್ಲ ಹೇಳ್ತಾರೆ", ಕಮಲಮ್ಮ ಮತ್ತೆ ಅಂದರು, "ನಿಮ್ಮ ಮಗ ಸೊಸೆ ತುಂಬಾ ಅನ್ಯೋನ್ಯವಾಗಿದ್ದಾರಂತೆ, ಹೌದೇ?"

ವೇದಮ್ಮ ಬಾಯನ್ನು ಅಗಲಿಸುತ್ತ ನಕ್ಕಳು, "ನನ್ನ ಮಗ ಅವಳ ದಾಸಾನುದಾಸ. ಊಟಮಾಡುವದು, ಮಲಗುವದು, ಕೆಲಸಮಾಡುವದು ಎಲ್ಲಾ ಅವಳನ್ನು ಕೇಳಿಯೇ! ಆದರೆ ನೋಡಿ, ಅವಳ ರೂಪ ಸ್ವಲ್ಪ ಕೋಡಂಗಿಯ ಹಾಗಿದ್ದರೂ ಹೃದಯ, ಮನಸ್ಸು ಮಾತ್ರ ತುಂಬಾ ಒಳ್ಳೆಯದು."

ಅವರ ಮಾತು ಹೀಗೆ ಮುಂದುವರಿಯುತ್ತಿದ್ದಂತೆ ಬಾಗಿಲಲ್ಲಿ ಪ್ರತ್ಯಕ್ಷಳಾದಳು ಶಾಂಭವಿ. ಪರಸ್ಪರ ಮುಖಗಳು ಸಂಧಿಸಿದಾಗ ಇಬ್ಬರೂ ಅವರವರ ಭಾವದಲ್ಲಿಯೇ ದಿಗಿಲುಗೊಂಡರು. ಶಾಂಭವಿ ತನ್ನ ಚೀಲದಿಂದ ಬಿಳಿದ್ರಾಕ್ಷಿಯನ್ನು ತೆಗೆದು ನೀರಿನಲ್ಲಿ ತೊಳೆದು ತಟ್ಟೆಯಲ್ಲಿರಿಸಿ ಕೊಟ್ಟಳು ಕಮಲಮ್ಮನಿಗೆ. ಪೇಟೆಯಲ್ಲಿ ಕಡಿಮೆ ದರದಲ್ಲಿ ಸಿಕ್ಕಿತಂತೆ. ಅವರಿಗೆ ತಿನ್ನಲು ಸಂಕೋಚವೆನಿಸಿದರೂ ಬಿಳಿದ್ರಾಕ್ಷಿಯನ್ನು ಬಿಡಲು ಮನ ಒಪ್ಪಲಿಲ್ಲ.

"ಮೊನ್ನೆ ಒಂದು ವಿಚಾರ ಮರೆತಿತ್ತು" ಏನೋ ನೆನಪು ಮಾಡಿಕೊಂಡವರಂತೆ ಅಂದರು ಕಮಲಮ್ಮ: "ನಿನ್ನ ಗಂಡ ಹಾಡಿದ ರೆಕಾರ್ಡುಗಳನ್ನು ಜಯರಾಮು ರೇಡಿಯೋ ಸ್ಟೇಶನ್‌ಗೆ ಕೊಟ್ಟಿದ್ದಾನಂತೆ. ಪ್ರಸಾರ ಮಾಡಲು ಯೋಗ್ಯವೋ ಅಂತ ಅವರು ನೋಡಿ ತಿಳಿಸ್ತಾರಂತೆ."

ಅನಂತರ ಶಾಂಭವಿ ಅವರನ್ನು ತನ್ನ ತರಕಾರಿ ಮಾಡಿದ ಸ್ಥಳಕ್ಕೆ ಕರೆದೊಯ್ದಳು. ಅವರಿಗಾಗಿ ಕೆಲವು ತರಕಾರಿಗಳನ್ನು ಕೊಯ್ದು ಕೊಡುತ್ತಿದ್ದಂತೆ ಅವರ ತೀಕ್ಷ್ಣದೃಷ್ಟಿ ಅವಳ ಕೈತುಂಬಾ ಓಡಾಡಿತು. ಫಳಫಳನೆ ಹೊಳೆಯುವ ಚಿನ್ನದ ಬಳೆಗಳು! ಅವರ ನೋಟವನ್ನು ಸೂಕ್ಷ್ಮವಾಗಿ ಗ್ರಹಿಸಿದ ಶಾಂಭವಿ ಕಾರಣವಿಲ್ಲದೆ ಕೈಬಳೆಗಳನ್ನು ಇನ್ನಷ್ಟು ಫಳಫಳ ಮಾಡಿದಳು. ಮನಸ್ಸು ಸಂತೋಷ, ಹೆಮ್ಮೆಯಿಂದ ಬೀಗಿಹೋಯಿತಲ್ಲವೇ?

ಹಿಂದಿರುಗುವಾಗ ಕಮಲಮ್ಮನ ಮನಸ್ಸು ತಿಳಿಯಾಗಿದ್ದರೂ ಎಲ್ಲೋ ಜಡತ್ವ, ಅಸೂಯೆ, ಮತ್ಸರ ಇಣುಕಿ ನೋಡುತ್ತಲೇ ಇದೆ. ತಾನು ಶಾಂಭವಿಗಿಂತ ಎಷ್ಟೋ ಪಾಲು ಮೇಲ್ಮಟ್ಟದಲ್ಲಿದ್ದೇನೆ, ಆದರೆ ಅವಳಷ್ಟು ಸುಖಿಯಾಗಿಲ್ಲ. ನೋಡಲು ಕುರೂಪಿಯಾಗಿದ್ದರೂ ಅವಳ ಮನಸ್ಸು ವಿಶಾಲ. ನೆಮ್ಮದಿಯ ಸಂಸಾರ. ಸಹನೆ, ಕಷ್ಟಸಹಿಷ್ಣುತೆ, ತ್ಯಾಗಗಳ ಮೂರ್ತಿ. ಅವಳ ಕಣ್ಣುಗಳಲ್ಲಿ ಏನೋ ದಿಟ್ಟತನ, ಛಲದ ಹೊಳಪು. ತನ್ನ ಬಡಬಾಳಿನಿಂದ ಹೇಗಾದರೂ ಮೇಲೇರಬೇಕೆನ್ನುವ ಹೋರಾಟ.

ಯೋಚಿಸುತ್ತಿದ್ದಂತೆ ಅವರಂದುಕೊಂಡರು: 'ಶಾಂಭವಿ ಸಾಮಾನ್ಯದವಳಲ್ಲ, ಬೂದಿ ಮುಚ್ಚಿದ ಕೆಂಡ! ಬಡತನದಲ್ಲಿಯೂ ಸಿರಿತನವನ್ನು ಕಾಣುವ ಮಿನುಗುವ ನಕ್ಷತ್ರ ಇವಳು!'

11

ಯುಗಾದಿಗೆ ಇನ್ನು ಕೇವಲ ಎರಡೇ ದಿನಗಳು ಉಳಿದಿವೆ. ಶಾಂಭವಿಗೆ ಹೊಲಿಯಲೆಂದು ಹೊಸಬಟ್ಟೆಗಳ ರಾಶಿಯೇ ಬಂದು ಬಿದ್ದಿದೆ. ರಾತ್ರೆಹಗಲು ಹೊಲಿದು ಮುಗಿಸಿ "ಇನ್ನೂ ಆಗಲಿಲ್ಲವೇ?" ಎಂದು ಆಗಾಗ ಕಾಡುವ ಗಿರಾಕಿಗಳ ಕೈಗೆ ಒಪ್ಪಿಸಬೇಕು. ರಾತ್ರೆ ಬೀಡಿ ಕಟ್ಟುವದನ್ನು ಈಗ ನಾಲ್ಕು ದಿನಗಳಿಂದ ನಿಲ್ಲಿಸಿ ದೊಡ್ಡ ಲಾಟನನ್ನು ಎದುರಿನಲ್ಲಿರಿಸಿಕೊಂಡು ಹೊಲಿಯುತ್ತಿದ್ದರೂ ಇನ್ನೆಷ್ಟೊ

ಹೊಲಿಯಲು ಬಾಕಿ ಇವೆ. ಶಾರದೆಯೂ ಸಹಾಯಕ್ಕಿಲ್ಲ. ಶಾಸ್ತ್ರಿಗಳ ಮಗಳು ಮತ್ತು ಜಯರಾಮ ಬಂದುದರಿಂದ ಸಹಾಯಕ್ಕೆಂದು ಅವರ ಮನೆಗೆ ನಾಲ್ಕೈದು ದಿನಗಳಿಂದಲೂ ಹೋಗುತ್ತಿದ್ದಾಳೆ.

ಈ ದಿನ ಬೆಳಗ್ಗೆಯಿಂದಲೇ ಹೊಲಿಯಲು ಯಂತ್ರದ ಮುಂದೆ ಕುಳಿತ ವಳಿಗೆ ಸಮಯದ ಪರಿವೆಯಿರಲಿಲ್ಲ. ಎಲ್ಲಿಯೋ ಅಲೆದಾಡಲು ಹೋಗಿದ್ದ ವೇದಮ್ಮ ಒಳಗೆ ಬಂದಾಗ ಅಡಿಗೆಕೋಣೆಯಿಂದ ಒಲೆ ಊದುವ ಸದ್ದು ಕೇಳಿಸಿತು.

"ಶಾರದೆ ಶಾಸ್ತ್ರಿಗಳ ಮನೆಗೆ ಹೋಗಲಿಲ್ಲವೇ ? ಒಳಗೆ ಯಾರಿದ್ದಾರೆ ?" ಕೇಳುತ್ತ ಅಡಿಗೆಕೋಣೆಯಲ್ಲಿ ಬಗ್ಗಿ ನೋಡಿದರೆ ಹರಿನಾರಾಯಣ ತುದಿ ಗಾಲಿನಲ್ಲಿ ಕುಳಿತು, ಎಡಗೈಯನ್ನು ನೆಲಕ್ಕೆ ಊರಿ, ಬಲಗೈಯಲ್ಲಿ ಕೊಳವೆ ಹಿಡಿದು ಒಲೆಯ ಬೆಂಕಿಯನ್ನು ಊದುತ್ತಿದ್ದಾನೆ. ಅಡಿಗೆ ಇನ್ನೂ ಆಗಿಲ್ಲ!

"ಗಂಟೆ ಹನ್ನೊಂದೂವರೆ ಆಯ್ತು. ಇನ್ನೂ ನಿನ್ನ ದರ್ಜಿಕೆಲಸ ಮುಗೀ ಲಿಲ್ಲವೇ ? ಅಡಿಗೆ ಯಾವಾಗ ಮಾಡುವದು ? ಅವನು ಒಲೆ ಬೆಂಕಿ ಊದ್ತಾನೆ ಅನ್ನುವದೂ ನಿನಗೆ ತಿಳಿಯಲಿಲ್ಲವೇ ?" ಅಬ್ಬರಿಸಿದಳು ಸೊಸೆಯನ್ನು.

ಹೊಲಿಯುತ್ತಲೇ ಶಾಂಭವಿಯಿಂದ ಬಂದಿತು ಉತ್ತರ, "ತಿಳಿದಿದೆ ಅತ್ತೆ. ಗಾಡಿ ಬಟ್ಟೆ ಬೇರೆ ಇವೆ. ಹೊಲಿದು ಕೊಡದೆ ಇದ್ದರೆ ಜನರು ಗಲಾಟೆ ಎಬ್ಬಿಸ್ತಾರಲ್ಲ."

"ಮೊದಲು ಅಡಿಗೆಕೆಲಸ. ಆಮೇಲೆ ಬಾಕಿ ಉಳಿದದ್ದು. ನೀನಿಲ್ಲಿ ನಿನ್ನ ಪಾಡಿಗೆ ರಾಣಿ ತರಹ ಇದ್ದರೆ ಯಾರಂತೆ ಅಡಿಗೆ ಮಾಡುವವರು ?"

ಸರ್ರನೆ ರೇಗಿಹೋಯಿತು ಸೊಸೆಗೆ. ತಾನು ಎಲ್ಲರ ಸಲುವಾಗಿ ದುಡಿಯು ತ್ತಿದ್ದರೂ ತನಗೆ ಸಿಗುವ ಮರ್ಯಾದೆ, ಕೊಡುವ ಬೆಲೆ ಇಷ್ಟೆಯೇ ?

"ರಾಣಿ ಹಾಗೆ ನಾನಿಲ್ಲಿ ಕುಳಿತಿದ್ದೇನೆಯೇ ?" ಅರಿಯದೆ ಏರಿತು ಅವಳ ಸ್ವರ, "ನಾನು ಹೊಲೀತಾ ಇರುವದನ್ನು ನೋಡಿ ತಾನು ಅಡಿಗೆ ಮಾಡ್ತೇನೆ ಅಂದರು 'ಅವರು'. ತಪ್ಪೇನಾಯ್ತು ?"

"ನಿನಗೆ ನಾಚಿಗೆಯಾಗಲಿಲ್ಲವೇ ಗಂಡಸಿನ ಹತ್ತಿರ ಅಡಿಗೆ ಮಾಡಿ ಎನ್ನಲು ? ಈಗಿನ ಹೆಂಗಸರೇ ಹಾಗೆ." ಕಾಲಿಗೆ ಸಿಕ್ಕ ಬೀಡಿ ಎಲೆ ತುಂಬಿದ ಗೆರಸಿಯನ್ನು ಅಷ್ಟು ದೂರ ನೂಕಿದಳು ವೇದಮ್ಮ.

"ಗಂಡನು ಅಡಿಗೆ ಮಾಡಿದರೆ ಯಾವ ಅವಮರ್ಯಾದೆಯೂ ಇಲ್ಲ. ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡಿದ್ದರಾಯಿತು."

"ನನಗೆ ನೀನು ಬುದ್ಧಿ ಹೇಳ್ಬೇಡ. ನನ್ನ ಮಾತಿಗೆ ಇಲ್ಲಿ ಒಂದು ಕಾಸಿನ ಕಿಮ್ಮತ್ತಿಲ್ಲ!"

ಶಾಂಭವಿಯ ಕಣ್ಣುಗಳು ಇನ್ನೂ ಓರೆಯಾಗಿ ಮೇಲಿನ ಮಾಡನ್ನು ನೋಡಿದವು, "ಪಾಪ, ಮಗನ ಮೇಲೆ ಪ್ರೀತಿಯಿದ್ದರೆ 'ಏಳು ಮಗಾ, ನಾನು ಅಡಿಗೆ ಮಾಡ್ತೇನೆ' ಅಂತ ಎಬ್ಬಿಸಬಾರದಿತ್ತೇ? ಇವತ್ತು ನೀವೇ ಅಡಿಗೆ ಮಾಡಿ."

"ಬರ್‍ತಾ ಬರ್‍ತಾ ನನ್ನ ತಲೆಮೇಲೇ ಸವಾರಿ ಮಾಡ್ತಾ ಇದ್ದೀಯಾ?"

"ಹೂಂ, ಅಷ್ಟು ಜೋರು ನಾನಾಗದಿದ್ದರೆ ಸಾಧ್ಯವಿಲ್ಲ, ಅತ್ತೆ. ನಾನೇನು ನನ್ನ ಒಬ್ಬಳ ಹೊಟ್ಟೆಯ ಸಲುವಾಗಿ ದುಡೀತಾ ಇಲ್ಲ. ನಿಮ್ಮ ಹಾಗೂ ನಿಮ್ಮ ಮಕ್ಕಳ ಸಲುವಾಗಿ ಎತ್ತಿನ ಹಾಗೆ ದುಡೀತಾ ಇದ್ದೇನೆ. ನಿಮ್ಮ ಹಾಗೆ ಕಾಲುಚಾಚಿ ಕುಳಿತಿದ್ದರೆ ಒಂದು ಹೊತ್ತು ಗಂಜಿಗೂ ಆಕಾಶ-ಪಾತಾಳ!"

ಭುಸುಗುಡುತ್ತ ವೇದಮ್ಮ ಅಡಿಗೆಕೋಣೆಗೆ ಹೋಗುತ್ತಿದ್ದಂತೆ ಹೊಲಿಗೆ ಯಂತ್ರ ಮತ್ತೆ ತಿರುಗಿತು. ತುಸು ಹೊತ್ತಿನಲ್ಲಿ ಕೇಳಿಸಿತು ಗರ್ಜನೆ.

"ನಿನ್ನ ಹೆಂಡತಿ ಜೊತೆಯಲ್ಲಿ ನಾನಾದುದಕ್ಕೆ ಇದ್ದೇನೆ. ಬೇರೆಯವ ರಾಗಿದ್ದರೆ ತಾರಾಮಾರಾ ಜಗಳವಾಗ್ತಿತ್ತು. ನೀನೊಬ್ಬ ಹೆಬ್ಬಂಕು. ನಿನ್ನ ಹೆಂಡತಿಗಿಂತಲೂ ಕಡೆ! ಅವಳಿಗಂತೂ ಅಡಿಗೆ ಚಿಂತೆಯಿಲ್ಲ. ನನ್ನ ಮಾತು ಎಲ್ಲರಿಗೂ ಕಾಲಕಸ. ಆ ಮಹರಾಯ್ತಿ ನನ್ನ ಮೇಲೇ ಬಾಯಿ ಮಾಡ್ತಿ ದ್ದಾಳೆ."

ಮಾತು ಮುಗಿಸುವ ಮೊದಲೇ ಬಿರುಗಾಳಿಯಂತೆ ಒಳಗೆ ಬಂದ ಶಾಂಭವಿ ಮಿಂಚಿನಂತೆ ಕಸಿದುಕೊಂಡಳು ಕೊಳವೆಯನ್ನು. "ಬಾಯಲ್ಲಿ ಶಂಖ ಊದುವ ದಕ್ಕೆ ಮಾತ್ರ ಗೊತ್ತು ನಿಮಗೆ. ಅವರ ಕೈಯಿಂದ ಕೊಳವೆಯನ್ನು ಕಸಿದು ಕೊಳ್ಳಬಾರದಿತ್ತೇ? ನಾನಾದುದಕ್ಕೆ ಈ ಮನೇಲಿ ಇದ್ದೇನೆ. ಇನ್ನೊಬ್ಬಳಾಗಿ ದ್ದರೆ ಗಂಡ-ಮಗುವಿನ ಸಂಗಡ ಹೊರಟೇಹೋಗ್ತಿದ್ದಳು." ಅವಳ ನಾಲಿಗೆ ತಡವರಿಸಿತು. "ಇಷ್ಟು ದಿನ ತೆಪ್ಪಗೆ ಇದ್ದೆ, ಇನ್ನು ನನ್ನಿಂದ ಸಾಧ್ಯವಿಲ್ಲ. ನಾನು ಈ ಮನೆಗೆ ಬಂದ್ಮೇಲೆ ನೀವು ಉಗುರನ್ನು ನೀರಿಗೆ ಅದ್ದಿದ್ದೀರಾ? ಇಲ್ಲ....ಇಡೀ ದಿನ ಕಾಲುನೀಡಿ ಮಲಗಿದ್ದೀರಿ ಅಲ್ಲ?"

"ಬಾಯಿ ಮುಚ್ಚು."

"ಮಕ್ಕಳು ನಿಮಗಿಂತ ಎಷ್ಟೋ ವಾಸಿ. ನಿಮಗೆ ಒಂದಿನ ಅಡಿಗೆ ಆಗ್ಲಿಲ್ಲ ಅಂದಾಕ್ಷಣ ಮೂಗಿನ ಮೇಲೇ ಕೋಪ. ಅಡಿಗೆಪಟ್ಟ ನನ್ನೊಬ್ಬಳದಲ್ಲ."

"ನೀನು ಹೊರಗೆ ಹೋಗು—" ಎಂದು ಸಮಾಧಾನ ಹೇಳಲೆತ್ನಿಸಿದ ಹರಿನಾರಾಯಣ, "ಅಮ್ಮಾ, ನೀನು ಹೊರಗೆ ಹೋಗು!"

"ಏನು, ನೀನೂ ನನಗೆ ತಿರುಗಿ ಬೀಳ್ತಿಯಾ? ಅಯ್ಯೋ, ನಾನಿನ್ನೂ ಸಾಯದೆ ಮೋಸವಾಯ್ತಲ್ಲಪ್ಪೋ."

"ಎಲ್ಲರೂ ಒಟ್ಟಿಗೇ ಸತ್ತುಬಿಡೋಣ." ಕಾಲಪ್ಪಳಿಸುತ್ತ ಹೊರಗೆ ಬಂದಳು ಶಾಂಭವಿ. ಮತ್ತೆ ತಿರುಗಿತು ಹೊಲಿಗೆಯಂತ್ರ. ಹರಿನಾರಾಯಣ ಮಡಕೆ ಪಾತ್ರೆಯೊಂದಿಗೆ ಕೆಲಸಮಾಡುತ್ತ ಹಾಡಲಾರಂಭಿಸಿದ:

"ಆಚಾರವಿಲ್ಲದ ನಾಲಿಗೇ ನಿನ್ನ,
ವಿಚಾರವೇತಕೆ ನಾಲಿಗೇ!"

ಆ ಮಧ್ಯಾಹ್ನ ಹರಿನಾರಾಯಣ ಅನ್ನ ಮತ್ತು ಬಸಳೆಸೊಪ್ಪಿನ ಹುಳಿ ಮಾಡಿದ. ಆದರೆ ಶಾಂಭವಿ ಊಟಕ್ಕೇಳಲಿಲ್ಲ. ಕೇಶವ ಮಾಧವನಿಗೆ ಅತ್ತಿಗೆಯ ಊದಿದ ಮುಖ ನೋಡಿ ಅಚ್ಚರಿ. ಅತ್ತಿಗೆ ಯಾವಾಗಲೂ ಯಾರ ಮೇಲೆಯೂ ಕೋಪಗೊಳ್ಳುವವಳಲ್ಲ. ಕೋಪದಲ್ಲಿರುವವರನ್ನೂ ನಯವಾಗಿ ಕರೆದು ಬುದ್ಧಿ ಹೇಳುವವಳು. ಹರಿನಾರಾಯಣ ನಾಲ್ಕು ಬಾರಿ ಕರೆದ. "ನನ್ನ ಕೈ ಅಡುಗೆ ರುಚಿ ನೋಡು" ಎಂದೂ ರಮಿಸಿದ. ಅವಳು ಕುಳಿತಲ್ಲಿಂದ ಏಳಲೇ ಇಲ್ಲ. ರಾತ್ರಿ ಬಹಳ ಹೊತ್ತಿನಮೇಲೆ ಹೊಲಿಗೆ ಮುಗಿಸಿ ಮಲಗಲೆಂದು ಬಂದಾಗ ಇನ್ನೂ ಎಚ್ಚರವಾಗಿದ್ದ ಹರಿನಾರಾಯಣ.

"ಅಮ್ಮ ಹೇಳಿದ್ಲು ಎಂದು ನಿನಗ್ಯಾಕೆ ಈ ಸಿಟ್ಟು? ಅವಳ ಪಾಡಿಗೆ ಅವಳು ಗುರುಗುಡ್ತಾ ಇರಲಿ."

"ನಾನಾದರೂ ಎಷ್ಟು ಸಹಿಸಿಕೊಳ್ಳಲಿ?" ಅವನ ಭುಜದ ಮೇಲೆ ತಲೆ ಯಿರಿಸಿ ಬಿಕ್ಕಿದಳು, "ಹೊಲಿಗೆಯಂತ್ರ, ಬೀಡಿಕಟ್ಟು ಎಲ್ಲಾ ಮೂಲೆಗೊತ್ತಿ ನಾನು ಒಂದು ಗುಡಿ ಹೊದ್ದು ಬಿದ್ದುಕೊಳ್ತೇನೆ ಮೂಲೆಯಲ್ಲಿ."

"ಶಾಂತಂ ಪಾಪಂ!" ಅವಳ ತಲೆ ಸವರಿದ, "ಈ ಕೋಪದಲ್ಲಿ ನನ್ನನ್ನೂ ಆಚೆಗೆ ತೆಗೆದು ಬಿಸಾಡಿಬಿಡಬೇಡ, ಮಹರಾಯ್ತೀ. ನಿನಗೇನೋ ಯಾರೂ ಬೇಡವೆಂದಿರಬಹುದು. ಆದರೆ ನನಗೆ ನೀನು ಬೇಕು!"

ತಲೆ ಎತ್ತಿ ಚಿಮಣೀದೀಪದ ಬೆಳಕಿನಲ್ಲಿ ನೋಡಿದಳು ಪತಿಯನ್ನು. ಅದೆಂತಹ ಹಿತನುಡಿ! ಕಣ್ಣುಗಳಲ್ಲಿ ಎಷ್ಟು ಸ್ನೇಹಭಾವ! ಅವನ ಸಾಮೀಪ್ಯ ದಲ್ಲಿ ಮಂಜಿನಂತೆ ಕರಗಿಹೋದಳು.

ಮುಂದೆ ಎರಡು ದಿನಗಳೂ ಪರಿನಾಂಾಯಣನದೇ ಅಡಿಗೆ. ವೇದಮ್ಮ ಮನೆಯ ಹುಲ್ಲು ಹಾರುವಂತೆ ಬೊಬ್ಬಿರಿದರೂ ಹೋಲಿಗೆಯಂತ್ರದೆದುರು ಶಾಂಭವಿ ಉಸಿರೆತ್ತಲಿಲ್ಲ. ಯುಗಾದಿಯ ಹಿಂದಿನ ದಿನವೇ ಹೊಲಿಗೆಮಜೂರಿ ಕೈತುಂಬಾ ಸಿಕ್ಕಿತು. ಯುಗಾದಿಯ ದಿನ ಮನೆಯಲ್ಲಿ ಸಮೃದ್ಧವಾದ ಪಾಯಸದ ಅಡಿಗೆ, ಉದ್ದಿನ ವಡೆ. ಕೇಶವನಿಗೆ ಅತ್ತಿಗೆಯನ್ನು ಎಷ್ಟು ಹೊಗಳಿದರೂ ಸಾಲದು. ಸಾಯಂಕಾಲ ಅವನ ಮನಸ್ಸಿಗೆ ಏನು ತೋಚಿತೋ, ತಾನೇ ಅವಳ ಕಾಲುಮುಟ್ಟಿ ನಮಸ್ಕರಿಸಿದ. ಅವಳಿಗೆ ಅರ್ಥವಾಗಲಿಲ್ಲ ಅವನ ವರ್ತನೆ.

"ಶುಭದಿನದಂದು ಹಿರಿಯರ ಆಶೀರ್ವಾದ ಬೇಕು, ಅತ್ತಿಗೇ. ನೀನು ಈ ಮನೆಗೆ ಬಾರದೇಯಿದ್ದರೆ ನಾವೆಲ್ಲ ಮೊದಲಿನಂತೆ ಅರೆಹೊಟ್ಟೆಯಲ್ಲಿಯೇ ಬದುಕಬೇಕಿತ್ತು. ನಿನ್ನಿಂದ ಎಲ್ಲಾ ತಪ್ಪಿತು."

ತಾರುಣ್ಯದ ಗಡಿಯಲ್ಲಿರುವ ಕೇಶವನ ಮುಗ್ಧ ಮನಸ್ಸು ಅತ್ತಿಗೆಯ ಪ್ರತಿಯೊಂದು ಕೆಲಸವನ್ನೂ ಮೆಚ್ಚಿಕೊಳ್ಳುತ್ತದೆ. ಅತ್ತಿಗೆ ಅವನ ಮನವನ್ನೆಲ್ಲ ತುಂಬಿ ಯಾವುದೋ ಉತ್ಸಾಹ, ಚೇತನ, ಸ್ಫೂರ್ತಿಯನ್ನು ತುಂಬುತ್ತಿದ್ದಾಳೆ. ಅವಳನ್ನು ಹೊಗಳುವುದರಲ್ಲಿ ಅವನಿಗೂ ತೃಪ್ತಿ.

12

"ಒಳಗೇನೋ ತಿಂಡಿಯಾಗ್ತಾ ಇದೆಯಲ್ಲ, ಏನದು ?" ಮಾಧವ ಕಣ್ಣರಳಿಸಿ ಕೇಳಿದ ತಮ್ಮನನ್ನು.

"ನನಗೆಲ್ಲಾ ತಿಳಿದಿದೆ. ಅತ್ತಿಗೆ ಕಾಯಿ ಹೆರೀತಾ ಇದ್ದಾಳೆ. ಯಾರೂ ಒಳಗೆ ಹೋಗಬಾರದಂತೆ" ಎಂದ ಕೇಶವ ಬೆರಳು ಚೀಪುತ್ತ.

ಕೆಸವಿನೆಲೆಯ ಪತ್ರೊಡೆ ಅವನ ಇಷ್ಟದ ತಿಂಡಿಗಳಲ್ಲಿ ಒಂದು. ಅದನ್ನು ಅತ್ತಿಗೆಯೇ ಮಾಡಿ ಬಡಿಸಬೇಕು. ಅಮ್ಮ ಮಾಡಿದರೆ ಒಂದಿಷ್ಟು ರುಚಿಯಾಗುವುದಿಲ್ಲವಂತೆ. ಒಳಗೆ ಒಗ್ಗರಣೆಯ ಚಟಪಟ ಸದ್ದು ಕೇಳಿಸಿದಾಗ ಅವನ ಬಾಯ್ತುಂಬ ಜೊಲ್ಲು ತುಂಬಿ ಹೆಬ್ಬೆರಳನ್ನು ಇನ್ನೂ ಚೀಪಲಾರಂಭಿಸಿದ.

"ಅಣ್ಣಾ, ಶಾಸ್ತ್ರಿಗಳ ಮನೆಯೆದುರು ದಾಟಿಹೋಗುವಾಗಲೂ ಇದೇ ರೀತಿಯ ಪರಿಮಳ ಬರುತ್ತಾ ಇರುತ್ತಲ್ಲ. ಆಹಾ, ನಿನ್ನೆ ಯುಗಾದಿಗೆ ಮಾಡಿದ

ಪಾಯಸದ ಅಡಿಗೆ, ಉದ್ದಿನ ವಡೆಗಳಿಗಿಂತ ಇವತ್ತಿನ ಪತ್ರೊಡೆ ಇನ್ನೆಷ್ಟೋ ರುಚಿಯಾಗಿರಬಹುದು" ಎಂದ ಮತ್ತೆ ಒಳಗೆ ಹಣಿಕಿ ನೋಡುತ್ತ.

ಒಗ್ಗರಣೆಯ ಪರಿಮಳಕ್ಕೆ ಮಲಗಿದ್ದ ವೇದಮ್ಮನ ಮೂಗೂ ಅರಳಿ ಬೇಗ ಬೇಗನೆ ಎದ್ದು ಕುಳಿತಳು. ಈಶ್ವರಿ ನಾಲ್ಕಾರು ತುಂಡು ಬಾಳೆ ಎಲೆಗಳನ್ನು ತಂದು ಇರಿಸಿದಳು ಜಗಲಿಯಲ್ಲಿ. ಬಿಸಿಬಿಸಿಯಾದ ಪತ್ರೊಡೆ ಅಡಿಗೆಕೋಣೆ ಯಿಂದ ಹೊರಬಂದಿತು.

"ಪತ್ರೊಡೆ ಖಾರ ಹೆಚ್ಚಾಯ್ತು, ಸಿಹಿ ಇಲ್ಲ." ತನ್ನ ಎಲೆಯ ತುತ್ತನ್ನು ಬಾಯಿಗೆತ್ತಿಕೊಂಡ ಮಾಧವ ಗೊಣಗಿದ.

"ನಿನ್ನೆ ಪಾಯಸಕ್ಕೆ ಎಲ್ಲಾ ಹಾಕಿ ಮುಗಿದುಹೋಗಿದೆ."

ಕೇಶವನಿಗೆ ಅಣ್ಣನ ಎಲೆಯ ಮೇಲೆ ತನ್ನ ಪಾಲಿಗಿಂತಲೂ ಹೆಚ್ಚಿಗೆ ಇರು ವದು ಕಾಣಿಸಿತು. ಅತ್ತಿಗೆಯತ್ತ ಮುಖ ತಿರುಗಿಸಿದ. ಅವಳು ಎಲ್ಲ ಎಲೆ ಗಳಿಗೂ ಹಂಚಿ ಪಾತ್ರೆಯಲ್ಲಿ ಎರಡು ಪಾಲನ್ನು ಬೇರೆಯೇ ಇಟ್ಟಿದ್ದಾಳೆ. ಒಂದು ಪಾಲು ಶಾಸ್ತ್ರಿಗಳ ಮನೆಗೆ ಹೋದ ಶಾರದೆಗೆ, ಇನ್ನೊಂದು ಕೆಲಸಕ್ಕೆ ಹೋದ ಹರಿನಾರಾಯಣನಿಗೆ.

"ಶಾರದೆ ಪಾಲನ್ನು ನನಗೇ ಹಾಕಿಬಿಡು." ಕೈಚಾಚಿದ ಕೇಶವ, "ದೊಡ್ಡ ಮನೆಯಲ್ಲಿ ಪ್ರತಿದಿನ ಬೇಕಾದ ತಿಂಡಿಪದಾರ್ಥವನ್ನು ಅವಳು ತಿನ್ತಾಳೆ."

"ಮಾಡಿದ ತಿಂಡಿ ಬಹಳ ಕಡಿಮೆಯಾಯ್ತು. ಇನ್ನೊಂದು ಅರ್ಧಸೇರು ಜಾಸ್ತಿ ಹಾಕಬಹುದಿತ್ತು." ತಿನ್ನುತಿದ್ದ ವೇದಮ್ಮ ತನ್ನ ಎಲೆಯ ಬದಿಯ ಲ್ಲಿರುವ ಪತ್ರೊಡೆಯಲ್ಲಿ ಸ್ವಲ್ಪ ಮಾಧವನ ಎಲೆಗೆ ಹಾಕಿದಳು.

ಕೇಶವನ ಆಸೆಯ ಕಂಗಳು ಕೋಳಿಯಂತೆ ತಿನ್ನುತ್ತಿದ್ದ ಈಶ್ವರಿಯ ಎಲೆಯನ್ನು, ಬದಿಯಲ್ಲಿ ಒಂದೊಂದೇ ಚೂರನ್ನು ಆರಿಸುತ್ತಿದ್ದ ಪುಟ್ಟ ಸುಮನಳತ್ತ ಹೊರಳುತ್ತಿದ್ದಂತೆ ಅಮ್ಮ ಮಾಧವನ ಎಲೆಯನ್ನು ತುಂಬಿ ದ್ದನ್ನು ನೋಡಿದವು.

"ಅಮ್ಮಾ, ನನಗೂ ಸ್ವಲ್ಪ." ಬಲಗೈ ನೀಡಿದ ವೇದಮ್ಮನ ಮುಂದೆ.

"ಅಷ್ಟನ್ನು ಮುಕ್ಕಿದ್ದು ಸಾಲದೆ ನಿನ್ನ ಹೆಬ್ಬೆಟ್ಟನ್ನು ತಿಂದು ಮುಗಿಸ್ತಾ ಇದ್ದಿ. ನಿನಗೇನು ಕೊದಿ (ಆಸೆ) ಬಂದಿದೆಯೋ ನಾ ಕಾಣೆ."

"ನಿನಗ್ಯಾವಾಗಲೂ ಮಾಧವನಮೇಲೆ ಪ್ರೀತಿ." ಅಳುಮೋರೆ ಮಾಡಿದ. "ಆವತ್ತು ಶಾಸ್ತ್ರಿಗಳ ಮನೇಲಿ ಜಿಲೇಬಿ ಕದ್ದು ತಿಂದದ್ದು ಅವನು. ಬೆನ್ನಮೇಲೆ

ಬಾಸುಂಡೆ ನನಗೆ. ಮತ್ತೊಂದು ದಿನ ಕೆನೆಹಾಲು ಕದ್ದು ಕುಡಿದದ್ದು ಅವನು —ಪೆಟ್ಟು ನನಗೆ, ಎಲ್ಲಾ ಗೊತ್ತು. ನಿನಗೆ ನಾವ್ಯಾರೂ ಇಷ್ಟವಿಲ್ಲ."

ನಿಜ, ವೇದಮ್ಮನಿಗೆ ಮೊದಲಿನಿಂದಲೂ ಮಾಧವನೆಂದರೆ ಅಚ್ಚುಮೆಚ್ಚು. ಅವನು ಚಿಕ್ಕಮಗುವಾಗಿರುವಾಗ ಬಹಳ ಕಾಹಿಲಸ್ಥನಂತೆ. ಅಂಗೈ ಮೇಲೇ ಬೆಳೆಸಿದ್ದಳಂತೆ ವೇದಮ್ಮ. ಈಗ ನೋಡಿದರೆ ಅವನು ಕಾಹಿಲಸ್ಥನಂತೆ ತೋರುವದೂ ಇಲ್ಲ. ಅಣ್ಣತಮ್ಮಂದಿರಲ್ಲಿ ಯಾವ ಜಗಳವಾದರೂ ಮಾಧವನ ಪಕ್ಷಹಿಡಿದು ಹೊಡೆಯುವದು ಕೇಶವನಿಗೆ ಮಾತ್ರ! ತಾನು ಹೇಗೆ ಗಲಾಟೆ ಮಾಡಿದರೂ ತನ್ನ ತಾಯಿಯಿಂದ ಯಾವ ಶಿಕ್ಷೆಯೂ ಸಿಗಲಾರದು ಎಂದು ತಿಳಿದಮೇಲೆ ಮಾಧವ ದಿನೇ ದಿನೇ ಬಹಳ ಜೋರಾಗುತ್ತಲೇ ಇದ್ದಾನೆ.

"ಅತ್ತಿಗೇ, ನೀನಾದರೂ ಒಂದು ಚೂರು ಪತ್ರೊಡೆ ಹಾಕು." ಕೇಶವ ಅಡಿಗೆಮನೆಯತ್ತ ನೋಡಿದ, ಪಾತ್ರೆಯಲ್ಲಿ ಉಳಿದ ಎರಡು ಪಾಲು ಅವನ ಆಸೆಯನ್ನು ಇನ್ನೂ ಕೆರಳಿಸಿತ್ತು.

ಅಷ್ಟರಲ್ಲಿ ಹೊರಬಾಗಿಲಲ್ಲಿ ಯಾರೋ ಅಪರಿಚಿತರು ಬಂದು ನಿಂತದ್ದು ಕಾಣಿಸಿತು. ಮಧ್ಯಮ ವಯಸು ಮೀರಿದ, ಕಪ್ಪು ಕೋಟು, ಶುಭ್ರವಾದ ಬಿಳಿಧೋತರವನ್ನು ಉಟ್ಟ, ಕೈಯಲ್ಲೊಂದು ಸಣ್ಣ ಬ್ಯಾಗ್ ಹಿಡಿದುಕೊಂಡ ಶ್ರೀಮಂತ ವ್ಯಕ್ತಿಯಂತೆ ತೋರುತ್ತಿದ್ದ ಓರ್ವ ಗಂಡಸು ನಿಂತಿದ್ದಾರೆ ಬಾಗಿಲಲ್ಲಿ.

"ಚಂದ್ರಯ್ಯ ಮಾಸ್ತರರ ಮನೆ ಇದೆ ತಾನೇ ?" ಕೇಳಿದರು ಅವರು ಒಳಗೆ ಬಗ್ಗಿ ನೋಡುತ್ತ.

ವೇದಮ್ಮನಿಗೆ ಆ ಕ್ಷಣದಲ್ಲಿ ಸ್ವರದ ಪರಿಚಯ ಆಗಿಹೋಯಿತು. ಕುಳಿತಲ್ಲಿಂದ ಥಡಕ್ಕನೆ ಏಳುತ್ತ "ಅರೆರೆ....ಗಂಪತಿ(ಗಣಪತಿ) ಇದೇನು ಅಪರೂಪಕ್ಕೆ ಅವತಾರ ಮಾಡ್ತಾ ಇದ್ದೀ. ಬಾ....ಬಾ...." ಎಂದು ಹರ್ಷೋದ್ಗಾರದಿಂದ ಕರೆದಳು ಒಳಗೆ.

"ಶಾಂಭವಿ....ಬಾ ಇಲ್ಲಿ, ಇವನು ನನ್ನ ತಮ್ಮ ಗಣಪತಿ. ಅದೇ ಸಿರ್ಸಿಯಲ್ಲಿ ಇದ್ದಾನೆ ಅಂತ ನಾನು ಹೇಳ್ತಾ ಇರಲಿಲ್ಲವೇ, ಅವನೇ." ವೇದಮ್ಮ ಅವಸರದಲ್ಲಿ ಕೈತೊಳೆದು ಮುರುಕು ಕುರ್ಚಿಯನ್ನೇ ಇರಿಸಿದಳು ಬಂದವರಿಗೆ, "ಈಶ್ವರಿ, ಕೇಶವಾ....ಏಳಿ ಏಳಿ. ಶಾಂಭವಿ, ಒಂದು ಹಿಡಿ ಸೂಡಿ ತಂದು ಈ ಬೇಗ ಕಸ ಎಲ್ಲಾ ತೆಗೆದುಬಿಡು. ಏನಪ್ಪ ಇತ್ತ ಬಂದೆ ?"

"ನಿಮ್ಮನ್ನೆಲ್ಲ ನೋಡಿಹೋಗಲು ಬಂದೆ. ಎಲ್ಲರೂ ಹುಷಾರಾಗಿದ್ದಾರಾ?" ಆತ್ಮೀಯವಾಗಿ ಪ್ರಶ್ನಿಸುತ್ತ ಬಿಸ್ಕೀಟಿನ ಒಂದು ಕಟ್ಟನ್ನು ಮಕ್ಕಳ ಮುಂದೆ ಇರಿಸಿದರು. "ಎಲ್ಲಿ ಹರಿನಾರಾಯಣ ? ಇದ್ಯಾರ ಮಗು ?"

"ಹರಿನಾರಾಯಣನ ಮಗು." ವೇದಮ್ಮ ಸುಮನಳನ್ನು ಎತ್ತಿಕೊಂಡು ಅವನ ಹತ್ತಿರ ಬಂದು ತೋರಿಸಿದಳು. ಅವಳಿಗೋ ಎಲ್ಲಿಲ್ಲದ ಸಂತೋಷವಾಗಿ ಹೋಗಿದೆ, ಅನಿರೀಕ್ಷಿತವಾಗಿ ಆಗಮಿಸಿದ ಸೋದರನನ್ನು ನೋಡಿ. ಎಷ್ಟು ಮಾತನಾಡಿದರೂ ಸಾಲದು. ಹರಿನಾರಾಯಣನ ಹುಚ್ಚು ಕಡಿಮೆಯಾದುದನ್ನೂ ಹೇಳಿಕೊಂಡಳು. ಶಾಂಭವಿ ಎಲೆಯಲ್ಲಿ ಪತ್ರೊಡೆ ಮತ್ತು ಒಂದು ಗ್ಲಾಸಿನಲ್ಲಿ ಕಾಫಿ ತಂದಿರಿಸಿದಾಗ ಅವಳ ಪರಿಚಯವನ್ನೂ ಮಾಡಿಕೊಟ್ಟಳು.

ಗಣಪತಿ ತನ್ನೆದುರು ಬಂದು ನಿಂತವಳನ್ನು ವಿಚಿತ್ರವಾಗಿ ನೋಡಿದರು, ಅವರಿಗರಿಯದಂತೆ ತುಟಿ ಮೀರಿ ಬಂದಿತ್ತು ಒಂದು ನಗೆ. ತಡೆದುಕೊಂಡು "ಸಂತೋಷವಾಯ್ತು ನಿನ್ನನ್ನು ನೋಡಿ" ಎಂದರು.

ಶಾಂಭವಿ ಮೈದುನನನ್ನು ಶಾಸ್ತ್ರಿಗಳ ಮನೆಗೆ ಓಡಿಸಿ ಹರಿನಾರಾಯಣ ಈಗಲೇ ಮನೆಗೆ ಬರಲಿ ಎಂದೂ ಹೇಳಿಕಳುಹಿಸಿದಳು. ಸ್ವಲ್ಪ ಹೊತ್ತಿಗೆಲ್ಲಾ ಮನೆಯಲ್ಲಿ ಹಾಜರಾದ ಹರಿನಾರಾಯಣ. ರಾತ್ರಿಯ ಅಡಿಗೆಯ ಚಿಂತೆ ಕಾಡಿತು ಶಾಂಭವಿಯನ್ನು. ಅವಳಿಗೆ ತಿಳಿದಂತೆ ಗಣಪತಿ ತುಂಬ ಶ್ರೀಮಂತರು. ಈ ಬಡಗುಡಿಸಲಿನ ಊಟ, ವಾಸ ಹೇಗೆ ಒಗ್ಗುತ್ತದೆಯೋ. ಆದರೆ ವೇದಮ್ಮ ಚಿಂತೆ ಹಚ್ಚಿಕೊಳ್ಳದೆ "ಅವನು ಹುಟ್ಟಿದ್ದು ಬಡತನದಲ್ಲಿ, ಬೆಳೆದದ್ದು ಹಾಗೇ. ಈಗೇನೋ ಶ್ರೀಮಂತಿಕೆ ಬಂದಿದೆ. ನೀನು ನೀರುಮಜ್ಜಿಗೆ ಬಡಿಸಿದರೂ ಅವನು ಗೊಣಗಲಾರ" ಎಂದಳು.

ನೀರುಮಜ್ಜಿಗೆಯನ್ನು ಬಡಿಸಿ ಮರ್ಯಾದೆಯನ್ನು ಕಳೆದುಕೊಳ್ಳುವವಳಲ್ಲ ಸೊಸೆ. ಒಳಗೆ ನಡೆಯಿತು ಅಡಿಗೆ ತಯಾರಿ. ಸಾಯಂಕಾಲ ಶಾರದೆ ಶಾಸ್ತ್ರಿಗಳ ಮನೆಯಿಂದ ಹಿಂದಿರುಗುವಾಗ ಅವಳ ಕೈಯಲ್ಲಿತ್ತು ಉಪ್ಪಿನಕಾಯಿ ತುಂಬಿದ ಪಾತ್ರೆ ಮತ್ತು ಮಜ್ಜಿಗೆ. ಕೇಶವ ಓಡಿಬಂದು "ನೆಂಟರು ಬಂದಿದ್ದಾರೆ" ಎಂದು ಹರಿನಾರಾಯಣನಿಗೆ ತಿಳಿಸಿದಾಗ ಅಲ್ಲೇ ಇದ್ದ ಜಯರಾಮ ತಾನೇ ಇದನ್ನು ತುಂಬಿಸಿಕೊಟ್ಟನಂತೆ.

"ಅವನ ಹೊಟ್ಟೆ ತಣ್ಣಗಿರಲಿ." ಕಾಯಿ ಅರೆಯುತ್ತ ಶಾಂಭವಿ ಶಾರದೆಯ ಮುಖ ನೋಡಿದಳು, ತಲೆತುಂಬಾ ಮಲ್ಲಿಗೆ ಹೂವು ಮುಡಿದ ಅವಳು ಈ ದಿನ ಬಹಳ ಚೆನ್ನಾಗಿಯೇ ಕಾಣಿಸುತ್ತಿದ್ದಾಳೆ. ತನ್ನಷ್ಟು ಎತ್ತರಕ್ಕೆ ಬಂದ

ಇವಳಿಗೆ ಈ ವರ್ಷವಾದರೂ ಮದುವೆ ಮಾಡಿಬಿಡಬೇಕು. ಕೇವಲ ನಾಲ್ಕನೇ ಕ್ಲಾಸಿನವರೆಗೆ ಓದಿದ ಈ ಹಳ್ಳಿ ಹುಡುಗಿಯನ್ನು ವರದಕ್ಷಿಣೆ ಇಲ್ಲದೆ ಯಾರು ಮದುವೆಯಾಗುತ್ತಾರೋ. ಮದುವೆಯೆಂದರೆ ಕನಿಷ್ಠ ಆರೆಂಟು ಸಾವಿರ ರೂಪಾಯಿಗಳಾದರೂ ಬೇಕು. ತಮಗೆ ಆ ಶಕ್ತಿ ಇದೆಯೇ?

ರಾತ್ರಿ ಕತ್ತಲೆಯ ಅಡಿಗೆಕೋಣೆಯಲ್ಲಿ ಸಣ್ಣ ಚಿಮಣೀದೀಪವನ್ನಿರಿಸಿ ಹರಿನಾರಾಯಣನಿಗೂ ಗಣಪತಿಗೂ ಮೊದಲು ಊಟ. "ಮಕ್ಕಳು ತುಂಬಾ ಗಲಾಟೆ ಮಾಡ್ತಾರೆ. ಅವರಿಗೆ ಆಮೇಲೆ" ಎಂದಳು ಶಾಂಭವಿ.

ನೀರುಮಾವಿನಕಾಯಿಯ ಗೊಜ್ಜು, ತೊಂಡೆಕಾಯಿಯ ಕಾಯಿಹುಳಿ, ಹಪ್ಪಳ. ಗಣಪತಿ ಊಟ ಬಹಳ ರುಚಿಯಾಗಿದೆಯೆಂದು ಯಾವ ಸಂಕೋಚ ಇಲ್ಲದೆ ಬಡಿಸಿಕೊಂಡು ಊಟ ಮಾಡಿದರು. ಸಣ್ಣ ಗ್ಲಾಸಿನಲ್ಲಿ ಬಾಳೆಹಣ್ಣಿನ ರಸಾಯನವಿತ್ತು. ಒಂದು ಗ್ಲಾಸು ಕುಡಿದು ಮುಗಿಸಿ ಇನ್ನೂ ಇದ್ದರೆ ಬೇಕು ಎಂದೆಂದು ಇನ್ನೆರಡು ಗ್ಲಾಸನ್ನು ಹಾಕಿಸಿಕೊಂಡರು.

"ನನ್ನ ಹೆಂಡತಿಗೆ ಇತ್ತೀಚೆಗೆ ದೇಹದಲ್ಲಿ ಬಹಳ ನಿಶ್ಶಕ್ತಿ. ಅಡಿಗೆ ಮಾಡುವದಕ್ಕೂ ಅವಳಿಂದ ಆಗ್ತಾ ಇಲ್ಲ. ಇಂತಹ ರುಚಿಯಾದ ಅಡಿಗೆ ಉಣ್ಣದೆ ಎಷ್ಟು ಕಾಲವಾಗಿತ್ತೋ." ಗಣಪತಿ ಅಲ್ಲೇ ಕುಳಿತ ವೇದಮ್ಮನತ್ತ ಹೊರಳಿದರು, "ಏನಕ್ಕ, ನಿನ್ನ ಸೊಸೆಯ ಕೈಅಡಿಗೆ ಉಂಡಮೇಲೆ ಇನ್ನೂ ನಾಲ್ಕು ದಿನ ಇಲ್ಲೇ ಉಳಿದುಬಿಡೋಣ ಎನ್ನಿಸುತ್ತದೆ."

ಅನಂತರ ಊಟಕ್ಕೆ ಕುಳಿತ ಮಕ್ಕಳ ಬಾಯಲ್ಲಿ ನೀರು. ಅತ್ತಿಗೆ ಇಷ್ಟು ರುಚಿಯಾಗಿ ಅಡಿಗೆ ಮಾಡುತ್ತಾಳೆಂದು ಅವರಿಗೆ ತಿಳಿದದ್ದು ಈಗ! ಹೊಟ್ಟೆ ತುಂಬಾ ಗಬಗಬನೆ ಉಣ್ಣುವ ಆಸೆಯಾದರೂ ಉಳಿದ ಪದಾರ್ಥ ಮತ್ತು ರಸಾಯನ ಬಹಳ ಸ್ವಲ್ಪ ಎಂದು ತಿಳಿದಾಗ ದುಃಖ, ಅಳು ಒಟ್ಟಾಗಿ ಉಕ್ಕಿ ಬಂದಿತು. 'ನನಗೆ ಇನ್ನೂ ಸ್ವಲ್ಪ ಬೇಕು', 'ಇಷ್ಟು ಸಾಲದು', 'ಅವಳಿಗೆ ಹೆಚ್ಚು ಹಾಕಿದ್ದು ಯಾಕೆ?', 'ರಸಾಯನ ಸಾಲದು' ಎಂದು ಒಬ್ಬೊಬ್ಬರೇ ಗಲಾಟೆ ಮಾಡಲಾರಂಭಿಸಿದರು. ಅನ್ನ ಸಾಕಷ್ಟು ಇದ್ದರೂ ಉಳಿದದ್ದು ಬೇಕಷ್ಟು ಇರದಿದ್ದುದು ಅಸಮಾಧಾನಕ್ಕೆ ಎಡೆಕೊಟ್ಟಿತು. ಶಾಂಭವಿ ಬಹಳವಾಗಿ ತಿಳಿಹೇಳಿದಳು, ಹೊರಗೆ ಸದ್ದು ಕೇಳಿಸದಂತೆ ಗದರಿಸಿದಳು. ಆದರೆ ಪ್ರಾಯಕ್ಕೆ ಬಂದ ಹುಡುಗರಿಬ್ಬರೂ ಎಳೆಮಕ್ಕಳಂತೆ ಆಗಿಹೋದರು.

"ಸುಮ್ಮನೆ ಬಾಯಿ ಹೊಡ್ಕೊಳ್ಳಬೇಡಿರಿ" ಇಬ್ಬರ ಕಿವಿಗಳನ್ನೂ ಹಿಂಡುತ್ತ ಶಾಂಭವಿ ಕಣ್ಣು ಕೆಕ್ಕರಿಸಿದಳು, "ಬಂದವರ ಎದುರಿನಲ್ಲಿ ನನ್ನ ಮರ್ಯಾದೆ

ತೆಗಿಬೇಡಿ. ಕೇಶವ ಒಬ್ಬನೇ ತಿನಪಾಂಡಿ ಎಂದುಕೊಂಡಿದ್ದೆ. ಬರ್‍ತಾ ಬರಾ ಮಾಧವನೂ ಅದೇ ಜಾತಿಗೆ ಸೇರ್‍ತಾ ಇದ್ದಾನೆ."

"ನೀನು ಹೀಗೆ ಇಷ್ಟು ಸ್ವಲ್ಪ ಬಡಿಸಿ ಆಸೆ ತೋರಿಸಿದರೆ ಎಂಥವರೂ ತಿನಪಾಂಡಿ ಆಗ್ತಾರೆ." ಮಾಧವ ಅತ್ತಿಗೆಯ ಮೇಲೆಯೇ ಉರಿದುಬಿದ್ದ, "ನಾಲ್ಕು ಬಾಳೆಗೊನೆಗಳು ಸಿಕ್ಕಿದರೂ ನಮಗೆ ತಿನ್ನಲು ಒಂದು ಗೊನೆಯನ್ನೂ ಇಡದೆ ಎಲ್ಲಾ ಆ ಬ್ಯಾರಿ ಅಂಗಡಿಗೆ ಮಾರಿಬಿಟ್ಟಿದ್ದೀ. ನನಗ್ಗೊತ್ತು, ಎಲ್ಲಾ ಹಣವನ್ನೂ ಪೈಪೈ ಬಿಡದೆ ಗಂಟುಕಟ್ತಾ ಇದ್ದೀ!"

ಶಾಂಭವಿ ಅಲ್ಲೇ ತಟಸ್ಥಳಾದಳು. ಹಣವನ್ನು ಗಂಟುಕಟ್ಟಲು ತಾನು ಎಂದಾದರೂ ಪ್ರಯತ್ನಿಸಿದೆನೇ? ಅದಕ್ಕಾಗಿ ಬಾಳೆಗೊನೆಗಳನ್ನು ಮಾರಿದೆನೆ? ಮೈದುನನ ಮಾತಿಗೆ ಹತ್ತು ಉತ್ತರ ಕೊಡುವಷ್ಟು ಕ್ರೋಧ ಉಕ್ಕಿ ಮುಖ ಕೆಂಪಾಗಿ ಬಾಯ್ತೆರೆದವಳು ಉಳಿದವರನ್ನುನೋಡಿ, ಹೊರಗೆ ಕುಳಿತ ಅತಿಥಿಯ ನೆನಪಾಗಿ ಹಾಗೇ ಸುಮ್ಮನಾದಳು. ಮೀಸೆ ಹೊರಲು ಸಿದ್ಧನಾಗುತ್ತಿರುವ ಅವನ ಕಣ್ಣಲ್ಲಿ ತಾನು ತಪ್ಪಿತಸ್ಥೆ. ಯಾರಿಗಾಗಿ ಈ ಒದ್ದಾಟ? ಅವಳಿಗೆ ಅಲ್ಲೇ ತಲೆ ಜಜ್ಜಿಕೊಳ್ಳಬೇಕು ಎಂದೆನಿಸಿತು. ರಸಾಯನದ ಪಾತ್ರೆಯನ್ನು ಎತ್ತಿ ಕುಕ್ಕಿದಳು ಅವನ ಎದುರು. ಆದರೆ ಮಾಧವ ತಾತ್ಸಾರದಿಂದ ದುಸು ಮುಸು ಮಾಡುತ್ತ ಅಲ್ಲಿಂದೆದ್ದ. ಕೇಶವ ನೋಡುತ್ತಾನೆ, ಪಾತ್ರೆ ಸಂಪೂರ್ಣ ಖಾಲಿ! ಅವನ ಕಣ್ಣುಗಳಲ್ಲಿ ಕನಿಕರದ ಭಾವ ಉಕ್ಕಿ ಉಕ್ಕಿಬಂದು ತಾನು ಕುಡಿಯದೆ ಉಳಿಸಿರುವ ರಸಾಯನವನ್ನು ಅತ್ತಿಗೆಯ ಮುಂದಿಟ್ಟು ನಿಧಾನ ವಾಗಿ ಅಲ್ಲಿಂದೆದ್ದ.

ಗಣಪತಿ ಸುಮ್ಮನೆ ಬರುವವರಲ್ಲ, ಏನಾದರೂ ವಿಶೇಷ ಕಾರಣವಿರಲೇ ಬೇಕು ಎಂದು ಶಾಂಭವಿ ಅವರು ಬಂದಾಗಲೇ ಯೋಚಿಸಿದ್ದಳು. ನಿಜ, ಕಾರಣವಿದ್ದೇ ಬಂದಿದ್ದಾರೆ ಅವರು ಬಡಗುಡಿಸಲಿಗೆ. ಕಳೆದ ವರ್ಷ ತೆಂಗು-ಅಡಿಕೆಗಳಿರುವ ಹೊಸ ಆಸ್ತಿಯನ್ನು ಮಾಡಿದ್ದರು. ಹೊಸ ಆಸ್ತಿಯಲ್ಲಿ ಮನೆ ಕಟ್ಟಿ ಕುಳಿತಮೇಲೆ ಅವರಿಗೆ ಒಬ್ಬ ಹುಡುಗನ ಅಗತ್ಯತೆ ಹೆಚ್ಚಿತ್ತು. ಕಾರಣ ಅವರಿಗಿದ್ದದ್ದು ಕೇವಲ ಇಬ್ಬರೇ ಹುಡುಗಿಯರು. ಅವರೂ ಚಿಕ್ಕ ವರು. ಹೀಗಾಗಿ ತೋಟದ ಮೇಲ್ತನಿಖೆಗೆ, ಹಾಲು ಕರೆಯಲು, ಮನೆ ಒಳ ಹೊರಗಿನ ಸಣ್ಣಪುಟ್ಟ ಕೆಲಸಗಳಿಗೆ ತಮಗೆ ತಿಳಿದ ಹುಡುಗ ಬೇಕು ಎನ್ನಿಸಿ ದ್ದರೆ ತಪ್ಪೇನಿಲ್ಲ. ಆಗ ಅವರಿಗೆ ತಮ್ಮ ಬಡ ಅಕ್ಕ ಹಾಗೂ ಅವಳ ಮಕ್ಕಳ ನೆನಪೂ ಬಂದಿತು. ಅವಳ ಇಬ್ಬರು ಹುಡುಗರು ಕಲಿಯಲು ದಡ್ಡರಾಗಿ ಶಾಲೆ

ಬಿಟ್ಟು ಯಾವ ಕೆಲಸವನ್ನೂ ಮಾಡದೆ ಮನೆಯಲ್ಲೇ ಇದ್ದಾರೆಂದು ಎಂದೋ ತಿಳಿದ ವಿಷಯ. ತೀರ ಇತ್ತೀಚಿನ ಕೆಲವು ವರ್ಷಗಳಿಂದ ಅಕ್ಕನ ಮನೆಗೆ ಅವರು ಬಂದಿರಲಿಲ್ಲ. ಹೀಗಾಗಿ ಅಕ್ಕನನ್ನು ನೋಡುವ ನೆಪದಲ್ಲಿ ಬಂದರೆ ಹೋಗುವಾಗ ಒಬ್ಬ ಹುಡುಗನನ್ನು ಜೊತೆಯಲ್ಲಿ ಕರೆದೊಯ್ಯಬೇಕು ಎಂದು ಕೊಂಡರು. ಅವರಿಗೆ ಆಗಲೇ ಮಾಧವನ ಮೇಲೆ ದೃಷ್ಟಿಬಿದ್ದಿತ್ತು. ಈ ಹುಡುಗ ಹೇಗೂ ಕೆಲಸವಿಲ್ಲದೆ ಮನೆಯಲ್ಲಿದ್ದಾನೆ, ತಮ್ಮೊಂದಿಗೆ ಬಂದರೆ ತಮ್ಮ ನೆರವಿಗೆ ಆಗಬಹುದು ಎಂದೆನಿಸಿತು. ವೇದಮ್ಮನಿಗೆ ಈ ವಿಷಯ ತಿಳಿಸಿ,

"ನನ್ನ ಜೊತೆ ಕಳುಹಿಸಿಕೊಡು. ಎಲ್ಲಾ ಅನುಕೂಲ ಮಾಡಿಕೊಡ್ತೇನೆ. ಅವನ ಬಗ್ಗೆ ನಿನಗೆ ಯಾವ ಚಿಂತೆಯೂ ಬೇಡ" ಎಂದರು.

ವೇದಮ್ಮನಿಗೆ ಈ ಮಾತು ಪ್ರಿಯವಾಗಲಿಲ್ಲ. ತನ್ನ ಕರುಳ ಕುಡಿಯನ್ನು ಬಹಳ ದೂರಕ್ಕೆ ಕಳುಹಿಸಲು ಒಪ್ಪಲಿಲ್ಲ ಅವಳ ಮನಸ್ಸು.

"ಕಿರಿಯವನು ಬಹಳ ಕ್ಷೀಣನಾದ. ಅವನಿಂದ ಕಡ್ಡಿ ಎತ್ತುವದಕ್ಕೂ ಆಗದು. ಮಾಧವನಿಗೆ ಕೊಬ್ಬು ಹೆಚ್ಚಾಯ್ತು, ಕೆಲಸ ಮಾಡಲು ತಿಳಿಯದ ಶುದ್ಧ ಮರ್ಕಟ ಅವನು."

"ಅದಕ್ಕೆಲ್ಲ ಬುದ್ಧಿ ಕಲಿಸುವ ಮಂತ್ರ ನನ್ನ ಹತ್ತಿರವಿದೆ." ಅವರು ದೀಪದ ನೆರಳಿನಲ್ಲಿ ಹಾಸಿಗೆಯ ಮೇಲೆ ಕುಳಿತ ಮಾಧವನತ್ತ ಹೊರಳಿದರು. "ಏನೋ, ಬರ್‍ತಿಯಾ ನನ್ನ ಜೊತೆ? ಅಥವಾ ಅಮ್ಮನ ಸೆರಗಿನ ಹಿಂದೆ ಅಳುಮುಂಜಿ ತರಹ ಇರ್‍ತಿಯಾ ?"

"ಅಳುಮುಂಜಿಯಾಗಲು ನಾನು ಬಳೆ ತೊಟ್ಟ ಹುಡುಗಿಯಲ್ಲ !" ಅವನ ಕೈ ಚಿಗುರು ಮೀಸೆಯನ್ನು ಸವರಿತು, "ಈ ಮನೆಯಲ್ಲಿ ಅಮ್ಮನಿಗಿಂತ ಅತ್ತಿಗೆಯ ಮಾತಿಗೇ ಬೆಲೆ ಹೆಚ್ಚು. ಅವಳು ಒಪ್ಪಿದರೆ ನಾನು ರೆಡಿ !"

ಅಲ್ಲೇ ಮೂಲೆಯಲ್ಲಿ ಬೀಡಿ ಕಟ್ಟುತ್ತಿದ್ದ ಶಾಂಭವಿಯ ಕಣ್ಣುಗಳು ಪ್ರಜ್ವಲಿಸಿದವು. ಅತ್ತಿಗೆಯ ಮಾತಿಗೆ ಬೆಲೆ ಹೆಚ್ಚು ! ಯಾವ ಅರ್ಥದಲ್ಲಿ ? ತಾನು ಯಾರನ್ನಾದರೂ ತಡೆಹಿಡಿದಿದ್ದೇನೆಯೇ ? "ಮಹರಾಯಾ, ನಿನಗೆ ಇಷ್ಟವಿದ್ದರೆ ಹೋಗು, ನನ್ನನ್ಯಾಕೆ ಕೇಳುತ್ತೀ ?"

ಕೇಶವನ ಮುಖ ಸುಟ್ಟ ಬದನೆಯಂತಾಯಿತು. ಅತ್ತಿಗೆ ತನ್ನನ್ನು ಹೋಗು ಎನ್ನಲಿಲ್ಲವಲ್ಲ. ದಿನವೆಲ್ಲ ಇವಳಿಗೆ ಸಹಾಯಮಾಡುತ್ತ ತಾನೊಬ್ಬನೇ ಇಲ್ಲಿರ ಬೇಕೆ ? ಅಣ್ಣನಿಗೆ ಎಷ್ಟು ಮಜವೋ. ಬಸ್ಸಿನಲ್ಲಿ ದೂರ ಪ್ರಯಾಣ, ಹೊಸ

ವಾತಾವರಣ, ಶ್ರೀಮಂತರ ಮನೆ ವಾಸ. ಅವನು ಅಸೂಯೆಯಿಂದ ಒಳಗೇ ಉರಿದುಹೋದ.

"ಅಣ್ಣನಿಗೆ ಮನಸ್ಸಿಲ್ಲದಿದ್ದರೆ ನಾನು ಹೋಗ್ತೇನೆ" ಎಂದ ಹೆದರುತ್ತ.

ಶಾಂಭವಿ ಮೈದುನನ ತಲೆ ಸವರಿದಳು, "ಯಾಕಪ್ಪ, ನಿನಗೆ ಇಲ್ಲಿ ಬೇಸರವೇ? ನೀನು ಹೊರಟುಹೋದರೆ ಬೀಡಿ ಸಂಪಾದನೆ ಎಷ್ಟೋ ಇಲ್ಲ ವಾಗುತ್ತದೆ. ಮಾಧವನೇ ಹೋಗಲಿ."

ಗಣಪತಿ ಬಂದ ಉದ್ದೇಶ ಸಾರ್ಥಕವಾಯಿತು. ಮರುದಿನ ನಸುಕಿನಲ್ಲಿ ಮಾಧವನ ಜೊತೆಯಲ್ಲಿ ಹೊರಟುಬಿಟ್ಟರು ಸಿರ್ಸಿಗೆ. ಸರಿಯಾದ ಅಂಗಿಚಡ್ಡಿ ಗಳಿಲ್ಲದ ಮಾಧವ ಪೆಚ್ಚುಮೋರೆ ಹಾಕಿದಾಗ "ಸಿರ್ಸಿಗೆ ಹೋದ್ಮೇಲೆ ಎಲ್ಲಾ ವ್ಯವಸ್ಥೆ ಮಾಡ್ತೇನೆ, ಏನೂ ಚಿಂತಿಸಬೇಡ" ಎಂದರು.

ಮಾಧವನಿಗೆ ಅಷ್ಟೇ ಬೇಕಾಗಿತ್ತು. ಉಟ್ಟ ಬಟ್ಟೆಯಲ್ಲಿಯೇ ಹೊರಟು ನಿಂತ. ಪರಕೀಯ ಸ್ಥಳಕ್ಕೆ ಹೋಗಲಿರುವ ಅವನಿಗೆ ಕೆಲವು ಕಿವಿಮಾತು ಗಳನ್ನು ಹೇಳಲು ಇಚ್ಛಿಸಿದಳು ಶಾಂಭವಿ. ಆದರೆ ಕೇಶವನಲ್ಲಿ ಬೆಳೆದುಬಂದ ಆತ್ಮೀಯ ಸಲುಗೆ ಈ ಮೈದುನನಲ್ಲಿ ಅವಳೆಂದೂ ನೋಡಿರಲಿಲ್ಲ. ಹೇಳುವ ವಿಷಯ ಅವಳಲ್ಲಿಯೇ ಉಳಿದು ಹೋಯಿತು. ಗಂಭೀರ ಮೌನದಲ್ಲಿ ಬೀಳ್ಕೊಟ್ಟಳು ಅವನನ್ನು. ಹರಿನಾರಾಯಣನಿಗೆ ತಮ್ಮ ಹೊರಟುಹೋಗು ವದು ಗಮನಕ್ಕೆ ಬಂದರೂ ಯಾವ ಮಾತನ್ನೂ ಆಡಲಿಲ್ಲ.

13

ತಾರುಣ್ಯದ ಹೊಸ್ತಿಲಲ್ಲಿ ಕಾಲಿರಿಸಿದ ಶಾರದೆ ತನ್ನ ಬಾಲ್ಯಚೇಷ್ಟೆಗಳನ್ನೆಲ್ಲ ಕಳೆದುಕೊಂಡು ದಿನೇದಿನೇ ಗಂಭೀರಳಾಗುತ್ತಿದ್ದಾಳೆ. ನೋಡಲು ಹರಿ ನಾರಾಯಣನಂತೆ ಅಗಲವಾದ ಮುಖ, ದೊಡ್ಡ ಕಣ್ಣುಗಳು, ತೆಳುವಾದ ತುಟಿ, ಗುಂಗುರುಕೂದಲು. ಮೈಕೈತುಂಬಿಕೊಂಡ ಲಕ್ಷಣವಾದ ಹುಡುಗಿ. ಅಂಗಾಂಗ ಗಳಲ್ಲಿ ಲಜ್ಜೆಯ ಭಾವ. ಕಣ್ಣುಗಳಲ್ಲಿ ಹೊಳಪು. ನಡೆನುಡಿಯಲ್ಲಿ ಮೃದುತನ. ಬಡಮನೆಯಲ್ಲಿ ಜನಿಸಿದ್ದರೂ ಮುಖದಲ್ಲಿ ರಾಜಕಳೆ. ಸದಾ ಹಸನ್ಮುಖಿ. ಅವಳು ಶಾಸ್ತ್ರಿಗಳ ಮನೆಯಲ್ಲಿ ಕೆಲಸ ಮಾಡುತ್ತಿದ್ದರೆ ಆ ಮನೆಗೆ ಬಂದ ಹೊಸಬರು 'ಇವಳು ನಿಮ್ಮ ಮಗಳೇ?' ಎಂದೂ ಕೇಳಿದ್ದುಂಟು. ಶಾಸ್ತ್ರಿ

ಗಳಿಗೂ, ಕಮಲಮ್ಮನಿಗೂ ಅವಳ ಕೆಲಸ ಕಾರ್ಯ, ಅವಳ ಗುಣ ನಡತೆ ಇಷ್ಟವಾಗಿದೆ. ಮನೆಯಲ್ಲಿ ಸಣ್ಣಪುಟ್ಟ ಸಮಾರಂಭವಾದರೂ ಸಹಾಯಕ್ಕೆ ಶಾರದೆ ಬೇಕೇಬೇಕು. "ನಾವೇ ಅವಳಿಗೆ ಯೋಗ್ಯ ವರ ಹುಡುಕೋಣ" ಎನ್ನುತ್ತಿದ್ದರು ಕಮಲಮ್ಮ. ಪಾಪ, ಬಡ ಮನೆಯಲ್ಲಿ ಹುಟ್ಟಿ ದೊಡ್ಡ ತಪ್ಪನ್ನೇ ಮಾಡಿಬಿಟ್ಟಿದ್ದಾಳೆ. ಸುಲಭದಲ್ಲಿ ಹುಡುಗ ಸಿಗುತ್ತಾನೆಯೇ ?

ಮಾಧವ ಸಿರ್ಸಿಗೆ ಹೊರಟುಹೋದ ದಿನ ಎಂದಿನಂತೆ ಅವಳು ಬೆಳಗ್ಗೆ ಶಾಸ್ತ್ರಿಗಳ ಮನೆಗೆ ಹೋಗಬೇಕಿತ್ತು. ಆದರೆ ಬಿಸಿಲೇರುತ್ತ ಬಂದರೂ ಅವಳು ಹೊರಟು ಸಿದ್ಧಳಾಗಲಿಲ್ಲ. ಶಾಸ್ತ್ರಿಗಳ ಮನೆಯಿಂದ ಆಳು ಕರೆಯಲು ಬಂದಾಗ ಶಾಂಭವಿಗೆ ಅಚ್ಚರಿ.

"ಯಾಕೆ ಶಾರದೆ ಮೈ ಚೆನ್ನಾಗಿಲ್ಲವೇ ? ಕಮಲಮ್ಮ ಹೇಳಿ ಕಳುಹಿಸಿದ್ದಾರೆ. ಹೊರಡು ಬೇಗ."

"ಅವರ ಮನೆಕೆಲಸ ನನಗೆ ಬೇಜಾರು ಬಂದಿದೆ. ನನ್ನ ಬದಲಿಗೆ ನೀನು ಹೋಗು." ಮುಖ ಮರೆಯಿಸಿಕೊಳ್ಳುತ್ತ ಅಂದಳು ಶಾರದೆ.

"ನಿನ್ನ ಬದಲಿಗೆ ನಾನು ಕೋಡಂಗಿ ಹೋಗಲಾ ? ಮೊದಲೇ ಅನಿಷ್ಟಮುಖದವಳು ಎಂದು ತುಚ್ಛೀಕರಿಸಿದ್ದಾರೆ ನನ್ನನ್ನು. ಯಾಕೆ. ಕಮಲಮ್ಮ ನಿನ್ನ ಬಗ್ಗೆ ಏನಾದರೂ ಆಡಿಕೊಂಡರೇ ? ಹಾಸ್ಯಮಾಡಿದರೇ ?"

"ದೊಡ್ಡ ಮನುಷ್ಯರ ಗುಣ ಏನೂಂತ ಹೇಳಲು ಸಾಧ್ಯವಿಲ್ಲ, ಅತ್ತಿಗೇ. ಯಾಕೋ ಹೆದರಿಕೆ."

ಶಾಂಭವಿ ಹುಡುಗಿಯ ಕಣ್ಣಿನಾಳದಲ್ಲಿಳಿದು ಅವಳ ಮನಸ್ಸನ್ನು ಓದಲು ಪ್ರಯತ್ನಿಸಿದಳು. ಲಜ್ಜೆಯಲ್ಲಿ ರಂಗೇರುತ್ತಿರುವ ಆ ಕೆನ್ನೆಗಳಲ್ಲಿ, ಆ ಕಣ್ಣುಗಳಲ್ಲಿ ಯಾರು ತುಂಬಿಕೊಂಡಿದ್ದಾರೆ ? ತನ್ನ ಮುಖ ನೋಡುವದಕ್ಕೂ ಹೆದರಿಕೆ. ಬೇರೇನೋ ಭಾವ ತುಂಬಿದೆ ಆ ಮುಖದಲ್ಲಿ.

"ನನ್ನ ಹತ್ತಿರ ನಿನಗೆ ಸಂಕೋಚವೇ ? ಹೇಳು, ಏನಾಯ್ತು ಅಲ್ಲಿ ?"

"ಅಂತಹದೇನೂ ಆಗಿಲ್ಲ. ನಿನಗೂ ಇಲ್ಲಿ ಕೆಲಸ ಬಹಳವಿದೆ. ನಿನ್ನ ಜೊತೆ ಸಹಾಯ ಮಾಡ್ತಾ ಮನೇಲಿ ಇದ್ದುಬಿಡೋಣ ಎನ್ನಿಸಿದೆ."

"ನಿನ್ನ ಮಾತು ಸುಳ್ಳು. ಶಾಸ್ತ್ರಿಗಳ ಮನೆಯಲ್ಲಿ ಏನೋ ಬೇರೆ ಆಗಿರಬೇಕು. ಓ...." ಸುಳುವು ಸಿಕ್ಕವಳಂತೆ ಚಪ್ಪಾಳೆ ಹೊಡೆದಳು, "ಹೌದಾ, ಬೆಂಗಳೂರಿನ ಆ ಹುಡುಗ ಬಂದಿದ್ದಾನಲ್ಲ, ಅವನಿಗೆ ಹೆದರಿದೆಯೋ ನೀನು ?"

ಶಾರದೆಯ ಕಣ್ಣುಗಳು ಕೆಳಮುಖವಾದವು, ತುಟಿ ಅದುರಿತು. ನಿಜ,

ಜಯರಾಮನಿಗಾಗಿಯೇ ಅವಳು ಹೆದರಿ ಹೋಗಿದ್ದಾಳೆ. ಹಾಗೆಂದು ಯಾವ ಬಾಯಲ್ಲಿ ಅತ್ತಿಗೆಗೆ ತಿಳಿಸುತ್ತಾಳೆ? ತನ್ನ ಅಮ್ಮನಿಗಿಂತಲೂ ಅತ್ತಿಗೆ ತುಂಬಾ ಚಾಣಾಕ್ಷ, ಬಹಳ ಬೇಗ ಸೂಕ್ಷ್ಮವಾಗಿ ಅರಿತುಕೊಳ್ಳುತ್ತಾಳೆ. ಕೇವಲ ಅರಿತುಕೊಳ್ಳುವದು ಮಾತ್ರವಲ್ಲ, ತಪ್ಪಿರುವದನ್ನು ಸರಿಪಡಿಸುವ ದೊಡ್ಡ ಗುಣವೂ ಅವಳಲ್ಲಿದೆ. ತನ್ನ ಹೆದರಿಕೆಗೆ ಅವಳು ಸುಲಭದಲ್ಲಿ ಪರಿಹಾರವನ್ನೂ ಸೂಚಿಸಬಲ್ಲಳು. ಅವಳ ಕಣ್ಣರೆಪ್ಪೆಗಳು ಮೇಲ್ಮುಖವಾದವು. ಹೇಳಲೇ ಬೇಡವೇ ಎಂಬ ಸಂಕೋಚದಲ್ಲಿ ಮೌನ ತಳೆದಳು.

ಅತ್ತಿಗೆ ಸ್ನೇಹಭಾವದಲ್ಲಿ ಅವಳ ಭುಜದ ಮೇಲೆ ಕೈಯಿರಿಸಿ ತಮ್ಮ ಮಾತನ್ನು ಯಾರೂ ಕೇಳಬಾರದೆಂದು ಬದಿಯ ಕೋಣೆಗೆ ಕರೆದೊಯ್ದಳು. ಕೋಣೆಯ ಮೂಲೆಯಲ್ಲಿ ನಾಲ್ಕಾರು ದೇವರ ಫೋಟೋಗಳ ಮುಂದೆ ಮಂದ ಬೆಳಕಿನ ನೀಲಾಂಜನ. ದೇವರೆದುರು ಹೊತ್ತಿಸಿಟ್ಟ ಊದಿನಕಡ್ಡಿಯ ಪರಿಮಳದೊಡನೆ ನಸುಕಿನಲ್ಲಿ ಮಾಧವ ಬಿಚ್ಚಿಟ್ಟುಹೋದ ಕೊಳಕುಬಟ್ಟೆ ಮತ್ತು ಒಗೆಯದೆ ಇರಿಸಿದ ಇತರ ಬಟ್ಟೆಗಳ ಬೆವರುವಾಸನೆಯೂ ಬೆರೆತಿತ್ತು. ಕಿಟಕಿಗೆ ಕಟ್ಟಿದ್ದ ಗೋಣಿಯನ್ನು ಮೇಲಕ್ಕೆತ್ತಿದ್ದಳು ಶಾಂಭವಿ. ನೀಲಾಂಜನದ ಬೆಳಕನ್ನು ನೋಡುತ್ತ ಶಾರದೆಯ ಕಣ್ಣುಗಳೂ ಬೆಳಗಿದವು.

ಜಯರಾಮ ಅವಳ ಕಿವಿಗಳಲ್ಲಿ ಹೇಳಿದಮಾತುಗಳು ಇನ್ನೂ ಧ್ವನಿಸುತ್ತಲೇ ಇವೆ. ಕಿರುಮೀಸೆಯ ಕಲಿತ ಯುವಕನ ಮಾತನ್ನು ಇನ್ನೂ ಕೇಳಬೇಕು ಎಂದು ಹಾರೈಸುತ್ತಿದೆ ಅವಳ ಕಿವಿಗಳು. ನಿಜವಾಗಿಯೂ ಅವಳು ಬೆಪ್ಪಳು. ಕೆಲವು ವಿಷಯಗಳು ಅವಳ ಮಂದಬುದ್ಧಿಗೆ ತಿಳಿದಿರಲೇ ಇಲ್ಲ. ದೊಡ್ಡಮನೆಯಲ್ಲಿ ಸಾಸಿವೆಕಾಳಿನಂತೆ ಎಲ್ಲೋ ತಲೆಮರೆಯಿಸಿ ಓಡಾಡಿಕೊಂಡಿದ್ದರೂ ಒಂದು ಜೊತೆ ಕಣ್ಣುಗಳು ಹಿಂದೆ ಮುಂದೆ ಚಲಿಸುತ್ತಿರುವದು ಗಮನಕ್ಕೆ ಬಂದಿರಲಿಲ್ಲ. ಉಡಲು ತೊಡಲು ಸರಿಯಾದ ಬಟ್ಟೆಗಳಿಲ್ಲದಿದ್ದರೂ ಇದ್ದ ಕಡಿಮೆ ಕ್ರಯದ ಬಟ್ಟೆಯಲ್ಲಿ ಮೈಮುಚ್ಚುವಂತೆ ಅವಳು ಪ್ರಯತ್ನಿಸಿದ್ದಳು ನಿಜ, ಆದರೆ ನಿಚ್ಚಳವಾಗಿ ಎದ್ದುಕಾಣುವ ರೂಪರಾಶಿಯನ್ನು ಅಡಗಿಸಿಕೊಳ್ಳಲು ಸಾಧ್ಯವಿಲ್ಲ. ನಾಚಿ ಮುಚ್ಚುವ ಕಣ್ಣರೆಪ್ಪೆಗಳಲ್ಲಿಯೂ ಕೆಲವೊಮ್ಮೆ ನೂರು ಭಾವಗಳು ಹೊರಹೊಮ್ಮುತ್ತವೆ. ಯಾವಾಗ ಅವಳು ಇನ್ನೊಂದು ಜೊತೆ ಕಣ್ಣುಗಳಿಗೆ ಮೋಡಿ ಹಾಕಿದಳೋ ಅವಳಿಗೇ ತಿಳಿಯದು. ಆ ಕಣ್ಣುಗಳು ಗುರುಪುರಕ್ಕೆ ಬಂದಾಗ, ಗುರುಪುರದಿಂದ ದೂರ ಸರಿದಾಗ ಅವಳನ್ನೇ ತುಂಬಿಕೊಂಡು ಹೊಸ ಅಧ್ಯಾಯಕ್ಕೆ ನಾಂದಿ ಹಾಕಲಾರಂಭಿಸಿದವು.

ಇತ್ತೀಚೆಗೆ ಆ ಕಣ್ಣುಗಳನ್ನು ನೋಡಿದರೆ ಅವಳಿಗೆ ಮೆಲ್ಲನೆ ರೋಮಾಂಚನ ದೊಡನೆ ಹೆದರಿಕೆಯಾಗುತ್ತಿದೆ. ಅಡಿಗೆಕೋಣೆಯಲ್ಲಿ, ಹೊರಜಗಲಿಯಲ್ಲಿ, ಊಟದ ಮೇಜಿನ ಬದಿಯಲ್ಲಿ, ತೊಂಡೆಚಪ್ಪರದ ಕೆಳಗೆ ನೇರವಾಗಿ ಎದುರಿಸ ಬೇಕು ಕಣ್ಣುಗಳನ್ನು. ಏನಾದರೂ ಉತ್ತರಿಸಬೇಕು. ಅದೇ ಅವಳಿಗೆ ಹೆದರಿಕೆ !

ಶಾಂಭವಿ ಗೊಳ್ಳನೆ ನಕ್ಕುಬಿಟ್ಟಳು. "ಏನೇ ಹುಡುಗಿ, ಅವನ ಕಣ್ಣುಗಳಿಗೆ ಹೆದರಿ ಅವರ ಮನೆ ಕೆಲ್ಸಕ್ಕೆ ಹೋಗದೆ ಇದ್ದೀಯಲ್ಲ. ಅವನಂತೂ ಇಲ್ಲಿ ಇರುವವನಲ್ಲ. ಒಂದೆರಡು ದಿನ ಉಳಿದು ಬೆಂಗಳೂರಿಗೆ ಹೊರಟುಹೋಗ್ತಾನೆ. ಯಾಕೆ ಇನ್ನು ಹೆದರಿಕೆ ?"

"ಕೇವಲ ನೋಡಿದ್ದು ಮಾತ್ರವಲ್ಲ. ಮಾತನ್ನೂ ಆಡಿದರು !"

"ಏನು ಆಡಿದರು ?" ಕೆಣಕಿದಳು ಶಾಂಭವಿ.

"ಇಷ್ಟೊಂದು ರೂಪವತಿಯಾಗಿ ನೀನು ಬಡವರ ಮನೆಯಲ್ಲಿ ಹುಟ್ಟ ಬಾರದಿತ್ತು. ನಿನ್ನನ್ನು ನೋಡಿದರೆ ಕನಿಕರದ ಜೊತೆ ಪ್ರೀತಿ ಹುಟ್ಟುತ್ತದೆ, ಎಂದರು. ಅಷ್ಟೇ ಅಲ್ಲ, ಮೊನ್ನೆ ಮಲ್ಲಿಗೆಚಪ್ಪರದ ಹತ್ರ ಗುಟ್ಟಾಗಿ ಅಂದರು, 'ನಾನು ಶ್ರೀಮಂತ ಹುಡುಗಿಯರನ್ನೆಷ್ಟೋ ನೋಡಿದ್ದೇನೆ. ಆದರೆ ಯಾರೂ ನಿನ್ನ ಹಾಗಿಲ್ಲ. ನಿನ್ನನ್ನು ನೋಡಿದರೆ ನನ್ನ ಮನಸ್ಸು ಹೃದಯದಲ್ಲಿ ಒಂದು ಪ್ರಶಾಂತ ಭಾವ ಹುಟ್ಟುತ್ತದೆ.' "

"ಓ.....ಮತ್ತೇನು ಹೇಳಿದರು ? ಎಲ್ಲಾ ಹೇಳು."

ಶಾರದೆ ನಾಚಿ ನೀರಾದಳು. " 'ನನ್ನ ಮನಸ್ಸನ್ನೆಲ್ಲ ತುಂಬಿದವಳು ನೀನೊಬ್ಬಳೇ. ನಿನ್ನನ್ನೇ ಮದುವೆಯಾಗಬೇಕು ಎಂಬಾಸೆ. ನಿನಗೆ ಒಪ್ಪಿಗೆ ಇದೆಯಾ ?' ಎಂದು ಕೇಳಿದರು ನಿನ್ನೆ. ಅವರಿಗೆ ಏನೆಂದು ಉತ್ತರಿಸಬೇಕೋ ತಿಳಿಯಲಿಲ್ಲ."

"ಇದೇನು ಬಂತು ಪ್ರಾರಬ್ಧ ?" ಶಾಂಭವಿಯ ಹಣೆಯ ಮೇಲೆ ಮೂಡಿ ದವು ನಿರಿಗೆಗಳು. "ಅವರು ಆಕಾಶ, ನಾವು ಪಾತಾಳ. ಎಲ್ಲಿಯಾದರೂ ಹೊಂದಾಣಿಕೆ ಸಾಧ್ಯವೇ ? ಅವರ ಎತ್ತರಕ್ಕೆ ಏಣಿ ಇಡುವದು ನಮ್ಮಿಂದ ಸಾಧ್ಯವಿಲ್ಲ."

"ಗೊತ್ತು ನನಗೆ. ಅದಕ್ಕೆಂದೇ ಅಲ್ಲಿಗೆ ಹೋಗುವದನ್ನು ನಿಲ್ಲಿಸಿಬಿಡೋಣ ಎಂದುಕೊಂಡಿದ್ದೇನೆ. ಕಮಲಮ್ಮನಿಗೂ ಈಗ ತಮ್ಮನ ಮೇಲೆ ಸಂಶಯ ಬಂದಂತಿದೆ. ನಾಳೆ ನನ್ನಿಂದಾಗಿ ಇನ್ನೊಂದು ಹಗರಣವಾಗುವದು ಬೇಡ."

"ಸಧ್ಯ ನಿನ್ನ ಬುದ್ಧಿಗೆ ತೋಚಿತಲ್ಲ. ಜಯರಾಮುನನ್ನು ನೋಡಿದರೆ ತುಂಬಾ ಒಳ್ಳೆಯವನಂತೆ ಕಾಣಿಸುತ್ತಾನೆ. ಆದರೆ ಶಾರದೆ, ಅವನಿಗೇನು ಕೇಡು ಬಂತು ನಮ್ಮಂತಹ ಸುಧಾಮನ ಮನೆ ಸಂಬಂಧ ಬೆಳೆಸಲು? ಎಂಜಿನಿಯರ್ ಹುಡುಗ. ಲಕ್ಷಾಧೀಶರ ಮನೆ ಹುಡುಗಿಯೇ ಸಿಕ್ಕೀತು ಬಿಡು."

"ಆದರೆ ಅತ್ತಿಗೆ, ನಿನ್ನ ಹತ್ರ ಬಂದು ವಿಚಾರಿಸ್ತಾರಂತೆ."

"ಆ ಬಗ್ಗೆ ನನಗೆ ಭರವಸೆಯಿಲ್ಲ." ಊದಿನಕಡ್ಡಿಯ ಕೊನೆಯ ಬೆಳಕನ್ನು ನೋಡುತ್ತ ಅಂದಳು: "ಬಡವರು ಎಲ್ಲಿರಬೇಕೋ, ಹೇಗಿರಬೇಕೋ ಹಾಗೆ ಇದ್ದರೇ ಚೆಂದ!"

ಶಾರದೆ ಹೇಳಿದಂತೆ ಜಯರಾಮು ಶಾಂಭವಿಯೊಡನೆ ಮಾತನಾಡಲು ಬರಲಿಲ್ಲ. ಅವನು ಮರುದಿನವೇ ಬೆಂಗಳೂರಿಗೆ ಹೊರಟುಹೋದನೆಂಬ ಸುದ್ದಿ ತಿಳಿದುಬಂದಿತು!

14

ನಾಲ್ಕು ದಿನಗಳಿಂದಲೂ ಹರಿನಾರಾಯಣ ಚಳಿಜ್ವರದಲ್ಲಿ ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದಾನೆ. ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಏರಿಳಿಯುವ ಜ್ವರದ ಲಕ್ಷಣಗಳನ್ನು ನೋಡಿದರೆ ವಿಷಮಜ್ವರ ಇರಬಹುದೇ ಎನ್ನುವ ಸಂಶಯ. ಗುರುಪುರದ ವೈದ್ಯ ಬಾಟ್ಲಿ ತುಂಬಾ ನೀರು ಔಷಧಿ, ನಾಲ್ಕು ವರ್ಷಗಳ ಹಿಂದಿನ ಮಾತ್ರೆಗಳನ್ನು ನಿಷ್ಠೆಯಿಂದ ಕೊಡುತ್ತಾ ಇದ್ದ. 'ಇದೇನು ವಿಷಮಜರ್ವವಲ್ಲ, ಸುಮ್ಮನೆ ಗಾಬರಿ ನಿಮಗೆ—' ಎಂದಿದ್ದರಿಂದ ಶಾಂಭವಿಗೆ ಧೈರ್ಯ.

ಆ ದಿನ ಅನಿರೀಕ್ಷಿತವಾಗಿ ಅವಸರದಲ್ಲಿ ಓಡಿಬಂದಳು ಗಂಗಾ.

"ಒಂದು ವಿಷಯ ಗೊತ್ತೇ ನಿನಗೆ?" ಹೇಳುವ ಆತುರದಲ್ಲಿ ಒಳಕೋಣೆಯಲ್ಲಿ ಹರಿನಾರಾಯಣ ಮಲಗಿರುವದು ತಿಳಿಯಲಿಲ್ಲ.

"ಏನು ವಿಷಯ? ಬಾ ಕೂತ್ಕೋ."

"ಸಂತೋಷದ ವಿಷಯ. ಸರಕಾರ ಹೊಸದೊಂದು ಕಾನೂನು ಜಾರಿಗೆ ತರುತ್ತದೆಯಂತೆ. ಇನ್ಮೇಲೆ ನಾವು ಬೇಸಾಯ ಮಾಡ್ತಾ ಇರುವ ಗದ್ದೆಗಳೆಲ್ಲವೇ, ಅವೆಲ್ಲ ನಮ್ಮ ಸ್ವಂತಕ್ಕೆ ಆಗುತ್ತವಂತೆ."

"ಹೌದೇ? ಮೊನ್ನೆ ಯಾರೋ ಹೇಳಿದರು. ಪೇಪರಿನಲ್ಲಿಯೂ ಬಂದಿತ್ತಂತೆ. ನಂಗಂತೂ ಪೇಪರು ಓದಲು ಸಿಗುವದೇ ಇಲ್ಲ. ರೇಡಿಯೋ ಕೇಳೋಣವೆಂದರೆ ಮನೇಲಿ ಅದೂ ಇಲ್ಲ." ಅಸಮಾಧಾನಗೊಂಡಳು ಶಾಂಭವಿ.

"ರೇಡಿಯೋ, ಪೇಪರು, ಜನರ ಬಾಯಲ್ಲಿ ಎಲ್ಲಾ ಇದೇ ವಿಷಯ. ಇನ್ಮೇಲೆ ಧನಿ, ಒಕ್ಕಲು ಅಂತ ಇಲ್ಲವಂತೆ. ಭೂಮಿಯನ್ನು ಯಾರು ಬೇಸಾಯ ಮಾಡ್ತಾರೋ ಅವರಿಗೇ ಆ ಭೂಮಿ."

"ಅಂದರೆ ನಾವು ಗೇಣಿಗೆ ಬತ್ತ ಕೊಡುವದು ತಪ್ಪುತ್ತದೆ ಅನ್ನು."

"ಈ ತನಕ ಶಾಸ್ತ್ರಿಗಳ ಗದ್ದೆಯಾಗಿತ್ತಲ್ಲ ನಮ್ಮದು, ನಿಮ್ಮದು. ಇವೆಲ್ಲ ನಮ್ಮ ಸ್ವಂತದ್ದು ಆಗುತ್ತದೆ." ಗಂಗಾನ ಮುಖ ಅರಳಿತ್ತು, "ನಾವು ಕಷ್ಟಪಟ್ಟು ಬೆಳೆಸಿದ ಬೆಳೆಯನ್ನು ಶಾಸ್ತ್ರಿಗಳಿಗೆ ಕೊಡಬೇಕಾಗಿಲ್ಲ. ಎಷ್ಟು ಬೆಳೆಸುತ್ತೀವೆಯೋ ಅಷ್ಟು ನಮಗೇ!"

"ವ್ಹಾಹ್....ಇದಾದರೆ ಧರ್ಮ, ನ್ಯಾಯದ ಮಾತು! ಸರಕಾರ ಸರಿಯಾಗಿಯೇ ಆಲೋಚನೆ ಮಾಡಿದೆ. ಬಡವರ ರಕ್ತದಿಂದ ಬೆಳೆದ ಬೆಳೆ ಈವರೆಗೆ ಶ್ರೀಮಂತರ ಬೊಕ್ಕಸಕ್ಕೆ ಹೋಗ್ತಾ ಇತ್ತು. ಬೆವರಿನ ಬೆಳೆಯ ಅರ್ಥ ಶ್ರೀಮಂತರಿಗೆ ತಿಳಿದಿರಲೇ ಇಲ್ಲ."

"ಅದಕ್ಕೇ ಶಾಸ್ತ್ರಿಗಳಿಗೆ ತಲೆಬಿಸಿ." ಮೌನವಾಗಿ ಸುಮನಳನ್ನು ಆಡಿಸುತ್ತಿದ್ದ ಶಾರದೆ ಬಾಯಿ ತೆರೆದಳು, "ಅವರ ಆಸ್ತಿಯಲ್ಲಿ ಮುಕ್ಕಾಲು ಭಾಗ ಒಕ್ಕಲುಗಳ ಸ್ವಾಧೀನದಲ್ಲಿ ಇದೆಯಂತೆ. ಅವನ್ನು ಹೇಗೆ ಬಿಡಿಸಿಕೊಳ್ಳಬೇಕು ಎಂದು ಹಗಲು ರಾತ್ರೆ ಅವರಿಗೆ ಚಿಂತೆ."

"ಯಾವದೋ ಮುತ್ತಾತನ ಕಾಲದಲ್ಲಿ ನಾವು ಉಪಯೋಗಿಸುವ ಭೂಮಿ ಅವರದಾಗಿರಬಹುದು. ಸುಮ್ಮನೆ ಕಳೆದುಕೊಳ್ಳಬೇಕಲ್ಲ ಎನ್ನುವ ಚಿಂತೆ ಇದ್ದೀತು, ನಿಜ, ಆದರೆ ಒಂದ್ಮಾತು" ಯೋಚಿಸುತ್ತ ಅಂದಳು ಶಾಂಭವಿ, "ಗೇಣಿಕೊಡಬಾರದು, ಉಳುವವನಿಗೇ ಭೂಮಿ ಎನ್ನುವ ಕಾನೂನು ಮಾಡಿದ್ದರಿಂದ ಕೆಲವು ಭೂಮಾಲಿಕರಿಗೆ ನಷ್ಟವಾದರೂ ಲಕ್ಷಗಟ್ಟಲೆ ಬಡ ಗೇಣೀದಾರರಿಗೆ ಲಾಭವಾದೀತು."

"ಲಾಭವೆಲ್ಲಿಂದ ಬಂತು ಕರ್ಮ!" ಗಂಗಾ ಮುಖ ಸಿಂಡರಿಸಿದಳು, "ಗದ್ದೆಯಲ್ಲಿ ಬೆಳೆದದ್ದು ಗೇಣಿ ಕೊಡಲಿಕ್ಕಿಲ್ಲ ಎನ್ನುವ ಸಂತೋಷ ಅಷ್ಟೇ."

"ಆದರೂ ನಾವು ಬೆಳೆದ ಲಾಭನಷ್ಟ ನಮಗೇ ತಾನೇ. ನಷ್ಟವಾದರೂ ಹೊಟ್ಟೆಬಾಯಿಗೆ ಕಟ್ಟಿ ಧನಿಗಳಿಗೆ ಕೊಡುವದು ತಪ್ಪುತ್ತಲ್ಲ. ಗದ್ದೆ ನಷ್ಟ

ಮಾಡಲಿ ತೆಂಗೋ, ಬಾಳೆಯೋ ಬೆಳಸಿಕೊಂಡರೂ ಯಾರ ಅಪ್ಪ ಕೇಳ್ತಾನೆ ನಮ್ಮನ್ನ ?"

ಅಕ್ಷರಶಃ ನಿಜ ಎನ್ನಿಸಿತು ಗಂಗಾನಿಗೆ. "ಈ ಕಾನೂನನ್ನು ಬಹಳ ಹಿಂದೆಯೇ ಮಾಡಬೇಕಿತ್ತು. ಒಂದ್ಮಾತು, ನಮ್ಮ ಶಾಸ್ತ್ರಿಗಳಿಲ್ಲವೇ, ಅವರು ತಮ್ಮ ಭೂಮಿ ಸ್ವಾಧೀನಪಡಿಸಿಕೊಳ್ಳುವ ಹಂಚಿಕೆಯಲ್ಲಿದ್ದಾರಂತೆ."

"ಓ....ಈಗ್ಯಾರು ಬಿಟ್ಟುಕೊಡ್ತಾರೆ ಗೇಣಿ ಭೂಮಿಯನ್ನು ?"

"ಮನೆಗೆ ಕರೆಯಿಸಿ ಹಣದಾಸೆ ತೋರಿಸಿ ಪುಸಲಾಯಿಸ್ತಾ ಇದ್ದಾರಂತೆ. ಅವರು ಎಷ್ಟು ದಮ್ಮಯ್ಯಗುಡ್ಡೆ ಹಾಕಿದರೂ ನಾವಂತೂ ಸ್ಥಳ ಬಿಡ ಲಾರೆವು."

"ಮತ್ತೆ ನಾವು ಬಿಡ್ತೇವೆ ಅಂದ್ಕೊಂಡ್ಯಾ ? ಇರುವದೇ ಜೀವನಕ್ಕೆ ಆಧಾರ ವೆಂಬಂತೆ ತುಂಡುಭೂಮಿ. ಅದನ್ನೂ ಕೊಟ್ಟು ಕೈಮುಗಿದು ಹೋಗುವ ದಾದರೂ ಎಲ್ಲಿಗೆ ?"

ಶಾಂಭವಿ ತಮ್ಮ ವಿಶಾಲವಾದ ಗದ್ದೆಯತ್ತ ದೃಷ್ಟಿಹಾಯಿಸಿದಳು. ಇನ್ನು ಇಲ್ಲಿ ಬೆಳದುದೆಲ್ಲ ನಮ್ಮ ಸ್ವಂತಕ್ಕೆ, ನಾವೇ ಉಪಯೋಗಿಸಬಹುದು. ವರ್ಷಂ ಪ್ರತಿ ಕೊಡುವ ಹನ್ನೆರಡು ಮುಡಿ ಬತ್ತ ಮಿಕ್ಕಿದರೆ ಎಷ್ಟು ಹಣವಾಗ ಬಹುದು ? ಶಾಸ್ತ್ರಿಗಳಿಗೆ ಕೊಡುವ ಗೇಣಿಯನ್ನು ನಿಲ್ಲಿಸಿದರೂ ತಾನು ಆ ಬತ್ತದ ಹಣವನ್ನು ಪ್ರತ್ಯೇಕವಾಗಿ ಬ್ಯಾಂಕ್‌ನಲ್ಲಿ ಇರಿಸಬೇಕು. ಮುರುಕು ಗುಡಿಸಲನ್ನು ಅಳಿದು ಇಲ್ಲೊಂದು ಹಂಚಿನ ಮನೆಯನ್ನೂ ಕಟ್ಟಿಸಬೇಕು. ಎಲ್ಲರಂತೆ ತಾವು ಸ್ಥಿತಿವಂತರಾಗಬೇಕು. ಮಣ್ಣಿನ ಕಣಕಣದಲ್ಲಿ ಚಿನ್ನದ ಬೆಳೆಯನ್ನು ಬೆಳೆಸಿ ತಾವು ಮೇಲೇರಬೇಕು.

ಶಾಂಭವಿಯ ಮನಸ್ಸು ಕನಸಿನ ಗೋಪುರವನ್ನು ಸೃಷ್ಟಿಸಿತು. ತನ್ನಂತೆ ಇರುವ ಲಕ್ಷಗಟ್ಟಲೆ ಬಡಗೇಣೀದಾರರಲ್ಲಿ ಮಿಂಚುವ ಉಲ್ಲಸಿತ ನಗೆ, ತಮ್ಮ ದಾಗಿಹೋದ ಭೂಮಿಯ ಮೇಲೆ ಅವರಿಗಿರುವ ಕೃಷಿವ್ಯಾಮೋಹ, ಆ ತೃಪ್ತ ಭಾವ ಅವಳ ಮನದೆದುರು ಕಾಣಿಸಿಕೊಂಡಿತು.

"ಏನು ಯೋಚನೆ ಮಾಡ್ತಾ ಇದ್ದೀ ?" ಅಲ್ಲಿಂದೇಳುತ್ತ ಎಚ್ಚರಿಸಿದಳು ಗಂಗಾ, "ಇನ್ನೂ ಒಂದು ವಿಷಯ ಹೇಳಲು ಮರೆತೆ, ಬೀಡಿ ಕಾರ್ಮಿಕರೆಲ್ಲ ಮಜೂರಿ ಹೆಚ್ಚಿಸಬೇಕು ಎಂದು ಹರತಾಳ ಪ್ರಾರಂಭಿಸ್ತಾರಂತೆ."

"ಹೌದಾ ?" ಇಷ್ಟು ಹೊತ್ತು ಕೇಶವ ಎಲ್ಲಿದ್ದನೋ, ಆತುರದಿಂದ ನುಡಿದ : "ಹರತಾಳ ಮಾಡಲಿ. ನಾನು ಎಲ್ಲರಿಗಿಂತ ಮೊದಲು ಬಾವುಟ

ಹಿಡಿದುಕೊಂಡು ಮುಂದೆ ಹೋಗ್ತೇನೆ. ಬೀಡಿಮಜೂರಿ ಎಷ್ಟು ಹೆಚ್ಚಿಸಿದರೂ ನಮಗೆ ಕಡಿಮೆಯೇ ! ಈಗ ಸಿಗೋದು ಎಷ್ಟು, ಅತ್ತಿಗೆ....ತೇಪೂನ ಅದೂ ಇದೂ ತೆಗೆದು ಬರಿಯ ನಾಲ್ಕುವರೆ ರೂಪಾಯಿ ಅಲ್ಲವೇ...."

ಅಷ್ಟರಲ್ಲಿ ಹರಿನಾರಾಯಣ ನರಳುವ ಸದ್ದು ಕೇಳಿಸಿದ್ದರಿಂದ ಶಾಂಭವಿಗೆ ತಾನು ಒಲೆಯ ಮೇಲೆ ಬಿಸಿನೀರು ಇಟ್ಟು ಬಂದಿರುವದೂ ನೆನಪಾಯಿತು. ಇವತ್ತು ಬೆಳಗ್ಗೆಯಿಂದಲೂ ಅವನಿಗೆ ಎದೆನೋವು. ಯಾವದೋ ಕಾಡು ಸೊಪ್ಪು ತಂದು ಬಿಸಿಮಾಡಿ ಎದೆ ಬೆಚ್ಚಗೆ ಮಾಡಿದ್ದರೂ ಕಡಿಮೆಯಾಗಿರ ಲಿಲ್ಲ. ಶೀಶೆಯಲ್ಲಿ ಬಿಸಿನೀರು ತುಂಬಿಸಿ ಶಾಖ ಕೊಡಬಹುದು ಎಂದುಕೊಂಡು ನೀರಿಟ್ಟಿದ್ದಳು ಒಲೆಯ ಮೇಲೆ.

"ನಿನ್ನ ಗಂಡ ಮನೇಲಿ ಇದ್ದಾನೆಯೇ, ನಾನಿನ್ನು ಬರ್‍ತೇನೆ." ಗಂಗಾ ಹೊರಟುಹೋದಳು.

ಶಾಂಭವಿ ಬಿಸಿನೀರು ತುಂಬಿದ ಶೀಶೆಯನ್ನು ಕೋಣೆಗೆ ತಂದಾಗ ಹರಿ ನಾರಾಯಣ ಎದೆನೋವು ಮತ್ತು ಜ್ವರದಲ್ಲಿ ಸಂಕಟಪಡುತ್ತಾ ಇದ್ದ. ಐದನೇ ದಿನಕ್ಕೆ ಕಾಲಿಟ್ಟ ಜ್ವರ ಇನ್ನೂ ಕಡಿಮೆಯಾಗಲಿಲ್ಲವಲ್ಲ. ಕೇಶವನನ್ನು ಕರೆದು ಅವನ ಕೈಯಲ್ಲಿ ಹತ್ತು ರೂಪಾಯಿಯನ್ನಿಟ್ಟು "ಈಗಿಂದೀಗಲೇ ಗುರುಪುರದಿಂದ ವೈದ್ಯನನ್ನು ಕರೆದುಕೊಂಡು ಬಾ" ಎಂದೆಂದು ಓಡಿಸಿದಳು.

ಗುರುಪುರದಲ್ಲೋ ಪ್ರಸಿದ್ಧಿ ಪಡೆದ ವೈದ್ಯ ಮುತ್ತುಕೃಷ್ಣ. ಅವನಿಗೆ ನಾಲ್ಕು ಮೈಲು ದೂರ ಬರಲು ಕಾರು ಬೇಕೇಬೇಕು. ಬಂದ, ಪರೀಕ್ಷಿಸಿದ.

"ಇದು ವಿಷಮಜ್ವರ. ಎದೆಯಲ್ಲಿ ಕಫ ತುಂಬಿದೆ" ಎಂದೆಂದು ಎರಡು ಚುಚ್ಚುಮದ್ದನ್ನು ಚುಚ್ಚಿದ ಹರಿನಾರಾಯಣನ ಬಲತೋಳಿನ ಮೇಲೆ. ಚರ್ಮದಿಂದ ಮೂರು ವಿಧದ ಮಾತ್ರೆಗಳನ್ನೂ ಹೊರಗಿರಿಸಿದ. "ಮಾತ್ರೆ ಯನ್ನು ಮೂರು ಗಂಟೆಗೊಮ್ಮೆ ಕೊಡಿ. ಇದು ರಾತ್ರೆ ಮಲಗುವ ಮೊದಲು ಒಂದು ಮಾತ್ರೆ. ಎದೆಗೆ ಹಾಟ್‌ವಾಟರ್ ಬ್ಯಾಗ್‌ನಿಂದ ಶಾಖ ಕೊಡಿ. ಎಳೆ ನೀರು, ಹಾಲು ಕೊಡಿ. ಮುಸುಂಬಿ ರಸ, ಗ್ಲುಕೋಸ್ ತರಿಸಿ, ಇಲ್ಲವಾದರೆ ನಿಶ್ಶಕ್ತಿ ಬಂದೀತು. ಬಾರ್ಲಿನೀರು ಅಗತ್ಯವಾಗಿ ದಿನವೆಲ್ಲ ಆಗಾಗ ಕೊಡುತ್ತಾ ಇರಿ" ಎಂದು ದೊಡ್ಡ ವರದಿಯನ್ನೇ ಹೇಳುತ್ತ ತನ್ನ ಭೇಟಿಯ ಇಪ್ಪತ್ತೈದು ರೂಪಾಯಿ ಮತ್ತು ಔಷಧಿಯ ಶುಲ್ಕ ಹನ್ನೆರಡು ರೂಪಾಯಿಗಳನ್ನು ತೆಗೆದು ಕೊಂಡು ಮಂದಹಾಸ ಬೀರುತ್ತ ಬಂದ ಕಾರಿನಲ್ಲಿಯೇ ರಿಂಪ್‌ನೆ ಹೊರಟು ಹೋದ.

ಶಾಂಭವಿಯ ತಲೆಯೂ ಗಿರ್ರನೆ ತಿರುಗಿತು. ವೈದ್ಯ ಹೇಳಿದ ರೀತಿಯಲ್ಲಿ ಪಥ್ಯ, ಆರೈಕೆ ಆಗಲಾರಂಭಿಸಿದವು. ಖರ್ಚಿನ ಮುಖ ನೋಡದೆ ಮುಸುಂಬಿ, ಗ್ಲುಕೋಸ್ ತರಿಸಿದಳು. ಪ್ರತಿದಿನ ಒಂದರಂತೆ ಮೂರು ದಿನಗಳೂ ಮೂರು ಚುಚ್ಚುಮದ್ದನ್ನು ಚುಚ್ಚಿಹೋದ ಮುತ್ತುಕೃಷ್ಣ. ಮೂರು ದಿನಗಳೂ ಕಾರು ಓಡಾಡಿತು ಬಡಗುಡಿಸಲಿನ ಮುಂದೆ.

ಇದರೊಂದಿಗೆ ಚಳಿಚಳಿಯೆನ್ನುತ್ತ ವೇದಮ್ಮನೂ ಮಲಗಿಬಿಟ್ಟಳು. ವಿಷಮ ಜ್ವರ ಅವಳನ್ನೂ ಆಕ್ರಮಿಸಿಕೊಂಡಾಗ ಹೌಹಾರಿದಳು ಶಾಂಭವಿ. ತಾಯಿ-ಮಗ ಇಬ್ಬರ ಆರೈಕೆಯ ಹೊಣೆಯೂ ಬಿತ್ತು ಅವಳ ಮೇಲೆ. ಹರಿನಾರಾಯಣ ಜ್ವರ, ಎದೆನೋವಿನಿಂದ ತೀರಾ ಕಂಗಾಲಾಗಿದ್ದರಿಂದ ಅವನಿಗೆ ಎದ್ದು ಕುಳಿತುಕೊಳ್ಳುವ ಚೈತನ್ಯವಿರಲಿಲ್ಲ. ಆದರೂ ನರಳದೆ ಮೌನವಾಗಿ ಸಹಿಸಿ ಕೊಳ್ಳುತ್ತ "ನನ್ನಿಂದ ನಿನಗೆಷ್ಟು ತೊಂದರೆಯಾಗ್ತಾ ಇದೆ" ಎನ್ನುತ್ತಿದ್ದ, ಶಾಂಭವಿ ಹತ್ತಿರ ಬಂದಾಗ. ಆದರೆ ವೇದಮ್ಮನ ನರಳಾಟ ಅಸಹನೀಯ. ಜ್ವರದಿಂದ ಅವಳು ಹೇಳಿಕೊಳ್ಳುವಷ್ಟು ಸುಸ್ತಾಗಿರದಿದ್ದರೂ "ಅಬ್ಬೋ ಶಿವ್ನೋ, ಅಮ್ಮೋ ರಾಮಾ, ಅಯ್ಯಪ್ಪೋ" ಎಂದು ಎಲ್ಲರನ್ನೂ ಕೂಗಿ ಕರೆಯುತ್ತ ಎಲ್ಲರೂ ತನ್ನನ್ನೇ ಹೆಚ್ಚು ಆರೈಕೆ ಮಾಡಬೇಕು ಎನ್ನುತ್ತಾಳೆ.

ಹರಿನಾರಾಯಣನ ಜ್ವರ ನಿಂತು ಇನ್ನೇನು ಅವನು ಚೇತರಿಸಿಕೊಳ್ಳಬಹುದು ಎಂದುಕೊಳ್ಳುತ್ತಿದ್ದಂತೆ ಮತ್ತೆ ಮರುಕಳಿಸಿತು ಜ್ವರ. ಶಾಂಭವಿ ತಾನೇ ಓಡಿದಳು ಮುತ್ತುಕೃಷ್ಣನ ಬಳಿಗೆ. "ಎಲ್ಲೋ ಅಪಥ್ಯವಾಗಿರಬೇಕು. ನಿಮಗೆಲ್ಲ ಸರಿಯಾಗಿ ಆರೈಕೆ ಮಾಡುವದಕ್ಕೂ ತಿಳಿಯುವದಿಲ್ಲ", ರೇಗಿದ ಮುತ್ತುಕೃಷ್ಣ. ಮನೆಗೆ ಬಂದು ಪರೀಕ್ಷಿಸಿ. "ಜ್ವರ ಮರುಕಳಿಸಿದೆ! ಔಷಧಿ ಜೊತೆಯಲ್ಲಿ ಪಥ್ಯ, ಆರೈಕೆಯಿಲ್ಲದೆ ಹೋದರೆ ರೋಗಿ ಉಳಿಯುವದು ಕಷ್ಟ" ಎಂದ. ಜ್ವರ ನೂರಾ ಐದನ್ನು ಸೂಚಿಸುತ್ತಿತ್ತು. ತಣ್ಣೀರಿನ ಪಟ್ಟಿಯನ್ನು ತಲೆಯ ಮೇಲಿಡಲು ತಿಳಿಸಿ ಎಂದಿನ ಮಂದಹಾಸದೊಡನೆ ಹೊರಟುಹೋದ.

ಮುಂದೆ ಒಂದು ವಾರ ಮನೆಯ ವಾತಾವರಣ ಬದಲಾಗಿಹೋಯಿತು. ಶಾಂಭವಿ ಹಗಲು ರಾತ್ರಿ ಹರಿನಾರಾಯಣನ ಬಳಿಯಲ್ಲಿ ಕುಳಿತು ಅವನ ಆರೈಕೆ ಮಾಡಿದಳು. 'ನನಗೆ ಯಾವ ಅಷ್ಟೈಶ್ವರ್ಯಗಳೂ ಬೇಡ. ಈ ಮನೆ, ಭೂಮಿ ಯಾವುದೂ ಬೇಡ. ನನ್ನ ಹಣೆಯ ಕುಂಕುಮ ಭಾಗ್ಯವನ್ನು ಮಾತ್ರ ಎಂದೆಂದಿಗೂ ಅಳಿಸಬೇಡ' ಎಂದು ಮೊರೆಯಿಟ್ಟಳು ದೇವರಿಗೆ. ಪ್ರತಿದಿನ ಮುತ್ತುಕೃಷ್ಣ ಮನೆಗೆ ಬಂದು ರೋಗಿಯನ್ನು ಪರೀಕ್ಷಿಸಿ ಚುಚ್ಚು

ಮದ್ದು ಕೊಟ್ಟು ಹೋದ. ಇತ್ತ ವೇದನ್ಮ ಜ್ವರದಿಂದ ಚೇತರಿಸಿಕೊಳ್ಳು ತ್ತಿದ್ದಂತೆ ಹರಿನಾರಾಯಣ ಉಳಿಯುವ ಆಸೆಯನ್ನೂ ಕೈಬಿಡಲಾಯಿತು. ಶಾಂಭವಿಯ ಕಣ್ಣೆದುರು ಕಾಣಿಸಿತು, ಪೂರ್ಣ ಕಗ್ಗತ್ತಲು. ತನ್ನ ಬಾಳಿನಲ್ಲಿ ಅವನು ಇಲ್ಲವಾದರೆ ತಾನೆಲ್ಲಿಗೆ ಹೋಗಲಿ?

ಹಳ್ಳಿಯಲ್ಲಿ ಕೆಲವರು ಆಡಿಕೊಂಡರು, "ತಲೆಪಿರಕಿ ಹುಚ್ಚ ಬದುಕಿದರೂ ಒಂದೇ, ಸತ್ತರೂ ಒಂದೇ."

ಇನ್ನಾರೋ ಅಂದರು, "ಅಂಥವರು ಸತ್ತರೆ ಭೂಭಾರ ಸ್ವಲ್ಪ ಕಡಿಮೆ ಯಾಗಬಹುದು. ಮನೆಗೇ ಡಾಕ್ಟರರನ್ನು ಕರೆಯಿಸುವ ಬದಲು ಗುರುಪುರದ ಆಸ್ಪತ್ರೆಗೆ ಸೇರಿಸಬಹುದಿತ್ತು."

ಹರಿನಾರಾಯಣನನ್ನು ಉಳಿಸಲು ಮುತ್ತುಕೃಷ್ಣ ಕೊನೆಕೊನೆಯಲ್ಲಿ ನಿಜವಾಗಿಯೂ ಹೆಣಗಾಡಬೇಕಾಯಿತು. ಶಾಂಭವಿಯ ಕುಂಕುಮಭಾಗ್ಯ ಸ್ಥಿರವಾಗಿಯೇ ಇದ್ದಿರಬೇಕು, ಜೀವ-ಮರಣಗಳ ನಡುವೆ ತೂಗುಯ್ಯಾಲೆ ಯಾಡಿದ ಅವನು ಅಂತೂ ಕೊನೆಗೊಮ್ಮೆ ಜ್ವರದಿಂದ ಮುಕ್ತನಾಗಿ ಉಳಿ ಯುವ ಭರವಸೆಯನ್ನು ಹುಟ್ಟಿಸಿದ. ಮುತ್ತುಕೃಷ್ಣ ತನ್ನ ಶ್ರಮ ಸಾರ್ಥಕ ವಾಯಿತು ಎಂಬಂತೆ ತನ್ನ ಶುಲ್ಕಕ್ಕೆ ಇನ್ನೂ ಇಪ್ಪತ್ತು ರೂಪಾಯಿಗಳನ್ನು ಹೆಚ್ಚಿಗೆ ಸೇರಿಸಿಕೊಂಡ.

ಇದ್ದಕ್ಕಿದ್ದಂತೆ ಬೀಸಿಬಂದ ಬಿರುಗಾಳಿಯಲ್ಲಿ ಧೂಳು, ಕಸಕಡ್ಡಿಗಳು ಹಾರಿಹೋಗುವಂತೆ ಶಾಂಭವಿ ಕೂಡಿಸಿಟ್ಟ ರೂಪಾಯಿಗಳು ಫುರ್‌ನೆ ಹಾರಿ ಮುತ್ತುಕೃಷ್ಣನ ತಿಜೋರಿಯನ್ನು, ಬಾಡಿಗೆ ಕಾರಿನ ಚಾಲಕನ ಕಿಸೆಯನ್ನು ತುಂಬಿಬಿಟ್ಟವು. ಹಣ್ಣು, ಟಾನಿಕ್ಕು, ಇನ್ನಿತರ ಖರ್ಚುಗಳಿಗಾಗಿ ಅದೆಷ್ಟೋ ರೂಪಾಯಿಗಳು ಹಾರಿಹೋದವು. ಈ ಮಳೆಗಾಲ ಕಳೆದಮೇಲೆ ಹಂಚು ಹೊದೆ ಯಿಸಲು ಜೋಪಾನವಾಗಿರಿಸಿದ ರೂಪಾಯಿಗಳಲ್ಲಿ ಒಂದು ಬಿಡಿ ನಾಣ್ಯವೂ ಉಳಿದುಕೊಳ್ಳಲಿಲ್ಲ.

ಆರ್ಥಿಕ ಸಮಸ್ಯೆ ಕತ್ತಿಯ ಅಲಗಿನಂತೆ ತೂಗಾಡಿತು ತಲೆಯ ಮೇಲೆ. ಬಳ ದುರದೃಷ್ಟಕ್ಕೆ ಈವರೆಗೆ ನಾಲ್ಕಾರು ಕುಡ್ತೆ ಹಾಲು ಕೊಡುತ್ತಿದ್ದ ಡಕಲು ದನ ಗಬ್ಬ ವಿಟ್ಟದ್ದರಿಂದ ಪೂರ್ತಿಯಾಗಿ ಹಾಲನ್ನು ಬತ್ತಿಸಿಬಿಟ್ಟಿತು. ನ್ನು ಔಷಧಿಗೆ ಬೇಕೆಂದರೂ ಹಾಲನ್ನು ಹಣ ಕೊಟ್ಟು ಕೊಂಡುಕೊಳ್ಳ ಬೇಕು.

ಈ ನಡುವೆ ಅವಳು ನಾಲ್ಕು ತಿಂಗಳ ಗರ್ಭಿಣಿ. ಅವಳ ದೇಹ ಇದನ್ನು ಬಯಸದಿದ್ದರೂ ಮನಸ್ಸು ತನ್ನದೇ ಆದ ಇನ್ನೊಂದು ಕರುಳ ಕುಡಿಗಾಗಿ ಹಾರೈಸಿತ್ತು.

15

ತಿನಪಾಂಡಿ ಕೇಶವನಿಗೆ ವಿಪರೀತ ಆಸೆ. ತಿಂದಷ್ಟು ತೃಪ್ತಿಯಿಲ್ಲ. ಬುದ್ಧಿಯಲ್ಲಿ ಯಾವಾಗಲೂ ತಿನ್ನುವದೊಂದೇ ಯೋಚನೆ. ಆಟಪಾಟದಲ್ಲಿದ್ದರೂ ಅದೇ ಚಿಂತೆ. ಚಿಕ್ಕವನಿರುವಾಗ ಶಾಲೆ ಮುಗಿಸಿ ಮನೆಗೆ ಬಂದನೆಂದರೆ ಅವನಿಗಾಗಿ ಯಾವ ತರಹದ ತಿಂಡಿಗಳೂ ಕಾದು ಕುಳಿತಿರುವದಿಲ್ಲ. ರಾತ್ರಿಯ ಗಂಜಿ ಯಾವಾಗ ಸಿಗುತ್ತದೋ ಎಂದು ಬಾಯಿ ಚಪ್ಪರಿಸುತ್ತಾ ಕುಳಿತುಕೊಳ್ಳಬೇಕು. ಎಳೆ ಶಿಶುವಿನಿಂದಲೂ ಅವನಿಗೆ ಬೆರಳು ಚೀಪುವ ದುರಭ್ಯಾಸ. ದೊಡ್ಡವನಾದಮೇಲೆಯೂ ಹೊಟ್ಟೆ ಹಸಿವಾದಾಗ, ಬೆರಳು ಬಾಯಲ್ಲಿರುತ್ತದೆ. ಅದು ಅವನಿಗೆ, ಅವನ ಮನದ ಆಸೆಯ ಮುಂಡಿಗೆಗೆ ತೃಪ್ತಿಯೆದಗಿಸುವ ಆಹಾರ ವಸ್ತು!

ತರಕಾರಿಗಳಾಗುವ ಸಮಯದಲ್ಲಿ ಹಸಿತರಕಾರಿಗಳೆಲ್ಲ ಇವನ ಹೊಟ್ಟೆಗೆ. ಮುಳ್ಳುಸವತೆಗಳ ಎಳೆಮಿಡಿ, ತೊಂಡೆಕಾಯಿ, ಎಳೆಬೆಂಡೆಕಾಯಿ ಕುಯ್ದು ಕಚಕಚನೆ ತಿಂದುಬಿಡ್ತಾನೆ. "ಹಸಿಹಸಿಯಾಗಿ ತಿನ್ನುತ್ತೀಯಲ್ಲೋ, ನೀನು ಮಂಗನ ಜಾತಿಯವನಿರಬೇಕು" ಎಂದು ಅತ್ತಿಗೆಯಾಗಲಿ, ಅಣ್ಣನಾಗಲಿ ಗದರಿಸಿದರೆ ಅವನು ಕಿವಿ ಮುಚ್ಚಿಕೊಂಡು ನಗುತ್ತಾನೆ.

ಶಾಲೆಯಲ್ಲಿ ಅವನು ಬುದ್ಧಿವಂತನಾಗಿರಲಿಲ್ಲ. ಹಾಗೆಂದು ತೀರ ದಡ್ಡನೂ ಅಲ್ಲ. ನಾಲ್ಕನೇ ಕ್ಲಾಸು ಓದಿಯಾದಮೇಲೆ ಮುಂದಕ್ಕೆ ಕಲಿಯುವ ಆಸೆಯಿದ್ದರೂ ಆರ್ಥಿಕ ಸ್ಥಿತಿಯಿಂದಾಗಿ ಅರ್ಧಕ್ಕೆ ನಿಂತಿತ್ತು ಅವನ ಓದು. ಆಮೇಲೆ ಮನೆಯಲ್ಲಿ ಸುಮ್ಮನೆ ನೊಣಹೊಡೆಯುತ್ತ ಕಾಲ ತಳ್ಳುತ್ತಿದ್ದಾಗ ಉದರಾಗ್ನಿಯ ತೀಕ್ಷ್ಣತೆ ಇನ್ನೂ ಹೆಚ್ಚಿತು. ಅಡಿಗೆಕೋಣೆಯ ಪ್ರತಿಯೊಂದು ಡಬ್ಬಿಯನ್ನೂ ತೆಗೆದು ಅಷ್ಟಿಷ್ಟು ಕದ್ದು ತಿನ್ನಬೇಕು. ಪದಾರ್ಥಕ್ಕೆಂದು ತರಿಸಿದ ತೆಂಗಿನಕಾಯಿ ಮರೆತು ಅಲ್ಲೇ ಹಲಗೆಯಲ್ಲಿರಿಸಿದರೆ ಅನಂತರ ಅದು ಪತ್ತೆಯೇ ಇರುವದಿಲ್ಲ. ವೇದಮ್ಮ ಆಚೀಚೆ ಹುಡುಕುತ್ತ "ಯಾವ ಹೆಗ್ಗ

ಕಚ್ಚಿಕೊಂಡುಹೋಯ್ತೋ” ಎನ್ನುವಾಗ ಇವನಿಗೆ ಹೊಟ್ಟೆಯಲ್ಲಿ ಕುಲುಕು ವಂತಹ ನಗು. ಅತ್ತಿಗೆ ಬಂದಮೇಲೆ ತೆಂಗಿನಕಾಯಿಯ ಸಣ್ಣ ಚೂರುಗಳೂ ತಿನ್ನಲು ಸಿಗುವದಿಲ್ಲ. ಎಲ್ಲಿ ಅಡಗಿಸಿಡುತ್ತಾಳೋ ಅವನಿಗೇ ತಿಳಿಯದು.

ಏನಾದರೊಂದು ಕೆಲಸದ ನಿಮಿತ್ತ ಶಾಸ್ತ್ರಿಗಳ ಮನೆಗೆ ಹೋದರೆ ಅಲ್ಲಿ ಅಪರೂಪಕ್ಕೆ ಹೂವಿನಂತೆ ಮೃದುವಾದ ದೋಸೆ ಮತ್ತು ನೀರುಳ್ಳಿ, ಬಟಾಣಿ ಬೆರಸಿದ ಪಲ್ಯ ತಿನ್ನಲು ಸಿಗುತ್ತದೆ. ಎಂತಹ ರುಚಿಯಾದ ದೋಸೆ! ಬಾಯಿ ಗಿಟ್ಟರೆ ಹತ್ತಿಯಂತೆ ಕರಗಿಹೋಗುವದು ತಿಳಿಯುವದೇ ಇಲ್ಲ. ಇಪ್ಪತ್ತು ದೋಸೆಗಳನ್ನು ಸುಲಭದಲ್ಲಿ ತಿನ್ನಬಹುದು. ಅಂತಹದೇ ದೋಸೆ ಮಾಡಲು ಅವನು ಅತ್ತಿಗೆಗೆ ಹೇಳಿದ್ದರೂ ಅವಳು ಮಾಡುವ ದೋಸೆಯ ರುಚಿ ಬೇರೆ.

ತಾನೊಬ್ಬ ದೊಡ್ಡ ಶ್ರೀಮಂತನಾಗಿದ್ದರೆ....ಹೌದು, ಆಗ ಎಣ್ಣೆಯಲ್ಲಿ ಹುರಿದ ತಿಂಡಿಯನ್ನು ದಿನವೂ ತಿನ್ನಬಹುದಿತ್ತು. ತುಪ್ಪದಿಂದ ಮಾಡಿದ ಸಿಹಿ ಅನ್ನ, ತುಪ್ಪದ ಉಂಡೆ ಇನ್ನೂ ಹಲವು ಭಕ್ಷ್ಯಗಳನ್ನು ಮನಸ್ವೀ ಸೇವಿಸ ಬಹುದು. ಅವತ್ತು ಶಾಸ್ತ್ರಿಗಳ ಮನೆ ಮದುವೆಯಲ್ಲಿ ಮಾಡಿದ ಜಿಲೇಬಿ ಮರೆಯುವಂತಹಲ್ಲ. ನಮ್ಮ ಮನೆಗಳಲ್ಲಿ ಕನಸಿನಲ್ಲೂ ನೋಡಲು ಸಾಧ್ಯ ವಿಲ್ಲ ಎಂದು ತನ್ನೊಳಗೇ ರೇಗುತ್ತಾನೆ.

ಮನೆಯಲ್ಲಿ ಕೆಲಸವಿಲ್ಲದಾಗ ಅವನಿರುವದು ಹತ್ತಿರದ ಕಾಡಿನಲ್ಲಿ. ಕಪ್ಪಾದ, ಒರಟಾದ, ಎಣ್ಣೆ ಕಾಣದ ತಲೆಗೂದಲನ್ನು ಸವರಿಕೊಳ್ಳುತ್ತ ಒಂದು ಕೈಯಲ್ಲಿ ಹರಿತವಾದ ಕತ್ತಿ, ಇನ್ನೊಂದು ಕೈಯಲ್ಲಿ ಅಥವಾ ಕಂಕುಳಲ್ಲಿ ಉದ್ದದ ದೊಣ್ಣೆಯಿಟ್ಟುಕೊಂಡು ದೊಡ್ಡ ಮನುಷ್ಯನಂತೆ ಕಾಡಿನಲ್ಲಿ ಅಲೆಯುತ್ತಾನೆ. ಮಳೆಗಾಳಿ ಬೀಸಿದರೂ ಅವನಿಗೆ ಲಕ್ಷ್ಯವಿಲ್ಲ. ನೆತ್ತಿ ಕಾಯುವ ಸುಡುಬಿಸಿ ಲಾದರೂ ಅವನಿಗೆ ಲೆಕ್ಕವಿಲ್ಲ. ಶಾಲೆಯಲ್ಲಿ ಕಲಿತ ‘ತಿರುಕನೋರ್ವ ಊರ ಮುಂದೆ ಮುರುಕು ಧರ್ಮಶಾಲೆಯಲ್ಲಿ—’ ಎಂಬ ಹಾಡನ್ನು ಹಾಡುತ್ತ ತಿರುಗುತ್ತಾನೆ. ಕೆಲವೊಮ್ಮೆ ಕೇಕೆ ಹಾಕುತ್ತ, ಕೋಲಿನಿಂದ ನೆಲವನ್ನು ಆಗಾಗ ಕುಟ್ಟುತ್ತಾ ಇರುತ್ತಾನೆ. ಆಗ ಅವನ ದೃಷ್ಟಿ ಎತ್ತರವಾದ ಮರಗಳ ನ್ನೆಲ್ಲ ಹುಡುಕುತ್ತವೆ. ಎತ್ತರದ ಮರಗಳ ತುದಿಯಲ್ಲಿ ಎಲ್ಲೋ ಹೆಜ್ಜೇನು ಗಳ ಗೂಡು ಕಾಣುವದುಂಟು. ಆಗ ಬಾಯಲ್ಲಿ ನೀರು. ಜೇನಿನ ಎರಿ ಸಿಕ್ಕಿದರೆ ಎಷ್ಟು ಗಮ್ಮತ್ತಾಗಿ ತಿನ್ನಬಹುದು. ಅಪರೂಪಕ್ಕೆ ತಗ್ಗಾದ ಮರದ ಪೊಟರೆ ಯೊಳಗೆ ಜೇನು ಸಿಗುವದಿತ್ತು. ಆಗ ಅವನ ಸಂತೋಷಕ್ಕೆ ಮಿಗಿಲುಂಟೇ? ಹೇಗೋ ಕಷ್ಟಪಟ್ಟು ಜೇನು ಹಿಡಿದು ಗುಟ್ಟಾಗಿ ಅಲ್ಲೇ ಕುಳಿದು ಅಂಗಿಯಲ್ಲಿ

ಬಾಯೊರಸಿಕೊಂಡು ಬಂದದ್ದುಂಟು. ಮತ್ತೆ ಕೆಲವೊಮ್ಮೆ ಹಾಗೆ ಜೇನು ತೆಗೆಯುವಾಗ ಎಷ್ಟೋ ಹುಳಗಳು ಅವನನ್ನು ಕಚ್ಚಿ ಹಿಂಸಿಸಿದ್ದು ಮರೆಯುವದಿಲ್ಲ.

ಬಡಮಕ್ಕಳಿಗೆ ನಿಸರ್ಗವೂ ಕೆಲವು ಉಪಕಾರ ಮಾಡಿದೆ. ಧಾರಾಳವಾಗಿ ಬೆಳೆಯುವ ಕುಂಟಾಲ, ಕೇಪಳೆ, ನೇರಳೆ, ಅತ್ತಿಹಣ್ಣುಗಳೆಲ್ಲ ಇವನ ಪಾಲಿಗೆ ವರಪ್ರಸಾದ. ಗೇರುಹಣ್ಣಿನ ಸಮಯದಲ್ಲಿ ಯಾರ ಕಾಪಾದರೇನು, ಸ್ಥಳವಾದರೇನು, ಅವನು ಅತ್ತ ಗಮನ ಕೊಡದೆ ಕೈಗೆ ಸಿಕ್ಕ ಗೇರುಹಣ್ಣನ್ನು ಕುಯ್ದು ಹೊಟ್ಟೆಗೆ ತುಂಬಿಸಿಕೊಂಡು ಬೀಜಗಳನ್ನು ಗುಟ್ಟಾಗಿ ತಿಂದು ಮುಗಿಸುತ್ತಾನೆ. ಕತ್ತಿಯ ತುದಿಯಿಂದ ಅದರ ಒರಗುಸಿಪ್ಪೆ ತೆಗೆಯುವದು ಕಷ್ಟಕರ. ಹಾಗೆಂದು ಮನೆಗೆ ತಂದರೆ ಅದನ್ನು ಬೆಂಕಿಯಲ್ಲಿ ಸುಡುವಾಗ ಎಲ್ಲರ ನಾಸಿಕವೂ ಅರಳಿ ಧಾವಿಸಿಬರುತ್ತಾರೆ. ಆಗ ಒಂದು ಚಿಕ್ಕ ತುಂಡೂ ಇವನಿಗೆ ಸಿಗದು. ಎಲ್ಲಿ ಹಣ್ಣು ಕುಯ್ಯುತ್ತಾನೋ ಅಲ್ಲಿ ಅದರ ಬೀಜವನ್ನೂ ಸುಲಿದು ಹೊಟ್ಟೆಗೆ ಅರ್ಪಿಸಿಬಿಟ್ಟರೆ, ಅವನು ಗೆದ್ದ ! ಹುಣಿಸೇಮರ ಚಿಗುರು ಹೂವು ಬಿಡುವ ಸಮಯದಲ್ಲಿ ಅವನ್ನೆಲ್ಲ ಕುಯ್ದು ತಿನ್ನುತ್ತಾನೆ. ಮಾಧವ ತಮಾಷೆ ಮಾಡುತ್ತಿದ್ದ, "ಆಡಿನಂತೆ ಕುಡಿ, ಎಲೆ, ಸೊಪ್ಪು ತಿಂತಾ ಇದ್ದೀಯಲ್ಲ. ನಿನ್ನ ಹೊಟ್ಟೆಯಲ್ಲಿ ಭೂತ ನುಗ್ಗಿದೆಯೇನೋ ?"

ಆಸೆಯ ಭೂತ ನುಗ್ಗಿದ್ದು ನಿಜ, ಆ ಭೂತವನ್ನು ಹೇಗೆ ಓಡಿಸಬೇಕು ಎಂದು ತಿಳಿಯದು. ಅಣ್ಣ ಮತ್ತು ಅಮ್ಮ ವಿಷಮಜ್ವರದಲ್ಲಿ ಮಲಗಿದ ಮೇಲೆ ಅತ್ತಿಗೆಯ ಕೈ ಯಾಕೋ ತುಂಬಾ ಬಿಗಿಯಾಗಿಹೋಗಿದೆ. ಸಪ್ಪೆ ಸಾರು, ಅನ್ನ, ಗಂಜಿ ಇಷ್ಟೇ. ಅವನಿಗಂತೂ ತೀರಾ ಬೇಸರ.

ಈಗ ಹಲಸು, ಮಾವಿನಕಾಯಿಗಳಾಗುವ ಸಮಯ. ಆದರೆ ಅವನ ಮನೆಯ ಎಳೆಗಿಡಗಳಲ್ಲಿ ಕಾಯಿಗಳಾಗುವದು ಯಾವ ರಾಯನ ಕಾಲಕ್ಕೋ! ಅತ್ತಿಗೆ ನೆಟ್ಟ ಗಿಡಗಳು ಇನ್ನೂ ಅವನಷ್ಟು ಎತ್ತರಕ್ಕೆ ಬೆಳೆದಿವೆ. ಶಾಸ್ತ್ರಿಗಳ ಮನೆಯಿಂದ ಪ್ರತಿವರ್ಷ ಒಂದೊಂದು ಹಲಸಿನಕಾಯಿ, ಸ್ವಲ್ಪ ಕಶಿಮಾವಿನ ಕಾಯಿಗಳೂ ಸಿಗುವದುಂಟು. ಆದರೆ ಮನೆಯಲ್ಲಿ ಹಂಚಿ ತಿನ್ನುವಾಗ ಅವನಿಗೆ ಸಿಗುವದು ಸಣ್ಣ ಪಾಲು. ಹಲಸಿನ ಬೀಜಗಳನ್ನು ಅತ್ತಿಗೆ ಪದಾರ್ಥ ಮಾಡಿಯೇ ಮುಗಿಸಿಬಿಡುತ್ತಾಳೆ. ಒಂದೆರಡು ಬಾರಿ ಬೇಯಿಸಿ ಒಣಗಲು ಬಿಸಿಲಿಗೆ ಇಟ್ಟಿದ್ದಳು. ಆದರೆ ಅದು ಇಟ್ಟಲ್ಲೇ ಮಾಯ !

ಈ ದಿನ ಮನೆಯಲ್ಲಿ ಕುಳಿತು ಬೇಸರ ಬಂದಿತ್ತು. ಬೀಡಿಕಟ್ಟಿ ಸೋತಿತ್ತು ಬೆನ್ನು. ಸರಿ, ಕತ್ತಿದೊಣ್ಣೆಯನ್ನು ಎತ್ತಿಕೊಂಡು ಸೀದಾ ಕಾಡಿಗೆ ಪಲಾಯನ ಮಾಡಿದ. ಮನೆಯಲ್ಲಿ ಸಿಗದೇ ಇದ್ದದ್ದು ಕಾಡಿನಲ್ಲಾದರೂ ಸಿಕ್ಕೀತು ಎನ್ನುವ ಆಸೆ. ನಾಲ್ಕಾರು ಹೆಜ್ಜೆ ಹಾಕಿರಬಹುದು, ಕೆಳಬೈಲಿನ ಆಚೆ ಹೊಲೆಯರ ದಿಬ್ಬೆನೆಯಲ್ಲಿ (ಗುಡಿಸಲು) ನಾಲ್ಕಾರು ಜನ ಒಟ್ಟಿಗೆ ಕುಳಿತು ದೊಡ್ಡದಾದ ಹಲಸಿನ ಹಣ್ಣನ್ನು ಭಾಗಮಾಡಿಕೊಂಡು ತಿನ್ನುವದು ಕಾಣಿಸಿತು. ಒಂದು ಕ್ಷಣ ನಿಂತು ನೋಡಿ 'ತಥ್' ಎಂದು ಮಾರು ದೂರ ಉಗುಳಿದ. ಇವನಂತೆ ಜೊಲ್ಲು ಸುರಿಸುತ್ತಿದ್ದ ನಾಯಿಯೊಂದು ಓಡಿತು ಅಲ್ಲಿಂದ.

"ಎಂತಮೋ, ಎಲ್ಲಿಗ್ಹೋಗ್ತೀ ?" ಸ್ವರ ಕೇಳಿಸಿದಾಗ ಗಕ್ಕನೆ ನಿಂತ ; ಕರೆ ದದ್ದು ಹಿತ್ತಲುಮನೆಯ ವೆಂಕ್ಟ. ಹಲಸಿನ ಬೇಳೆಯನ್ನು ಬಾಯಿಗೆ ತುಂಬಿಸಿ ಕೊಳ್ಳುತ್ತ ಹತ್ತಿರ ಬಂದಾಗ ಮೂಗರಳಿಸಿದ ಕೇಶವ.

"ಏನು ತಿನ್ತಾ ಇದ್ದೀ ?"

"ಒಣಗಿದ ಹಲಸಿನ ಬೇಳೆ." ಅವನ ಎದುರಿನಲ್ಲಿಯೇ ಕಿಸೆಯಲ್ಲಿ ತುಂಬಿಸಿ ಕೊಂಡಿದ್ದ ಬೇಳೆಯಲ್ಲಿ ಒಂದನ್ನು ಬಾಯಿಗೆಸೆದುಕೊಂಡ ವೆಂಕ್ಟ.

"ಒಣಗಿ ಮರುಭೂಮಿಯಾದ ಅವನ ಉದರ ಭಗ್ಗನೆ ಹೊತ್ತಿಕೊಂಡಿತು. ನಾಚಿಗೆಯಿಲ್ಲದೆ ಕೈಚಾಚಿದ, ತನಗೊಂದು ಕೊಡು ಎಂದು. ಅವನು ಕೊಡುವ ದಕ್ಕೆ ತಂದಿದ್ದನೇ ? "ನಿನಗೆ ಲೊಟ್ಟೆ ಕೊಡ್ತೇನೆ" ಎಂದು ಕೈಮುಷ್ಟಿ ತಿರುವಿ ತನ್ನ ಪಾಡಿಗೆ ತಾನು ಹೊರಟುಹೋದ.

ಕೇಶವನ ಕಣ್ಣುಗಳಲ್ಲಿ ನೀರು ತುಂಬಿಬಂತು. ಹಲ್ಲುಗಳನ್ನು ಸುಮ್ಮನೆ ಅಗೆಯುತ್ತ ಹೆಬ್ಬೆರಳನ್ನು ಬಾಯಲ್ಲಿರಿಸಿಕೊಂಡ. ಕಾಡಿನಲ್ಲಿ ಅಲೆಯುವ ಹುಮ್ಮಸ್ಸು ಹೊರಟುಹೋಯಿತು. ಕತ್ತಿಯಿಂದ ಹತ್ತಿರದ ಮರದ ಕಾಂಡಕ್ಕೆ ನಾಲ್ಕಾರು ಬಾರಿ ಹೊಡೆದ. ಇನ್ನೆಲ್ಲಿಗೆ ಹೋಗಲಿ ? ನೋಡೋಣ, ಶಾಸ್ತ್ರಿಗಳ ಮನೆಗೆ ಹೋಗಿ ಒಂದು ಸಣ್ಣ ಹಲಸಿನ ಹಣ್ಣನ್ನು ಕೇಳಿ ತಂದರೆ ಹೇಗೆ ? ಅತ್ತಿಗೆಗೂ ಖುಷಿಯಾಗಬಹುದು. ಶಾಸ್ತ್ರಿಗಳು ಇಲ್ಲ ಎನ್ನುವವರಲ್ಲ. ಅವನು ತಡಮಾಡದೆ ಸರಸರನೆ ಮುಂದೆ ಹೆಜ್ಜೆ ಹಾಕಿದ.

ರಂಗಪ್ಪಾಚಾರಿಯು ಗದ್ದೆಯ ಏರಿಯನ್ನು ಹತ್ತಿ ಕೆಳಗಿಳಿದು ಮುಂದೆ ನಡೆಯುತ್ತಿದ್ದಾಗ ಗಕ್ಕನೆ ತಡೆದು ನಿಂತವು ಕಾಲುಗಳು. ಮುಳ್ಳುಬೇಲಿಯ ಆಚೆ ಕೆಳಮನೆ ಗೌಡರ ಅಡಿಕೆ ತೋಟ. ಬೇಲಿಗೆ ಹೊಂದಿಕೊಂಡು ದೊಡ್ಡ ದಾದ ಹಲಸಿನ ಮರ. ಅಬ್ಬಬ್ಬ, ಹತ್ತಿರ ಹತ್ತಿರ ದ್ರಾಕ್ಷೆಗೊಂಚಲಿನಂತೆ

ಎಷ್ಟು ಕಾಯಿಗಳು ! ನಾಲ್ಕಾರು ದೊಡ್ಡ ದೊಡ್ಡ ಕಾಯಿಗಳು ಕೈಗೆ ಎಟಕು ವಂತೆ ಕೆಳಗೇ ಇವೆ. ತೋಟದ ಬದಿಗೆ ಗೌಡರ ಮನೆಯವರು ಸುಳಿದಿರಲಾರರು. ಬೆಳೆದ ಕಾಯಿಯನ್ನು ಕುಯ್ಯದೆ ಇಟ್ಟಿದಾರಲ್ಲ.

ಕೇಶವನ ಬುದ್ಧಿ ಮಿಂಚಿನಂತೆ ಓಡಿತು. ಸುತ್ತಲೂ ನೋಡಿದರೆ ಒಂದೆರಡು ಕೋಳಿ, ಕಾಡುಹೂವು, ನಾಯಿಗಳ ಹೊರತಾಗಿ ಇನ್ನಾರೂ ಇಲ್ಲ. ಮುಳ್ಳು ಬೇಲಿಯನ್ನು ದಾಟಿ ಒಳಗೆ ಹೋದರೆ ಸುಲಭವಾಗಿ ಒಂದು ಹಲಸಿನ ಕಾಯಿ ಯನ್ನು ತೆಗೆದುಕೊಂಡು ಬರಬಹುದು. ಅವನು ಬೇಲಿ ಸಮೀಪಕ್ಕೆ ಬಂದ. ಕಬ್ಬಿಣದ ಮುಳ್ಳುಬೇಲಿ ಅವನು ಯೋಚಿಸಿರುವದಕ್ಕಿಂತಲೂ ಭದ್ರವಾಗಿತ್ತು. ಬೇಲಿಯನ್ನು ಸರಿಸಿ ಒಳಹೋಗುವದು ಅಸಾಧ್ಯ. ಬೇಲಿಗೆ ಆಧಾರಕೊಟ್ಟ ಗೂಟಗಳನ್ನು ಕೈಯಿಂದ ಅಲುಗಾಡಿಸಿ ನೋಡಿದ. ಅವೂ ಭದ್ರವಾಗಿ ನೆಲ ಕಚ್ಚಿ ಕುಳಿತಿವೆ. ತಡ ಮಾಡಲಿಲ್ಲ. ಕತ್ತಿಯನ್ನು ಚಡ್ಡಿಗೆ ಸಿಕ್ಕಿಸಿಕೊಂಡು ಕಂಬದ ಮೇಲೆ ಕಷ್ಟಪಟ್ಟು ಹತ್ತಿ ಠಣ್ಣನೆ ಒಳತೋಟಕ್ಕೆ ಹಾರಿದ.

ಆತ ಒಳಗೆ ಬಂದಮೇಲೆ ಅವಲಕ್ಕಿ ಕುಟ್ಟಲಾರಂಭಿಸಿತು ಎದೆಯಲ್ಲಿ. ಯಾರಾದರೂ ತನ್ನನ್ನು ನೋಡಿದರೆ ಸುಮ್ಮನೆ ಬಿಡುತ್ತಾರೆಯೇ ? ಬೇಗ ಇಲ್ಲಿಂದ ಕೆಲಸ ಮುಗಿಸಿ ಜಾರಿಕೊಳ್ಳುವದು ಜಾಣತನದ ಲಕ್ಷಣ. ಹಲಸಿನ ಮರದ ಕೆಳಗೆ ಬಂದು ನಿಂತ. ಅವನ ಕೈಗೆ ಸಿಗುವಷ್ಟು ಹತ್ತಿರದಲ್ಲಿ ಬೆಳೆದ ಕಾಯಿಗಳನ್ನು ನೋಡಿ ಸ್ವರ್ಗ ಮೂರೇ ಗೇಣು. ಹದವಾಗಿ ಬೆಳೆದ ಕಾಯಿಗಳು ಇಟ್ಟರೆ ಎರಡೇ ದಿನಗಳಲ್ಲಿ ಹಣ್ಣಾಗುತ್ತದೆ. ಚಡ್ಡಿಗೆ ಸಿಕ್ಕಿಸಿದ ಕತ್ತಿಯನ್ನೆಳೆದು ಬೆಳೆದ ದೊಡ್ಡ ಕಾಯಿಯನ್ನೇ ಕೊಯ್ದು ಮೆಲ್ಲನೆ ಕೈಗಳಲ್ಲಿ ಹಿಡಿದುಕೊಂಡ. ಬಹಳ ದೊಡ್ಡ ಕಾಯಿ. ಮೇಲಿನಿಂದ ಬಿದ್ದರೆ ಈಗಲೇ ಒಡೆದುಹೋಗಬಹುದೇನೋ. ನಿಧಾನವಾಗಿ ಮುಳ್ಳುಬೇಲಿಯ ಕೆಳಗಿನಿಂದ ಸರಿಸಿ ಆಚೆಗೆ ನೂಕಿದ. ಬೇಲಿ ದಾಟಿ ಉರುಳಿತು ಹಲಸಿನ ಕಾಯಿ. ಕೇಶವನ ಕಣ್ಣುಗಳು ಮತ್ತೊಮ್ಮೆ ಸುತ್ತಲೂ ನೋಡಿದವು, ಸಧ್ಯ, ಯಾರೂ ತನ್ನನ್ನು ಗಮನಿಸುತ್ತಾ ಇಲ್ಲ. ಕತ್ತಿಯನ್ನು ಮತ್ತೆ ಚಡ್ಡಿಗೆ ಸಿಕ್ಕಿಸಿಕೊಂಡು ಬೇಲಿಯ ಮೇಲೆ ನಿಧಾನವಾಗಿ ಪಾದ ಊರಿ ಕಂಬ ಹಿಡಿದು ಹೊರಗೆ ಹಾರಿದ. ಆದರೆ ಈ ರಭಸದಲ್ಲಿ ಅಂಗಿಯ ಒಂದು ಬದಿ ಹರಿಯಿತು. ಮೊಣಗಂಟಿಗೂ ಮುಳ್ಳು ಗೀರಿ ರಕ್ತ ಸೋರಿತು. ಹಲಸಿನ ಕಾಯಿ ಕೈಗೆ ಸಿಕ್ಕಿದ ಸಂತೋಷದಲ್ಲಿ ಇದು ಗಮನಕ್ಕೇ ಬರಲಿಲ್ಲ.

ಕಾಯಿಯನ್ನು ತಲೆಯ ಮೇಲಿಟ್ಟುಕೊಂಡು ಬೀಸುಗಾಲು ಹಾಕುತ್ತ ಹೊರಟುಬಿಟ್ಟ ಅಲ್ಲಿಂದ. ಗೌಡರ ತೋಟ ದಾಟಿದಮೇಲೆ ಸಮಾಧಾನದ ನಿಟ್ಟುಸಿರು ತೆಗೆದ. ಇನ್ನು ಯಾರು ಬೇಕಾದರೂ ಹಲಸಿನ ಕಾಯಿ ನೋಡಲಿ, ಕ್ರಯ ಕೊಟ್ಟು ಶಾಸ್ತ್ರಿಗಳ ಮನೆಯಿಂದ ತಂದಿದ್ದೇನೆ ಎಂದು ಸುಳ್ಳು ಹೇಳಿದ ರಾಯಿತು. ಒಬ್ಬನಿಂದ ಹೊರಲು ಸಾಧ್ಯವಾಗದ ಈ ಕಾಯಿ ಹಣ್ಣಾದಾಗ ಎಷ್ಟು ರುಚಿಯಾಗಿರುತ್ತದೋ. ಮಾಧವ ಸಿರ್ಸಿಗೆ ಹೋದದ್ದು ಒಳಿತೇ ಆಯಿತು. ಅವನ ಪಾಲೂ ನನಗೆ ಸಿಕ್ಕೀತು.

ಮನೆ ಮುಟ್ಟಿದಾಗ ಕಾಯಿಯ ಭಾರದಿಂದ ಕುತ್ತಿಗೆ ಬೇರೆ ನೋವು. 'ಅಯ್ಯಬ್ಬ' ಎನ್ನುತ್ತ ಮೆಲ್ಲನೆ ತಲೆಯಿಂದ ಒಳಜಗಲಿಯ ಮೇಲಿರಿಸಿ "ಹೋ ಅತ್ತಿಗೇ, ನೋಡಿಲ್ಲಿ" ಎಂದು ಕಿರುಚಿಕೊಂಡ.

ಹೊಲಿಗೆಯಂತ್ರದ ಮುಂದೆ ಕುಳಿತ ಶಾಂಭವಿ ತಲೆ ಎತ್ತಿದಳು. "ಏನೋ ಅದು ? ಅರೆ....ಹಲಸಿನಕಾಯಿ ! ಎಲ್ಲಿಂದ ತಂದೆ ?" ಅವಳು ಎದ್ದು ಹತ್ತಿರ ಬಂದು ನೋಡುತ್ತಾಳೆ, ದೊಡ್ಡ ಹಲಸಿನ ಕಾಯಿ ! ಬೆರಳಿನಿಂದ ಬಡಬಡ ಬಡಿದಳು. ಅವಳ ಕಣ್ಣುಗಳು ಓರೆಯಾದವು.

"ಎಲ್ಲಿಂದ ತಂದೆ ಅಂತ ಕೇಳ್ಬೇಡ. ಕೆಳಮನೆ ಗೌಡರಿಗೆ ಏನೋ ಒಳ್ಳೆಯ ಬುದ್ಧಿ ಬಂತು. ತಗೊಂಡು ಹೋಗು ಅಂದ್ರು." ಅಂಗಿಯನ್ನು ತೆಗೆದು ಕಂಕುಳ ಸಂದಿಯಲ್ಲಿ ಮುದುರಿಸುತ್ತ ಅವನು ಕೇಳಿದ, "ಈಗ ಹೇಳು, ಇದರಿಂದ ನೀನೇನು ಮಾಡುತ್ತೀ ?"

"ಕೆಳಮನೆ ಗೌಡರು ತುಂಬಾ ಜಿಪುಣರು. ನಿಂಗೆ ಹೇಗಪ್ಪ ಕೊಟ್ಟರು ? ಕದ್ದು ತರಲಿಲ್ಲವಲ್ಲ?" ಅತ್ತಿಗೆ ಹೊಲಿಗೆಯಂತ್ರದ ಎದುರು ಕುಳಿತು ಕೆಲಸ ಪ್ರಾರಂಭಿಸಿದಳು.

"ಛೀ ಛೀ. ಕದಿಯುವ ಪಂಚಾಯ್ತಿ ನಮಗಿಲ್ಲ. ಹೇಳು ಅತ್ತಿಗೇ, ನೀನು ಇದರಿಂದ ಏನೇನು ಮಾಡ್ತೀ?" ಕೇಶವ ಕಾಯಿಯನ್ನು ಒಳಕೋಣೆ ಯಲ್ಲಿಟ್ಟು ಕೇಳಿದ, "ಹಪ್ಪಳ ಹಾಕಿದರೆ ಮಳೆಗಾಲದಲ್ಲಿ ತಿನ್ನಬಹುದು, ಆದರೆ ಹಣ್ಣಿಗೆ ಏನು ಮಾಡೋಣ. ಕೊಳಕು ಪಾಯಸ ಮಾತ್ರ ಬೇಡ. ಹಾಂ, ಹಣ್ಣಾದಮೇಲೆ ಸ್ವಲ್ಪ ಕಡಬು ಮಾಡೋಣ. ಅತ್ತಿಗೇ, ಬೇಳೆಯನ್ನು ಬೇಯಿಸಿ ಒಣಗಿಸಿಟ್ಟರೆ...."

"ಆಯ್ತಪ್ಪ, ನೀನು ಏನು ಹೇಳ್ತಿಯೋ ಅದನ್ನೆಲ್ಲ ಮಾಡ್ತೇನೆ."

ಕೇಶವ ಹೆಬ್ಬೆರಳನ್ನು ಚೀಪುತ್ತ ಆ ಒಂದು ಹಲಸಿನ ಕಾಯಿಯಿಂದ ಏನೆಲ್ಲ ತಿಂದಿಗಳನ್ನು ಮಾಡಲು ಸಾಧ್ಯ? ಹೇಗೆ ತಾವು ತಿನ್ನಬೇಕು ಎಂಬೂ ಪಟ್ಟಿ ಮಾಡುತ್ತಿದ್ದಂತೆ ಶಾಂಭವಿ ಜೋರಾಗಿ ನಕ್ಕಳು.

"ನಿನ್ನ ತಿಂಡಿಗಳ ಪಟ್ಟಿಯನ್ನು ನೋಡಿದರೆ ಆ ತಿಂಡಿ ಮಾಡಲು ಹತ್ತು ಹಣ್ಣುಗಳು ಸಾಲದೇನೋ!"

"ನನ್ನ ಅತ್ತಿಗೆ ಹತ್ತು ತರಹದ ತಿಂಡಿಗಳನ್ನು ಒಂದೇ ಹಣ್ಣಿನಲ್ಲಿ ಮಾಡಿ ಕೊಡ್ತಾಳೆ. ಓ ದೇವರೇ, ಬೇಗ ಹಣ್ಣಾಗಲಿ!"

ಅಷ್ಟರಲ್ಲಿ ಹೊರಗೆ ಕೇಳಿಸಿತು ಗಲಾಟೆ. ಕೇಶವ ಬಾಗಿಲಿನಿಂದ ಹೊರಗೆ ಇಣುಕಿದವನು ಭೀತಿಯಿಂದ ಹರಿನಾರಾಯಣನ ಕೋಣೆಗೆ ಓಡಿಹೋದ. ಶಾಂಭವಿ ಹೋಲಿಯುವದನ್ನು ನಿಲ್ಲಿಸಿ ಗಲಾಟೆ ಏನೆಂದು ನೋಡಲು ಹೊರಗೆ ಬಂದರೆ ಕೆಳಮನೆ ಗೌಡರ ಇಬ್ಬರು ಪ್ರಾಯ ಬಂದ ಗಂಡು ಮಕ್ಕಳು, ಇನ್ನೊಂದು ನಾಲ್ಕಾರು ಹುಡುಗರೂ ಅಂಗಳದಲ್ಲಿ ಸೇರಿಬಿಟ್ಟಿದ್ದಾರೆ.

"ಅವನನ್ನು ಹೊರಗೆ ಕರೆಯಿರಿ." ಅಬ್ಬರಿಸಿದ ಒಬ್ಬಾತ.

"ಯಾರನ್ನು?" ಬಾಗಿಲಿಗೆ ಆತು ನಿಂತು ಕೇಳಿದಳು ಶಾಂಭವಿ.

"ಬೆರಳು ಚೀಪುವ ಒಂದು ದೊಡ್ಡ ಮಗು ಇದ್ದಾನಲ್ಲ, ಮೀಸೆ ಬಂದವನು, ಅವನು ನಮ್ಮ ತೋಟದಿಂದ ಹಲಸಿನ ಕಾಯಿ ಕದ್ದು ತಂದಿದ್ದಾನೆ. ಎಲ್ಲಿದ್ದಾನೆ, ಕರೀರಿ ಹೊರಗೆ."

"ಅವನು ಕದ್ದು ತರಲಿಲ್ಲವಲ್ಲ."

"ನಾನೇ ಕಣ್ಣಾರೆ ನೋಡಿದೆ, ಅವನು ಕತ್ತಿಯಿಂದ ಹಲಸಿನ ಕಾಯಿಯನ್ನು ಕುಯ್ತಾ ಇರುವದನ್ನು.·ಒಳಗೆ ಕಾಯಿ ಇಟ್ಟು ಅಡಗಿ ಕುಳಿದ್ದಾನೆ."

ಇನ್ನೊಬ್ಬ ಗುಡುಗಿದ. "ಎಲ್ಲಿ ಅವನು?"

ಶಾಂಭವಿ ಒಳಗೆ ನೋಡಿದಳು, ಕೇಶವ ಅಲ್ಲಿರಲಿಲ್ಲ.

"ಇನ್ನೊಬ್ಬರ ತೋಟಕ್ಕೆ ನುಗ್ಗಿ ಹಲಸಿನಕಾಯಿ ಕದ್ದು ತಂದು ಏನೂ ತಿಳಿಯದಂತೆ ಇದ್ದೀರಲ್ಲ. ಮೂರು ಹೊತ್ತು ಆ ಮರವನ್ನು ಕಾಯ್ದುಕೊಳ್ಳುವದೇ ನಮಗೆ ಪ್ರಯಾಸವಾಗಿದೆ. ಓಹೋ, ಉಂಡಾಡಿಯಂತೆ ತಿರುಗಿದ್ದು ಸಾಲದೆ ಎಲ್ಲರ ತೋಟಬೇರೆ ನುಗ್ತಾ ಇದಾನೆ." ಗೌಡರ ಎರಡನೇ ಮಗ ಇನ್ನೂ ಮುಂದೆ ಬಂದ, "ಆ ಹಣ್ಣು ತಿಂದು ನೀವು ಉದ್ಧಾರವಾಗ್ತೀರಿ ಅಂದುಕೊಂಡರಾ. ಕದ್ದ ಕೈ ಅಲ್ಲೇ ಕತ್ತರಿಸಿಹೋಗಲಿ. ಅವನನ್ನು ಕರೀರಿ ಹೊರಗೆ."

“ಏನೋ ಸಣ್ಣವನು. ತಿನ್ನುವ ಆಸೆಯಾಯ್ತು ಅಂತ ತೆಗೆದಿರಬೇಕು.”

“ಆಹಾ, ಕೇಳಿದಿರೇನೋ ಮಾತನ್ನು.” ಅಟ್ಟಹಾಸದಲ್ಲಿ ನಕ್ಕ ಹಿರಿಯವನು, “ಆಸೆಯಾಯ್ತೆಂದು ಮನೆಗೆ ಕನ್ನಹಾಕಿ ದೋಚಿಕೊಂಡು ಹೋಗುವದೇ? ದೊಣ್ಣೆ ಎತ್ತಿಕೊಳ್ಳರೋ. ಅವನು ಒಳಗಿರಬಹುದು, ಹುಡುಕಿ ಚೆನ್ನಾಗಿ ಬಾರಿಸೋಣ.”

ಶಾಂಭವಿ ನಡುಗಿದಳು. ಕೇಶವನನ್ನು ಹೊರಗೆ ಕಳುಹಿಸಿದರೆ ನೆರೆದ ಜನ ಇವತ್ತು ಸುಮ್ಮನೆ ಬಿಡಲಾರರು. ಅಷ್ಟು ಕ್ರೋಧಗೊಂಡಿದ್ದಾರೆ. ತಾನೇ ಹಲಸಿನ ಕಾಯಿಯನ್ನು ಹೊತ್ತು ತಂದು ಹೊರಗಿಟ್ಟಳು. ಅವಳ ಮುಖದ ಬಣ್ಣ ಬದಲಾಗಿಹೋಗಿತ್ತು.

“ನೋಡಿದಿರಾ, ಕಾಯಿ ಇಲ್ಲೇ ಇದೆ. ಎತ್ತಿಕೊಳ್ಳರೋ.” ಇನ್ನೊಬ್ಬ ಮುಂದೆ ಬಂದು ಅದನ್ನೆತ್ತಿಕೊಂಡು, “ಬಹಳ ಚಾಲಾಕಿ ಜನಗಳು. ಇನ್ನೆಷ್ಟು ಕದ್ದು ಮುಕ್ಕುತ್ತಾವೋ! ಇವರ ಮನೆ ಹಾಳಾಗಿಹೋಗ.”

“ನಡೀರಿ, ನಡೀರಿ. ಅವನು ತೋಟದ ಹತ್ರಪತ್ರ ಸುಳೀಲಿ, ಕಾಲು ಮುರೀದೇ ಬಿಡಲಾರೆವು....ಬನ್ನಿ ಬನ್ನಿ....”

ಗುಂಪು ಹೊರಟುಹೋಯಿತು. ಶಾಂಭವಿಯ ಕಣ್ಣಾಲಿಗಳು ಗರಗರನೆ ತಿರುಗಿದವು. ಯಾರ ವಸ್ತುವನ್ನು ಕದಿಯಬಾರದೆಂಬ ಜ್ಞಾನ ಈ ಪೋರನಿಗೆ ಇಲ್ಲವೇ? ಬಾಗಿಲಿಗೆ ಒರಗಿಸಿಟ್ಟ ಅವನ ದೊಣ್ಣೆಯನ್ನೇ ಎತ್ತಿಕೊಂಡಳು. ಕದ್ದು ತಂದು ತನ್ನ ಹತ್ತಿರ ಸುಳ್ಳು ಹೇಳಿದ್ದಾನೆ. ಇವನಿಗೆ ಈ ದಿನ ಶಾಸ್ತಿ ಮಾಡದೆ ಹೋದರೆ ಮುಂದೆ ಎಷ್ಟು ಕದಿಯುತ್ತಾನೋ.

ದೊಣ್ಣೆಯೊಂದಿಗೆ ಅವಳು ಬಿರುಗಾಳಿಯಂತೆ ಕೋಣೆಗೆ ಬಂದುದನ್ನು ನೋಡಿ ಬೆರಳು ಚೀಪುತ್ತ ಮೂಲೆ ಸೇರಿದ್ದ ಕೇಶವ ‘ಅಯ್ಯೋ’ ಎಂದು ಅರಚಿಕೊಂಡ ಜೋರಾಗಿ. ಇನ್ನೇನು ಅತ್ತಿಗೆ ಆ ದೊಣ್ಣೆಯಿಂದಲೇ ತನ್ನನ್ನು ಬಡಿಯುತ್ತಾಳೆ. ಅವಳ ಕಣ್ಣುಗಳನ್ನು ನೋಡಿದರೆ ಮೈನಡುಕವಾಗುತ್ತಿದೆ....

“ನನ್ನ ಹತ್ತಿರ ಯಾಕೆ ಸುಳ್ಳು ಹೇಳಿದಿ?” ಮೂಲೆಯಿಂದ ಕೇಶವನನ್ನು ಈಚೆಗೆ ಎಳೆದಳು. “ಬೊಗಳು, ಯಾಕೆ ಕದ್ದೆ ಹಲಸಿನಕಾಯಿಯನ್ನು?”

ಅವನಿಗೆ ಅತ್ತಿಗೆಯ ವಿಕಾರಮುಖ ನೋಡಿಯೇ ಮೂರ್ಛೆಹೋಗುವಂತಾಯಿತು. ದೊಣ್ಣೆಯನ್ನು ಅವಳು ಅವನ ಮೇಲೆತ್ತಿರಲಿಲ್ಲ, ಆ ಮೊದಲೇ ಅವನು ಬೊಬ್ಬರಿದ, “ನನ್ನನ್ನು ಕೊಲ್ಲಬೇಡಿ ಅತ್ತಿಗೇ, ನಿನ್ನ ದಮ್ಮಯ್ಯ, ಅಯ್ಯೋ....ಅಮ್ಮಾ....!”

ಶಾಂಭವಿಯ ಕೈಯಿಂದ ಜಾರಿಬಿದ್ದಿತು ದೊಣ್ಣೆ. ಅವನನ್ನು ಹೊಡೆಯಲು ತಾನು ಯಾರು? ಶಿಕ್ಷಿಸಲು ತಾನು ಯಾರು? ಅವಳು ಸೀದಾ ಹೊಲಿಗೆ ಯಂತ್ರದ ಮುಂದೆ ಬಂದು ಸುಮ್ಮನೆ ಕುಳಿತಳು. ಕಣ್ಣುಗಳಲ್ಲಿ ತುಂಬಿತ್ತು ನೀರು. ಹಲಸಿನ ಕಾಯಿಯೆಂದರೆ ಮನೆಯಲ್ಲಿ ಎಲ್ಲರಿಗೂ ಇಷ್ಟ. ಅವನು ತಂದ ಕಾಯಿಯ ಗಾತ್ರವನ್ನು ನೋಡಿ ತನಗೂ ಆಸೆಯಾಗಿತ್ತು. ಅವನಂತೆ ತಾನೂ ಏನೇನು ತಿಂಡಿ ಮಾಡಬೇಕೆಂದು ಪಟ್ಟಿಮಾಡಿದ್ದೆ. ಅವನು ತನ್ನ ಆಸೆ ಯನ್ನು ಹೇಳಿ ತೋರಿಸುತ್ತಾನೆ. ತಾನು ಬಾಯಿಮುಚ್ಚಿಕೊಂಡು ಸುಮ್ಮನಿರು ತ್ತೇನೆ. ಅಷ್ಟೇ ನಮಗಿಬ್ಬರಿಗೆ ವ್ಯತ್ಯಾಸ. ಅವರೆಲ್ಲ ಬಂದು ಕಾಯಿಯನ್ನು ತೆಗೆದುಕೊಂಡು ಹೋಗುವಾಗ ತನಗೂ ದುಃಖವಾಗಲಿಲ್ಲವೇ? ಒಂದು ಕಾಯಿ ತಂದರೆ ಇವರಿಗೇನೂ ಕಡಿಮೆಯಾಗದು. ಆದರೆ....ನಾಳೆ ಶಾಸ್ತ್ರಿಗಳ ಮನೆ ಯಿಂದ ಒಂದು ಹಣ್ಣು ತಂದು ಅವನನ್ನು ತೃಪ್ತಿಪಡಿಸಬೇಕು. ನಾನು ನೆಟ್ಟ ಗಿಡದಲ್ಲಿ ಪವಾಡದಂತೆ ಬೇಗಬೇಗನೇ ಕಾಯಿ ಆಗಿದ್ದರೆ?

16

ಕತ್ತರಿ ಆಡುತ್ತಿದೆ ಬಟ್ಟೆಯ ಮೇಲೆ. ಗುಂಡಿಮನೆಯ ಶ್ರೀಮಂತ ಮಹಿಳೆ ಹೊಲಿಯಲು ಹದಿನೆಂಟು ರೂಪಾಯಿಯ ರೇಶಿಮೆಯ ರವಕೆಬಟ್ಟೆ ಕೊಟ್ಟಿ ದ್ದಳು. 'ಮದುವೆಗೆ ಹಾಕಲು ಬೇಕು, ಬೇಗ ಹೊಲಿದುಕೊಡು' ಎಂದಿದ್ದಳು. ಅಳತೆ ನೋಡಿ ಕತ್ತರಿಸಿದಮೇಲೆ ಹೊಲಿಯಲು ಹೆಚ್ಚು ಹೊತ್ತಿಲ್ಲ. ದಾರ ಹಾಕಲು, ಗುಂಡಿ ಇಡಲು ಶಾರದೆಯಿದ್ದಾಳೆ. ಆದರೆ ಅವಳ ಚಿತ್ತಸ್ವಾಸ್ಥ್ಯ ಕದಡಿಹೋಗಿದೆ. ಗಂಡ, ಅತ್ತೆಯ ಅನಾರೋಗ್ಯದಿಂದ ಅನಿರೀಕ್ಷಿತವಾಗಿ ಒದಗಿ ಬಂದ ಆರ್ಥಿಕ ಬಿಕ್ಕಟ್ಟು, ಅದರೊಂದಿಗೆ ಇದೇ ಈಗ ಕೇಶವನ ಕಳುವಿನ ಆರೋಪದಿಂದ ಅವಮಾನಿತಳಾಗಿ ಮನಸ್ಸು ಕಲಕಿಹೋಗಿದೆ. ಬಟ್ಟೆಯ ಮೇಲೆ ಕತ್ತರಿ ಆಡಿದರೂ ಮನಸ್ಸು ಇನ್ನೆಲ್ಲೋ.

ಶಾಸ್ತ್ರಿಗಳ ಮನೆಗೆ ಹೋಗುವದನ್ನು ನಿಲ್ಲಿಸಿದ ಮೇಲೆ ಶಾರದೆ ಬಹಳ ಮಂಕಾಗಿದ್ದಾಳೆ. ಜಯರಾಮ ಅವಳ ಮೇಲೆ ಎಷ್ಟು ಮನಸ್ಸಿರಿಸಿದ್ದನೋ ಅದಕ್ಕಿಂತ ಮಿಗಿಲಾಗಿ ಅವಳ ಮನಸ್ಸು ಅವನ ಹಿಂದೆಯೇ ಓಡಿದೆ. ನಿನ್ನೆ ಅತ್ತಿಗೆಯೊಡನೆ ಮಾತನಾಡಲು ಬರುತ್ತೇನೆಂದು ಮಾತು ಕೊಟ್ಟಿದ್ದರೂ

ಅವನು ಬರಲಿಲ್ಲ, ಕಾಗದವನ್ನೂ ಬರೆಯಲಿಲ್ಲ. ಅಂದರೆ ಹುಸಿ ಸುಳ್ಳು ಆಡಿ ಅವಳನ್ನು ವಂಚಿಸಿದ್ದಾನೆಯೇ? ಯಾರಿಗೆ ಗೊತ್ತು, ಗಂಡಸರ ಮನಸ್ಸು ಅರ್ಥವಾಗುವದಿಲ್ಲ. ಆದರೆ ಶಾರದೆಯ ಮೇಲೆ ಇದರಿಂದ ಬಲವಾದ ಪೆಟ್ಟು ಬಿದ್ದಿದೆ. ಅವಳಿನ್ನೂ ಜಯರಾಮನ ಗುಂಗಿನಲ್ಲಿದ್ದಾಳೆ. ಮದುವೆ ಮಾಡಿ ಬಿಡಬೇಕು. ಆಗ ಗುಂಗು ಇಳಿದೀತು. ಆದರೆ ತನ್ನ ಇಂದಿನ ಆರ್ಥಿಕ ಮುಗ್ಗಟ್ಟಿನಲ್ಲಿ ಅವಳ ಮದುವೆ ಮಾಡುವದು ಎಂದಾದರೂ ಸಾಧ್ಯವೇ?

ಶಾಂಭವಿಯ ಮನಸ್ಸನ್ನು ಕೊರೆಯಿತು ಪ್ರಶ್ನೆ. ಬಡವರಿಗೆ ವಿಧಿ ಕೊಡುವ ಸಣ್ಣ ಏಟನ್ನೂ ಜೀರ್ಣಿಸಿಕೊಳ್ಳಲು ಸಾಧ್ಯವಾಗದು. ತನ್ನಲ್ಲೇ ಚಿಂತಿಸುತ್ತ ಬಟ್ಟೆ ಕತ್ತರಿಸುತ್ತಿದ್ದವಳು ಫಕ್ಕನೆ ಎಚ್ಚತ್ತು ನೋಡುತ್ತಾಳೆ, ಹಿಂದೆ ಮತ್ತು ಮುಂದಿನ ಕುತ್ತಿಗೆಯನ್ನು ಒಟ್ಟಾಗಿ ಕತ್ತರಿಸಿಬಿಟ್ಟಿದ್ದಾಳೆ! ಕೈಗೆ ಇರುವ ಬಟ್ಟೆಯನ್ನು ಅಡ್ಡಪಟ್ಟೆಯಲ್ಲಿ ಕತ್ತರಿಸಿದ್ದಾಳೆ. ಅರಿಯದೆ ಕತ್ತರಿಸಿದ ಅಚಾತುರ್ಯ. ಹೊಲಿದರೂ ರವಕೆ ಒಪ್ಪವಾಗಿ ಕಾಣಿಸಲಾರದು. ತನ್ನ ಅಲಕ್ಷ್ಯಕ್ಕೆ ಹಳಿದುಕೊಳ್ಳುತ್ತ ಬಟ್ಟೆಯನ್ನು ಸರಿಪಡಿಸಲು ನೋಡಿದಳು. ಆಗ ಲಿಲ್ಲ. ಕತ್ತರಿಸಿದ ಮಾದರಿಯಲ್ಲಿ ಹೊಲಿಯುವದು ಅನಿವಾರ್ಯ. ಇಂದೇಕೆ ಹೀಗಾಯಿತು? ತಾನು ಇನ್ನು ಹೊಲಿಯುವದನ್ನು ಸಂಪೂರ್ಣ ನಿಲ್ಲಿಸಬೇಕು. ಈ ಸಾರೆ ಗರ್ಭಿಣಿಯಾದಂದಿನಿಂದ ಆಗಾಗ ಸೊಂಟನೋವು ಕಾಡುತ್ತಿದೆ. ಮೊದಲಿನಂತೆ ಹೊಲಿಯುವದೂ ಕಷ್ಟವಾಗುತ್ತಿದೆ. ಹೊಲಿಯಲು ಬಟ್ಟೆಯ ರಾಶಿ ಬಂದುಬಿದ್ದರೂ ದೇಹದ ಅನಾರೋಗ್ಯದಿಂದ ತಾನು ಹೀಗೇ ಸಿಕ್ಕಾಪಟ್ಟೆ ಕತ್ತರಿಸಿದರೆ ಗಿರಾಕಿಗಳು ಸುಮ್ಮನಿರುತ್ತಾರೆಯೇ? ಈ ರವಕೆ ಹೇಗೆ ಹೊಲಿಯಲಿ?' 'ಗುಂಡಿಮನೆ'ಯವಳು ಬಂದರೆ ನಾನಂತೂ ಗುಂಡಿ ಸೇರುವದು ದಿಟ.

ಮರುದಿನ ಶ್ರೀಮಂತ ಮಹಿಳೆಯ ಆಳು ಮೂರು ರೂಪಾಯಿ ಮಜೂರಿ ಕೊಟ್ಟು ಹೊಲಿದ ರೇಶಿಮೆ ರವಕೆಯನ್ನು ತೆಗೆದುಕೊಂಡು ಹೋದ. ಆದರೆ ಮತ್ತೆ ಅರ್ಧಗಂಟೆಯಲ್ಲಿ ಪ್ರತ್ಯಕ್ಷಳಾದಳು ಆ ಮಹಿಳೆ. ಕೈಯಲ್ಲಿದ್ದ ರವಕೆಯನ್ನು ಅವಳ ಮುಂದಿರಿಸಿ ಕಣ್ಣು ಕೆಕ್ಕರಿಸಿದಳು.

"ಚೆನ್ನಾಗಿ ಹೊಲಿಯುತ್ತೀಯಾ ಎಂದು ರೇಶಿಮೆ ಬಟ್ಟೆ ಕೊಟ್ಟಿದ್ದೆ. ಇದೇನು ಹಾಳು ಹೊಲಿದದ್ದು? ಹಿಂಭಾಗದ ಕುತ್ತಿಗೆ ಬೆನ್ನನ್ನೆಲ್ಲ ತೋರಿಸಿದರೆ ಕೈ ಹೇಗೋ ಆಗಿದೆ. ಬೆನ್ನಿನ ಪಟ್ಟಿ ಸರಿಯಾಗಿ ಇಟ್ಟಿಲ್ಲ."

ಶಾಂಭವಿ ದೇಹವನ್ನು ಹಿಡಿ ಮಾಡಿ ತಲೆತಗ್ಗಿಸಿ, ತಪ್ಪನ್ನು ಮನ್ನಿಸು

ವಂತೆ ಕೋರಿಕೊಳ್ಳಬೇಕಾಯಿತು. ಆದರೆ ಶ್ರೀಮಂತ ಮಹಿಳೆ ಹಾಗೆಲ್ಲ ಕೇಳುವವಳಲ್ಲ.

"ಈ ರವಕೆ ನೀನೇ ಇಟ್ಟುಕೋ. ಇದರ ಹಣವನ್ನು, ನಾನು ಆಳಿನ ಹತ್ರ ಕಳುಹಿಸಿದ ಮೂರು ರೂಪಾಯಿಯನ್ನು ಇತ್ಲಾಗೆ ಕೊಟ್ಟುಬಿಡು."

ಆದರೆ ಶಾಂಭವಿಯ ಹತ್ತಿರ ಹದಿನೆಂಟು ರೂಪಾಯಿಗಳು ಇರಲಿಲ್ಲ. ಇದ್ದರೂ ರವಕೆಯ ಬದಲಿಗೆ ಅಷ್ಟು ಹಣವನ್ನು ಕೊಡುವಷ್ಟು ಅನುಕೂಲವಂತಳು ಅವಳಲ್ಲ. ತನ್ನ ಗಂಡ ಮತ್ತು ಅತ್ತೆ ಕಾಹಿಲೆಯಿಂದ ಚೇತರಿಸಿಕೊಳ್ಳುತ್ತಿದ್ದಾರೆಂದು ಸೆರಗೊಡ್ಡಿ ಬೇಡಿದಳು. ಗುಂಡಿಮನೆಯವಳು ಅವಳ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಬಾಯಿಗೆ ಬಂದಂತೆ ಕೂಗಾಡಿ ರವಕೆಯನ್ನು ಅಲ್ಲೇ ಇಟ್ಟು "ಇನ್ಮೇಲೆ ಒಂದು ಚೂರು ಬಟ್ಟೆ ನಿನ್ನ ಹತ್ತಿರ ಹೊಲಿಸುವದಿಲ್ಲ" ಎಂದಳು.

ಶಾಂಭವಿ ಕಲ್ಲುಗೊಂಬೆಯಾದಳು. ಎದುರುತ್ತರ ಕೊಡುವ ಮೂರ್ಖತನ ಮಾಡಲಿಲ್ಲ. ಬಾಳಿನುದ್ದಕ್ಕೂ ತಾನು ಒಂದಲ್ಲ ಒಂದು ವಿಧದಲ್ಲಿ ಅಪಮಾನವನ್ನು ತಿನ್ನುತ್ತಾ ಹೋಗಬೇಕು. ಆತ್ಮೀಯವಾಗಿ ತನಗೆ ಹೇಳಿದ್ದರೆ ಆಗುತ್ತಿರಲಿಲ್ಲವೇ? ಒಂದು ರವಕೆ ಹಾಳಾದುದಕ್ಕೆ ಅವರ ಹಣ ಪೋಲಾಗಿ ಹೋಯಿತೇ? ಈ ಹದಿನೆಂಟು ಅವರಿಗೆ ಲೆಕ್ಕಕ್ಕಿಲ್ಲದ ರೂಪಾಯಿಗಳು. ಆದರೂ ಇಂದು ಬಡವಳಿಂದ ಬಹುದೊಡ್ಡ ಬೆಲೆ ಬಂದುಬಿಟ್ಟಿದೆ!

ಅಭಿಮಾನಿ ಹೆಂಗಸು ಶಾಂಭವಿ. ಎಂತಹ ಕಡುಬಡತನದಲ್ಲಿಯೂ ತನ್ನ ಸ್ವಾಭಿಮಾನವನ್ನು ಮಾರಿಕೊಳ್ಳಲು ಸಿದ್ಧಳಿರಲಿಲ್ಲ! ಕೈಯಲ್ಲಿದ್ದ ರವಕೆಯನ್ನು ಹಾಗೇ ಮಡಿಸಿಟ್ಟು ಸೀದಾ ಗಂಗಾನ ಮನೆಗೆ ಹೊರಟಳು. ಅವಳೊಂದಿಗೆ ಎಲ್ಲಾ ವಿವರಿಸಿ ಇಪ್ಪತ್ತೈದು ರೂಪಾಯಿ ಸಾಲ ತೆಗೆದುಕೊಂಡು ಅದೇ ದಿನ ಗುರುಪುರಕ್ಕೆ ಹೋಗಿ ಇನ್ನೊಂದು ರವಕೆ ಬಟ್ಟೆಯನ್ನು ಖರೀದಿಸಿದಳು. ಅದರೊಡನೆ ಬೆಳೆದು ಹಣ್ಣಾದ ಒಂದು ದೊಡ್ಡ ಹಲಸಿನ ಹಣ್ಣನ್ನು ತೆಗೆದುಕೊಂಡಳು, ನಾಲ್ಕು ರೂಪಾಯಿ ತೆತ್ತು.

ಮರುದಿನ ಬೆಳಗ್ಗೆ ಗುಂಡಿಮನೆಯ ಶ್ರೀಮಂತ ಮಹಿಳೆಯ ಕೈಸೇರಿತ್ತು ಅಂದವಾಗಿ ಹೊಲಿದ ರೇಷಿಮೆ ರವಕೆ. ಕೇಶವನ ಉದರ ತಣಿಯಿತು, ಅವನು ಇಷ್ಟಪಟ್ಟ ಹಲಸಿನ ಹಣ್ಣಿನ ತಿಂಡಿಗಳಿಂದ.

ಪ್ರೀತಿಯ ಶಾರದೆ,

ನಿನ್ನ ವಿಷಯದಲ್ಲಿ ದೊಡ್ಡ ಚರ್ಚೆ ನಡೆಯುತ್ತಿದೆ ಎನ್ನುವದು ನಿನಗೆ ತಿಳಿದಿರಲಾರದು. ದಿನೇ ದಿನೇ ಅಂಚೆಯಲ್ಲಿ ಹೊಸ ಹೊಸ ಹುಡುಗಿಯರ ಫೋಟೋ ಬರುತ್ತಾ ಇವೆ. ಅಕ್ಕನಂತೂ ಕಾಗದದ ಮೇಲೆ ಕಾಗದ ಬರೆದು ಒತ್ತಾಯಿಸುತ್ತಿದ್ದಾಳೆ ಮದುವೆಗೆ. ನಾನೂ ಈವರೆಗೆ ಅವಳಿಗೆ ಉತ್ತರ ಬರೆದಿಲ್ಲ. ನೀನೂ ಇತ್ತೀಚೆಗೆ ಅವರ ಮನೆಗೆ ಕೆಲಸಕ್ಕೆ ಹೋಗುವದಿಲ್ಲವಂತೆ. ಯಾಕೆ, ಕಮಲಮ್ಮ ನಿನ್ನನ್ನು ಬೇಡ ಅಂದರೇ? ವಾರದ ಮೊದಲು ಭಾವ ಇಲ್ಲಿಗೆ ಬಂದಿದ್ದರು, ಬೆಂಗಳೂರಿನಲ್ಲೇ ಇರುವ ಅವರ ಗೆಳೆಯನ ಮಗಳನ್ನು ತೋರಿಸಲು. ನನಗೆ ಇಷ್ಟವಾಗಲಿಲ್ಲ. 'ಮದುವೆಯಾದರೆ ಶಾರದೆಯನ್ನು, ಇಲ್ಲವಾದರೆ ಇಲ್ಲ' ಎಂದಿದ್ದೇನೆ. ಇನ್ನು ಹದಿನೈದು ದಿನಗಳಲ್ಲಿ ಅವರ ಕಿರಿಮಗನಿಗೆ ಉಪನಯನವಂತೆ. ಆಗ ಗುರುಪುರಕ್ಕೆ ಬರುತ್ತೇನೆ.

ಒಂದು ಮಾತು, ನಿನ್ನ ಅಣ್ಣ ಅತ್ತಿಗೆಗೆ ಈ ಸಂಬಂಧ ಇಷ್ಟವಿದೆಯೇ ಎಂದು ಅತಿಶೀಘ್ರದಲ್ಲಿ ಬರೆದು ತಿಳಿಸು. ನಿನ್ನ ಪತ್ರಕ್ಕಾಗಿ ಕಾಯುತ್ತೇನೆ.

ಇತಿ ನಿನ್ನ,
ಜಯರಾಮ

ಅನಿರೀಕ್ಷಿತವಾಗಿ ಬಂದ ಕಾಗದವನ್ನೋದಿ ಶಾಂಭವಿಗೆ ನಂಬಿಕೆ ಬರಲೇ ಇಲ್ಲ. ಅವಳ ಕಣ್ಣುಗಳಿಂದ ಆನಂದಬಾಷ್ಪವುರುಳಿದವು. ತನ್ನ ನಾದಿನಿಯ ಭಾಗ್ಯಕ್ಕೆ ಎಣೆಯುಂಟೇ? ಅವಳ ಬೆನ್ನ ಮೇಲೆ ಪ್ರೀತಿಯಲ್ಲಿ ಗುದ್ದಿ ಕೆನ್ನೆ ಹಿಂಡಿದಳು. ಹರಿನಾರಾಯಣನಿಗೆ ವಿಷಯ ತಿಳಿಸಿದಾಗ ಅವನೂ ವಿಸ್ಮಿತನಾದ.

"ನಿನಗೆ ಈ ಸಂಬಂಧ ಒಪ್ಪಿಗೆಯೇ?" ಕೇಳಿದ ಹೆಂಡತಿಯನ್ನು.

"ಅವನು ಒಪ್ಪಿದಮೇಲೆ ನಾನು ಬೇಡ ಅನ್ನುತ್ತೇನೆಯೇ? ನಮ್ಮ ಬದುಕು ತೆರೆದ ಬಯಲು! ಅವನೇ ನೋಡಿದ್ದಾನೆ. ಇನ್ಯಾಕೆ ಅಳುಕು?"

ಅದೇ ದಿನ ಅವಳು ತಮ್ಮ ಒಪ್ಪಿಗೆಯ ಪತ್ರವನ್ನು ಜಯರಾಮನ ವಿಳಾಸಕ್ಕೆ ಬರೆದುಹಾಕಿದಳು. ಮದುವೆ ನಿಶ್ಚಯವಾಗುವ ತನಕ ಬಾಯಿಗೆ ಬೀಗ ಹಾಕಿಕೊಳ್ಳಬೇಕು ಎಂದೂ ಎಚ್ಚರಿಸಿದಳು ಎಲ್ಲರನ್ನೂ. ಶಾರದೆಯ ಹಿತದೃಷ್ಟಿಯಿಂದ ಮುಖ್ಯವಾಗಿತ್ತು ಈ ಸಲಹೆ.

ಇತ್ತ ಕಮಲಮ್ಮನಿಗೆ ತೀರಾ ಅಸಮಾಧಾನ. ತಾನೆಷ್ಟು ಒತ್ತಾಯಿಸಿದರೂ ತನ್ನ ತಮ್ಮ ಯಾವ ಮನೆತನ, ಅಂತಸ್ತು ನೋಡದೆ ಶಾರದೆಯನ್ನು

ಒಪ್ಪಿದ್ದಾನಲ್ಲ. ಅವನ ಮನಸ್ಸನ್ನು ಹೇಗೆ ತಿರುಗಿಸಲಿ? ರೂಪ ಒಂದೇ ಇವನಿಗೆ ಮುಖ್ಯವಾಯಿತೇ ಅಥವಾ ಇನ್ನಾವ ಗುಣ ನೋಡಿದ್ದಾನೆ? ಕಿರಿ ಮಗನ ಉಪನಯನಕ್ಕೆ ಅವನು ಬಂದರೆ ಮತ್ತೆ ತನ್ನ ಮನೆಯಲ್ಲಿ ಶಾರದೆಯನ್ನು ಸಂಧಿಸಬಾರದು. ಹೀಗಾಗಿ ಅವರು ಸಹಾಯಕ್ಕೆಂದು ಶಾರದೆಯನ್ನಾಗಲೀ, ಶಾಂಭವಿಯನ್ನಾಗಲೀ ಕರೆಯಲಿಲ್ಲ. ಉಪನಯನದ ಹೇಳಿಕೆಯನ್ನೂ ಆ ಮನೆಗೆ ಕೊಡಲಿಲ್ಲ!

ಉಪನಯನದ ಹಿಂದಿನ ದಿನ ಆಗಮಿಸಿದ ಜಯರಾಮನಿಗೆ ಅಕ್ಕನ ಸಣ್ಣ ಬುದ್ಧಿ ತಿಳಿದು ನಿಜವಾಗಿಯೂ ಖೇದವೆನಿಸಿತು.

"ನಿನಗೆ ತೋರಿಸಲು ಮೂರು ಹುಡುಗಿಯರನ್ನು ಆರಿಸಿಟ್ಟಿದ್ದೇನೆ. ಮೂವರೂ ಬಿ.ಎ. ಓದಿದವರು. ನಿನಗೆ ಇಷ್ಟಬಂದವರನ್ನು ಆರಿಸಿಕೋ" ಎಂದರು ತಮ್ಮನಿಗೆ ನಯವಾಗಿ ಬೆಣ್ಣೆ ಸವರುತ್ತ.

"ನೀನು ಮೂವರನ್ನೂ ತೋರಿಸು. ನಾನು ನಾಲ್ಕನೆಯವಳನ್ನು ಆರಿಸಿಕೊಂಡು ಇದೇ ಚಪ್ಪರದಲ್ಲಿ ಮದುವೆ ಮಾಡಿಕೊಳ್ತೀನೆ." ನಿರ್ಧಾರದ ಧ್ವನಿಯಲ್ಲಿ ಹೇಳಿದ ಜಯರಾಮ.

"ಇನ್ನೂ ಬಡಹುಡುಗಿಯ ಮೇಲಿನ ಗೀಳು ಹೋಗಲಿಲ್ಲವೇ?"

"ಮದುವೆಯಾದಮೇಲೆ ಹೋದೀತು. ಅವಳಿಗಾಗಿ ಸೀರೆ ತಂದಿದ್ದೇನೆ ನೋಡು, ತಿಳಿಗುಲಾಬಿ ಬಣ್ಣದ ಸೀರೆ." ಚೀಲದಿಂದ ತೆಗೆದು ತೋರಿಸಿದ ಅಕ್ಕನಿಗೆ, "ನೀನೊಬ್ಬಳು ಹುಳುಕು ಸ್ವಭಾವದವಳು. ನನಗೆ ಹೆದರಿ ಆ ಮನೆಯವರನ್ನು ಉಪನಯನಕ್ಕೆ ಕರೆಯಲಿಲ್ಲ. ಬಿಡು, ನಾನೇ ಅಲ್ಲಿಗೆ ಹೋಗ್ತೀನೆ."

ಅವನನ್ನು ತಡೆಯಲು ಮನೆಯವರಿಂದ ಸಾಧ್ಯವಿರಲಿಲ್ಲ. ಸೀದಾ ಪ್ರತ್ಯಕ್ಷನಾದ ಶಾಂಭವಿಯ ಪರ್ಣಕುಟೀರದ ಎದುರು. ಆ ಹೊತ್ತಿನಲ್ಲಿ ಶಾಂಭವಿಯ ಹೊರತಾಗಿ ಉಳಿದವರೆಲ್ಲರೂ ಇದ್ದರು. ಆದರೆ ಜಯರಾಮನಿಗೆ ಈಗ ಬೇಕಾದವಳು ಶಾಂಭವಿ! ಅವನಿಗೆ ಗೊತ್ತು, ಇಲ್ಲಿ ಸರಿಯಾಗಿ ವ್ಯವಹರಿಸುವವಳು ಅವಳೊಬ್ಬಳೇ. ಅವಳನ್ನು ಕೇಳಿಯೇ ಮುಂದಿನ ಏರ್ಪಾಟುಮಾಡಿಕೊಳ್ಳಬೇಕು. ಅವನ ಕೈಯಲ್ಲಿದ್ದ ಸೀರೆ ಒಳಗೆ ಸೇರಿತು.

ಸ್ವಲ್ಪ ಹೊತ್ತಿಗೆಲ್ಲಾ ಹಿಂದಿರುಗಿದ ಶಾಂಭವಿ ತನಗಾಗಿ ಕಾದು ಕುಳಿತ ಜಯರಾಮನನ್ನು ನೋಡಿ "ಏನಂತೆ ವಿಶೇಷ? ಶಾರದೆಯ ಭೇಟಿ ಆಗಲಿ

ಲ್ಲವೇ? ಎಲ್ಲಿದ್ದಾಳೆ ಅವಳು?" ಎಂದು ತಾನೇ ಒಳಗೋಡಿ ಮುದುರಿ ಕುಳಿತ ಅವಳನ್ನು ಎಳೆದುಕೊಂಡೇ ಬಂದಳು.

"ನೀವು ಮಾತನಾಡಿಸದಿದ್ದರೆ ಅವಳು ಹೇಗೆ ಹೊರಗೆ ಬಂದು ಮಾತ ನಾಡ್ತಾಳೆ ಹೇಳಿ?" ಕೆಣಕಿದಳು ಜಯರಾಮನನ್ನು, "ಅವಳಿಗೆ ಹೆಚ್ಚು ನಾಚಿಗೆಯೋ, ನಿಮಗೋ?"

"ಇಬ್ಬರಿಗೂ!" ನಾಚಿದ ಜಯರಾಮ.

ಅನಂತರ ಮದುವೆ ವಿಷಯದಲ್ಲಿ ಗಂಭೀರ ಚರ್ಚೆ. ಹರಿನಾರಾಯಣ, ವೇದಮ್ಮ ಮಾತಿಗಿಳಿದರೂ ಅಲ್ಲಿ ಶಾಂಭವಿಯ ಮಾತಿಗೇ ತೂಕ, ಬೆಲೆ ಹೆಚ್ಚು. ಜಯರಾಮ ರಿಜಿಸ್ಟರ್ಡ್ ಮದುವೆಗೆ ಸಿದ್ಧನಿದ್ದ. ಆದರೆ ಈಗಾಗಲೇ ಕಮಲಮ್ಮ ಮತ್ತು ಶಾಸ್ತ್ರಿಗಳು ಈ ಸಂಬಂಧ ಇಷ್ಟಪಡದೆ ಮನದಲ್ಲಿ ನೊಂದು ಕೊಂಡಿದ್ದರಿಂದ ಅವನಿಗೆ ಅವರ ಒಲವು ಗಳಿಸಿಕೊಳ್ಳಲು ಅವರ ಸಮಕ್ಷಮ ದಲ್ಲಿ ಮದುವೆಯಾಗುವ ಅಪೇಕ್ಷೆ. ಹಿರಿಯರು ತೀರಾ ವಿರೋಧಿಸಿದರೆ ಅದು ಹಿತವಲ್ಲ, ಆದಷ್ಟು ಬೇಗ ಮದುವೆಯಾಗುವ ಆತುರ.

ಶಾಂಭವಿಗೂ ಆತುರವಿತ್ತು; ಆದರೆ ಅನುಕೂಲಗಳಿರಲಿಲ್ಲ. ಈಗಾಗಲೇ ಅವಳಿಗೆ ಏಳನೆಯ ತಿಂಗಳು. ಇನ್ನು ಕೆಲವೇ ದಿನಗಳಲ್ಲಿ ಮಳೆಗಾಲದ ಬೇಸಾಯ ಪ್ರಾರಂಭ. ಮದುವೆ ಚಪ್ಪರವನ್ನು ಎತ್ತಿಸಿಕೊಂಡರೆ ವಿಘ್ನಗಳೇ ಅಧಿಕ. ಉತ್ತಮ ಸಂಬಂಧ ದೊರೆಯಿತೆಂದು ನಿಂತಕಾಲಿನಲ್ಲಿ ಹುಡುಗಿಯನ್ನು ಧಾರೆ ಎರೆದುಕೊಡುವದೇ? ಧಾರೆ ಎರೆದುಕೊಡುವಾಗಲೂ ಹೆಣ್ಣಿನ ಕಡೆ ಯವರು ತಮ್ಮತನವನ್ನು ಕಳೆದುಕೊಳ್ಳಬಾರದು! ಈಗ ನಡೆಯಲಿರುವ ಮದುವೆ ಆಕ್ಟೋಬರ್ ನಂತರ ನಡೆದರೆ ತಮಗೇ ಒಳಿತು.

ಜಯರಾಮ ಸೂಕ್ಷ್ಮವಾಗಿ ಅವಲೋಕಿಸಿದ ಅಲ್ಲಿಯ ವಾತಾವರಣವನ್ನು —ಶಾಂಭವಿ ಹೇಳಿದ ಮಾತಿನಲ್ಲಿ ಸತ್ಯಾಂಶ ಇಲ್ಲದಿಲ್ಲ ಎನಿಸಿತು.

"ಮದುವೆ ವಿಷಯಕ್ಕೆ ಮೇಲೆ ಕೆಳಗೆ ಯಾಕೆ ನೋಡ್ತೀರಿ!" ವೇದಮ್ಮ ಮಾತಿಗೆ ಒಗ್ಗರಣೆ ಸೇರಿಸಿದಳು, "ಇನ್ನೊಂದು ಹತ್ತು ದಿನಗಳಲ್ಲಿ ಮುಹೂರ್ತ ವಿದ್ದರೆ ಮಾಡಿ ಮುಗಿಸುವದು ಕ್ಷೇಮ."

"ಅವಳು ಹೇಳಿದ್ಹಾಗೆ ಆಗಲಿ, ಅಮ್ಮಾ" ಹರಿನಾರಾಯಣ ನುಡಿದ, "ತೀರ ಅವಸರ ಯಾರಿಗೂ ಒಳ್ಳೆಯದಲ್ಲ."

ಜಯರಾಮ ಯಾರ ಮಾತನ್ನೂ ಅಲ್ಲಗಳೆಯಲಿಲ್ಲ. ಈಗ ಮದುವೆ ನಿಶ್ಚಯಮಾಡಿಕೊಂಡು ಹೋದರೆ ನವಂಬರ್ ಮತ್ತೆ ಹೆಚ್ಚಿಗೆ ದೂರವಿಲ್ಲ.

ಅಷ್ಟರಲ್ಲಿ ಬೆಂಗಳೂರಿನಲ್ಲಿ ಕಟ್ಟಿಸುತ್ತಿರುವ ತನ್ನ ಮನೆಯೂ ಸಿದ್ಧವಾಗಿರುತ್ತದೆ. ಅವನು ಸಂತೋಷದಿಂದ ಶಾಂಭವಿಯ ಮಾತಿಗೆ ಒಪ್ಪಿಕೊಂಡು "ನಾಳೆ ಉಪನಯನಕ್ಕೆ ಬಂದುಬಿಡಿ" ಎಂದೂ ತಿಳಿಸಿ ಹೊರಟುಹೋದ.

ಮರುದಿನ ಶಾಸ್ತ್ರಿಗಳ ಮನೆಯಲ್ಲಿ ಬಹಳ ವಿಜೃಂಭಣೆಯಲ್ಲಿ ನಡೆಯಿತು ಕಿರಿಮಗನ ಉಪನಯನ. ಬಂದ ಆಹ್ವಾನಿತರು ಉಂಡು ಬಿಸಾಡಿದ ಎಲೆ ರಾಶಿಯಾಗಿ ಬಿದ್ದಿತ್ತು ತೋಟದ ಮೂಲೆಯಲ್ಲಿ. ಊರ ನಾಯಿಗಳೆಲ್ಲ ಹಿಂಡು ಹಿಂಡಾಗಿ ಬಂದು ಎಂಜಲನ್ನು ಉಂಡು ನೆಕ್ಕಿ ತೃಪ್ತಿಪಟ್ಟವು. ಊರ ಕೋಳಿ, ಕಾಗೆಗಳಿಗೂ ಬೇಕಾದಷ್ಟು ಸಿಕ್ಕಿತು. ದೊಡ್ಡ ದೊಡ್ಡ ಕೊಳತಪ್ಪಲೆಗಳನ್ನು ತೋಡಿನ ನೀರಿನಲ್ಲಿ ತೊಳೆಯುವಾಗ ಅಲ್ಲಿಯ ಅಸಂಖ್ಯ ಜಲಚರಗಳಿಗೂ ಸಂತಪ್ತಿ! 'ಅನ್ನದಾತಾ ಸುಖಿನೋಭವಂತು!'

ಆದರೆ ಹರಿನಾರಾಯಣನ ಮನೆಯಿಂದ ಯಾರೂ ಹೋಗಲಿಲ್ಲ. ಅವನು ತನ್ನ ಎಂದಿನ ಉಡುಪಿನಲ್ಲಿ ಕಲ್ಲುಬೆಂಚಿನ ಮೇಲೆ ಕುಳಿತು ಹಾಡುತ್ತಿದ್ದಾನೆ,

"ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ!"

ಅವನ ಹತ್ತಿರವೇ ಕೇಶವ ಬೆರಳು ಚೀಪುತ್ತ ಅತ್ತಿತ್ತ ಓಡಾಡುವ ಕಂತ್ರಿ ನಾಯಿಗಳತ್ತ ದೃಷ್ಟಿ ಚೆಲ್ಲಿದ್ದಾನೆ. ಒಳಗೆ ಅಡಿಗೆಕೋಣೆಯಲ್ಲಿ ಕುಟ್ಟಿ ಹಿಡಿದ ಕುಚ್ಚಲು ಅಕ್ಕಿಯ ಗಂಜಿ ಬೇಯುತ್ತಿರುವ ಘಮ್ಮು ವಾಸನೆ!

17

ಉಪನಯನ ಮುಗಿದಮೇಲೆ ಜಯರಾಮ ಹೆಚ್ಚು ದಿನ ಉಳಿಯಲಿಲ್ಲ ಗುರುಪುರದಲ್ಲಿ. 'ವಾರಕ್ಕೆ ಒಂದಾದರೂ ಶಾರದೆ ಕಾಗದ ಬರೀತಾ ಇರಲಿ' ಎಂದು ಕೇಳಿಕೊಂಡ ಶಾಂಭವಿಯನ್ನು. ಅವನಿಗೆ ನೇರವಾಗಿ ಅವಳೊಡನೆ ಮಾತನಾಡಲು ನಾಚಿಕೆ, ಸಂಕೋಚ.

ಅವನು ಶಾರದೆಯನ್ನು ಒಪ್ಪಿದ್ದು, ನವಂಬರದ ನಂತರ ಮದುವೆ ನಡೆಯಲಿರುವದು—ಊರ ಮುಖಾಂತರ ಹಬ್ಬಿತೋ, ಹಳ್ಳಿಯಲ್ಲೆಲ್ಲ ಇದೇ ವಿಷಯ. ಶಾರದೆಯ ಭಾಗಕ್ಕೆ ಕರುಬುವವರೇ ಹೆಚ್ಚಾದರು. ಕಮಲಮ್ಮನಿಗೆ ರಾತ್ರೆ ಹಗಲು ನಿದ್ರೆಯಿಲ್ಲ. ಒಂದೆಡೆ ತಮ್ಮ ತಾಯಿಮನೆಯ ಅಂತಸ್ತು,

ಶ್ರೀಮಂತಿಕೆ, ಮನೆತನದ ಪ್ರತಿಷ್ಠೆ, ಇನ್ನೊಂದೆಡೆ ತಮ್ಮನ ಹೆಂಡತಿಯಾಗು ವವಳ ಆಲೋಚನೆ. ಕೇಳಿದವರಿಗೆಲ್ಲಾ ಒಂದೊಂದು ಉತ್ತರವಿತ್ತು ತಲೆಚಿಟ್ಟು ಹಿಡಿಯಿತು.

ಈ ಸಲ ಬೇಸಾಯದ ಕೆಲಸಗಳೆಲ್ಲ ಹರಿನಾರಾಯಣ ಮತ್ತು ಕೇಶವನ ಪಾಲಿಗೆ. ಮಳೆಗಾಲದ ಕೊನೆಯಲ್ಲಿ ಶಾಂಭವಿ ತನ್ನ ಎರಡನೇ ಮಗುವಿಗೆ ಇದೇ ಸಣ್ಣ ಮನೆಯಲ್ಲಿ ಜನ್ಮಕೊಟ್ಟಳು. ಮುದ್ದಾದ ಗಂಡುಮಗು! ಎಳೆ ಕಂದನ ಅಳು–ನಗುವಿನಲ್ಲಿ ಮನೆಯಲ್ಲಿದ್ದಿತು ಹೊಸ ಸಂಭ್ರಮ. ವೇದಮ್ಮ ಸೊಸೆಗೆ ಹೆಚ್ಚು ಉಪಚಾರ ಮಾಡಿದರೆ ಕೇಶವ ಪದೇಪದೇ ಅವಳನ್ನು ವಿಚಾರಿಸಿಕೊಳ್ಳುವ. ಶಾರದೆ, ಈಶ್ವರಿ ಇಬ್ಬರೂ ಅತ್ತಿಗೆಯ ಅಜ್ಞಾಧಾರಕರು. ಎದ್ದು ಓಡಾಡುವಂತಾದರೂ ಯಾರೂ ಅವಳಿಗೆ ಕೆಲಸವನ್ನು ಮಾಡಲು ಬಿಡಲಿಲ್ಲ.

"ನೀನು ಮಗುವನ್ನು ನೋಡ್ಕೊಂಡು ಇನ್ನೂ ಕೆಲವು ದಿನ ವಿಶ್ರಾಂತಿ ತೆಗೆದುಕೋ. ಕೆಲಸ ಮಾಡಲು ನಾವಿದ್ದೇವೆ."

ಕೇಶವನ ಮಾತಿಗೆ ಅತ್ತಿಗೆಯ ಹೃದಯ ತುಂಬುತ್ತದೆ, ಮನೆಯವರೆಲ್ಲ ತನ್ನನ್ನು ಹಚ್ಚಿಕೊಂಡಿದ್ದಾರೆ. ಎಷ್ಟು ಇಷ್ಟಪಡುತ್ತಾರೆ!

ಈ ನಡುವೆ ಜಯರಾಮನ ಕಾಗದಗಳು ವಾರಕ್ಕೊಂದು ಹಾಜರು. ಶಾರದೆಗೆ ಉತ್ತರ ಬರೆಯಲು ತಿಳಿಯದು. 'ನಾಳೆ ಪಟ್ಟಣಕ್ಕೆ ಹೋಗಿ ಜೀವಿಸ ಬೇಕಾದವಳು ನೀನು. ಓದಿ ಬರೆಯಲು ಸರಿಯಾಗಿ ಅಭ್ಯಾಸ ಮಾಡಿಕೋ" ಎಂದೆಂದು ಜಯರಾಮನ ಕಾಗದಗಳಿಗೆ ತಾನೇ ಉತ್ತರಿಸಿದಳು ಶಾಂಭವಿ! "ಬಾ, ನಿನಗೆ ಕಲಿಸಿಕೊಡುತ್ತೇನೆ" ಎಂದು ಒಂದೆರಡು ಬಾರಿ ಖಾಲಿ ಕಾಗದ, ಪೆನ್ಸಿಲ್‌ನ್ನು ಅವಳ ಮುಂದಿಟ್ಟು, ಗುಂಡಾಗಿ ಬರೆಯಲು ಹೇಳಿಕೊಟ್ಟಳು. ಕೆಲವು ಪಾಠಗಳನ್ನು ಓದಲು ಅಭ್ಯಾಸ ಮಾಡಿಸಿದಳು.

"ನೀನು ಪಾಠ ಹೇಳುವ ಮಾಸ್ತರಿಣಿಯಾಗಿದ್ದರೆ ಒಳಿತಾಗುತ್ತಿತ್ತು. ನನಗೂ ಹೇಳಿಕೊಡು." ಕೇಶವ ಮೊದಲು ಸಿದ್ಧನಾಗಿ ಬರುವ.

"ಜಯರಾಮ ಬೇಜಾರು ಮಾಡಿಕೊಳ್ಳಬಾರದೆಂದು ಅವಳಿಗೆ ಹೇಳಿ ಕೊಡ್ತೇನೆ. ಅದನ್ನು ನೋಡಿ ನೀನು ಕಲಿತುಕೋ." ಶಾಂಭವಿ ಕನ್ನಡ ಮತ್ತು ಇಂಗ್ಲಿಷನ್ನು ಅಷ್ಟಿಷ್ಟು ಓದಿಸಲು ಇಷ್ಟಪಟ್ಟಳು.

ಕೇಶವ ಉತ್ಸಾಹದಲ್ಲಿ ಆಗಾಗ ಬಂದರೂ ಅವನಿಗೆ ಬೇಗನೆ ಬೇಸರ ಬಂದು ಬಿಟ್ಟಿತು. ಆದರೆ ಶಾರದೆ ಅತ್ತಿಗೆ ಹೇಳುವುದನ್ನೆಲ್ಲ ಲಕ್ಷ್ಯಗೊಟ್ಟು ಕಲಿತಳು.

ಕಾಗದ ಹೇಗೆ ಬರೆಯಬೇಕು ಎನ್ನುವದೂ ತಿಳಿಯಿತು. ಮುಂದೊಂದು ದಿನ ತನ್ನದೇ ಅಕ್ಷರದಲ್ಲಿ ಜಯರಾಮುನಿಗೆ ಮೊದಲ ಕಾಗದ ಬರೆದು ಅಂಚೆಗೆ ಹಾಕಿದಾಗ ಅವಳಲ್ಲಿ ಎಲ್ಲಿಲ್ಲದ ಅಭಿಮಾನ ಉಕ್ಕಿತು ಅತ್ತಿಗೆಯ ಮೇಲೆ.

ಅದೊಂದು ದಿನ ಅನಿರೀಕ್ಷಿತವಾಗಿ ಗಣಪತಿ ಆಗಮಿಸಿದರು ಮಾಧವ ನೊಂದಿಗೆ. ಮೈಕೈತುಂಬಿಕೊಂಡ ಮಾಧವನ ಚಹರೆ ಸಂಪೂರ್ಣ ಬದಲಾಗಿದೆ. ಇಲ್ಲಿಂದ ಹೋಗಿ ಕೇವಲ ಆರು ತಿಂಗಳಾಗಿದ್ದರೂ ಈ ನಡುವೆ ನಾಲ್ಕೈದು ಇಂಚು ಎತ್ತರ ಬೆಳೆದಿದ್ದಾನೆ. ಸ್ವರ ಬದಲಾಗಿದೆ. ಮುಖದಲ್ಲಿ, ದೇಹದಲ್ಲಿ ತಾರುಣ್ಯದ ಬದಲಾವಣೆ ಸ್ಪಷ್ಟವಾಗಿ ಗೋಚರಿಸಿದೆ.

"ತುಂಬಾ ಉಪಕಾರವಾಯ್ತು ನಿನ್ನ ಮಗ ಬಂದು ! ಈಗ ಬೇರೆ ಸಣ್ಣ ಹುಡುಗನನ್ನು ಇಟ್ಟುಕೊಂಡಿದ್ದೇನೆ." ಗಣಪತಿ ಹೆಚ್ಚಿಗೆ ಮಾತನಾಡದೆ ಬಂದ ದಿನವೇ ಹೊರಟುಹೋದರು ಸಿರ್ಸಿಗೆ.

"ಯಾಕೆ ದಿಢೀರ್ ಅಂತ ಕರೆದುಕೊಂಡು ಬಂದರು?" ಕೇಳಿದಳು ಶಾಂಭವಿ.

"ಅಲ್ಲಿ ಖಾಯಂ ಆಗಿ ಇರ್ತೇನೆ ಎಂದು ಯೋಚಿಸಿದ್ದಿಯಾ? ಅವರ ಹೆಂಡತಿಗೆ ಸೌಖ್ಯವಿರಲಿಲ್ಲ, ಕರೆದಿರಬೇಕು ನನ್ನನ್ನು. ಅವರು ಹೇಳಿದ ಬಿಟ್ಟಿ ಚಾಕರಿ ಮಾಡಲು ನನ್ನಿಂದಾಗದು. ಸಿರ್ಸಿ ಊರು ಬೇಜಾರು!"

ಆದರೆ ನಿಜಸಂಗತಿಯೇ ಬೇರೆ. ತನ್ನ ಅಕ್ಕನ ಮಗ ನಂಬಿಕೆ, ವಿಶ್ವಾಸಕ್ಕೆ ಅರ್ಹನಾದವನು ಎಂದು ತಿಳಿದಿದ್ದರು ಗಣಪತಿ. ಬಡತನದಲ್ಲಿ ಬೆಳೆದ ಹುಡುಗನ ಮೇಲೆ ಅವರಿಗೂ, ಅವರ ಹೆಂಡತಿಗೂ ಅಪಾರ ಕರುಣೆ. ಮಾಧವ ಹೊಸಪರಿಸರದಲ್ಲಿ ಮೊದಮೊದಲು ಬೆದರಿದ ಹಕ್ಕಿಯಂತಿದ್ದ. ಮಾವ ಅತ್ತೆ ಹೇಳಿದ ಸಣ್ಣಪುಟ್ಟ ಕೆಲಸಗಳಲ್ಲಿಯೂ ಅವನಿಗೆ ಅಪಾರ ಶ್ರದ್ಧೆ. ಅವರ ಹೊಗಳಿಕೆಗೆ ಪಾತ್ರನಾಗುವ ಬಯಕೆಯಿಂದಲೋ ಅಥವಾ ನಿಜವಾದ ಸಹಾಯ ಮಾಡುವ ಉದ್ದೇಶದಿಂದಲೋ ಅವನು ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ಮಾಡಿ ಮುಗಿಸುವ. ಹಾಲು ಕರೆದು ಅಭ್ಯಾಸವಿಲ್ಲದಿದ್ದರೂ ಎರಡು ದಿನಗಳಲ್ಲಿ ಪಳಗಿತು ಅವನ ಕೈ. ಅಡಿಕೆ ತೋಟ, ಗದ್ದೆ, ಮನೆ ವ್ಯವಹಾರದಲ್ಲಿ ಗಣಪತಿಯ ಜೊತೆಯಲ್ಲಿಯೇ ಸಹಕಾರ. ಪೇಟೆಯಿಂದ ಸಾಮಾನು ತರುವಾಗ, ಬ್ಯಾಂಕ್‌ಗೆ ಹೋಗಲು ಇವನೇ ಆಗಬೇಕು.

ಗಣಪತಿಯ ಇಬ್ಬರು ಹುಡುಗಿಯರಿಗೂ ಇವನು ಅಣ್ಣನ ಸಮಾನ. ಅವರವರಲ್ಲಿ ಜಗಳವೆದ್ದಾಗ ಮಾಧವ ಬಂದು ತೀರಿಸಬೇಕು. ಅವರೊಂದಿಗೆ

ಆಡಬೇಕು. ಇನ್ನು ತಿನ್ನುಣ್ಣುವದಕ್ಕೆ ಮನೆಯಲ್ಲಿ ಯಾವ ಕೊರತೆಯೂ ಇಲ್ಲ. ಬಿಸಿಹಾಲು, ತಿನ್ನುವಷ್ಟು ದೋಸೆ, ಸಮೃದ್ಧವಾದ ಗಟ್ಟಿಮೊಸರು, ತುಪ್ಪ. ದಿನಕ್ಕೊಂದು ಬಗೆಯ ಭಕ್ಷ್ಯಗಳು, ಹುರಿದ ತಿಂಡಿ. ಸಿರಿವಂತ ವಾತಾವರಣದಲ್ಲಿ ಪುಷ್ಕಳ ಭೋಜನವನ್ನುಂಡು ಬೆಳೆಯಿತು ಅವನ ದೇಹ.

"ಹುಡುಗ ಚಿನ್ನದ ಸ್ವಭಾವದವ. ಇಲ್ಲೇ ಇರಲಿ, ನಮ್ಮ ಸಹಾಯಕ್ಕಾಯಿತು." ಅತ್ತೆಗೆ ಮಾಧವನಲ್ಲಿ ಬೆಳೆಯಿತು ಪ್ರೀತಿ, ಆತ್ಮೀಯತೆ. ತಮ್ಮ ಮಗನೇ ಎನ್ನುವಂತೆ ಉಪಚಾರ.

ಆದರೆ ತುಕ್ಕುಹಿಡಿದ ಕಬ್ಬಿಣವನ್ನು ಎಷ್ಟು ತಿಕ್ಕಿದರೂ ಚಿನ್ನದಂತೆ ಮಾಡಲಾಗದು. ಹುಟ್ಟಿನಿಂದ ಸೋಮಾರಿ, ಛಲ, ಹಟಗಾರನಾದ ಮಾಧವ ಅತ್ತೆಮಾವನ ಒಳ್ಳೆಯತನದ ದುರುಪಯೋಗ ಪಡೆದ. ಕೊಬ್ಬಿದ ದೇಹ ಜಡವಾಯಿತು. ದಿನೇದಿನೇ ಮೈಗಳ್ಳನಾದ. ಸಿನಿಮಾ ಹುಚ್ಚು, ಉಡುಪಿನ ವ್ಯಾಮೋಹ, ಹೋಟೆಲ್ ತಿಂಡಿತೀರ್ಥಗಳ ಬಯಕೆ. ಜೊತೆಯಲ್ಲಿ ಯಾರ ಸ್ನೇಹದ ಪ್ರಭಾವವೋ, ಸಿಗರೇಟು ಬಂದಿತು. ಅತ್ತೆ ಅವನನ್ನು ತಿದ್ದಲು ಪ್ರಯತ್ನಿಸಿದರೂ ಅವನಲ್ಲಿ ಮೊಳೆಯಿತು ಅಹಂಕಾರ. ತಾನೇ ಈ ಮನೆಯ ಯಜಮಾನ ಎಂಬ ಭ್ರಮೆ.

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಯುತ್ತಾನಂತೆ! ತಾನು ಯಾರು? ಎಲ್ಲಿಂದ ಬಂದೆ? ಯಾಕೆ ಬಂದೆ? ಎನ್ನುವದನ್ನೂ ಯೋಚಿಸದೆ ಯಾವದೋ ಕುರುಡುತನ ಆವರಿಸಿತು ಅವನನ್ನು. ಅತ್ತೆಮಾವನ ಮಾತುಗಳೂ ಅಲಕ್ಷ್ಯವಾದವು. ಆಗಾಗ ಕದಿಯುವ ಚಟವೂ ಹೊಸದಾಗಿ ಹುಟ್ಟಿತು ಅವನಲ್ಲಿ. ಇಂದು ನಾಲ್ಕಾಣೆ, ನಾಳೆ ಎರಡಾಣೆ, ಮತ್ತೆ ರೂಪಾಯಿ. ಒಮ್ಮೆ ಮೇಜಿನ ಮೇಲಿರಿಸಿದ ನೂರರ ನೋಟು ನಾಪತ್ತೆ.

ಮಾವನ ಸಂಶಯ ಬಲಿಯಿತು. ತಾನು ಹುಡುಕಿ ಕರೆದುಕೊಂಡು ಬಂದ ಅಕ್ಕನ ಮಗನಲ್ಲಿ ಇಂತಹ ಬುದ್ಧಿಯನ್ನು ನಿರೀಕ್ಷಿಸಿರದ ಅವರಿಗೆ ಆಘಾತವಾಗಿತ್ತು. ಇವನು ಜೊತೆಯಲ್ಲಿದ್ದರೆ ತಮಗೇ ಕೇಡಾಗಬಹುದೆಂದು ಅರಿತು ತಿದ್ದಿ ಬುದ್ಧಿ ಹೇಳುವ ಗೋಜಿಗೆ ಹೋಗದೆ ಸೀದಾ ಗುರುಪುರದ ದಾರಿ ತೋರಿಸಿದರು.

ಬಡಕುಟೀರಕ್ಕೆ ಹಿಂದಿರುಗಿದಮೇಲೆ ಸಿರ್ಸಿಯ ಸುಖೀಜೀವನ ಕೈಬೀಸಿ ಕರೆಯಿತು ಅವನನ್ನು. ತನ್ನ ದುರ್ಬುದ್ಧಿಗಾಗಿ ಶಪಿಸಿಕೊಂಡು ಹಳಹಳಿಸಿದ. ಮಾವನ ದೊಡ್ಡ ಮಹಡಿ ಮನೆ, ಅಂದವಾದ ಕೋಣೆ, ವಿದ್ಯುದ್ದೀಪದ

ಸೌಕರ್ಯಗಳನ್ನು ನೆನೆಯುತ್ತಿದ್ದಂತೆ ಇಲ್ಲಿ ಮುಳಿಹುಲ್ಲಿನ ಮಾಡು, ತಿಗಣೆ ತುಂಬಿದ ಗೋಡೆ, ಮಣ್ಣು ನೆಲ, ಇಕ್ಕಟ್ಟಾದ ಕತ್ತಲುಕೋಣೆಯನ್ನು ನೋಡಿ ಜಿಗುಪ್ಸೆ. ಇಲ್ಲಿಂದ ಓಡಿಹೋಗಬೇಕು ಎಂದೆನಿಸಿತು.

ಮನೆಯ ಕ್ರಮ, ಊಟದ ರುಚಿ, ಜೀವನ ಎಲ್ಲಾ ಮೊದಲಿನಂತಿದೆ, ಬದಲಾವಣೆ ಆಗಿಲ್ಲ. ಬದಲಾದದ್ದು ಮಾಧವನ ಸ್ವಭಾವ. ಖರ್ಚನ್ನು ಹೆಚ್ಚಿಸಲು ಹುಟ್ಟಿಕೊಂಡಿದೆ ಇನ್ನೊಂದು ಜೀವ. ಯಾವ ಸುಖಕ್ಕಾಗಿ? ಸಿಂಬಳ ಸುರಿಸುತ್ತ, ತಲೆಯ ಹೇನು ಕೆರೆದುಕೊಳ್ಳುವ ಈಶ್ವರಿಯನ್ನು ನೋಡಿದರೆ ಅಸಹ್ಯ ಹುಟ್ಟುತ್ತದೆ. ಪಾಪ, ಅವಳಿಗೆ ಮೊದಲಿನಿಂದಲೂ ಮೂಗಿನಿಂದ ಸಿಂಬಳ ಸುರಿಯುವ ರೋಗ. ಹಳ್ಳಿಮದ್ದಿನಿಂದ ಕಡಿಮೆಯಾಗಿರ ಲಿಲ್ಲ. ಮಾಧವನಿಗೆ ತಂಗಿಯ ರೋಗ ತಿಳಿದಿದ್ದರೂ ಈಗ ಅವನು ಶ್ರೀಮಂತ ಮಾವನ ಮನೆಯಿಂದ ಹಿಂದಿರುಗಿದವನಲ್ಲವೇ? ಅವಳು ಹತ್ತಿರ ಬಂದರೆ ಸಾಕು, ರೇಗತೊಡಗಿದ. ಅದೇಕೆ, ಕೇಶವನ ನೆರಳು ನೋಡಿದರೆ ಅಷ್ಟೆತ್ತರ ಹಾರಲು ಪ್ರಾರಂಭಿಸಿದ. ಬೆರಳು ಚೀಪುವದನ್ನು ನೋಡಿದರೆ ಅವನಿಗೆ ಓಕರಿಕೆ ಬರುತ್ತದಂತೆ.

ಅವನ ಬಾಯಿಯಿಂದ ಬೆರಳು ತಪ್ಪಿಸಬೇಕೆಂದು ಶಾಂಭವಿ ಎಷ್ಟು ಕಷ್ಟ ಪಡಲಿಲ್ಲವೇ? ಅತ್ತಿಗೆಯ ಮಾತಿಗೆ ಬೆಲೆಕೊಟ್ಟು ಅವನು ಹಗಲು ಚೀಪುವ ದನ್ನು ನಿಲ್ಲಿಸಿದ್ದರೂ ರಾತ್ರಿಯಾಯಿತೆಂದರೆ ಹೊದಿಕೆಯೊಳಗೆ ಅದು ಬಾಯಿ ಯನ್ನು ಅರಸುತ್ತದೆ. ಬೆರಳಿಲ್ಲದೆ ಅವನು ಖಿನ್ನವದನನಾದಾಗ ಅತ್ತಿಗೆಗೆ ಮನದಲ್ಲೇ ಬೇಸರ. 'ಬುದ್ಧಿಬಂದಾಗ ಅವನೇ ತನ್ನ ಚಟವನ್ನು ಬಿಡಿಸಿ ಕೊಳ್ಳಲಿ' ಎಂದುಕೊಂಡಿದ್ದಾಳೆ. ಅವನು ಅವಳೆದುರಿನಲ್ಲಿ ಬೆರಳು ಚೀಪಿ ದರೂ ಅತ್ತ ಗಮನ ಕೊಡುವದನ್ನೂ ನಿಲ್ಲಿಸಿದ್ದಾಳೆ. ಆದರೆ ಯಾವಾಗ ಎರಡೂ ಕೈಗಳಿಗೆ ಸತತವಾಗಿ ಬೀಡಿ ಉದ್ಯೋಗ ದೊರೆಯಿತೋ ಅಂದಿನಿಂದ ಆ ಕೆಲಸವಿರುವಷ್ಟು ಹೊತ್ತು ಅವನಿಗೆ ಬೆರಳಿನ ಚಿಂತೆಯಿಲ್ಲ. ಮಾಧವನಿಗೆ ತಮ್ಮನ ದುರ್ಬಲತೆಯ ಅರಿವಿದ್ದರೂ ಹಿಂದೆ ಕಾಣಿಸಿಕೊಳ್ಳದ್ದು ಈಗ ಹೇಸಿಗೆಗೆ ಎಡೆಕೊಟ್ಟಿದೆ.

"ಹತ್ತಿರ ಬಂದರೆ ನಿನ್ನ ಮೈಬೆವರಿನ ವಾಸನೆ. ಅದೂ ಸಾಲದೆ, ಬೆರಳು ತಿಂದು ತಿಂದು ಕೈಯೆಲ್ಲ ಎಂಜಲಿನ ನಾತ! ಹೋಗೋ ಆಚೆ. ಒಂದು ದಿನ ರಾತ್ರಿ ನಿನ್ನ ಬೆರಳನ್ನು ಕುಯ್ದುಬಿಡ್ತೇನೆ, ನೋಡ್ಕೋ."

ತಮ್ಮನ ಮೇಲೆ ವೃಥಾ ಅಸಮಾಧಾನ. ಕಾಲುಕೆದರಿ ತಾನೇ ಜಗಳ ತೆಗೆದು ಸಿಕ್ಕಾಪಟ್ಟೆ ಹೊಡೆಯುವಾಗ ಬಿಡಿಸಲು ಶಾಂಭವಿ ಬರಬೇಕು.

"ಸಿರ್ಸಿಯಿಂದ ಬಂದ್ಮೇಲೆ ನೀನು ಬಹಳ ಬದಲಾಗಿದ್ದಿ. ಹೋಗಿ ಹೋಗಿ ದುರ್ಬುದ್ಧಿ ಕಲಿತು ಬಂದಿದ್ದಿಯಾ?"

"ಅದನ್ನು ನೀನು ನನಗೆ ಹೇಳಬೇಕಾಗಿಲ್ಲ. ನಾನು ಬುದ್ಧಿ ಕಲೀತೇನೆ ಬಿಡ್ತೇನೆ, ನಿನಗೇನು ಅಧಿಕಾರ?"

"ಅವಳಿಗೂ ಎದುರುತ್ತರ ಕೊಡುವಷ್ಟು ಎತ್ತರ ಆಗಿದ್ದೀಯ?" ಅವನ ಅಮ್ಮನಿಗೆ ರೇಗುತ್ತದೆ, "ನಾಯಿಗೆ ವರ್ಷ ಆದ್ಹಾಗೆ ಆಯ್ತು, ಇನ್ನೂ ಬುದ್ಧಿ ಬಂದಿಲ್ಲ ನಿನಗೆ."

"ಈ ಮನೆಯಲ್ಲಿದ್ದರೆ ಯಾರಿಗೂ ಬುದ್ಧಿ ಬರುವದಿಲ್ಲ. ಕೊಳುದಂಡಕ್ಕೆ ಇದ್ದಾರೆ ಎಲ್ಲರೂ!"

ಮಾಧವನ ಅಸಮಾಧಾನ ಎಲ್ಲರ ಮೇಲೆಯೂ ತಿರುಗುತ್ತದೆ. ಮೀಸೆ ಹೊತ್ತ ಗಂಡಸಾದರೂ ಸಂಸಾರದ ಭಾರವನ್ನು ತಾನು ಸ್ವಲ್ಪ ಹೊರಬೇಕು ಎನ್ನುವ ಬುದ್ಧಿಯಿಲ್ಲ. ಸಿನಿಮಾ, ಹೋಟೆಲ್‌ನ ತಿಂಡಿ, ತಿರುಗಾಟಗಳಿಗೆ ಕಾತರಿಸತೊಡಗಿತು ಅವನ ಜೀವ. ಮೇಲ್ಮನೆ ಸುಂದ್ರ, ಆಚೆಬೈಲಿನ ರಂಗ, ಕೆಳಬೈಲಿನ ವೆಂಕ್ಟ ಇವರೊಡನೆ ಮೊದಲಿನ ಸ್ನೇಹಾಚಾರ ತಪ್ಪಿತು. ಪ್ರತಿ ದಿನ ನಡೆದುಕೊಂಡು ಹೋಗಲಾರಂಭಿಸಿದ ಗುರುಪುರದ ಪೇಟೆಗೆ. ದಿನವೆಲ್ಲ ಅಲ್ಲಿ ಏನು ಮಾಡುತ್ತಾನೋ, ಕೇಳಲು ಯಾರಿಗೂ ಧೈರ್ಯವಿಲ್ಲ.

ತನ್ನ ಮೈದುನನನ್ನು ಹೇಗಾದರೂ ಮೇಲೆ ತರಬೇಕು ಎಂದು ಆಶಿಸುತ್ತಿದ್ದ ಶಾಂಭವಿಗೆ ಮಾಧವ ಸಮಸ್ಯೆಯ ವ್ಯಕ್ತಿಯಾದ. ಕೊನೆಗೊಮ್ಮೆ ಅವಳಿಂದ ತಡೆದುಕೊಳ್ಳಲಾಗಲಿಲ್ಲ.

"ದೊಡ್ಡವನಾಗಿದ್ದೀಯ, ನಿನ್ನ ಜವಾಬ್ದಾರಿ ಏನೆಂದು ಅರ್ಥಮಾಡಿಕೊಂಡು ಮನೆಗೆ ಸ್ವಲ್ಪ ಸಹಾಯ ಮಾಡಲು ಕಲಿತುಕೋ."

ಮಾಧವನ ಕಣ್ಣುಗಳು ಕಿಡಿಕಾರಿದವು, "ನಿನಗೆ ಬೇಕಾದಂತೆ ನೀನು ದೊಡ್ಡಣ್ಣನನ್ನು ತಿದ್ದಿಕೋ, ಅತ್ತಿಗೇ. ಆದರೆ ನನ್ನ ಸುದ್ದಿಗೆ ಮಾತ್ರ ಬರಬೇಡ!"

18

"ಏಯಸ್, ಕೇಳಿದಿಯೇನೇ ? ಎಲ್ಲಿದ್ದೀ ?" ಶಾಂಭವಿಯನ್ನು ಕರೆಯುತ್ತ ಅಂಗಳದಲ್ಲಿ ಕಾಲಿರಿಸಿದ ಹರಿನಾರಾಯಣ, "ಉಫ್, ಏನು ಸೆಕೆ....!"

ಅಲ್ಲೇ ಅಂಗಳದ ಬದಿಯಲ್ಲಿ ಗೋರಟೆ ಗಿಡಗಳ ಹತ್ತಿರ ಬತ್ತದ ಬುಟ್ಟಿಗೆ ಸಗಣಿ ಹಚ್ಚುತ್ತಿದ್ದ ಶಾಂಭವಿಗೆ ಅವನ ಕರೆ ಕೇಳಿಸಿತು, ಓಗೊಡಲಿಲ್ಲ. ಇನ್ನೇನು ಮೂರು ನಾಲ್ಕು ದಿನಗಳಲ್ಲಿ ಗದ್ದೆ ಕೊಯ್ಲು ಪ್ರಾರಂಭ. ಕೊಯ್ದ ಪೈರನ್ನು ಅಂಗಳದಲ್ಲಿ ಹಾಕುವ ಮೊದಲು ಮಳೆಯಿಂದ ಹಾಳಾದ ಅಂಗಳವನ್ನು ಚೆನ್ನಾಗಿ ಗುದ್ದಿ ಸರಿಪಡಿಸಿಕೊಳ್ಳಬೇಕಿತ್ತು. ಮಾಧವನನ್ನು ಅಂಗಲಾಚಿದ್ದಳು ಬೆಳಗ್ಗೆ,

"ಪೆಟ್ಟುಮಣೆ ಕೊಡ್ತೇನೆ. ಬಿಸಿಲೇರುವ ಮೊದಲೇ ನೆಲವನ್ನು ಗುದ್ದಿ ಸರಿಪಡಿಸಿಕೊಡು" ಎಂದು.

ಆದರೆ ಅವನು ಕಿವಿ ಕೇಳದವನಂತೆ ತನ್ನ ಪಾಡಿಗೆ ಎದ್ದು ಎತ್ತಲೋ ಹೊರಟುಹೋಗಿದ್ದಾನೆ. ಅವನ ಮೇಲಿನ ಸಿಟ್ಟಿನಿಂದ ಶಾಂಭವಿ ತಾನೇ ಪೆಟ್ಟುಮಣೆಯನ್ನೆತ್ತಿಕೊಂಡು ಬಿಸಿಲೇರುವ ತನಕ ನೆಲವನ್ನು ಗುದ್ದಿಗುದ್ದಿ ಸರಿಪಡಿಸುತ್ತಿದ್ದಂತೆ ಕೇಶವ ಅವಳ ಕಷ್ಟವನ್ನು ನೋಡಲಾರದೆ ತಾನು ಎತ್ತಿಕೊಂಡಿದ್ದ ಪೆಟ್ಟುಮಣೆಯನ್ನು.

"ಬತ್ತದ ಬೆಳೆ ಏನೇನೂ ಚೆನ್ನಾಗಿಲ್ಲ, ಕೇಶವ. ಮುಂದಿನ ಸಾರಿ ಸುಫಲ, ಯೂರಿಯಾ ಹಾಕಿದರೆ ಹತ್ತು ಮುಡಿ ಜಾಸ್ತಿ ಸಿಕ್ಕೀತು."

"ಹೌದು ಅತ್ತಿಗೆ, ಶಾಸ್ತ್ರಿಗಳ ಗದ್ದೆಗೆ ಚೀಲ ಚೀಲ ತಂದು ಸುರೀತಾರೆ. ಅದಕ್ಕೇ ಗದ್ದೆಯಲ್ಲಿ ಬರಿಯ ತೆನೆಗಳೇ ಕಾಣಿಸುತ್ತವೆ."

"ದುಡ್ಡಿದ್ದವನೇ ದೊಡ್ಡಪ್ಪ ಅಲ್ಲವೇ ? ನಮ್ಮ ಹತ್ತಿರ ಒಂದು ಪಂಪು ಕೂಡ ಇಲ್ಲಾ, ಔಷಧಿ ಬಿಡೋಣ ಅಂದ್ರೆ."

"ಮೊನ್ನೆ ಗ್ರಾಮಸೇವಕ ಸಿಕ್ಕಿದ್ದ. ಪಂಪು, ಇಂಜಿನ್ನು ಎಲ್ಲಾ ಸಾಲಕ್ಕೆ ಅಥವಾ ಬಾಡಿಗೆಗೆ ಪಂಚಾಯ್ತಿ ಆಫೀಸಿನಿಂದ ಕೊಡುತ್ತಾರಂತೆ. ತರಿಸಿ ಕೊಳ್ಳೋಣ."

"ನಾನು ಕರೆದದ್ದು ಕೇಳಿಸಲಿಲ್ಲವೇ ?" ಸೀತಾಫಲದ ಗಿಡದ ಕೆಳಗೆ ಇರಿಸಿದ ಮಣ್ಣಿನ ಪಾತ್ರೆಯಿಂದ ತಾನೇ ನೀರನ್ನು ತೆಗೆದು ಕಾಲಿಗೆ ಹಾಕಿಕೊಂಡ,

ಹರಿನಾರಾಯಣ, "ಮುಂದಿನ ವರ್ಷ ಗದ್ದೆಗೆ ಬೇಸಾಯ ಮಾಡೋಣ. ಈಗ ಇಬ್ಬರೂ ಕೆಲಸ ನಿಲ್ಲಿಸಿ ಒಳಗೆ ಬನ್ನಿ."

ಅವನ ಧ್ವನಿ ಎಂದಿನಂತಿರಲಿಲ್ಲ. ಎಲ್ಲೋ ಆಳಬಾವಿಯಿಂದ ಹೊರ ಬಂದಂತೆ ಇದೆ. ಮುಖ ನೋಡಿಯೇ ಶಾಂಭವಿಗೆ ಬೇರೇನೋ ವಿಶೇಷವಿದೆ ಎಂದೆನಿಸಿ ಸಗಣಿ ಕೈಯನ್ನು ಅವಸರದಲ್ಲಿ ತೊಳೆದು ಅವನ ಹಿಂದೆಯೇ ಬಂದಳು ಒಳಗೆ. ಕೇಶವನೂ ಹಿಂಬಾಲಿಸಿದ ಅವಳನ್ನು. ಹಿಂದಿನ ಬಾಗಿಲಿನಿಂದ ಬಂದಳು ವೇದಮ್ಮ.

"ಶಾರದೆ, ಒಂದು ಗ್ಲಾಸು ನೀರು ತಾ. ತುಂಬ ಬಾಯಾರಿಕೆ. ಹೌದಾ, ನೀನೀಗ ನನ್ನ ಮೇಲೆ ಬಾಯಿ ಮಾಡ್ಬೇಡ." ಹರಿನಾರಾಯಣ ಗೋಡೆಗೆ ಒರಗಿ ಕುಳಿತ, "ನಾನು ಜ್ವರದಲ್ಲಿ ಮಲಗಿದ್ದಾಗ ಗಂಗಾ ಬಂದವಳು ಒಂದು ವಿಷಯ ಹೇಳಿದ್ದಳು, ನೆನಪಿದೆಯಾ ? ಶಾಸ್ತ್ರಿಗಳು ಒಕ್ಕಲುಗಳಿಗೆಲ್ಲಾ ಹಣ ಕೊಟ್ಟು ತಮ್ಮ ಗೇಣಿಭೂಮಿಯನ್ನು ಬಿಡಿಸಿಕೊಳ್ಳುವ ಆಲೋಚನೆಯಲ್ಲಿ ಇದ್ದಾರೆ ಎಂದು."

"ಹೌದು ಹೌದು, ಏನಾಯ್ತೀಗ ?"

"ಇವತ್ತು ನನಗೆ ಹೇಳಿಕಳುಹಿಸಿದ್ದರು 'ಎರಡು ವರ್ಷದ ಗೇಣಿ ಇನ್ನೂ ಕೊಟ್ಟಿಲ್ಲ' ಅಂದರು ಮಾತು ಪ್ರಾರಂಭಿಸುತ್ತ. ಆಮೇಲೆ ಈಗ ಸರಕಾರದ ಕಾನೂನು ದಿನಕ್ಕೊಂದು ವಿಧ ಆಗ್ತಾ ಇದೆ. ತುಕ್ರ, ರಂಗಪ್ಪಾಚಾರಿ, ಗುಂಡಿ ಮನೆಯವರಿಗೆ ಗೇಣಿಗದ್ದೆ, ತೋಟಗಳನ್ನು ಬಿಟ್ಟುಕೊಡಿ ಎಂದಿದ್ದೇನೆ. ಅವರೂ ಒಪ್ಕೊಂಡಿದ್ದಾರೆ. ನೀನೂ ನಿನ್ನ ಗೇಣಿಗದ್ದೆಯನ್ನು ಬಿಟ್ಟುಕೊಡಬೇಕು' ಎಂದರು."

"ಇಲ್ಲಿಗೆ ಬಂತಾ ಕಥೆ? ನೀವೇನು ಹೇಳಿದಿರಿ ?"

"ನಾವು ಊಳ್ತಾ ಇರುವದು ನ್ಯಾಯವಾಗಿ ನಿಮಗೆ ಸೇರಿದ ಭೂಮಿ. ನೀವು ಬಿಟ್ಟುಕೊಡಲೇಬೇಕು ಅಂದರೆ ಕೊಡುವದು ಧರ್ಮ ಅಂದೆ."

"ತಲೆ ಹೊಡ್ಕೊಳ್ಳಬೇಕು ನಿಮ್ಮ ಬುದ್ಧಿಗೆ !" ಶಾಂಭವಿ ಗಾಳಿಯಲ್ಲಿ ಮುಷ್ಟಿ ಆಡಿಸಿದಳು, "ಭೂಮಿ ಅವರದಾದರೇನಂತೆ, ಬೆವರು ಸುರಿಸಿ ಎತ್ತಿನಂತೆ ದುಡೀತಾ ಇರುವವರು ನಾವು. ಸರಕಾರ ನ್ಯಾಯವಾದುದನ್ನೇ ಮಾಡಿದೆ."

"ನಾರಾಯಣನ ತಂದೆ ತಮ್ಮ ಚಿಕ್ಕಪ್ರಾಯದಲ್ಲಿ ಇಲ್ಲಿಗ್ಬಂದು ಈ ಒಂದು ಎಕರೆ ಗದ್ದೆಯನ್ನು ಗೇಣಿಗೆ ಮಾಡಿಕೊಂಡಿದ್ದರು....ವರ್ಷ ಎಷ್ಟಾಯ್ತು,

ಶಾಂಭವಿ ?" ವೇದಮ್ಮ ಬೆರಳುಗಳನ್ನು ಎಣಿಸಿದಳು. "ನಲ್ವತ್ತೊ ಐವತ್ತೊ ವರ್ಷಗಳಾದವು ನಾವು ಸಾಗುವಳಿ ಹಿಡಿದು."

"ಆಗಲಿ ಬಿಡಮ್ಮ ನೂರು ವರ್ಷ. ಬಾಡಿಗೆಮನೇಲಿ ವಾಸಮಾಡಿದ್ದಾಗೆ, ಗೇಣಿ ಕೊಡ್ತಾ ಇದ್ದರೂ ಭೂಮಿ ನಮ್ಮದಲ್ಲ !"

ಶಾಂಭವಿಯ ಹುಬ್ಬುಗಳು ಮೇಲೇರಿದವು. ಸರಿಯಾಗಿ ಮಾತನಾಡಲು ತಿಳಿಯದ ಹರಿನಾರಾಯಣನೇ ಇವನು ? "ನೀವೀಗ ಒಪ್ಪಿಗೆ ಕೊಟ್ಟು ಬಿಟ್ಟಿರಾ ?"

"ನಿನ್ನನ್ನು ಕೇಳ್ತೇನೆ ಅಂದೆ. 'ಕೇಳಿ ಬಾ. ಹಾಗೇ ಗೇಣಿಚೀಟಿಗಳನ್ನೂ ತಾ' ಅಂದರು. ನೀನೇ ಹೇಳು, ನಿಷ್ಠುರವಾಗಿ ಬದುಕುವದಕ್ಕಿಂತ ಅವರು ಕೇಳಿದಾಗ ಕೊಡುವದು ಒಳಿತು."

"ಧರ್ಮರಾಯನ ಅಜ್ಜ ನೀವು ! ಜೀವನಕ್ಕೆ ಆಧಾರವಾಗಿರುವದು ಅದೊಂದೇ ತುಂಡು ಗದ್ದೆ. ಅದನ್ನೂ ಕೊಟ್ಟು ಕೈಮುಗಿದರೆ ಆಮೇಲೆ ನೆಲದ ಕಲ್ಲುಮುಳ್ಳು ತಿಂದು ಬದುಕೋಣವೇ ?"

ಹರಿನಾರಾಯಣನ ಹಣೆಯ ಮೇಲೆಲ್ಲ ಬೆವರ ಹನಿಗಳು.

"ನಿರ್ದಾಕ್ಷಿಣ್ಯವಾಗಿ ಹೇಳಿಬಿಡಿ, ಗದ್ದೆಯನ್ನು ನಾವಂತೂ ಬಿಟ್ಟುಕೊಡುವದಿಲ್ಲ. ಬಲಾತ್ಕಾರವಾಗಿ ಅವರು ನಮ್ಮನ್ನು ಖಂಡಿತ ಎಬ್ಬಿಸಲಾರರು."

ಮರುದಿನ ಮಧ್ಯಾಹ್ನ ಶಾಸ್ತ್ರಿಗಳ ಮನೆಯಿಂದ ಹಿಂದಿರುಗಿದ ಹರಿನಾರಾಯಣ ಇನ್ನೊಂದು ಸುದ್ದಿ ಹೊತ್ತು ತಂದ, "ಒಂದು ಸಾವಿರ ರೂಪಾಯಿ ಪರಿಹಾರಧನ ಕೊಡ್ತಾರಂತೆ. ಅಲ್ಲದೆ ಈ ವರ್ಷದ ಗೇಣಿ ಕೊಡುವದೂ ಬೇಡ ಅಂದರು ಶಾಸ್ತ್ರಿಗಳು."

"ಪರಿಹಾರಧನ ಸಾವಿರ ಕೊಡ್ತಾರೆಯೇ ? ನನಗಂತೂ ಬೇಡ" ಕೆಚ್ಚಿನಲ್ಲಿ ಅಂದಳು ಶಾಂಭವಿ, "ಈ ವರ್ಷದ ಗೇಣಿಯನ್ನು ನಾನು ಸಂದಾಯ ಮಾಡಿಯೇ ಮಾಡ್ತೇನೆ. ಭೂಮಿಯನ್ನು ಬಿಟ್ಟುಕೊಡುವದು ಬೇಡ."

"ಇಲ್ಲಿ ನಿನ್ನ ಗಲಾಟೆ, ಅಲ್ಲಿ ಶಾಸ್ತ್ರಿಗಳ ಗಲಾಟೆ. ನಾನೇನು ಮಾಡಲಿ?"

ಮುಂದೆ ಒಂದು ವಾರ ಅವನು ಶಾಸ್ತ್ರಿಗಳ ಮನೆಯತ್ತ ಸುಳಿಯಲಿಲ್ಲ. ಕಾರಣ ಗದ್ದೆಕೊಯ್ಲಿನ ಕೆಲಸ. ಗದ್ದೆ ಕೊಯ್ದು ಅಂಗಳದಲ್ಲಿ ಬತ್ತವನ್ನು ಒಣಗಲು ಹಾಕಿದಮೇಲೆ ಅವನಿಗೆ ಶಾಸ್ತ್ರಿಗಳು ಬರಹೇಳಿದ್ದು ನೆನಪಿಗೆ ಬಂದಿತು. ಒಂದು ವಾರದಲ್ಲಿ ಎರಡು ಬಾರಿ ಹೇಳಿಕಳುಹಿಸಿದ್ದರು. ಈ ಒಂದು ವಾರವೂ ಶಾಂಭವಿ ಗದ್ದೆ ತಮ್ಮದೇ ಎನ್ನುವಂತೆ ಅವನ ಕಿವಿಯೂದಿ

ಶಾಸ್ತ್ರಿಗಳ ಮನೆಯತ್ತ ಹೋಗದಂತೆ ತಡೆದಿದ್ದಳು. ಅವನ ಬದಲಿಗೆ ತಾನೇ ಹೋಗಿ ಮಾತನಾಡಬೇಕು ಎಂದು ಅವಳ ಆಲೋಚನೆ.

ಆದರೆ ಅಂದು ಹರಿನಾರಾಯಣ ಅವಳ ಕಣ್ತಪ್ಪಿಸಿ ಶಾಸ್ತ್ರಿಗಳ ಮನೆಗೆ ಹೋಗಿ ಒಂದು ಗಂಟೆಯನಂತರ ಹಿಂದಿರುಗಿದ. ಅವನು ಹಿಂದಿರುಗಿ ಬಂದ ಮೇಲೆಯೇ ಅವಳಿಗೆ ಅರಿವಾದದ್ದು. ಮುಖ ತಗ್ಗಿಸಿಕೊಂಡು ಬಂದಾಗಲೇ ಎಲ್ಲವೂ ಬಟ್ಟಬಯಲಾಯಿತು. ಹರಿನಾರಾಯಣ ಯಾವ ತಕರಾರೂ ಇಲ್ಲದೆ ಶಾಸ್ತ್ರಿಗಳ ಮಾತಿಗೆ ಒಪ್ಪಿ ಗದ್ದೆಯನ್ನು ಅವರಿಗೆ ಬಿಟ್ಟುಕೊಟ್ಟಿದ್ದಾನೆ. ಗೇಣಿಯ ಚೀಟಿಯನ್ನು ಹಿಂದಿರುಗಿಸಿ ಅವರು ಹೇಳಿದಲ್ಲೆಲ್ಲ ರುಜು ಹಾಕಿ ಕೈಬೀಸಿಕೊಂಡು ಬಂದಿದ್ದಾನೆ. ನಾಳೆಯೋ ನಾಡಿದ್ದೋ ಪರಿಹಾರಧನ ಸಾವಿರ ರೂಪಾಯಿ ಅವನಿಗೆ ಸಿಗಲಿದೆ.

ಶಾಂಭವಿ ಥರಥರನೆ ಕಂಪಿಸಿದಳು. ತೊಡೆಯ ಮೇಲೆ ಮಲಗಿ ಮೊಲೆ ಹಾಲು ಕುಡಿಯುತ್ತಿದ್ದ ಮಗು ಲಕ್ಷ್ಮಣನನ್ನು ಕೆಳಗೆ ಮಲಗಿಸಿ ನೆಲಕ್ಕೆ ಕೈ ಗುದ್ದಿದಳು, "ಇದೇನ್ಮಾಡಿಬಿಟ್ಟಿರಿ ? ಗೇಣಿಭೂಮಿಯನ್ನು ಅವರ ವಶಕ್ಕೆ ಒಪ್ಪಿಸಿ ಬಂದುಬಿಟ್ಟಿರಾ ? ನನಗೊಂದು ಮಾತು ಹೇಳದೆ ಹೋಗಿದ್ದೀರಿ ಶಾಸ್ತ್ರಿಗಳ ಮನೆಗೆ."

"ನಿನಗೆ ಹೇಳಿದರೆ ಸುಮ್ಮನೆ ಗಲಾಟೆ ಮಾಡ್ತಿಯಾ."

"ಇನ್ನುಮುಂದಿನ ಗಲಾಟೆ ಇದರ ನೂರರಷ್ಟು ಆಗಲಿದೆ. ಈಗೇನ್ಮಾಡ ಬೇಕು ಅನ್ನುವ ಆಲೋಚನೆ ನಿಮ್ಮದು ?"

"ಅವರು ಒಂದು ಸಾವಿರ ರೂಪಾಯಿ ಕೊಡುತ್ತಾರಲ್ಲ."

"ಸಾವಿರ ರೂಪಾಯಿ !" ವೇದಮ್ಮನ ಮುದಿ ಕಣ್ಣುಗಳು ಬೆಳಗಿದವು. "ಸಧ್ಯ ಅಷ್ಟಾದರೂ ಕೊಡುತ್ತಾರೆ, ಸಾಕು."

"ಸಾಕಂತೆ ಸಾಕು ! ಆಮೇಲೆ ಎಲ್ಲರೂ ಈ ಮನೆಯ ತೊಲೆಗೆ ನೇಣು ಹಾಕಿಕೊಳ್ಳೋಣ !" ಸಹನೆ ತಪ್ಪಿ ಕೂಗಿದಳು ಶಾಂಭವಿ.

"ನಿನಗೇನಾಗಿದೆ ? ಅವರೇನೋ ದೇವರಂತಹ ಮನುಷ್ಯ. ಗದ್ದೆ ಮಾತ್ರ ಬಿಟ್ಟುಕೊಡಿ ಅಂದ್ರು. ನಾವಿರುವ ಈ ಜಾಗ, ಇದನ್ನೂ ಬಿಟ್ಟುಕೊಡಿ ಅನ್ನಲಿಲ್ಲ."

"ಇನ್ಮೇಲೆ ಇಲ್ಲಿಂದಲೂ ಓಡಿಸದೆ ಬಾಕಿ ಇಡ್ತಾರೇನು ? ಸರಕಾರದ ಭೂಮಿಯಲ್ಲಿ ಅಂಗೈ ಅಗಲದ ದರ್ಖಾಸು ನಿಮಗೆ ಮಾಡಿಸಿದ್ದೇನೆ. ಅಲ್ಲಿಗೆ

ಹೋಗಿ ಉಳೀರಿ ಎಂದು ದಬ್ಬಾರಿ ನಮ್ಮನ್ನು. ಈ ಸಂಸಾರ ಕಟ್ಟಿಕೊಂಡು ಹೋಗುವದು ಎಲ್ಲಿಗೆ ?"

ಎಲ್ಲಿಗೆ ? ಶಾಂಭವಿಯ ಮನಸ್ಸಿನಲ್ಲಿ ಪ್ರಶ್ನೆಗಳ ಅಲೆಗಳು. ತನ್ನದು ಎಂದು ನೂರಾರು ಕನಸುಗಳನ್ನು ಕಟ್ಟುತ್ತಿದ್ದ ಗದ್ದೆ ಕೈತಪ್ಪಿಹೋಯಿತೇ ? ಆ ಗದ್ದೆ ಇನ್ನು ತಮ್ಮ ಪಾಲಿಗೆ ಇಲ್ಲವೇ ? ತಮಗಿಂತ ನಾಲ್ಕುಪಾಲು ಭೂಮಿ ಹೆಚ್ಚಿರುವ ಯಾರೊಬ್ಬರೂ ಗೇಣಿಭೂಮಿಯನ್ನು ಬಿಟ್ಟುಕೊಟ್ಟಿಲ್ಲ. ತಾವು ಮಾತ್ರ ನ್ಯಾಯ, ಧರ್ಮಗಳ ಮುಖ ನೋಡಿದೆವು. ಹೌದು, ತನ್ನ ಗಂಡ ಬೆಪ್ಪ, ಹುಚ್ಚ, ಪೆದ್ದ. ಅದರ ಉಪಯೋಗ ಪಡೆವದ್ದು ಶಾಸ್ತ್ರಿಗಳು ! ಮಾನವೀಯತೆ ಇಲ್ಲದ ನಿಷ್ಕರುಣಿ. ಬಡತನದ ಉಪ್ಪು ತಿಂದು ಗೊತ್ತಿಲ್ಲ. ಬೇಕಾದ ಸಂಪತ್ತು ತುಂಬಿದ್ದರೂ ಇನ್ನೂ ಬೇಕೆಂಬ ಆಸೆ. ಅವರಾದರೂ ತಮ್ಮ ಬಗ್ಗೆ ಚಿಂತಿಸಬಾರದಿತ್ತೇ ?

ತಲೆ ಕಾದ ಕಾವಲಿಯಂತಾಯಿತು. "ನಾನೇ ಶಾಸ್ತ್ರಿಗಳ ಮನೆಗೆ ಹೋಗಿ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ನಮ್ಮ ಭೂಮಿ ನಮಗೆ ಬೇಕೇಬೇಕು. ಗೇಣಿಕಾನೂನನ್ನು ರದ್ದುಪಡಿಸಿದರೂ ನಾನು ಗೇಣಿ ಸಂದಾಯ ಮಾಡ ಬಲ್ಲೆ."

ಯೋಚಿಸುತ್ತ ಶಾಂಭವಿ ಅಲ್ಲಿಂದೆದ್ದಳು. ಉಟ್ಟ ಸೀರೆಯನ್ನು ಗಮನಿಸದೆ, ಕೆದರಿದ ತಲೆಯನ್ನೂ ಸರಿಪಡಿಸಿಕೊಳ್ಳದೆ ಮಗುವನ್ನು ವೇದಮ್ಮನ ಕೈಗಿತ್ತು "ಅತ್ತೆ, ನಾನೀಗಲೇ ಬಂದೆ—" ಎಂದಂದು, ಬಿಟ್ಟ ಅಂಬಿನಂತೆ ಅಲ್ಲಿಂದ ಹೊರಟಳು ಶಾಸ್ತ್ರಿಗಳ ಮನೆಯತ್ತ.

19

ತನ್ನ ಮಾತು, ಅಳಲನ್ನು ಕೇಳಿ ಜನಾರ್ದನ ಶಾಸ್ತ್ರಿಗಳ ಮನಸ್ಸು ಕರಗಿ ನೀರಾಗಬಹುದೆಂಬ ಎಣಿಕೆ ಮಾತ್ರ ಪೂರ್ಣ ಸುಳ್ಳಾಯಿತು. ಅವರದು ಕಡ್ಡಿ ತುಂಡು ಮಾಡಿದಂತಹ ಮಾತು. ನಿಷ್ಠುರದ ನುಡಿಯಲ್ಲ, ನಯವಾಗಿ ಹರಿತ ಕತ್ತಿಯಿಂದ ಹೃದಯ ಸೀಳುವ ನುಡಿ. ನಗುತ್ತಿರುವ ಮುಖ, ಒಳಗೆ ಉರಿಯುತ್ತಿರುವ ಆಸೆಯ ಅಗ್ನಿಕುಂಡ. ಗೋಮುಖವ್ಯಾಘ್ರ ! ಉಪಚಾರದ ಮಾತುಗಳಲ್ಲಿ ತನ್ನ ಸ್ವಂತ ಭೂಮಿಯ ಮೇಲೆ ಅಧಿಕಾರಚಲಾವಣೆ.

ಶಾಂಭವಿಯ ಕಣ್ಣೀರು ಅರಣ್ಯರೋದನವಾಯಿತು. ಓರ್ವ ಹೆಂಗಸಿನ ಎದುರು ಮಾತನಾಡುವ ತಾಳ್ಮೆ ಶಾಸ್ತ್ರಿಗಳಿಗಿರಲಿಲ್ಲ. ಅವಳು ಕೈಮುಗಿದು ನೆಲಕ್ಕೆ ಹಣೆ ಹಚ್ಚಿ ಅಂದಳು,

"ಒಂಬತ್ತು ಜನರಿರುವ ದೊಡ್ಡ ಸಂಸಾರದ ಸೊಸೆ ನಾನು. ಎಲ್ಲರ ಭಾರ ನನ್ನ ಮೇಲೆ. ಅವರು ಹುಚ್ಚನೆಂದು ಪುಸಲಾಯಿಸಿ ಗೇಣಿಚೀಟಿಗೆ ರುಜು ಹಾಕಿಸಿಕೊಂಡಿದ್ದೀರಿ, ದಮ್ಮಯ್ಯ, ಹಿಂದಿರುಗಿಸಿಬಿಡಿ. ಗದ್ದೆ ನಮಗಿರಲಿ, ಅಯ್ಯ."

"ನಿನ್ನದು ಒಂದು ಎಕರೆ, ತುಕ್ರನದು ಎರಡು ಎಕರೆ, ರಂಗಪ್ಪಾಚಾರಿಯದು ಎರಡೂವರೆ ಎಕರೆ—ಎಲ್ಲಾ ಸುಮ್ಮನೆ ಬಿಟ್ಟುಬಿಡಲೇ?"

"ನನ್ನದು ಮಾತ್ರ ನನಗಿರಲಿ."

"ಹ್ಹಂ, ನಿನ್ನದು ನಿನಗೆ ಬೇಕು. ನನಗೆ ನೀನು ಬೇರೆ, ಉಳಿದವರು ಬೇರೆ ಅನ್ನುವ ಭೇದವಿಲ್ಲ. ಸೇತೂಪೂಜಾರಿ ಮಾತಿಲ್ಲದೆ ಮೂರೂವರೆ ಎಕರೆ ಗದ್ದೆ, ಒಂದು ಎಕರೆ ತೋಟ ಬಿಟ್ಟುಕೊಟ್ಟಿದ್ದಾನೆ, ಗೊತ್ತಾ?"

"ಅವನಿಗೆ ಮರದ ವ್ಯಾಪಾರವಿದೆ, ಅಯ್ಯ. ನಮಗೆ ಮರವೂ ಇಲ್ಲ, ಮುಟ್ಟೂ ಇಲ್ಲ. ಬಡವರ ಹೊಟ್ಟೆಗೆ ಹೊಡೀಬೇಡಿ. ಯಾವ ಕಾನೂನು ಬಂದರೂ ನಿಮ್ಮ ಗೇಣಿ ತಪ್ಪಿಸುವದಿಲ್ಲ ಎಂದು ಬರೆದುಕೊಡ್ತೇನೆ."

"ನೀನು ಬರೆದುಕೊಟ್ಟರೂ ಭೂಮಿ ನಮ್ಮದು ತಾನೇ. ಮುಂದಿನ ವರ್ಷ ಅಲ್ಲಿ ಅಡಿಕೆ ತೋಟ ಹಾಕಿಸ್ತೇನೆ. ಏಯ್ ಇವಳೇ—" ಹೆಂಡತಿಯನ್ನು ಕೂಗಿಕರೆದು, "ಒಳಗೆ ನೀರೋ, ಮಜ್ಜಿಗೆಯೋ ಇದ್ದರೆ ಇವಳಿಗಿಷ್ಟು ತಂದು ಕೊಡು" ಎಂದರು.

"ಇದೇ ಕೊನೆಯ ಮಾತೇ?" ಆರ್ತಳಾಗಿ ಕೇಳಿದಳು ಶಾಂಭವಿ, "ನಿಮ್ಮ ತಂಗಿಯ ಸ್ಥಾನದಲ್ಲಿ ನಾನಿದ್ದೇನೆ ಎಂದುಕೊಳ್ಳಿ."

"ನೀನು ನನ್ನ ತಂಗಿಯಾದರೂ ಭೂಮಿ ಬಿಟ್ಟುಕೊಡುವ ಪೆದ್ದನಲ್ಲ ನಾನು." ಅಲ್ಲಿಂದೇಳುತ್ತ ಅಂದರು ಶಾಸ್ತ್ರಿಗಳು, "ಹೆಚ್ಚಿಗೆ ಮಾತನಾಡದೆ ಹೊರಡು. ನಾಳೆಯೋ ನಾಡಿದ್ದೋ ಹರಿನಾರಾಯಣ ಬರಲಿ, ಒಂದು ಸಾವಿರ ಕೊಡ್ತೇನೆ."

ಕಮಲಮ್ಮ ನೀರುಮಜ್ಜಿಗೆಯನ್ನು ತಂದು ಅವಳ ಮುಂದಿರಿಸಿದರು. ಶಾಂಭವಿಯ ಬಾಡಿದ ಮುಖವನ್ನೂ ನೋಡಲಿಲ್ಲ.

"ಏಯ್.... ಶಾರದೆಗೆ ಹೇಳಿಬಿಡು, ಜಯರಾಮನಿಗೆ ಶ್ರೀಮಂತ ಹುಡುಗಿ

ಜೊತೆ ಮದುವೆ ನಿಶ್ಚಯವಾಗಿದೆ ಎಂದು."

"ಏನು....? ಸುಳ್ಳು ! ಅವರು ನಮಗೆ ಮಾತುಕೊಟ್ಟಿದ್ದಾರೆ."

"ಗಂಡಸರ ಸ್ವಭಾವ ನಿನಗಿನ್ನೂ ಗೊತ್ತಿಲ್ಲ, ಬೆಪ್ಪಿ. ಶಾರದೆಗೆ ಬೇರೆಕಡೆ ಗಂಡು ನೋಡಿ ಬೇಗ ಮದುವೆ ಮುಗಿಸಿಬಿಡು."

ವ್ಯಥಿತ ಹೃದಯದ ಮೇಲೆ ಇನ್ನೊಂದು ಕಾದ ಪೆಟ್ಟು. ಶಾರದೆಯ ಮದುವೆಗೆ ವಿಘ್ನ! ತಾನು ಮೊದಲೇ ಅವಳ ಮದುವೆ ಮಾಡಿ ಮುಗಿಸ ಬೇಕಿತ್ತು. ತಾನೇ ಬೇಡ ಎಂದೆ. ಗದ್ದೆಯಿಲ್ಲದೆ ಹೊಲಿಗೆ ಮತ್ತು ಬೀಡಿಯಲ್ಲಿ ಸಂಪಾದನೆ ಎಷ್ಟಾಗಬಹುದು? ಈ ಸ್ಥಿತಿಯಲ್ಲಿ ಜಯರಾಮ ಶಾರದೆಯನ್ನು ಒಪ್ಪಿಕೊಂಡಿದ್ದರೂ ಬೇಡ ಎನ್ನಬಲ್ಲ. ಗದ್ದೆ ಹಿಂದಿರುಗಿ ದೊರೆತರೆ?"

"ಅಮ್ಮಾ, ನೀವಾದರೂ ಅಯ್ಯನವರ ಹತ್ರ ಹೇಳಿ, ನಮ್ಮ ಪರವಾಗಿ."

"ನಿನ್ನ ಪರ ನಾನು ವಕಾಲತ್ತು ಮಾಡಲೇ?" ಕಮಲಮ್ಮನ ಹುಸಿ ನಗೆಯಲ್ಲಿ ವ್ಯಂಗ್ಯಕೆಣಕು ಇತ್ತು.

ಬಹಳ ಹೊತ್ತು ಶಾಂಭವಿ ಮಧ್ಯಾಹ್ನದ ಬಿಸಿಲು ಕಾಯಿಸುತ್ತ ಕುಳಿತಳು. ಆದರೆ ದೊಡ್ಡ ಮನೆಯಿಂದ ಯಾರೂ ಹೊರಗೆ ಬಂದು ಅವಳ ಸಮಸ್ಯೆಗೆ ಪರಿಹಾರವನ್ನು ನೀಡಲಿಲ್ಲ.

ಮರುದಿನವೆಲ್ಲ ಅವಳು ಯಾರೊಂದಿಗೂ ಮಾತನಾಡಲಿಲ್ಲ. ಶಾರದೆ ಆಗಾಗ ಹೊರಗೆ ಬಂದು ಅಂಚೆಯವನ ದಾರಿ ನೋಡುವಾಗ ಅವಳಿಗೆ ಸಂಕಟ. ಜಯರಾಮನ ಕಾಗದ ಬಾರದೇ ಕೆಲವು ದಿನಗಳಾಗಿದ್ದುವು. ಬೇರೆಕಡೆ ಮದುವೆ ನಿಶ್ಚಯವಾದಮೇಲೆ ಅವನು ಕಾಗದ ಬರೆಯುವದನ್ನೂ ನಿಲ್ಲಿಸಿರಬೇಕು. ಶಾರದೆಗೆ ಈ ವಿಷಯ ತಿಳಿಸುವದು ಹೇಗೆ?

ಸಾಯಂಕಾಲ ಹರಿನಾರಾಯಣ ಅವಳ ಕೈಯಲ್ಲಿರಿಸಿದ ಸಾವಿರ ರೂಪಾಯಿ ಗಳನ್ನು. ಹೊಚ್ಚಹೊಸ ಕಾಗದದ ನೋಟುಗಳು. ಕೊಡುವಾಗ ಹರಿನಾರಾ ಯಣನ ಮುಖದಲ್ಲಿ ಯಾವ ಸಂತೋಷವೂ ಇಲ್ಲ. ತೆಗೆದುಕೊಂಡ ಅವಳ ಮುಖದಲ್ಲಿ ನಿರ್ಜೀವ ಕಳೆ. ಹಣ ನೋಡಿದ ಕೇಶವನಿಗೆ ರುಚಿಯಾಗಿ ಪಾಯಸ ತಿನ್ನುವ ಆಸೆ. ಆದರೆ ಅಡಿಗೆ ಮಾಡುವ ಮನಸ್ಸಿರಲಿಲ್ಲ ಶಾಂಭವಿಗೆ.

ಅಂದೇ ರಾತ್ರಿ ಜಯರಾಮನ ವಿಷಯವನ್ನೂ ತಿಳಿಸುತ್ತ ಅವನಿಗೆ ಸಧ್ಯ ದಲ್ಲಿ ಮದುವೆ ಬೇರೆ ಹುಡುಗಿಯೊಡನೆ ಇದೆಯೆನ್ನುವುದನ್ನೂ ತಿಳಿಸಿದಾಗ ಅಲ್ಲೇ ಇದ್ದ ಶಾರದೆ ಕಲ್ಲುಗೊಂಬೆಯಂತೆ ಕುಳಿತುಬಿಟ್ಟಳು. ಆಮೇಲೆ ತನ್ನ

ಸ್ವರ ಯಾರಿಗೂ ಕೇಳಿಸದಂತೆ ಸೆರಗನ್ನು ಬಾಯಿಗೆ ಹಚ್ಚಿ ಬಿಕ್ಕಳಿಸಿದಳು ಜೋರಾಗಿ.

“ದೊಡ್ಡವರ ಮರ್ಜಿಗಳು ನಮಗಂತೂ ತಿಳಿಯುವದಿಲ್ಲ. ಇಲ್ಲಿಗ್ಬಂದು ಆ ಹುಡುಗ ನಮ್ಮನ್ನೆಲ್ಲ ಎಷ್ಟೊಂದು ಮಾತನಾಡಿಸಿ ನಂಬಿಕೆ ಹುಟ್ಟಿಸಿದ್ದನಲ್ಲ” ವೇದಮ್ಮ ದಿಗ್ಭ್ರಾಂತಳಾಗಿ ಅಂದಳು, “ಆದರೂ ಹೀಗಾಗಬಹುದು ಎಂದುಕೊಂಡಿದ್ದೆ.”

“ಹೋಗಲಿ ಅತ್ತೆ, ಅವರೆಲ್ಲಿ, ನಾವೆಲ್ಲಿ? ಶಾರದೆಗೆ ನಮ್ಮ ಅಂತಸ್ತಿಗೆ ಸರಿಯಾದ ಹುಡುಗನನ್ನು ಹುಡುಕೋಣ.”

ಶಾರದೆ ಮೆಲ್ಲನೆ ‘ಹೂಂ’ಕರಿಸಿದ್ದು ಕೇಳಿಸಲೇ ಇಲ್ಲ. ಅವಳು ಬಿರುಗಣ್ಣಿನಿಂದ ಅತ್ತಿಗೆಯನ್ನು ನೋಡಿದಾಗ ಆ ದೃಷ್ಟಿಯನ್ನು ಎದುರಿಸಲಾಗಲಿಲ್ಲ.

ಮರುದಿನ ನಸುಕಿನಲ್ಲಿ ಶಾಂಭವಿಗೆ ಹಾಸಿಗೆ ಬಿಟ್ಟೇಳಲು ಮನಸ್ಸಿಲ್ಲ. ಗದ್ದೆಯನ್ನು ನೋಡುತ್ತ ನಿಂತರೆ ಹೊಟ್ಟೆಯಲ್ಲೆಲ್ಲ ಸಂಕಟ, ಕಣ್ಣಲ್ಲಿ ನೀರು ಉಕ್ಕುತ್ತದೆ. ಮನಸ್ಸಿಲ್ಲದ ಮನಸ್ಸಿನಲ್ಲಿ ಎದ್ದು ಒಲೆಹೊತ್ತಿಸಿ ಗಂಜಿ ಬೇಯುವದಕ್ಕಿರಿಸಿ ಒಲೆ ಉರಿಯನ್ನು ನೋಡುತ್ತ ಸುಮ್ಮನೆ ಕುಳಿತುಬಿಟ್ಟಳು.

ಬೆಳಗಿನ ಗಂಜಿಯೂಟಕ್ಕೆ ಕರೆದರೆ ಮಾಧವ ಕಾಫಿ ತಿಂಡಿ ಇಲ್ಲವೆಂದು ಗೋಗರೆದ. ಶಾರದೆ ಕೋಣೆಯಿಂದ ಹೊರಗೆ ಬರಲಿಲ್ಲ. ಶಾಂಭವಿಗೆ ಸಮಾಧಾನ ಹೇಳುವ ಶಕ್ತಿಯೂ ಹೊರಟುಹೋಗಿತ್ತು. ಮಡಿಕೆಯನ್ನು ಒಲೆಯ ಮೇಲಿನಿಂದ ಇಳಿಸಿ ‘ಬೇಕಿದ್ದರೆ ಊಟಮಾಡಿ’ ಎಂದಂದು ಹೊರಗೆ ಬಂದುಬಿಟ್ಟಳು. ಹರಿನಾರಾಯಣ ಒಂದು ಮಾತನ್ನೂ ಆಡದೆ ತನ್ನ ಪಾಡಿಗೆ ಗಂಜಿಯುಂಡು ಅಂಗಳಕ್ಕೆ ಕಾಲಿರಿಸಿದ. ಒದ್ದೆಹುಲ್ಲಿನ ರಾಶಿಯ ಸುತ್ತಲೂ ಅಸಂಖ್ಯ ಚಿಟ್ಟೆಗಳು ಬೆಳಗಿನ ಬಿಸಿಲಿಗೆ ಹಾರಿಕೊಂಡಿದ್ದವು. ಹುಲ್ಲನ್ನು ಅಂಗಳದಲ್ಲಿ ಒಣಹಾಕಬೇಕಿತ್ತು. ಆದರೆ ಆ ಕೆಲಸ ಮಾಡಲು ಇಷ್ಟವಾಗದೆ ತರಕಾರಿ ಸಸಿಗಳತ್ತ ನಡೆದ.

ರಾತ್ರಿಯೆಲ್ಲಾ ಶಾಂಭವಿ ನಿದ್ರಿಸದೆ ತನ್ನ ಮೇಲೆ ರೇಗಿಕೊಂಡು ಪಟಪಟ ಮಾಡುತ್ತಿದ್ದುದು ನೆನಪಿಗೆ ಬಂದಿತು. ಯಾರ ಒತ್ತಡಕ್ಕಾಗಿ ತಾನು ಗದ್ದೆಯನ್ನು ಶಾಸ್ತ್ರಿಗಳಿಗೇ ಬಿಟ್ಟುಕೊಟ್ಟೆ? ಅವನ ದೃಷ್ಟಿ ಬೆಳಗಿನ ಬಿಸಿಲು ಬಿದ್ದ ಆ ಗದ್ದೆಯ ಅಂಚಿನುದ್ದಕ್ಕೂ ನೋಡಿದನು. ಅರೆ, ಯಾರಲ್ಲಿ? ಎರಡು ಜೊತೆ ಎತ್ತುಗಳು ಗದ್ದೆಯನ್ನು ಊಳುತ್ತಿವೆ. ಇಬ್ಬರು ಗಂಡಸರು ಅದರ ಹಿಂದೆ ಇದ್ದಾರೆ. ಹರಿನಾರಾಯಣ ಸರಸರನೆ ಗದ್ದೆಯ ಏರಿಯ ಮೇಲೆ ನಡೆದು.

ನೋಡುತ್ತಾನೆ, ತನ್ನದೆಂಬ ಸ್ಥಳದಲ್ಲಿ ಶಾಸ್ತ್ರಿಗಳ ಕೆಲಸದವರು ಕೆಲಸಮಾಡುತ್ತಿದ್ದಾರೆ. ನಾಲ್ಕು ಮಾರು ದೂರದಲ್ಲಿರುವ ಹರಿಯುವ ನೀರಿನ ತೋಡಿಗೆ ಪೆಟ್ರೋಲ್ ಪಂಪನ್ನಿರಿಸಿ ಅದರಿಂದ ನೀರು ಹಾಯಿಸುವ ವ್ಯವಸ್ಥೆ ಮಾಡುತ್ತಿದ್ದಾರೆ ಶಾಸ್ತ್ರಿಗಳ ಹಿರಿಮಗ. ಎರಡನೇ ಬೆಳೆಯ ತಯಾರಿ! ಗದ್ದೆ ಸ್ವಾಧೀನವಾದ ಎರಡೇ ದಿನಗಳಲ್ಲಿ ಪ್ರಾರಂಭವಾಗಿದೆ ಕೆಲಸ.

ಹರಿನಾರಾಯಣನ ಮುಷ್ಟಿಗಳು ಬಿಗಿದುಕೊಂಡವು. ಕಾಲುಗಳು ಥರಥರ ಕಂಪಿಸಿದವು. ತಾನು-ಶಾಂಭವಿ ಒಟ್ಟಾಗಿ ಹುಮ್ಮಸ್ಸಿನಿಂದ ದುಡಿಯುತ್ತಿದ್ದ ಗದ್ದೆಯಲ್ಲಿ ಬೇರೆಯವರನ್ನು ನೋಡುವಂತಾಗಿದೆ. ಇಷ್ಟು ದೊಡ್ಡ ಸ್ಥಳಕ್ಕೆ ತನಗೆ ಸಿಕ್ಕಿದ್ದು ಕೇವಲ ಸಾವಿರ ರೂಪಾಯಿ. ಅಷ್ಟು ಸಾಕೇ? ಶಾಂಭವಿ ಹೇಳಿದಂತೆ ತನ್ನ ಹೊರತಾಗಿ ಬೇರೆ ಒಬ್ಬರೂ ಗೇಣಿಭೂಮಿ ಬಿಟ್ಟುಕೊಟ್ಟಿಲ್ಲ.

ಅವನು ಹಿಂದಿರುಗಿ ಕಲ್ಲುಬೇಂಚಿನ ಮೇಲೆ ಕುಳಿತ. ಬಿಸಿಲೇರುತ್ತ ಬಂದಂತೆ ತಲೆಯೊಳಗೂ ಏನೋ ಹೊಯ್ದಾಟ. ಇದ್ದಕ್ಕಿದ್ದಂತೆ ಎದ್ದುನಿಂತು ಸ್ವರ ಏರಿಸಿದ, "ಶಾಂಭವೀ....ಬಾ ಇಲ್ಲಿ."

ಮಾಡಿನ ಬದಿಗೆ ಸಿಕ್ಕಿಸಿಟ್ಟ ಕತ್ತಿಯನ್ನೆತ್ತಿಕೊಂಡ. "ಗೇಣಿಭೂಮಿ ಕೈಬಿಟ್ಟಿತಲ್ಲ. ಏಯ್ ಕೇಶವಾ, ಬಾ ಇಲ್ಲಿ, ಈಶ್ವರೀ, ಇಲ್ಲಿ ಬಾ." ತರಕಾರಿ ಸಾಲುಗಳ ಮಧ್ಯೆ ನಿಂತು ಆತ ಒಂದೊಂದೇ ಗಿಡಗಳನ್ನು ಕಿತ್ತು ಬಿಸಾಡಿದ, "ಆ ತೊಂಡೆಚಪ್ಪರ ಮುರಿದುಹಾಕು ಈಶ್ವರೀ, ಯಾಕೆ ನಿಂತು ನೋಡ್ತಾ ಇದ್ದೀ? ಬದನೆಸಸಿಗಳನ್ನು ಕಿತ್ತುಹಾಕು ಅತ್ಲಾಗೆ. ಮಾಧವ, ಎಲ್ಹೋಗ್ತಿ ಸೋಮಾರಿಯಂತೆ. ಆಳೆತ್ತರಕ್ಕೆ ಬೆಳೆದ ಹಲಸಿನ ಮರ ಯಾರಿಗಾಗಿ, ಬುಡಕ್ಕೇ ಕತ್ತಿಯಿಂದ ಎರಡು ಏಟು ಹಾಕು! ನನ್ನ ಅಪ್ಪನ ಕಾಲದಿಂದಲೂ ಬಂದ ಗದ್ದೆ ಹೋದ್ಮೇಲೆ ಇವೆಲ್ಲ ಯಾಕೆ? ನಾನು ಮಾಡಿದ್ದು ಪರರಿಗೆ! ಆದರೆ ನಾನು ಪರರಿಗೆ ಕೊಡದೆ ಎಲ್ಲಾ ಕಿತ್ತು ಕೊಚ್ಚಿಕೊಚ್ಚಿ ಹಾಕ್ತೇನೆ. ಬನ್ರೋ ಬನ್ನಿರಿ...."

ಕೇಕೆಹಾಕುತ್ತ ಅವನು ಸಸಿಗಿಡಗಳ ಮೇಲೆ ಕುಣಿದ. ಕೈಯಿಂದ ಕಿತ್ತು ಕಿತ್ತು ಬಿಸಾಡಿದ. ನಿಂಬೆ ಗಿಡವನ್ನೂ ಕೊಚ್ಚಿದ ಕತ್ತಿಯಿಂದ. ಅವನು ಉಟ್ಟಿದ್ದು ಸಣ್ಣ ಪಂಚೆ ಮಾತ್ರ. ಮೈಯಿಂದ ಧಾರೆಯಾಗಿ ಇಳಿಯುತ್ತಿದೆ ಬೆವರು. ಮುಖ ಕೆಂಪಾಗಿದೆ. ಈಶ್ವರಿ, ಸುಮನ ಹೆದರಿ ಒಳಗೆ ಅಡಗಿದರೆ ಕೇಶವ ಮನೆ ಹಿಂದೆ ಓಡಿದ. ಪ್ರಳಯಕಾಲದ ಶಿವ ತಾಂಡವನೃತ್ಯ ಮಾಡಿದಂತೆ ಇವನೂ ಕುಣಿಯುತ್ತಿದ್ದಾನೆ ಆವೇಶದಲ್ಲಿ.

ಶಾಂಭವಿಗೆ ಮೊದಲು ಏನೋ ಇವನು ಕ್ರೋಧಗೊಂಡಿದ್ದಾನೆ ಎಂದೆನಿಸಿತು. ಆದರೆ ಅದು ಬರಿಯ ಕ್ರೋಧವಾಗಿರಲಿಲ್ಲ. ಹೆಪ್ಪುಗಟ್ಟಿದ ಅಸಮಾಧಾನ, ಸಮಾಜದ ಮೇಲೆ ಅರಿಯದ ತಿರಸ್ಕಾರ ಒಂದುಗೂಡಿ ಅಬ್ಬರಿಸಿ ಕುಣಿಯುತ್ತಿದ್ದಾನೆ. ಅವಳಿಗೆ ಒಂದು ಹೆಜ್ಜೆ ಮುಂದಿಡಲಾಗಲಿಲ್ಲ. ರಾಹುಬಡಿದವಳಂತೆ ನಿಂತುಬಿಟ್ಟಳು. ಮಗನ ಗಲಾಟೆ ಕೇಳಿದ ವೇದಮ್ಮ ಓಡಿಬರುತ್ತಿದ್ದಂತೆ ಕೇಕೆಹಾಕಿ ನಗುತ್ತಿದ್ದ ಹರಿನಾರಾಯಣ ತೊಂಡೆಚಪ್ಪರದ ಬದಿಯಲ್ಲಿ ಮಣ್ಣಿ ರಾಶಿಯ ಮೇಲೆ ಬುಡಕಡಿದ ಬಾಳೆಯಂತೆ ಕುಸಿದುಬಿದ್ದ.

"ಅಯ್ಯಪ್ಪೋ, ಇದೇನು ಬಂತು ಗ್ರಹಚಾರ!" ವೇದಮ್ಮ ಓಡಿಬಂದು ತನ್ನೆರಡೂ ಕೈಗಳಿಂದ ತಬ್ಬಿದಳು ಮಗನನ್ನು. "ಇದ್ಯಾಕೆ ನೀನು ಹೀಗೆ ನಿಂತಿದ್ದಿ, ಶಾಂಭವಿ? ನಾರಾಯಣ ಎಚ್ಚರತಪ್ಪಿ ಬಿದ್ದಿದ್ದಾನೆ. ಬಾ, ಒಳಗೆ ಕರೆದೊಯ್ಯೋಣ. ಎಲ್ಲಿ ಕೇಶವ....ಮಾಧವ?"

ಎಲ್ಲರೂ ಸೇರಿ ಹರಿನಾರಾಯಣನನ್ನು ಎತ್ತಿತಂದು ಮಲಗಿಸಿದರು ಒಳಗೆ. ವೇದಮ್ಮ ಪಾತ್ರೆಯಲ್ಲಿ ನೀರು ತಂದು ಬಟ್ಟೆಯಿಂದ ಮಗನ ಮಣ್ಣುಕೈಕಾಲುಗಳನ್ನು ಒರಸಲಾರಂಭಿಸಿದಳು. ಶಾಂಭವಿ ಗರಬಡಿದವಳಂತೆ ನಿಶ್ಚಲನಾಗಿ ಮಲಗಿದವನನ್ನೇ ನೋಡುತ್ತಿದ್ದಳು. ಇದೇನಾಗಿಹೋಯಿತು ಈ ದಿನ?

ಎದೆಯೊಳಗೆ ಎಲ್ಲೋ ಅಸಹನೀಯವಾದ ವೇದನೆ. ಗದ್ದೆ ಕೈತಪ್ಪಿತೆಂದು ದುಃಖಪಡುವವಳು ಈ ಮನೆಯಲ್ಲಿ ತಾನೊಬ್ಬಳೇ ಎಂದುಕೊಂಡಿದ್ದೆ. ತಾನು ಸ್ವಾರ್ಥಿ. ಬಾಯಿಯಲ್ಲಿ ಪಟಪಟ ಮಾಡುವದೊಂದೇ ತನಗೆ ಗೊತ್ತು. ಇವರು ಒಂದೇ ಒಂದು ವಿಚಾರವನ್ನೂ ಹೊರಗೆಡವದೆ ಎಲ್ಲಾ ತನ್ನಲ್ಲೇ ನುಂಗಿಕೊಂಡರು. ಚಿತ್ತಸ್ವಾಸ್ಥ್ಯ ಕಳೆದುಕೊಂಡವಳು ತಾನೊಬ್ಬಳೇ ಅಲ್ಲ; ತನ್ನ ಪತಿಯೂ! ತುಂಡುಭೂಮಿಯ ಮೇಲಿನ ಮಮತೆ ಹೆಚ್ಚಾಗಿ ಇವರನ್ನು ತಾನು ಗಮನಕ್ಕೇ ತಂದುಕೊಳ್ಳಲಿಲ್ಲ. ದುಃಖಶಮನ ಮಾಡಲಿಲ್ಲ. ಕ್ರೋಧದಿಂದ ಮಾತನಾಡುವದನ್ನೂ ನಿಲ್ಲಿಸಿದೆ. ಪರಿಣಾಮ? ಸಹಿಸಿಕೊಂಡಿದ್ದ ಹೃದಯದಿಂದ ಹೊರಹೊಮ್ಮಿತು ಕ್ರೋಧಾಗ್ನಿ! ಇದು ಅವರ ಜೀವಕ್ಕೂ ಮಾರಕವಾದೀತೇ?

ಅಷ್ಟರಲ್ಲಿ ಶಾರದೆ ಕಷಾಯದಂತಹ ಬಿಸಿಕಾಫಿಯನ್ನು ಮಾಡಿ ತಂದಳು. ಆದರೆ ಅರೆತೆರೆದ ಬಾಯಿಯಿಂದ ಹಾಗೆಯೇ ಹೊರಬಂದಿತು. ಶಾಂಭವಿಯ ತಾಳಮೇಳವಿಲ್ಲದ ದೃಷ್ಟಿ ಅದನ್ನೂ ನೋಡಿದವು. ತಾನು ಕಳೆದರೂ ಪ್ರಜ್ಞೆ

ಮರಳಿ ಬರಲಿಲ್ಲ. ಗಂಗಾನ ಮನೆಯಿಂದ ನೀಲಗಿರಿ ತಂದು ಕಾಲಿಗೆಲ್ಲ ಹಚ್ಚಿ ತಿಕ್ಕಿದಳು ವೇದಮ್ಮ.

"ಎಷ್ಟುಹೊತ್ತಿಗೆ ಎಚ್ಚರವಾದೀತು, ಅಮ್ಮಾ?" ತಲೆಯ ಹತ್ತಿರ ಕುಳಿತ ಕೇಶವನಿಗೆ ಆತಂಕ.

"ಸ್ವಲ್ಪ ಹೊತ್ತಿನಲ್ಲಿ ಅವನೇ ಎದ್ದುಕೋತ್ತಾನೆ, ಗಾಬರಿಯಿಲ್ಲ. ಆದರೆ ಶಾಂಭವಿ, ನೀನ್ಯಾಕೆ ಹೀಗೆ ಎಚ್ಚರವಿಲ್ಲದವರಂತೆ ಕುಳಿತಿದ್ದಿ ? ಇವನಿಗೆ ಏನಾಯ್ತು ಅಂತ ಗಾಬರಿ ನಿನಗೆ ? ಆವತ್ತು ಒಂದು ಸಲ ಹೀಗೇ ತೂಗಾಡಿ ಬಿದ್ದಿದ್ದನಲ್ಲ. ನೆನಪುಂಟಾ? ನಮ್ಮ ಗ್ರಹಚಾರ !" ವೇದಮ್ಮ ತಣ್ಣೀರಿನ ಬಟ್ಟೆಯಿಂದ ಮಗನ ಕುತ್ತಿಗೆ, ಮುಖದ ಭಾಗವನ್ನು ಒರಸಿದಳು. "ಇದೇನು ಹುಚ್ಚಲ್ಲ, ಇವನ ಈ ಪ್ರಾರಬ್ಧಕ್ಕೆ ಇವನ ಅಪ್ಪನೇ ಕಾರಣರು. ಹುಟ್ಟಿನಿಂದಲೂ ಹೆಡ್ಡನಾದ ಇವನು ಒಂದ್ಸಾರೆ ಅರಿಯದೆ ಯಾರದ್ದೋ ಮನೆಯಿಂದ ತೆಂಗಿನಕಾಯಿ ನಾಲ್ಕು ಕದ್ದು ತಂದಿದ್ದ. ಕೇಶವ ಹಲಸಿನಕಾಯಿ ತರಲಿಲ್ಲವೆ, ಹಾಗೇ. ಆದರೆ ಇವನ ಅಪ್ಪನಿಗೆ ಅದನ್ನು ನೋಡಿಯೇ ಏರಿತು ವಿಶ್ವಾಮಿತ್ರನ ಕೋಪ. ಸಣ್ಣ ಕೋಲು ತೆಗೆದುಕೊಂಡು ದನಕ್ಕೆ ಹೊಡೆದಂತೆ ಹೊಡೆದರು.

"ನಾನು ಬೇಡಾ ಅಂತ ಬಡ್ಕೊಂಡರೂ ಕೇಳಲಿಲ್ಲ. ಕೋಲು ಮುರೀತು. ಆಮೇಲೆ ಕೈಯಿಂದ ಮುಖ, ತಲೆ, ಬೆನ್ನು ನೋಡದೆ ಹೊಡೆದರು. ಆಗ ಪಾಪ, ಇವನಿಗಿನ್ನೂ ಹನ್ನೆರಡು ವರ್ಷ. ಆ ರಾತ್ರೆ ಜ್ವರದಲ್ಲಿ ಮಲಗಿದವನು ನಾಲ್ಕು ದಿನ ಹಾಸಿಗೆ ಬಿಟ್ಟೇಳಲಿಲ್ಲ. ಆಮೇಲೆ ಹುಷಾರಾದ. ಆದರೆ ಹೆಡ್ಡತನ ಇನ್ನೂ ಹೆಚ್ಚಿತು. ಸ್ವಲ್ಪ ಸಿಟ್ಟು ಬಂದರೆ ಸಾಕು, ಇವನ ಮೈಯೆಲ್ಲ ನಡುಗಿ, ಹೀಗೆ ಮೂರ್ಛೆತಪ್ಪಿ ಬೀಳಲಾರಂಭಿಸಿದ."

"ಹಳ್ಳಿಮದ್ದನ್ನು ಬೇಕಾದ್ದು ಮಾಡಿದ್ದೀರ, ಅತ್ತಿಗೆ."

"ಮಾಡಿದರೆ ಗುಣ ಸಿಗಲಿಲ್ಲ. ನಿನ್ನ ಮದುವೆಗಿಂತ ಮೊದಲು ಈ ವಿಚಿತ್ರ ರೋಗ ಇನ್ನೂ ಹೆಚ್ಚಿತ್ತು. ನೀನು ಬಂದ್ಮೇಲೆ ಬಹಳ ಅಂದರೆ ಬಹಳ ಕಡಿಮೆಯಾಗಿದೆ. ನೀನು ಅದ್ಯಾವ ಮೋಡಿ ಹಾಕಿದಿಯೋ ನಾನರಿಯೆ."

ನಿಜ, ಈಗೀಗ ವೇದಮ್ಮನಿಗೆ ತನ್ನ ಕುರೂಪಿ ಸೊಸೆಯ ವಿಶಾಲ ಹೃದಯದ ಅರಿವು ಆಗುತ್ತಿದೆ. ತನ್ನ ಸುಖದುಃಖಗಳನ್ನು ಗಮನಿಸದೆ ಸಂಸಾರದ ಶ್ರೇಯಸ್ಸಿಗೋಸ್ಕರ ಒದ್ದಾಡುವವಳನ್ನು ಕಂಡರೆ ಏಕೋ ಕನಿಕರ. ಗದ್ದೆ ಹೋಯಿತೆಂದು ತನಗೆ ಅಷ್ಟೊಂದು ಬೇಸರವಿಲ್ಲ. ಆದರೆ ಈ ಮಣ್ಣಿನಲ್ಲಿ ಒಂದಾಗಿ ಬೆರೆತುಕೊಂಡಿದ್ದ ಸೊಸೆ, ಕೆಲವೇ ವರ್ಷಗಳಿಂದ ಈ ಮನೆಯನ್ನು

ತುಂಬಿದ ಸೊಸೆ ಮನಸ್ಸಿಗೆ ಆದ ಆಘಾತವನ್ನು ನೋಡಿ ಅಚ್ಚರಿಯಾಗಿದೆ. ಹಿಂದೆಂದೂ ಕಾಣದ ಪ್ರೀತಿ, ಅಭಿಮಾನದಲ್ಲಿ ಸೊಸೆಯನ್ನು ನೋಡಿದಳು.

ಮತ್ತೆ ಅರ್ಧಗಂಟೆಯಲ್ಲಿ ಎಚ್ಚರಗೊಂಡ ಹರಿನಾರಾಯಣ ತನ್ನ ಪಾಡಿಗೆ ತಾನು ಹಾಡಲಾರಂಭಿಸಿದ,

"ಈಸಬೇಕು ಇದ್ದು ಜಯಿಸಬೇಕು,
'ಹೇಸಿಕೆಯ ಸಂಸಾರದಲ್ಲಿ ಆಸೆ ಲೇಶ ಇಡದ್ಹಂಗೆ!"

20

ಗದ್ದೆ ಕೈಬಿಟ್ಟುಹೋದಮೇಲೆ ಹರಿನಾರಾಯಣನಿಗೆ ಇದ್ದಕ್ಕಿದ್ದಂತೆ ಒಂದು ವಿಧದ ನಿರಾಸಕ್ತಿ ಬಂದುಬಿಟ್ಟಿತು. ಅಂಗಳದಲ್ಲಿ ನಿಂತಾಕ್ಷಣ ಅವನ ಮೈಯಲ್ಲಿ ಆವೇಶದ ನಡುಕ. ತಾನು ಹುಟ್ಟಿ ಬೆಳೆದ ಮನೆ, ಹಳ್ಳಿ ತನಗೆ ಸಂಬಂಧಿಸಿದ್ದಲ್ಲವೆಂದೂ ಅನಿಸಿತು ಅವನಿಗೆ. ಇಲ್ಲಿಯ ವ್ಯಾಮೋಹ ಕಡಿದು ಬೇರೆಲ್ಲಿಗಾದರೂ ಹೊರಟುಹೋಗಬೇಕು. ಆದರೆ ಅವನು ಅನುಭವಶೂನ್ಯ. ಅಪ್ಪ ಬದುಕಿದ್ದಾಗ ಅವನಿಗೆ ಬೆಲೆಯಿರಲಿಲ್ಲ. ಈಗ ಬೆಲೆಯಿದ್ದರೂ ವ್ಯವಹಾರ ಚತುರತೆಯಿಲ್ಲ. ಹಳ್ಳಿಯಿಂದಾಚೆ ಇರುವ ವಿಶಾಲಪ್ರಪಂಚವನ್ನು ಅವನೆಂದೂ ನೋಡಿರಲಿಲ್ಲ. ಮದುವೆಗಾಗಿ ಸಾಗರದ ಹಳ್ಳಿಗೆ ಮಾತ್ರ ಹೋದದ್ದು. ಆಗ ಅವನ ಸುತ್ತಲೂ ಅನೇಕರು ಸೇರಿಕೊಂಡು ಅವನ ವ್ಯಕ್ತಿತ್ವವನ್ನೂ ಮುಚ್ಚಿಬಿಟ್ಟಿದ್ದರು. ಶಾಂಭವಿ ಒಬ್ಬಳೇ ತಿಳಿದವಳು. ಮೆಲ್ಲನೆ ಹೆದರುತ್ತ ಬಿಟ್ಟುಹೋಗುವ ಆಲೋಚನೆಯನ್ನು ಅವಳ ಮುಂದಿರಿಸಿದ.

ಶಾಂಭವಿಗೆ ಅಚ್ಚರಿಯಾಯಿತು ಅವನ ಮಾತು ಕೇಳಿ. ಊರು ಬಿಟ್ಟು ಹೋಗುವದು ಎಲ್ಲಿಗೆ?—ಈ ಪ್ರಶ್ನೆ ಅವಳ ಮನದಲ್ಲಿ ಮೊದಲೇ ಎದ್ದು ಸಾಕಷ್ಟು ಆಂದೋಲನವನ್ನೂ ಮಾಡಿದೆ. ಇರುವ ಸ್ಥಳದಲ್ಲಿ ಹೇಗಾದರೂ ಸಂಪಾದನೆ ಮಾಡಿ ಹೊಂದಿಕೊಂಡಿರಬಹುದು. ಪರಸ್ಥಳದಲ್ಲಿ ವಾಸಕ್ಕೆ ನೆಲೆ ಸಿಕ್ಕೀತೆಂಬ ಧೈರ್ಯವಿಲ್ಲ.

ಆದರೆ ಹರಿನಾರಾಯಣ ಗುರುಪುರದಿಂದ ಹೊರಟುಹೋಗುವ ಆತುರ ತೋರಿಸಲಾರಂಭಿಸಿದ. ಶಾಂಭವಿ ಒಪ್ಪದಿದ್ದಾಗ ಮಾಧವನನ್ನೇ ಕೇಳಬೇಕಾಯಿತು. ಕೆಲವು ದಿನ ಸಿರ್ಸಿ ಪೇಟೆ ತಿರುಗಿದವನು. ಅವನು ಉತ್ಸಾಹಿತನಾಗಿ

ಅಣ್ಣನ ನಿರ್ಧಾರಕ್ಕೆ ಗಾಳಿ ಊದಿದ. ದೊಡ್ಡ ಊರಿಗೆ ಹೋದರೆ ಜೀವನಕ್ಕೆ ಏನಾದರೂ ಕೆಲಸ ಸಿಗುತ್ತದೆ ಎಂದು ಹೇಳಿದ.

"ಅವನ ಮಾತು ಕೇಳಿ ಮನೆ ಮಠ ಬಿಟ್ಟು ಊರೂರು ಅಲೀತಾ ಇರ ಬೇಕೇ? ನೀವೊಬ್ಬರೇ ಹೋಗಿ. ನಾವಿಲ್ಲಿ ಇರ್ತೇವೆ."

ಶಾಂಭವಿ ಅವನ ಹುಡುಗಾಟದ ಬುದ್ಧಿಗೆ ಹೆದರಿಕೊಂಡು ಅಂದಳು. ಹರಿನಾರಾಯಣ ಕೇಳಲಿಲ್ಲ ಅವಳ ಮಾತನ್ನು. ಮನೆಯ ಸಾಮಾನುಗಳನ್ನೆಲ್ಲ ಲೆಕ್ಕಹಾಕಿದ. ಗಂಟುಮೂಟೆ ಕಟ್ಟಿಕೊಂಡು ಹೊರಡುವದು ಕಷ್ಟವೇನಲ್ಲ. ಶಾಂಭವಿಯೊಂದಿಗೆ ಕೇಳದೆ ಮಾಧವನನ್ನು ಜೊತೆಗೂಡಿಕೊಂಡು ಸಾಮಾನು ಗಳನ್ನು ಕಟ್ಟಲಾರಂಭಿಸಿದ ಒಂದು ಬೆಳಿಗ್ಗೆ. ನಿಜವಾಗಿಯೂ ದಿಗಿಲಾಯಿತು. ಅವನು ಒತ್ತಾಯದಿಂದಲೇ ಎಲ್ಲರನ್ನೂ ಇಲ್ಲಿಂದ ಹೊರಡಿಸಿಕೊಂಡು ಹೋಗುವ ಆಲೋಚನೆಯಲ್ಲಿರಬೇಕು. ಇವತ್ತು ಮೊದಲ ಬಾರಿ ಅಲ್ಲಿ ಶಾಂಭವಿಯ ಮಾತಿಗೆ ಬೆಲೆಯಿರಲಿಲ್ಲ!

ಆಪತ್ಕಾಲದಲ್ಲಿ ನೀನೇ ಗತಿ ಎನ್ನುತ್ತ ಅವಳು ಇನ್ನೊಮ್ಮೆ ಓಡಿದಳು ಶಾಸ್ತ್ರಿಗಳ ಮನೆಗೆ. "ಅವರ ಹುಚ್ಚು ಮರುಕಳಿಸುತ್ತಾ ಇದೆ, ಅಯ್ಯ. ಏನಾದರೂ ಸಹಾಯ ಮಾಡಿ." ಅಂಗಲಾಚಿದಳು ನಾಚಿಕೆ ಬಿಟ್ಟು.

"ತ್ಸೂ ತ್ಸೂ....ಪಾಪ. ನನ್ನಿಂದ ಏನು ಸಹಾಯ ಬೇಕು?" ಶಾಸ್ತ್ರಿಗಳ ಅಧಿಕಾರವಾಣಿ ಧೈರ್ಯ ತುಂಬಿತು ಅವಳಲ್ಲಿ.

"ಗೇಣಿಗದ್ದೆಯನ್ನು ಪುನಃ ನಮಗೇ ಕೊಟ್ಟುಬಿಡಿ. ಉಸಿರು ಇರುವ ತನಕ ನಿಮ್ಮ ಹೆಸರು ಹೇಳಿ ಕೈಮುಗೀತೇನೆ."

"ಓ....ಇದಕ್ಕೇ ನೀನು ಬಂದದ್ದೇ? ನೀನು ನೋಡಿದಿಯಲ್ಲ. ನಿಮ್ಮಂತಹ ಬಡವರಿಗೆ ಚಿನ್ನದಂತಹ ಭೂಮಿಕೊಟ್ಟರೆ ಬೆಳೆಯೆಲ್ಲ ದಂಡ. ನಾನು ನೋಡು, ಪಂಪ್ ನೀರು ಹಾಕಿ ವರ್ಷಕ್ಕೆ ಮೂರು ಬೆಳೆ ತೆಗೀತೇನೆ. ನೀವು ಇಪ್ಪತ್ತೋ ಮೂವತ್ತೋ ಮುಡಿ ಬತ್ತ ಬೆಳೆಸಿದರೆ ನಾನು ನೂರೈವತ್ತು ಮುಡಿ ಬತ್ತ ವನ್ನು ಮೂರು ಬೆಳೆಯಲ್ಲಿ ತೆಗೀರ್ತೇನೆ, ಗೊತ್ತಾ ನಿನಗೆ?"

"ನಿಮ್ಮದು ಹಣದಿಂದ ಪಡೆಯುವ ಆದಾಯ; ನಮ್ಮದು ಬೆವರಿನಲ್ಲಿ ಮಾಡುವ ಬೇಸಾಯ! ನಮಗಿನ್ನು ಇದೇ ಹಳ್ಳಿಯಲ್ಲಿ ಬದುಕಿ ಉಸಿರಾಡಲು ಅವಕಾಶ ಕೊಡಿ."

"ನಿಮ್ಮಂಥವರು ಬೇರೆ ಕಡೆ ಹೋದರೂ ಬದುಕಿಕೋಡಿರ್ತೀರಿ—" ಜನಾರ್ದನ ಶಾಸ್ತ್ರಿಗಳು ತಮ್ಮಲ್ಲೇ ಅರೆಕ್ಷಣ ಯೋಚಿಸಿದರು, "ಹಾಗಾದರೆ

ಒಂದು ಕೆಲಸ ಮಾಡು, ಗದ್ದೆಯನ್ನು ನಿಮಗೇ ಆರು ಸಾವಿರಕ್ಕೆ ಮಾರಿ ಬಿಡ್ತೇನೆ. ತಗೊಂಡುಬಿಡು."

"ಆರು ಸಾವಿರ ರೂಪಾಯಿಗೆ!"

"ನಿನ್ನ ಮುಖ ನೋಡಿ ಕಡಿಮೆ ಬೆಲೆ ಹೇಳಿದೆ. ಬೇರೆಯವರಿಗಾದರೆ ಎಂಟು ಸಾವಿರ. ಹಣ ಕೊಟ್ಟು ತೆಗೆದುಕೋ. ಆಮೇಲೆ ಗೇಣಿ ಕೊಡುವದೂ ಬೇಡ. ಮನೆ ಸ್ಥಳ, ಗದ್ದೆ ಎಲ್ಲಾ ನಿಮ್ಮದೇ."

ಅಷ್ಟು ದೊಡ್ಡ ಮೊತ್ತವನ್ನು ಕೊಡಲು ತಮಗೆ ಸಾಧ್ಯವೇ? ಶಾಸ್ತ್ರಿಗಳ ನರಿಬುದ್ಧಿಗೆ ಶಾಪಹಾಕುತ್ತ ಹೇಗೆ ಬಂದಿದ್ದಳೋ ಹಾಗೇ ಹಿಂದಿರುಗಿದಳು. ಆತ್ಮಾಭಿಮಾನವನ್ನು ಕಳೆದುಕೊಂಡು ತಾವು ಈ ಊರಿನಲ್ಲಿ ಇರಬಾರದು ಹರಿನಾರಾಯಣ ಹೋಗುವ ಮನಸ್ಸುಮಾಡಿದ್ದಾನೆ. ತಾನೂ ಅವನ ಜೊತೆ ಗೂಡಬೇಕು. ಅವಳು ಸಾಮಾನುಗಳನ್ನು ಕಟ್ಟುತ್ತಿದ್ದ ಹರಿನಾರಾಯಣನ ಜೊತೆಯಲ್ಲಿ ಸೇರಿಕೊಂಡಳು.

ಮನೆಯಲ್ಲೊಂದು ಅನಿರೀಕ್ಷಿತದ ತಿರುವು. ಬೇರೆ ಊರನ್ನು ಕಾಣದ ಕೇಶವನಿಗೆ ಹೊಸ ಊರಿನತ್ತ ವಲಸೆಹೋಗುವ ಆಸೆ. ಪೇಟೆವಾಸವನ್ನು ಬಯಸುವ ಮಾಧವನ ಮನದಲ್ಲಿ ಸುಖಕಲ್ಪನೆಯ ಮಂಡಿಗೆಗಳು. ಈಶ್ವರಿಗೆ ಇಲ್ಲಿ ಇದ್ದರೂ ಒಂದೇ, ಬೇರೆಡೆಗೆ ಹೋದರೂ ಒಂದೇ. ಶಾರದೆಗೆ ಹಾಗಲ್ಲ. ಇದೇ ಮನೆಯಲ್ಲಿ ಉಳಿಯುವ ಹಂಬಲ. ಜಯರಾಮ ಎಂದಾದರೂ ಒಂದು ದಿನ ಅಕ್ಕನ ಮನೆಗೆ ಬಂದಾಗ ಇಲ್ಲಿಗೂ ಬರಬಹುದು. ಅವನಿಗೆ ಮದುವೆ ನಿಶ್ಚಯವಾದ ಸುದ್ದಿ ಕೇಳಿದಂದಿನಿಂದ ಅವನಾಗಲೀ, ಶಾಂಭವಿಯಾಗಲೀ ಉತ್ತರ ಪತ್ರ ಬರೆದಿಲ್ಲ; ಅವನೂ ಕಾಗದ ಹಾಕಿಲ್ಲ. ತಾನು ಹೊರಟು ಹೋದಮೇಲೆ ಅವನು ಬಂದರೆ? ಅವನ ಕಾಗದಗಳು ಈ ಹಳ್ಳಿಗೆ ಬಂದು ತಾವಿಲ್ಲದೆ ಅವನಿಗೇ ಹಿಂದಿರುಗಿದರೆ? ಎನ್ನುವ ಆಶಾವಾದ. ಅವಳಿಗೆ ಊರು ಬಿಡುವ ಇಚ್ಛೆಯಿಲ್ಲ.

ವೇದಮ್ಮನ ಮನಃಸ್ಥಿತಿ ಇನ್ನೂ ಭಿನ್ನ. ನಾಲ್ಕು ದಶಕಗಳಿಗಿಂತಲೂ ಹೆಚ್ಚಿನ ಸಮಯವನ್ನು ಅವಳು ಈ ಮನೆಯಲ್ಲಿ ಕಳೆದವಳು. ಮದುವೆ ಯಾಗಿ ಬಂದದ್ದು ಈ ಮನೆಗೆ. ಸಾಲುಸಾಲಾಗಿ ಮಕ್ಕಳು ಹುಟ್ಟಿದ್ದೂ ಇಲ್ಲಿಯೇ. ಮುರಿದುಬೀಳುವ ಮನೆಯನ್ನು ಆಗಾಗ ರಿಪೇರಿ ಮಾಡಿಕೊಂಡು ಇದ್ದುದರಲ್ಲಿಯೇ ಸಂತೃಪ್ತರಾದ ತಾಣ ಇದೇ. ಇಲ್ಲಿಯ ಪ್ರತಿ ಸಣ್ಣ ಕಣವೂ ಅವಳಿಗೆ ಚಿರಪರಿಚಿತ. ತಾನೊಂದು ದಿನ ಇದೇ ಮನೆಯಲ್ಲಿ ಸಾಯಲಿದ್ದೇನೆ

ಎಂದೂ ತನ್ನನ್ನು ಮನೆ ಹಿಂಬದಿಯಲ್ಲಿ ಸುಡುತ್ತಾರೆಂದೂ ಅವಳ ನಂಬಿಕೆಯಾಗಿತ್ತು ಈವರೆಗೆ.

ನಂಬಿಕೆ ಸುಳ್ಳಾಯಿತು. ಹೆಡ್ಡುಬುದ್ಧಿಯ ಮಗ ಮುಂದಾಲೋಚನೆಯಿಲ್ಲದೆ ಎಲ್ಲಿಗೋ ಹೊರಟಿದ್ದಾನೆ, ಹಾಗೆಂದು ಸೊಸೆಗೆ ಬುದ್ಧಿಯಿಲ್ಲವೇ? ಶಾಸ್ತ್ರಿಗಳ ಮನೆಗೆ ಹೋಗಿಬಂದವಳು ತಾನೂ ಹೊರಡುವ ಆತುರ ತೋರಿಸಿದ್ದಾಳೆ. ಮಗ ಸೊಸೆಯನ್ನು ತೆಗಳಿದ ವೇದನ್ಮ್ಯ ತಾನು ಇದೇ ಮನೆಯಲ್ಲಿರುತ್ತೇನೆಂದು ಹಟ ಹಿಡಿದಳು. ಆದರೆ ಯಾವಾಗ ಸಾಮಾನುಗಳನ್ನು ಕಟ್ಟುತ್ತ ಕಟ್ಟುತ್ತ ಮನೆ ಖಾಲಿಯಾಗುತ್ತ ಬಂದಿತೋ ಅವಳ ಹಟವೂ ಸಡಿಲಗೊಂಡಿತು. ಮಕ್ಕಳು, ಸೊಸೆ, ಮೊಮ್ಮಕ್ಕಳಲ್ಲದೆ ಇನ್ನಾರು ಇದ್ದಾರೆ ಅವಳಿಗೆ?

ಸುದ್ದಿ ಬಹಳ ಬೇಗನೆ ಹರಡಿತು ಎಲ್ಲ ಕಡೆಗೂ. ಪರಿಚಿತರೆಲ್ಲ ಬಂದು ಬಂದು ಮಾತನಾಡಿಸಿದರು. ಕೆಲವು ವರ್ಷಗಳಿಂದ ಎಲ್ಲರಿಗೂ ಬೇಕಾದವಳಾಗಿ ಚಿರಪರಿಚಿತಳಾದ ಶಾಂಭವಿ ತಮ್ಮ ಹಳ್ಳಿಯನ್ನು ತೊರೆದು ಹೋಗಲಿದ್ದಾಳೆ ಎಂದು ತಿಳಿದಾಗ ಎಲ್ಲರಿಗೂ ದುಃಖ. "ಕಷ್ಟವೋ ನಷ್ಟವೋ ಇಲ್ಲೇ ಉಳಿದು ಬಿಡಿ. ನಿಮ್ಮ ಜೊತೆ ನಾವೂ ಇದ್ದೇವೆ" ಎಂದರು ಕೆಲವರು.

ಎರಡು ಎತ್ತು, ಒಂದು ಸಣ್ಣ ಕರು ಮತ್ತು ಒಣಗಿದ ಹುಲ್ಲಿನ ಕಟ್ಟುಗಳನ್ನು ಗುರುಪುರದ ನಿವಾಸಿಯೊಬ್ಬರಿಗೆ ಮಾರಲಾಯಿತು. ಮೂರು ಬಡಕಲು ದನಗಳನ್ನು ಕಡಿಮೆ ಬೆಲೆಗೆ ರಂಗಪ್ಪಾಚಾರಿ ಹೊಡೆದುಕೊಂಡು ಹೋದ. ಗಂಗಾನಿಗೆ ಕನಿಕರದ ಜೊತೆಯಲ್ಲಿ ಅಸಮಾಧಾನದ ಕೋಪ, ಶಾಂಭವಿಯ ಸಂಸಾರ ಊರು ಬಿಟ್ಟು ಹೋಗುತ್ತದೆ ಎಂದು.

ಆ ಮನೆಯಲ್ಲಿ ಬೆಲೆಬಾಳುವ ಸಾಮಾನುಗಳಾಗಲೀ, ವಸ್ತುಗಳಾಗಲೀ ಯಾವವೂ ಇಲ್ಲ. ಎಲ್ಲಾ ಮಣ್ಣಿನವು. ಹಾಸಿಗೆ ಬಟ್ಟೆ ಹೊದಿಕೆಗಳೂ ಹೇಳಿಕೊಳ್ಳುವಷ್ಟಿಲ್ಲ. ಸರಿಯಾಗಿ ಕಟ್ಟಿದರೆ ಎರಡು ಕಟ್ಟಿನಷ್ಟು ದೊಡ್ಡವಾಗಬಹುದು. ಆದರೂ ಬೆಲೆಬಾಳುವ ದೊಡ್ಡ ಸಾಮಾನು ಒಂದೇ ಇತ್ತು—ಅದು ಹೋಲಿಗೆಯಂತ್ರ.

"ಇದನ್ನು ಹೊತ್ತುಕೊಂಡು ಸಾಗಿಸುವದು ಕಷ್ಟಕರ. ಇಲ್ಲೇ ಮಾರಿಬಿಡೋಣ" ಎಂದ ಹರಿನಾರಾಯಣ.

"ನನ್ನ ಹೊಲಿಗೆಯಂತ್ರ ನನಗೆ ಬೇಕೇಬೇಕು. ಪರಸ್ಥಳದಲ್ಲಿ ಇದಾದರೂ ಆಧಾರವಾಗಿರಲಿ."

ಸಾಗಿಸುವ ಪ್ರಶ್ನೆ ಭೂತಾಕಾರವಾಗಿ ನಿಂತಿತು ಎದುರಿನಲ್ಲಿ. ಯಂತ್ರದ ಬಿಡಿಭಾಗಗಳನ್ನು ಬೇರೆಯಾಗಿ ಕಟ್ಟಿ ಇಡಲಾಯಿತು. ಉಳಿದ ಭಾಗವನ್ನು ಹೊರಿಹೊತ್ತಂತೆ ಕೊರಲು ಕಷ್ಟವಾದರೂ ಶಾಂಭವಿ ಅದನ್ನು ತಮ್ಮ ಜೊತೆಯೇ ಒಯ್ಯಲು ಪಟ ಹಿಡಿದಳು. ಮಾಧವ, ಕೇಶವ ಜೊತೆಯಲ್ಲಿದ್ದರೆ ಅದೇನು ಕಷ್ಟವಲ್ಲ.

ರಾತ್ರಿ ಮಂದವಾದ ಕ್ಷೀಣದೀಪದ ಪ್ರಕಾಶದಲ್ಲಿ ಎಲ್ಲರೂ ಮಾತಿಗಿಳಿದಾಗ ನಾಳೆ ಇಲ್ಲಿಂದ ಎಲ್ಲಿಗೆ ಹೋಗಬೇಕು ಎನ್ನುವ ಚರ್ಚೆ. ಒಬ್ಬೊಬ್ಬರದು ಒಂದೊಂದು ಸಲಹೆ. ಇದೇ ಊರಿನಿಂದ ಹತ್ತು ಮೈಲಿನೊಳಗೆ ವಾಸಿಸಲು ಹರಿನಾರಾಯಣನಿಗೆ ಮನಸ್ಸಿಲ್ಲ. ದೂರ ಹೋಗಲು ವೇದಮ್ಮ ಸಿದ್ಧಳಿಲ್ಲ. ತಾಯಿಮನೆಗೆ ಹೋಗಲು ಒಪ್ಪಿಕೊಳ್ಳಲಿಲ್ಲ ಶಾಂಭವಿ. ಸಿರ್ಸಿಗೆ ಹೋಗೋಣ ಎಂದು ಮಾಧವನ ಸಲಹೆ. ಯಾವುದೂ ಇತ್ಯರ್ಥವಾಗಲಿಲ್ಲ. ಕೊನೆಗೆ ಶಾಂಭವಿಯೇ ಈ ಸಮಸ್ಯೆಗೆ ದಾರಿಹಾಕಿದಳು.

"ಬೈಂದೂರಿನಲ್ಲಿ ನನ್ನ ದೂರದ ಸಂಬಂಧಿ ಒಬ್ಬರಿದ್ದಾರೆ. ನನಗೆ ಚಿಕ್ಕಪ್ಪ ನಾಗಬೇಕು. ಬೇಕಾದ ಸ್ಥಿತಿಗತಿ ಇರುವವರು. ಅಲ್ಲಿಗೆ ಹೋಗೋಣ."

"ಎಷ್ಟು ದೂರ ಇಲ್ಲಿಂದ?"

"ನೂರು ಮೈಲು ಆಗಬಹುದು. ಯಾವ ಹೆದರಿಕೆಯೂ ಇಲ್ಲ. ನಮ್ಮ ಅವ್ಯವಸ್ಥೆ, ಬೇಜವಾಬ್ದಾರಿಯ ಸಂಸಾರ ನೋಡಿ ನಮಗೆ ತಿಳಿದ ಜನರ ಬಾಯಲ್ಲಿ ನಗೆಗೀಡಾಗುವ ಬದಲು ಕಾಣದ ಊರಿನ ವಾಸ ಎಷ್ಟೋ ಮೇಲು!"

ಶಾಂಭವಿ ಹೇಳಿದ ಮಾತು ನಿಜವಾಗಿತ್ತು. ಅದೃಷ್ಟ ಹಾಳಾದವರಿಗೆ ಯಾವ ಊರಾದರೇನಂತೆ? ಚಿಕ್ಕಪ್ಪನ ಪರಿಚಯ, ಹೋಗಿಬರುವದು, ತಾಯಿಮನೆಯಲ್ಲಿದ್ದಾಗ ಹೆಚ್ಚಿತ್ತು. ಈಗ ಅವರ ಸುದ್ದಿಯೂ ಕೇಳಿರಲಿಲ್ಲ. ಅವರು ತಮಗೆ ಆಶ್ರಯ ಕೊಡುತ್ತಾರೆ ಅಥವಾ ತಮಗಾಗಿ ಏನಾದರೂ ಸಹಾಯ ಮಾಡುತ್ತಾರೆಂಬ ಭರವಸೆ ಶಾಂಭವಿಯದು. ಹರಿನಾರಾಯಣ, ವೇದಮ್ಮ, ಉಳಿದವರಿಗೆ ಸ್ವೀಕಾರವಾಯಿತು ಅವಳ ಸಲಹೆ. ನಾಳೆ ಬೆಳಗಿನ ಪ್ರಯಾಣದ ಕನಸು ಕಟ್ಟುತ್ತ ಒಬ್ಬೊಬ್ಬರು ಒಂದೊಂದು ಬದಿಯಲ್ಲಿ ಮಲಗಿಕೊಂಡರು. ಸೊಸೆಯ ಮೇಲೆ ಸಂಪೂರ್ಣ ಭಾರ ಹಾಕಿದ ವೇದಮ್ಮನಿಗೆ ಮಲಗಿದಾಕ್ಷಣ ಗೊರಕೆ.

ಆದರೆ ಶಾಂಭವಿಗೆ ನಿದ್ರೆಯ ಸುಳಿವಿಲ್ಲ. ನೆಲದ ಮೇಲೆ ಮಲಗಿದ ಹರಿ

ನಾರಾಯಣನ ಬದಿಯಲ್ಲಿ ಬಂದು ಕುಳಿತು ಸಣ್ಣ ಎಣ್ಣೆದೀಪದಲ್ಲಿ ನೋಡಿದಳು. ನಿಶ್ಚಿಂತೆಯಲ್ಲಿ ಬಲತೋಳನ್ನು ತಲೆಯಡಿಗಿಟ್ಟು ಮಲಗಿಬಿಟ್ಟಿದ್ದಾನೆ. ಅವನ ಎಡಬದಿಯಲ್ಲಿ ಸುಮನ ಮತ್ತು ಲಕ್ಷ್ಮಣ. ಹಾಲುಹಸುಳೆಗಳಿಗೆ ದೊಡ್ಡವರನ್ನು ಅರಿತುಕೊಳ್ಳುವ ಶಕ್ತಿಯಿಲ್ಲ, ನಿದ್ರೆಯಲ್ಲಿ ಕುಲುಕುಲು ನಗೆ. ಅವಳಿಗನಿಸಿತು, ಪ್ರಕೃತಿ ತಮ್ಮನ್ನು ಯಾವಾಗಲೂ ಮಕ್ಕಳಂತೆ ಇಟ್ಟರೆ ಚೆನ್ನು. ಈ ಚಿಂತೆ, ಕ್ಲೇಶಗಳೊಂದೂ ಅಲ್ಲಿ ಇರಬಾರದು. ಈ ಮಕ್ಕಳನ್ನು ಕಟ್ಟಿಕೊಂಡು ನಾಳಿನ ಪಯಣದಲ್ಲಿ ತಾನು ಇನ್ನೇನು ಎದುರಿಸಲಿಕ್ಕಿದೆಯೋ. ಹೀಗೆ ಇಲ್ಲಿಂದ ಹೊರಟುಹೋಗುತ್ತೇವೆಂದು ಹಿಂದೆ ಯೋಚಿಸಿರಲಿಲ್ಲ. ವಿಧಿಯ ಅದೃಶ್ಯದಾಟದಲ್ಲಿ ಎಲ್ಲವೂ ವಿಚಿತ್ರ. ಕೈಯಲ್ಲಿ ಹಣ ಕೂಡಿದಾಗಲೆಲ್ಲವೂ ಹಂಚಿನ ಮನೆ ಕಟ್ಟಿಸಿಕೊಳ್ಳುವ ಮಹದಾಸೆ; ಅದಕ್ಕಾಗಿ ಪ್ರಯತ್ನ. ಆದರೆ ಈಗ ನೋಡಿದರೆ ಆ ಪ್ರಯತ್ನಗಳೆಲ್ಲವೂ ನಿರರ್ಥಕ.

ಮರುದಿನ ಉದಯಿಸುವ ಸೂರ್ಯನೊಂದಿಗೆ ಶಾಂಭವಿಯ ಜೀವನದಲ್ಲಿಯೂ ಉದಯಿಸಿತು ಹೊಸ ಅಧ್ಯಾಯದ ತೆರೆ.

ನಸುಕಿನಲ್ಲಿ ಹೊರಟುಬಿಡಬೇಕೆಂದು ಯೋಚಿಸಿದ್ದರೂ ನೆರೆಕರೆಯವರು, ಪರಿಚಿತರು ಬೀಳ್ಕೊಡಲು ಬಂದುದರಿಂದ ಸಾಮಾನುಗಳನ್ನು ಸರಿಯಾಗಿ ಕಟ್ಟಿಕೊಂಡು ಸಿದ್ಧರಾಗುವಾಗ ಬೆಳಗಿನ ಎಂಟು ಗಂಟೆ. ಗಂಗಾ ಬಹಳ ಮೊದಲೇ ಬಂದುಬಿಟ್ಟಿದ್ದಳು. ಶಾಂಭವಿಯನ್ನು ಅಗಲುವದು ಅವಳಿಗೆ ಕಷ್ಟವೆನಿಸಿದ್ದರೂ 'ಆಗಾಗ ಕಾಗದ ಬರೀತಾ ಇರು' ಎಂದು ಮಾತು ತೆಗೆದುಕೊಂಡಳು ಅವಳಿಂದ. ಮಕ್ಕಳಿಬ್ಬರಿಗೆ ತಾನೇ ಉಡುಪು ತೊಡಿಸಿ ಹೊರಡಿಸಿದಳು. ಅದೆಲ್ಲಿಯ ಗೆಳೆತನವೋ, ಅವಳ ಕಣ್ಣಾಲಿಗಳು ತುಂಬಿಬಂದಿದ್ದವು.

ಶಾಂಭವಿ ತನ್ನ ಖಾಲಿಯಾದ ಮನೆ ಒಳಗೆ ಹೊರಗೆಲ್ಲಾ ಎರಡೆರಡು ಬಾರಿ ತಿರುಗಿದಳು. ಗದ್ದೆ ಯಾರ ವಶವಾದರೆ ಏನಂತೆ, ಇನ್ನೂ ಅವರ ಮನೆ ಮತ್ತು ಸುತ್ತಲಿನ ಸ್ಥಳ ಹಾಗೇ ಇದೆ ಅವರ ಕೈಯಲ್ಲಿ. ನೀವಿರುವಷ್ಟು ದಿನ ಮನೆ ಸ್ಥಳ ನಿಮಗೇ ಇರಲಿ ಎಂದು ಶಾಸ್ತ್ರಿಗಳು ದೊಡ್ಡ ಮನಸ್ಸು ತೋರಿಸಿದ್ದರು ನಿಜ, ಆದರೆ ಸ್ವಲ್ಪ ಹೊತ್ತಿಗೆಲ್ಲಾ ಅದೂ ಇಲ್ಲವಾಗುತ್ತದೆ.

ಸಾಮಾನು ಹೊರಲು ಸಿದ್ಧನಾದ ಕೇಶವ ಅಳುಮುಖ ಮಾಡಿ, "ಅತ್ತಿಗೆ, ಅಲ್ಲಿ ನೋಡು, ರಸಬಾಳೆ ಗಿಡದಲ್ಲಿ ದೊಡ್ಡ ಗೊನೆ ಕಾಣಿಸ್ತಾ ಇದೆ. ಇದನ್ನು ಬಿಟ್ಟುಹೋಗಬೇಕಲ್ಲ" ಎಂದ.

ಅದೊಂದೇ ಅಲ್ಲ, ಎತ್ತರವಾಗಿ ಬೆಳೆದ ತೆಂಗಿನ ಗಿಡಗಳು, ಮಾವು, ಚಿಕ್ಕು, ನಿಂಬೆ ಇವೆಲ್ಲ ನಗುತ್ತಾ ಇವೆ. ಕೈಯಾರೆ ಬೆಳೆಸಿ ಬೇಸಿಗೆಯಲ್ಲಿ ನೀರನ್ನು ಹೊತ್ತು ಸಾಕಿದ್ದು. ಯಾವಾಗ ಫಲ ಸಿಕ್ಕೀತು ಎನ್ನುವ ನಿರೀಕ್ಷೆಯಲ್ಲಿ ಇರುವಾಗಲೇ ಅನಿರೀಕ್ಷಿತ ಪಯಣ, ಕಾಣದ ಊರಿಗೆ! ಗೊನೆ ಬಿಡಲು ಸಿದ್ಧವಾದ ಬಾಳೆಗಿಡಗಳು, ಇನ್ನೂ ಒಂದೆರಡು ವರ್ಷಗಳಲ್ಲಿ ಫಲಬಿಡುವ ತೆಂಗಿನ ಸಸಿಗಳನ್ನು ನೋಡುತ್ತ ಶಾಂಭವಿಯ ಕಣ್ಣುಗಳೂ ಹನಿಗೂಡಿದವು. ಮೆಲ್ಲನೆ ಬೀಸಿದ ಗಾಳಿಗೆ ತಲೆದೂಗುವ ಅವುಗಳೂ ಈ ಸಂಸಾರವನ್ನು ಬೀಳ್ಕೊಡುತ್ತಿವೆ. ಯಾವದು ತನ್ನದೆಂದು ಜೀವನವನ್ನೇ ಗಂಧದಂತೆ ತೇಯ್ದು, ಬೆವರುನೀರು ಹರಿಸಿದ್ದಳೋ ಅವನ್ನೆಲ್ಲ ತ್ಯಜಿಸಿ ಹೊರಟುಹೋಗಬೇಕಾಗಿದೆ, ಎಲ್ಲೋ ದೂರ! ತನ್ನ ಉಸಿರು ಇರುವತನಕವೂ ಯಾವ ಸ್ಥಳದಲ್ಲಿ ತಾನು ಬಾಳಿ ಸಂಪೂರ್ಣ ಮಿನುಗುತ್ತೇನೆ ಎಂದು ಕಲ್ಪಿಸಿಕೊಂಡಿದ್ದಳೋ ಇಂದು ಅಲ್ಲಿಂದ ಹೊರಟುಹೋಗಬೇಕಾಗಿದೆ. ಗುರಿ ತಪ್ಪಿದ ಬದುಕು!

ಸಾಮಾನು ಹೊತ್ತವರು, ಮಾಧವ, ವೇದಮ್ಮ, ಉಳಿದವರೆಲ್ಲ ಮುಂದೆ ಹೊರಟುಹೋದರು. ತನ್ನ ಎಳೆಗೂಸು ಲಕ್ಷ್ಮಣನನ್ನು ಎತ್ತಿಕೊಂಡಿದ್ದ ಶಾಂಭವಿಯ ಕಾಲುಗಳು ಇಲ್ಲೇ ಎಲ್ಲೋ ಆಳವಾಗಿ ಹೂತುಹೋಗಿವೆ. ಶತಮಾನಗಳಿಂದಲೂ ತಾನು ಇಲ್ಲಿದ್ದೇನೆ, ತನ್ನನ್ನು ಯಾರೂ ಕದಲಿಸ ಲಾರರು. ಹಸಿಮಣ್ಣಿನ ಕೆಂಪು ಬತ್ತದ ಹೊಟ್ಟಿನ ಪರಿಮಳ, ಮಂದವಾಗಿ ಬೀಸುವ ಗಾಳಿಯಲ್ಲಿ ಸೂಸಿಬರುವ ಕಾಡುಮಲ್ಲಿಗೆ, ರಂಜೆ ಹೂವುಗಳ ಪರಿಮಳ, ಇದೋ ಈ ಬದಿಯಲ್ಲಿ ಗದ್ದೆಯುದ್ದಕ್ಕೂ ಹರಡಿ ನಿಂತ ನಸುನೇರಳೆ ಬಣ್ಣದ ಕಿರಣಗಳಲ್ಲಿ ಮಿಂದು ನಲಿಯುತ್ತಿದ್ದ ಅಸಂಖ್ಯ ಬೆಟ್ಟಗಳು ಅವಳಿಗೆ ಅದೇನೋ ಮೋಡಿಹಾಕುತ್ತ ಅಲ್ಲೇ ತಡೆದು ನಿಲ್ಲಿಸಿವೆ. ಅವಳನ್ನೇ ಕರೆಯು ತ್ತಿವೆ.

ಮುಂದೆ ಹೋದ ಹರಿನಾರಾಯಣ ತನ್ನ ಹಿಂದೆ ಹೆಂಡತಿ ಬರುತ್ತಾಳೆಂದು ಅರೆಗಳಿಗೆ ತಡೆದು ನಿಂತ. ಆಮೇಲೆ ಹಿಂದೆ ಹೊರಳಿದ.

ಶಾಂಭವಿ ಅಲ್ಲೇ ನೆಲಕ್ಕೆ ಕುಸಿದು ಹಣೆಗೆ ಕೈ ಹಚ್ಚಿದಳು, "ನೀವೆಲ್ಲ ಹೋಗಿ, ನಾನಿಲ್ಲೇ ಇರ್ತೇನೆ!"

21

ಬೈಂದೂರು ತಲಪುವಾಗ ಸಾಯಂಕಾಲ ಐದೂವರೆ. ಬಸ್ ಸ್ಟ್ಯಾಂಡ್‌ನಿಂದ ಕೇವಲ ಒಂದು ಫರ್ಲಾಂಗು ದೂರ ಶಾಂಭವಿಯ ಚಿಕ್ಕಪ್ಪನ ಮನೆ. ನಡೆದು ಹೋಗಲು ಕಷ್ಟವೇನಿಲ್ಲ. ಈಗಲೂ ಶಾಂಭವಿಗೆ ತನ್ನ ಕಾಲುಗಳು ಬಹಳ ಭಾರವಾಗಿವೆ, ತಾನು ಇಲ್ಲಿಗೆ ಬಂದದ್ದು ತಪ್ಪಾಯ್ತು ಎಂದೆನಿಸಿತು. ತನ್ನನ್ನು ನಂಬಿಕೊಂಡುಬಂದ ದೊಡ್ಡ ಸಂಸಾರವನ್ನು ನೋಡಿ ಮನದೊಳಗೇ ನಾಚಿಕೆ. ತಾವೆಲ್ಲ ಸೇರಿ ಗಂಟುಮೂಟೆಗಳೊಡನೆ ಧಿಡೀರನೆ ಚಿಕ್ಕಪ್ಪನ ಮನೆಬಾಗಿಲಲ್ಲಿ ನಿಂತರೆ ಸಿಗುವ ಉಪಚಾರ ಹೇಗಿದ್ದೀತು ? ತಾನೊಬ್ಬಳೇ ಮೊದಲು ಹೋಗಿ ಮಾತನಾಡಿ ಬರುವದು ಒಳಿತು.

ಅವಳು ಲಕ್ಷ್ಮಣನನ್ನು ಅತ್ತೆ ಕೈಗೆ ಕೊಟ್ಟು, "ನೀವೆಲ್ಲ ಬಸ್‌ಸ್ಟ್ಯಾಂಡಿನ ಬದಿಯಲ್ಲಿ ಕುಳಿತಿರಿ. ನಾನೂ ಕೇಶವನೂ ಚಿಕ್ಕಪ್ಪ ಇದ್ದಾರೋ ಎಂದು ನೋಡಿ ಬರ್ತೇವೆ" ಎಂದಳು.

ಚಿಕ್ಕಪ್ಪ ಮನೆಯಲ್ಲೇ ಇದ್ದರು. ಶಾಂಭವಿಯನ್ನು ನೋಡದೆ ಬಹಳ ವರ್ಷಗಳಾದುದರಿಂದ ಆದರದಿಂದ ಸ್ವಾಗತಿಸಿದರು. ವಿಶಾಲವಾದ ದೊಡ್ಡ ಮನೆಯ ತಂಪು ಕೈಬೀಸಿ ಕರೆಯಿತು ಒಳಗೆ. ಚಿಕ್ಕಮ್ಮ ಆತ್ಮೀಯವಾಗಿ ಮಾತನಾಡಿಸಿ ಕಾಫಿ ಮಾಡಲೆಂದು ಓಡಿದರು ಅಡಿಗೆಕೋಣೆಗೆ.

"ನಮ್ಮ ವೇಣುವಿನ ಮಗಳಲ್ಲವೇ ನೀನು. ಎಲ್ಲಿಂದ ಬರ್ತಾ ಇದ್ದೀ ?"

ಶಾಂಭವಿ ಹೊರಕೋಣೆಯಲ್ಲಿರುವ ಬೆಲೆಬಾಳುವ ಕುರ್ಚಿಯ ಮೇಲೆ ಕುಳಿತುಕೊಳ್ಳಲಾರದೆ ತಾನು ಬಂದ ಕಾರಣವನ್ನು ವಿವರಿಸಿದಳು ನಾಲ್ಕು ಮಾತುಗಳಲ್ಲಿ. ಚಿಕ್ಕಪ್ಪನ ಕಣ್ಣುಗಳು ಆಗಲೇ ಬೆರಳು ಚೀಪುವವನನ್ನೇ ದಿಟ್ಟಿಸುತ್ತಿದ್ದವು. ಅವನು ನೆಲಕ್ಕೆ ಹಾಸಿದ ಸೊಗಸಾದ ಹಾಸಿನ ಮೇಲೆ ಉಜ್ಜುತ್ತಾ ಇದ್ದ ಕೊಳಕು ಪಾದಗಳನ್ನು.

"ಈ ಊರು ದೊಡ್ಡ ಪಟ್ಟಣವಲ್ಲ; ಕಿಷ್ಕಿಂಧೆಯಂತಿದೆ. ಇಲ್ಲಿ ಕೆಲಸ ಬೊಗಸೆ ಸಿಗುತ್ತವೆ ಅಂತ ನಂಬಿದ್ದೀಯಾ ?" ಅವರ ಹುಬ್ಬುಗಳು ಮೇಲೇರಿದವು. "ದೊಡ್ಡ ಪಟ್ಟಣಕ್ಕೆ ಹೋದರೆ ಇದಕ್ಕಿಂತ ಹೆಚ್ಚಿನ ಪ್ರಯೋಜನ."

"ಇಲ್ಲೇ ಭೂಮಿ ಸಿಕ್ಕಿದರೆ ಉಳಿಯೋಣ...."

"ಅಷ್ಟು ಸುಲಭವಾಗಿ ಭೂಮಿ ಸಿಗುತ್ತೆ ಅಂತ ತಿಳೀಬೇಡ. ನೀವು ಇರುವ

ಊರಿನಲ್ಲೇ ಕೆಲಸ ಬೊಗಸೆ ಮಾಡ್ತಾ ಹೊಸ ಭೂಮಿ ಮಾಡುವ ಯೋಜ್ನೆ ಮಾಡಬಹುದಿತ್ತು."

ಅಷ್ಟರಲ್ಲಿ ಕಾಫಿ ಬಂದಿತು. ಚಿಕ್ಕಮ್ಮ ಮಾತು ಪ್ರಾರಂಭ ಮಾಡಬೇಕು ಎನ್ನುವಾಗಲೇ ಅವಳನ್ನು ತಡೆದು ಅಂದರು ಚಿಕ್ಕಪ್ಪ,

"ಅವಳು ನಮ್ಮನ್ನು ನೋಡಿಕೊಂಡು ಹೋಗಲು ಬಂದಿದ್ದಾಳೆ. ಅವಳ ಗಂಡ, ಮಕ್ಕಳು, ಅತ್ತೆ ಎಲ್ಲಾ ಬಸ್ ಸ್ಟ್ಯಾಂಡ್‌ನಲ್ಲಿದ್ದಾರಂತೆ. ಪಾಪ, ಇವಳಿಗಾಗಿ ಕಾಯ್ತಾ ಇರಬಹುದು. ಏನು, ನೀನಿವತ್ತೇ ಹೋಗ್ತಿಯಲ್ಲ?"

ಕಾಫಿಯ ಗುಟುಕು ಗಂಟಲಿನಿಂದ ಇಳಿಯಲಿಲ್ಲ. ಯಾವ ಭರವಸೆ, ಆಶಾವಾದದಿಂದ ಇಲ್ಲಿಗೆ ಬಂದಿದ್ದಳೋ ಅದು ಆವಿಯಾಗಿಹೋಯಿತು. ಕಣ್ಣು ಸನ್ನೆಯಲ್ಲಿ ಕೇಶವನನ್ನು ಏಳುವಂತೆ ತಿಳಿಸಿ, "ಬರ್ತೆ ನೆ ಚಿಕ್ಕಪ್ಪ, ತುಂಬಾ ಉಪಕಾರವಾಯ್ತು" ಎಂದಳು.

ಅನಗತ್ಯವಾಗಿತ್ತು ಈ ಕೃತಜ್ಞತೆಯ ನುಡಿ. ಚಿಕ್ಕಪ್ಪ ಕುಳಿತಲ್ಲಿಂದ ಏಳಲಿಲ್ಲ. ಕೇಶವ ಅತ್ತಿಗೆಯ ಹಿಂದೆ ಹೆಜ್ಜೆ ಹಾಕಿದ.

"ನಿನ್ನ ಚಿಕ್ಕಪ್ಪನಿಗೆ ನನ್ನ ಕಥೆ ಕೇಳಿ ದಂಗಾಗಿರಬೇಕು. ಬಸ್ ಸ್ಟ್ಯಾಂಡನಲ್ಲಿ ನಮ್ಮ ಜನರು ಇದ್ದಾರೆ ಎಂದು ತಿಳಿದರೂ ಬನ್ನಿ ಎನ್ನಲಿಲ್ಲ!"

'ನಿರ್ಗತಿಕರ ಹಣೆಬರಹವೇ ಇಷ್ಟು!' ಅವಳ ಮನ ಅಂದಿತು. ಆದರೆ ನಾಲಿಗೆ ಸತ್ತಿತ್ತು. ಇನ್ನೆಲ್ಲಿಗೆ ಹೋಗುವದು? ಈ ರಾತ್ರಿ ಕಳೆಯುವದು ಹೇಗೆ? ಒಂದೆರಡು ಮಳೆಹನಿಗಳೂ ಬೀಳಲಾರಂಭಿಸಿವೆ. ಅವರಿಬ್ಬರೂ ಹಿಂದಿರುಗಿ ಬಂದಾಗ ಅಷ್ಟುಹೊತ್ತು ಕಾತರದಿಂದ ನಿರೀಕ್ಷಿಸಿಕೊಂಡಿದ್ದವರಿಗೆ ಅತೀವ ನಿರಾಶೆ, ಮುಂದೇನು ಎನ್ನುವ ಪ್ರಶ್ನೆ. ಆ ಹೊತ್ತಿನಲ್ಲಿ ಒಂದೆರಡು ಬಸ್ಸುಗಳು ಅಲ್ಲಿದ್ದವು ನಿಜ. ಆದರೆ ಗುರಿಯಿಲ್ಲದೆ ಯಾವ ಬಸ್ಸನ್ನು ಹತ್ತಬೇಕು?

"ಎಲ್ಲಿಗೆ ಹೋಗ್ತಾ ಇದ್ದೀರಿ?" ಯಾರದೋ ಸ್ವರ ಕೇಳಿದಾಗ ಎಲ್ಲರೂ ಅತ್ತ ತಿರುಗಿದರು. ಅವರ ಹತ್ತಿರವೇ ನಿಂತಿದ್ದ ಲಾರಿಯಿಂದ ಹುಡುಗಪ್ರಾಯದ ಡ್ರೈವರ್‌ನೊಬ್ಬ ಕಾಣಿಸಿಕೊಂಡ. ಬಹಳ ಹೊತ್ತಿನಿಂದಲೂ ಅವನು ಇವರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಲಾರಿಯಲ್ಲಿ ಕುಳಿತಿದ್ದನೆಂದು ತೋರುತ್ತದೆ. ಅವನ ಪ್ರಶ್ನೆಗೆ ಉತ್ತರ ಕೊಡಲು ತಿಳಿಯಲಿಲ್ಲ ಯಾರಿಗೂ.

"ಎಲ್ಲಿಗೋ ವಲಸೆ ಹೋಗ್ತಾ ಇದ್ದೀರಲ್ಲ. ನನ್ನ ಲಾರಿ ಹತ್ತಿಕೊಳ್ಳಿ. ನಾನು ಭಟ್ಕಳ ಮಾರ್ಗವಾಗಿ ಹೋಗ್ತಾ ಇದ್ದೇನೆ."

"ನಿನ್ನ ಲಾರಿ ಹತ್ತಿ ನಾವೆಲ್ಲಿಗೆ ಹೋಗಬೇಕು?"

"ನನ್ನ ಹತ್ತಿರ ಪ್ರಶ್ನಿಸ್ತಾ ಇದ್ದೀರಾ?" ಲಾರಿಯವನು ಕೆಳಗೆ ಧುಮುಕಿ ಅವರ ಹತ್ತಿರ ಬಂದ. ಉಡುಪಿನಲ್ಲಿ ಮುಸ್ಲಿಂನಂತೆ ಕಾಣಿಸಿಕೊಂಡ ಅವನು "ಸಲಾಂ ಅಲ್ಲಾ!" ಎಂದು ನಮಸ್ಕರಿಸಿದ, "ನಿಮ್ಮನ್ನು ನೋಡಿದರೆ ಅನುಕೂಲವಂತ ಮನೆಯವರ ಹಾಗೆ ಕಾಣಿಸ್ತೀರಿ. ಮಕ್ಕಳು ಮರಿ, ಹುಡುಗಿಯರನ್ನು ಕಟ್ಕೊಂಡು ಹೀಗೆ ಇಲ್ಲೇನು ಮಾಡ್ತೀರಿ?"

ಹರಿನಾರಾಯಣ ಮಾತನಾಡಲಿಲ್ಲ. ಶಾಂಭವಿಗೆ ಈಗ ತಮ್ಮ ಮೂರ್ಖತನದ ಅರಿವಾಯಿತು. ಅವರವರಲ್ಲೇ ಎದ್ದಿತು ಗುಸು ಚರ್ಚೆ.

"ಯಾ ಅಲ್ಲಾ! ನಿಮ್ಮನ್ನು ನೋಡಿದರೆ ಕನಿಕರವಾಗ್ತದೆ. ಈಗಿನ ಕಾಲ ಬಹಳ ಕೆಟ್ಟೋಗಿದೆ ಅನ್ನುವದು ಗೊತ್ತೇ ನಿಮಗೆ."

ಶಾಂಭವಿ ಮೆಲ್ಲನೆ ಕಂಪಿಸುತ್ತ ಶಾರದೆ ಮತ್ತು ಈಶ್ವರಿಯತ್ತ ನೋಡಿದಳು. ಆಗಲೇ ಕತ್ತಲೆಯಾಗುತ್ತಾ ಇದೆ. ಕಾಲ ಕೆಟ್ಟುಹೋಗಿದೆ!

"ಬೈಂದೂರಿನಲ್ಲಿ ಉಳಿಯೋದಕ್ಕೆ ಒಂದು ನೆಲೆ ಸಿಗಲಾರದು. ಭಟ್ಕಳದ ದಾರಿಯಾಗಿ ನಾನು ಹೋಗ್ತಾ ಇದ್ದೇನೆ. ಭಟ್ಕಳದಲ್ಲಿ ನಿಮ್ಮವರ ಮನೆ ಬೇಕಾದಷ್ಟಿದೆ. ಅಲ್ಲಿ ಹೆದರಿಕೆಯಿಲ್ಲ."

ಮತ್ತೆ ಎದ್ದಿತು ಗುಸುಗುಸು.. ಲಾರಿಯವನು ವಿಶ್ವಾಸದಿಂದ ಅಂದ, "ಅಲ್ಲಾ ಕಿ ಕಸಂ! ಭಟ್ಕಳದಲ್ಲಿ ನನ್ನ ಪರಿಚಿತರ ಮನೆಯಿದೆ. ಅವರ ಹತ್ರ ಮಾತನಾಡಿ ನಿಮ್ಮನ್ನು ಅವರ ಮನೆಗೆ ಮುಟ್ಟಿಸಿ ನಾನು ಹೊರಟು ಹೋಗ್ತೇನೆ."

ಲಾರಿಯವನ ಮಾತಿನಲ್ಲಿ ನಂಬಿಕೆಯಿಡುತ್ತ ಶಾಂಭವಿ "ನಡೀರಿ ಹೋಗೋಣ. ಮುಂದಿನ ಮಾರ್ಗ ದೇವರಿಟ್ಟಂತೆ ಆಗಲಿ" ಎಂದಳು.

ಲಾರಿ ಭಟ್ಕಳಕ್ಕೆ ತಲಪುವಾಗ ದೀಪ ಹೊತ್ತಿಸುವ ಸಮಯ. ಲಾರಿಯವನು ಎಲ್ಲರನ್ನೂ ದೊಡ್ಡ ಊಟದ ಹೋಟೆಲ್‌ಗೆ ಕರೆದೊಯ್ದು ಹೊಟ್ಟೆ ಪ್ರಶ್ನೆ ಬಗೆಹರಿಸಿದಾಗ ಶಾಂಭವಿಯ ಮನವನ್ನು ಹೊಕ್ಕಿತು ಸಂಶಯದ ಕೀಟ, ಇವನಿಗೇಕೆ ತಮ್ಮ ಮೇಲೆ ಇಷ್ಟು ಮುತುವರ್ಜಿ? ಇವನ ದೃಷ್ಟಿ ಶಾರದೆ ಮತ್ತು ಈಶ್ವರಿಯತ್ತ ನೋಡುತ್ತಿವೆಯೇ? ನಮ್ಮನ್ನೆಲ್ಲ ಎಲ್ಲಿಯಾದರೂ ಸಾಗರದಾಚೆ ದಾಟಿಸುವ ಯೋಚನೆ ಮಾಡಿದ್ದಾನೆಯೆ?

ಇವನ ಕೈಗೆ ಸಿಕ್ಕಿಕೊಳ್ಳಲೇಬಾರದಿತ್ತು. ಊಟದ ಹಣವನ್ನೂ ಅವನೇ ತೆತ್ತು ಹೊರಗೆ ಬಂದಾಗ ಶಾಂಭವಿಗೆ ಇನ್ನೊಮ್ಮೆ ಲಾರಿ ಹತ್ತುವ ಧೈರ್ಯ ವಿರಲಿಲ್ಲ.

"ನಾವಿಲ್ಲೀ ಇಳೀತೇವೆ. ಇನ್ನುಮುಂದೆ ನಮ್ಮ ಭಾರ ನಮಗೇ ಇರಲಿ."

"ಇಲ್ಲಿ ದಾರಿ ಬದಿಯಲ್ಲಿ ಬಿದ್ದುಕೊಳ್ತೀರೇನು ?" ಲಾರಿಯವನು ಗದರಿ ಕೊಂಡು ಎಲ್ಲರನ್ನು ಹತ್ತಿಸಿದ ಲಾರಿಯಲ್ಲಿ. ನಿರುಪಾಯಳಾದ ಅವಳೂ ಹತ್ತಿದಳು.

ಲಾರಿ ಅನೇಕ ಸಂದು ಗಲ್ಲಿಗಳನ್ನು ತಿರುಗಿ ಒಂದು ದೊಡ್ಡ ಮನೆಯ ಎದುರು ಬಂದು ನಿಂತಿತು. ಅವನು ತಾನೇ ಮೊದಲು ಕೆಳಗಿಳಿದು ಹೋಗಿ ಹತ್ತು ನಿಮಿಷದಲ್ಲಿ ಹಿಂದೆ ಬಂದ. "ಎಲ್ಲರೂ ಕೆಳಗಿಳಿದುಬಿಡಿ. ಅವರ ಮನೆ ಯಲ್ಲಿ ನಿಮಗಾಗಿ ಉಳಿಯಲು ಜಾಗ ಕೊಡ್ತಾರಂತೆ. ಭಾಭೀ! ನೀವೂ ಇಳೀರಿ. ಹಾಗೇ ಎಲ್ಲ ಸಾಮಾನುಗಳನ್ನು ಇಳಿಸಿಕೊಳ್ಳಿ."

ಅಷ್ಟುಹೊತ್ತಿಗೆ ಮನೆಯೊಳಗಿನಿಂದ ಎಪ್ಪತ್ತರ ವೃದ್ಧರೊಬ್ಬರು ಹೊರಗೆ ಬಂದರು. ಲಾರಿಯಲ್ಲಿ ಕುಳಿತವರೆಲ್ಲ ಬುಡಬುಡನೆ ಕೆಳಗಿಳಿದು ತಮ್ಮ ಸಾಮಾನುಗಳನ್ನು ಕೆಳಗಿಳಿಸಿಕೊಂಡರು.

"ಸಲಾಂ ಅಲ್ಲಾ !" ಲಾರಿಯವನು ಹರಿನಾರಾಯಣನ ಕೈಕುಲುಕಿ ವೇದಮ್ಮನ ಕೈಯಲ್ಲಿದ್ದ ಮಗುವನ್ನು ಮುದ್ದಿಸಿ, ಅಳುತ್ತಿರುವ ಸುಮನಳ ಬೆನ್ನುಚಪ್ಪರಿಸಿ ತನ್ನ ಯಥಾಸ್ಥಾನವನ್ನು ಅಲಂಕರಿಸಿದ. "ಇಲ್ಲಿ ನಿಮ ಗೇನೂ ಹೆದರಿಕೆಯಿಲ್ಲ. ಅಗೆ ಭಾಭೀ ! ನನಗೆ ಬಂದರದಿಂದ ಮೀನಿನ ಬುಟ್ಟಿ ಗಳನ್ನು ತುಂಬಿಸಿಕೊಂಡು ಬೊಂಬಾಯಿಗೆ ಹೋಗ್ಬೇಕು, ಇನ್ನೊಮ್ಮೆ ಭೇಟಿ ಯಾಗೋಣ. ನಮಸ್ತೇ."

ಗುಡುಗುಡು ಶಬ್ದಮಾಡುತ್ತ ಹೊರಟುಹೋಯಿತು ಲಾರಿ. ಅನಿರೀಕ್ಷಿತ ವಾಗಿ ಒದಗಿಬಂದ ಸಹಾಯ ! ಹರಿನಾರಾಯಣ ಮತ್ತು ಶಾಂಭವಿಯ ಹೃದಯ ತುಂಬಿತು ಕೃತಜ್ಞತೆಯಲ್ಲಿ. ಹೊರಗೆ ಬಂದ ವೃದ್ಧರು ತಮ್ಮ ಮನೆ ಎದುರು ನೆರೆದ ಜನರನ್ನು ನೋಡಿ ಮುಖ ಸಿಂಡರಿಸಿ ಅಂಗಳದ ಬದಿಯಲ್ಲಿರುವ ಕೊಟ್ಟಿಗೆಯತ್ತ ಕೈ ತೋರಿಸಿದರು. ಅದು ಕಟ್ಟಿಗೆ ಶೇಖರಿಸಿಟ್ಟ ಕೊಟ್ಟಿಗೆ. ಒಂದು ರಾತ್ರಿಯ ವಾಸಕ್ಕೆ ಸಾಕು. ಅದನ್ನೇ ಶುಚಿ ಮಾಡಿಕೊಂಡದ್ದಾಯಿತು. ದಿನವೆಲ್ಲ ಪ್ರಯಾಣದ ಆಯಾಸದಿಂದ ಸೋತ ಶರೀರಗಳು ನೆಲ ಅಪ್ಪಿದಾಕ್ಷಣ ನಿದ್ರೆಯ ಲೋಕಕ್ಕೆ. ಆದರೆ ತಾಯಿಹಾಲು ಸಾಲದೆ ಅಳುತ್ತಿರುವ ಮಗು

ಮತ್ತು ಮುಂದಿನ ಭವಿಷ್ಯದಲ್ಲಿ ಅಧೀರಳಾಗಿ ಚಿಂತಿಸುತ್ತಿದ್ದ ತಾಯಿ ಇಬ್ಬರೇ ಎಚ್ಚರವಾಗಿದ್ದರು ಅದೆಷ್ಟೋ ಹೊತ್ತು.

22

ನಸುಕು ಹರಿಯುವ ಮೊದಲೇ ಸಹಸ್ರನಾಮಾರ್ಚನೆ. ಭಾಷೆಯೇ ಬೇರೆ. ಯಾವುದೂ ಅರ್ಥವಾಗದಿದ್ದರೂ ತಮ್ಮನ್ನೇ ಆಡಿಕೊಳ್ಳುತ್ತಿದ್ದಾರೆ ಎಂದು ತಿಳಿದುಹೋಯಿತು ವೇದಮ್ಮನಿಗೆ. ಕಟ್ಟಿಗೆ ರಾಶಿಯ ಬದಿಯಲ್ಲಿದ್ದ ಕೋಳಿ ಕ್ಕೊಕ್ಕೋ ಎನ್ನುತ್ತ ಹಾರಿತು ಅವಳ ಎದುರಿನಿಂದ. ಬೆದರಿ ತನಗೆ ಒತ್ತಿ ಕೊಂಡು ಮಲಗಿದ ಸೊಸೆಯನ್ನು ಎಬ್ಬಿಸಿದಳು.

ಸ್ವಲ್ಪ ಹೊತ್ತಿಗೆಲ್ಲಾ ಊರು ಎದ್ದುಬಿಟ್ಟಿತು. ಸಣ್ಣ ಮನೆಯ ಎದುರಿನ ಕೊಳಕಾದ ಕೊಟ್ಟಿಗೆಯ ಒಂದು ಮೂಲೆಯಲ್ಲಿ ತಾವಿದ್ದೇವೆ ಎನ್ನುವದು ತಿಳಿಯಿತು ಆಗ. ನಿನ್ನೆ ರಾತ್ರಿ ನೋಡಿದ ವೃದ್ಧರು ಅವರತ್ತ ಯಾವ ಕರುಣೆ, ಅನುಕಂಪ ತೋರಿಸದೆ "ಕರೀಂ ಸಾಹೇಬರ ಮಾತಿಗೆ ಬೆಲೆ ಕೊಟ್ಟು ಒಂದು ರಾತ್ರಿಯ ಆಶ್ರಯ ಕೊಟ್ಟಿದ್ದೇನೆ. ಇನ್ನು ಬೇರೆಡೆ ನೋಡಿಕೊಳ್ಳಿ" ಎಂದರು. ಆದರೆ ಸಣ್ಣ ಮಗುವಿಗೆ ಒಂದು ಗುಟುಕು ಹಾಲು ಕೊಡುವ ದಯ ತೋರಿ ಸಿದರು. ಮನೆಯೊಳಗೆ ಸ್ವರ ಕೇಳಿಸಿದರೂ ಯಾರ ಮುಖಗಳೂ ಹೊರಗೆ ಕಾಣಿಸಲಿಲ್ಲ.

ಹರಿನಾರಾಯಣ ಬೆಪ್ಪನಂತೆ ಶಾಂಭವಿಯ ಮುಖದಿಂದ ಹೊರಬೀಳುವ ಮಾತಿಗೆ ಕಾದು ನಿಂತ. ನಿನ್ನೆ ಊರನ್ನು ಹೇಗೆ ತ್ಯಜಿಸಿದ್ದರೋ ಇಂದು ಪರಸ್ಥಳದಲ್ಲಿ ಕಾಲೂರಿದ್ದಾರೆ. ಇಲ್ಲೇ ನೆಲೆಯೂರಿ ಭವಿಷ್ಯದ ಬೆಳಕನ್ನು ಕಂಡುಕೊಳ್ಳಬೇಕು. ಶಾಂಭವಿ ಹೇಳಿದಳು :

"ಬಾಡಿಗೆ ಮನೆ ಸಿಗುತ್ತದೆಯೋ ನೋಡಿ. ಒಂದು ಕೋಣೆಯಾದರೂ ಸಾಕು. ಬಾಡಿಗೆ ಇಪ್ಪತ್ತು ರೂಪಾಯಿಗಿಂತ ಜಾಸ್ತಿಯಾಗಬಾರದು."

ಹರಿನಾರಾಯಣ 'ಅಸ್ತು' ಎಂದಂದು ಆ ಕೂಡಲೇ ಮಾಧವನ ಜೊತೆ ಹೊರಟ ಬಾಡಿಗೆ ಮನೆಗಾಗಿ. ಹೊಸ ಊರಿನಲ್ಲಿ ಹಲವು ಕಡೆಗಳಲ್ಲಿ ವಿಚಾರಿಸಿ ದಾಗ ಒಂದೆರಡು ಬಾಡಿಗೆ ಮನೆ ಕಾಣಲು ಸಿಕ್ಕಿದರೂ ಬಾಡಿಗೆ ಐವತ್ತು ರೂಪಾಯಿಗಳಿಗಿಂತ ಜಾಸ್ತಿ. ಕೊನೆಗೆ ನಾಡಗೇರ ದೇವಸ್ಥಾನದ ಎದುರು

ಎರಡು ಕೋಣೆ, ಒಂದು ಅಡಿಗೆಮನೆಯಿರುವ ಸಣ್ಣ ಮನೆ ಸಿಕ್ಕಿತು. ಬಾಡಿಗೆ ಇಪ್ಪತ್ತೈದು ರೂಪಾಯಿ. ಸುಂದರೀಬಾಯಿ ಎನ್ನುವ ವಿಧವೆಗೆ ಸೇರಿದ ಮನೆ ಅದು. ಒಂದು ತಿಂಗಳ ಬಾಡಿಗೆಯನ್ನು ಮೊದಲೇ ಕೊಟ್ಟು ತಾವು ಇಳಿದುಕೊಂಡ ಸ್ಥಳಕ್ಕೆ ಹಿಂದಿರುಗಿದರು ಇಬ್ಬರೂ. ಮತ್ತೆ ಅರ್ಧಗಂಟೆಯಲ್ಲಿ ಸಾಮಾನುಗಳನ್ನೆಲ್ಲ ಸಾಗಿಸಿಯಾಯ್ತು ಬಾಡಿಗೆಮನೆಗೆ. ಇಷ್ಟು ಹೊತ್ತು ಆಶ್ರಯಕೊಟ್ಟ ಮನೆಯವರ ಕಣ್ಣುಕಸವಾಗಿದ್ದ ಉಳಿದವರು 'ಅಬ್ಬಬ್ಬ' ಎಂದು ಉಸಿರ್ಗರೆದರು ಹೊಸ ಮನೆಯಲ್ಲಿ.

ಬಾಡಿಗೆ ಮನೆ ತುಂಬಿಕೊಂಡ ಕೆಲವೇ ನಿಮಿಷಗಳಲ್ಲಿ ಆಗಮಿಸಿದಳು ಸುಂದರೀಬಾಯಿ. ಹೆಸರಿಗೆ ತಕ್ಕಂತೆ ಸುಂದರಿಯಾದ ನಲವತ್ತೈದು ಮೀರಿದ ಹೆಂಗಸು. ನಾಲ್ಕು ಮಕ್ಕಳ ತಾಯಿ. ಮೈತುಂಬಾ ಆಭರಣ ಧರಿಸಿದ ದಡೂತಿ ಶರೀರವನ್ನು ಹೊತ್ತುಕೊಂಡು ಆತ್ಮೀಯವಾಗಿ ವಿಚಾರಿಸಿಕೊಂಡಳು ಎಲ್ಲರನ್ನೂ. ಆದರೆ ಎಲ್ಲಾ ಹರಿಕಥೆಯನ್ನು ಕೇಳುವ ತಾಳ್ಮೆ ಅವಳಿಗಿರಲಿಲ್ಲ. ಆದಾಯವಿಲ್ಲದ ಇವರ ಜೀವನ ಕಂಡು ಅವಳ ಮುಖಚಹರೆಯೇ ಬದಲಾಯಿತು. ತನ್ನ ಬಾಡಿಗೆ ಹಣ ಸರಾಗವಾಗಿ ಬರಲಾರದೆಂದು ಹೆದರಿರಬೇಕು, ಮಾತನಾಡುತ್ತ "ಮೂರು ತಿಂಗಳ ಬಾಡಿಗೆಯನ್ನು ಈಗಲೇ ಕೊಟ್ಬಿರಿ" ಎಂದಳು.

ಶಾಂಭವಿ ಮರುಮಾತನಾಡದೆ ಮೊದಲು ಕೊಟ್ಟ ಇಪ್ಪತ್ತೈದರ ಜೊತೆಗೆ ಇನ್ನೂ ಐವತ್ತು ಸೇರಿಸಿ ಅವಳ ಕೈಗಿತ್ತಳು. ಸುಂದರೀಬಾಯಿ ಹ್ಹಿಹ್ಹೀ ಎಂದು ನಗುತ್ತ ಲಕ್ಷ್ಮಣನ ಕೆನ್ನೆ ಸವರಿದಳು.

ಹೊಸ ಸ್ಥಳದಲ್ಲಿ ನೆಲೆಯೂರಿದಮೇಲೆ ಗುರುಪುರದ ಹಳ್ಳಿ ಜೀವನಕ್ಕೂ ಭಟ್ಕಳದ ಜೀವನಕ್ಕೂ ಬಹಳ ವ್ಯತ್ಯಾಸಗಳಿವೆ ಎಂದು ತಿಳಿಯಿತು. ತಮ್ಮ ಗದ್ದೆಕೆಲಸ, ಹೊಲಿಗೆಕೆಲಸ, ಬೀಡಿಕೆಲಸ, ಶಾಸ್ತ್ರಗಳಲ್ಲಿ ದುಡಿತವಿರುವ ಈ ಕುಟುಂಬಕ್ಕೆ ಇಲ್ಲಿ ಹೊಂದಿಕೊಳ್ಳಲು ಕೆಲವು ಸಮಯಗಳು ಬೇಕಾದವು. ಬೇಸಾಯದ ಕೆಲಸಗಳಿಲ್ಲದೆ, ತಮ್ಮದೆಂಬ ಉತ್ಸಾಹದ ದುಡಿತದ ಉತ್ಸಾಹವಿಲ್ಲದೆ ವೃಥಾ ಕಳೆದುಹೋದವು ಅನೇಕ ದಿನಗಳು. ಊರು ನೋಡುವದು, ಕೆಲಸಕ್ಕಾಗಿ ತಿರುಗುವದರಲ್ಲಿ ಮತ್ತೆ ಅನೇಕ ದಿನಗಳು ಸಂದವು. ಸೋಮಾರಿತನ ತಾನೇತಾನಾಗಿ ಆವರಿಸಿತು ಎಲ್ಲರನ್ನೂ. ಕೇಶವನ ಬೆರಳು ಚೀಪುವ ಚಟ ಇನ್ನೂ ಹೆಚ್ಚಿತು. ಮಾಧವ ಊರೂರು ಅಲೆಯುತ್ತ ಮನೆಗೆ ಬಂದರೆ ಸಿಟ್ಟಿನ ಮೂರ್ತಿ. ಶಾರದೆ ತನ್ನಲ್ಲೇ ಚಿಂತಿಸುತ್ತ ಇನ್ನೂ ಮೌನಿಯಾಗಿ,

ಶಾಂಭವಿಗೇ ಬೇಸರ ಮಾಡುವಂತಾದಳು. ವೇದಮ್ಮ "ಇಲ್ಲಿಗಿಂತ ನಮ್ಮ ಊರು ವಾಸಿ" ಎಂಬ ಗಲಾಟೆ.

ಸಹನೆಯಲ್ಲಿದ್ದವನು ಹರಿನಾರಾಯಣ! ಹಿಂದೆ ಹೆಡ್ಡನಂತೆ ಸೋಮಾರಿಯಾಗಿ ಕಲ್ಲುಬೇಂಚಿನ ಮೇಲೆ ಹಾಡು ಹೇಳುತ್ತ ಗಂಭೀರನಾಗಿ ಕುಳಿತುಕೊಳ್ಳುವವ ಈಗ ಯಾವ ಬದಲಾವಣೆಯ ಮೋಡಿಗೆ ತಿರುಗಿದ್ದಾನೋ, ಇಂದಲ್ಲ ನಾಳೆ ಕೆಲಸ ಸಿಕ್ಕೀತೆಂದು ಅಲ್ಲಿಲ್ಲಿ ಅಲೆಯಲಾರಂಭಿಸಿದ.

ಭಟ್ಕಳದಲ್ಲಿ ಹಿಂದೂಗಳಷ್ಟೇ ಸಂಖ್ಯೆಯಲ್ಲಿ ಮುಸ್ಲಿಂ ಜನರೂ ಇದ್ದಾರೆ. ಹೇಳಿಕೊಳ್ಳುವಷ್ಟು ಜನಸಂಖ್ಯೆಯೂ ಇಲ್ಲ. ಹರಿನಾರಾಯಣನಂಥವರು ಈಗಾಗಲೇ ಸಾಕಷ್ಟು ಇದ್ದು, ಹೊಸಬನಾದ ಅವನಿಗೆ ಕೆಲಸ ಸಿಗುವುದು ಕಷ್ಟಕರ. ಹೀಗಿದ್ದರೂ ಇಲ್ಲಿ ಹಿಂದೂಗಳ ದೇವಸ್ಥಾನಗಳು ಅಧಿಕ. ಮಾರುಮಾರಿಗೊಂದರಂತೆ ದೇವದೇವಿಯರ ಗುಡಿಗಳು, ದೇವಸ್ಥಾನಗಳು. ತನಗೆ ಅಲ್ಲಿ ಕೆಲಸ ಸಿಕ್ಕಿದರೂ ಆಗಬಹುದು, ತಮ್ಮಂದಿರಿಗೆ ಸಿಕ್ಕಿದರೂ ಸಾಕು ಎಂದು ಹುಡುಕಿದರೆ ಯಾರು ಕೊಡುತ್ತಾರೆ ಕೆಲಸ? ಅನೇಕ ಸಣ್ಣ ದೇವಸ್ಥಾನಗಳಲ್ಲಿ ಪೂಜೆಯ ಆದಾಯವಿಲ್ಲದೆ ಅವರವರ ಜೀವನವೇ ದುಸ್ತರ.

ಶಾಂಭವಿಯ ಧೈರ್ಯ, ಸ್ಥೈರ್ಯ ಕುಸಿಯುತ್ತಬಂದಿತು. ಶಾಸ್ತ್ರಿಗಳು ಕೊಟ್ಟ ಸಾವಿರ ರೂಪಾಯಿಗಳಲ್ಲಿ ಈಗಾಗಲೇ ಅನೇಕ ನೂರು ರೂಪಾಯಿಗಳು ಖರ್ಚಾಗಿಹೋಗಿದ್ದವು. ಸಂಪಾದನೆ ಶೂನ್ಯವಾದರೆ ಮುಂದಿನ ಪ್ರಶ್ನೆ? ಅವಳ ಹೊಲಿಗೆಯಂತ್ರ ಧೂಳು ಝಾಡಿಸಿಕೊಂಡು ನಿಂತರೂ ಕೆಲಸ ಕಾಣದೆ ಸೋಲಬೇಕಾಯಿತು. ಹೊಸಬಳಿಗೆ ಹೊಲಿಗೆ ಕೊಡಲು ಅನೇಕರಿಗೆ ಹೆದರಿಕೆ. ಹೊಲಿಗೆ ಮಜೂರಿಯೂ ಇಲ್ಲಿ ಕಡಿಮೆ. ಹರಿನಾರಾಯಣನ ಜೊತೆ ಅವಳು ಅಲೆದಾಡಿದಳು ಕೆಲಸಕ್ಕಾಗಿ.

ಹೀಗೆ ಅಲೆದಾಟ ವ್ಯರ್ಥ ಪ್ರಯತ್ನವೆಂದು ಅರಿವಾದಬಳಿಕ ಪೇಟೆಮಧ್ಯದಲ್ಲಿ ಸಣ್ಣ ಹಣ್ಣಿನಂಗಡಿಯನ್ನು ತೆರೆಯಲಾಯಿತು. ಹಣ್ಣಿನೊಂದಿಗೆ ಕೆಲವು ತರಕಾರಿಗಳನ್ನೂ ಇಟ್ಟುಕೊಳ್ಳಲಾಯಿತು. ಅಂಗಡಿ ತೆರೆದ ಕೆಲವೇ ದಿನಗಳಲ್ಲಿ ಶಾರದೆಗೆ ವೈದ್ಯರೊಬ್ಬರ ಮನೆಯಲ್ಲಿ ಎಳೆಮಗುವನ್ನು ನೋಡಿಕೊಳ್ಳುವ ಕೆಲಸ ಮತ್ತು ಈಶ್ವರಿಗೆ ನರ್ಸರಿ ಶಾಲೆಗೆ ಹೋಗುವ ಬೇರೆ ಬೇರೆ ಮನೆಯ ಎರಡು ಮಕ್ಕಳನ್ನು ಎರಡು ಹೊತ್ತು ಕರೆದೊಯ್ಯುವ ಕೆಲಸವೂ ದೊರೆಯಿತು. ಇನ್ನೇನು ಊರನ್ನು ಬಿಟ್ಟುಬಿಡುವಂತಹ ಸ್ಥಿತಿ ಬಂದೀತೆಂದು ಹೆದರಿದ್ದ ಶಾಂಭವಿ, ವೇದಮ್ಮನಿಗೆ ಹುಡುಗಿಯರಿಗೆ ದೊರೆತ ಕೆಲಸದಿಂದ ಇನ್ನಷ್ಟು

ಧೈರ್ಯ ಬಂದಿತು. ಹಣ್ಣಿನಂಗಡಿ ವ್ಯಾಪಾರ ಕುದುರುತ್ತಬಂದಂತೆ ಇಂದಲ್ಲ ನಾಳೆ ಒಳ್ಳೆಯದೇ ಆಗಬಹುದೆಂಬ ನಿರೀಕ್ಷೆ.

23

ಈ ನಡುವೆ ಕೇಶವ ಭಟ್ಕಳದ ಬಂದರಿನತ್ತ ಹೋಗಲಾರಂಭಿಸಿದ. ಕಷ್ಟ ಪಟ್ಟರೆ ಅಲ್ಲಿ ಅಷ್ಟಿಷ್ಟು ಸಂಪಾದನೆ, ಅವನ ದಿನದ ಖರ್ಚಿಗೆ ಸಾಕು. ಕೆಲವು ದಿನ ಅತ್ತಿಗೆಯ ಕೈಯಲ್ಲಿ ತಂದಿರಿಸಿದ ತಾನು ದುಡಿದ ಹಣವನ್ನು. ಆದರೆ ಬೆಳೆಯುತ್ತಿರುವ ವಯಸ್ಸು. ಮೊದಲೇ ನಾಲಿಗೆ ಚಪಲ. ಕೈಮೇಲೆ ಹಣ ಓಡಾಡಿದಾಗ ಅವನ ಮನಸ್ಸು ಎಳೆಯಿತು ಹೋಟೆಲ್‌ನತ್ತ. ತನಗೆ ಇಷ್ಟ ಬಂದುದನ್ನು ಕೇಳಿ ತಿನ್ನಬಹುದು. ತಿಂದ, ತಿರುಗಿದ. ಆದರೆ ಮನೆಗೆ ಹಿಂದಿರುಗುವಾಗ ಮನಸ್ಸು ಕಳ್ಳನಂತೆ. 'ಅತ್ತಿಗೆಗೆ ಹಣ ತಂದು ಕೊಡಲೇ ಇಲ್ಲವಲ್ಲ !'

ಇವನಂತೆ ಮಾಧವ ದುಡಿದರೂ ಹಣವನ್ನು ಮನೆಗೆ ತರಲಾರ. ಹೋಟೆಲ್‌ನಲ್ಲಿ ಉಂಡು ತಿಂದು ಸಿನಿಮಾಗೂ ಖರ್ಚುಮಾಡುವ. ಎಳೆ ಮಗುವಿಗಾಗಲಿ, ಸುಮನಳಿಗಾಗಲಿ ಒಂದು ಬಿಸ್ಕೀಟನ್ನು ಕೊಡಿಸಿದವನಲ್ಲ.

"ನಾವು ದುಡಿದುದನ್ನು ಸುಮ್ಮನೆ ನಾವೇ ಪೋಲುಮಾಡುವ ಬದಲು ಮನೆಗೆ ಕೊಟ್ಟರೆ ಅತ್ತಿಗೆ ರುಚಿರುಚಿಯಾಗಿ ಮಾಡಿ ಬಡಿಸ್ತಾಳಲ್ಲ" ಎಂದ ಕೇಶವ ಮನೆಗೆ ಹಣ ತಂದು ಕೊಡದ ಮಾಧವನಿಗೆ ಬುದ್ಧಿ ಹೇಳುತ್ತ.

ಮಾಧವ ಕಪ್ಪು ಮೀಸೆಯ ಮೇಲೆ ಕೈಯಾಡಿಸಿ ನಕ್ಕ. "ಓಹೋ, ಮಾಡಿ ಬಡಿಸ್ತಾಳಾ ನಮ್ಮ ಅತ್ತಿಗೆ ? ನಿಂಗೆಲ್ಲೊ ಭ್ರಾಂತು, ಎಲ್ಲಾ ಗಂಟು ಕಟ್ಟಿಡ್ತಾಳೆ."

"ಸುಳ್ಳು."

"ಅವಳ ಬೊಜ್ಜಕ್ಕೆ ನಮ್ಮ ಬೊಜ್ಜಕ್ಕೆ ಬೇಕಲ್ಲ. ಹಣದಿಂದಲೇ ಅತ್ತಿಗೆ ನಮ್ಮನ್ನು ಸುಡುತ್ತಾಳಂತೆ!"

"ನೀನೇನು ಬೊಗಳ್ತಾ ಇದ್ದೀ, ಅಣ್ಣ ?"

"ಪೈ ಪೈ ಗಂಟು ಹಾಕುವ ಆಸೆ ಪಿಶಾಚಿ ಅದು ! ಅದರ ಮುಖ ನೋಡಿಯೇ ನಾನು ಒಂದು ಪೈಸೆ ಮನೆಗೆ ತರಲಾರೆ." ಮಾಧವ ತಮ್ಮನ

ಕಿವಿಯಲ್ಲಿ ಪಿಸುಗುಟ್ಟಿದ, "ಅಲ್ಲವೋ, ಗದ್ದೆ ಬಿಟ್ಟುಕೊಡುವಾಗ ಶಾಸ್ತ್ರಿಗಳು ಸಾವಿರ ರೂಪಾಯಿ ಕೊಟ್ಟಿದ್ದರು, ಆಮೇಲೆ ನಮ್ಮ ದನಕರು, ಹಂಡೆ ಮಾರಿದ್ದು, ಹುಲ್ಲು ಮಾರಿದ್ದು, ಅಕ್ಕಿ ಉದ್ದು ಮಾರಿದ್ದು ಎಲ್ಲಾ ಸೇರಿ.... ಹಾಂ, ನಾನು ಪೈಪೈ ಲೆಕ್ಕಹಾಕಿದ್ದೇನೆ, ಸಾವಿರದ ಇನ್ನೂರಿಪ್ಪತ್ತು ಬಂದಿತ್ತು. ಒಟ್ಟು ಎರಡು ಸಾವಿರದ ಇಪ್ಪತ್ತು. ಅವೆಲ್ಲ ಏನಾಯ್ತಂತೆ?"

"ಹೌದಲ್ಲೋ, ಎರಡು ಸಾವಿರದ ಇಪ್ಪತ್ತು ಏನಾಯ್ತು?"

"ನಾನು ಮೊನ್ನೆ ಅತ್ತಿಗೇ, ಎರಡು ರೂಪಾಯಿ ಬೇಕು ಎಂದು ಕೇಳಿದ್ದಕ್ಕೆ ಕೈ ತಿರುಗಿಸಿಬಿಟ್ಟಳು. ನಂಗೆಲ್ಲಾ ಗೊತ್ತು, ತನ್ನ ಗಂಡ ಮಕ್ಕಳಿಗೆ ಮಾತ್ರ ಅವಳ ಉಪಚಾರ. ನೋಡು, ದೊಡ್ಡಣ್ಣ ಹೇಗೆ ದಿನೇ ದಿನೇ ಟೊಮೆಟೋ ಹಣ್ಣಿನ ತರ ಕೆಂಪು ಕೆಂಪು ಆಗ್ತಿದ್ದಾನೆ. ನಾನೂ ನೀನು ಎಲುಬಿನ ಹಂದರ ವಾಗ್ತಾ ಇದ್ದೀವೆ."

ಕೇಶವನಿಗೆ ತನ್ನ ಕ್ಷೀಣ ಶರೀರದ ಮೇಲೆ ದುಃಖ ಉಕ್ಕಿತು, "ನನಗೆ ತಿಳಿಯಲೇ ಇಲ್ಲ. ಅಂದ್ಹಾಗೆ ಸುಮನ, ಲಕ್ಷ್ಮಣ ದಿನಾಲೂ ಹಾಲು ಕುಡೀ ತಾರಲ್ಲ."

"ಹಾಲು ಮೊಸರು ಅವರಿಗೇ. ಅನುಮಾನ ಯಾಕೆ? ನಿನಗೇನೋ ಅತ್ತಿಗೆ ವಿಚಾರದಲ್ಲಿ ಬಹಳ ಅಭಿಮಾನವಪ್ಪ. ಬೆಳ್ಳಗಿರುವದೆಲ್ಲಾ ಹಾಲು ಅಂತ ನಂಬ್ತಿ. ನಾನು ಜಗತ್ತನ್ನು ಚೆನ್ನಾಗಿ ತಿಳಿದವನು."

ಕೇಶವ ತುರಿಸಿಕೊಂಡ ತಲೆಯನ್ನು. ಅತ್ತಿಗೆಯಲ್ಲಿ ಆವನೆಂದೂ ಅಪ ನಂಬಿಕೆ ತಳೆದವನಲ್ಲ. ತನ್ನ ಅತ್ತಿಗೆ ದೊಡ್ಡ ದೇವತೆಯೆಂದು ಅವಳ ಆದರ್ಶ ಗಳಂತೆ ತಾನೂ ನಡೆದುಕೊಳ್ಳಲು ಕಲಿತಿದ್ದಾನೆ. ಆದರೆ ಈಗ ಮಾಧವ ಹೇಳಿದಮೇಲೆ ಹಠಾತ್ತನೆ ಅವಳಲ್ಲಿ ಇಟ್ಟುಕೊಂಡಿದ್ದ ಗೌರವಭಾವಗಳೆಲ್ಲ ತಲೆಕೆಳಗಾದವು.

"ಹೆಂಗಸರ ಸ್ವಭಾವವೇ ಹಾಗೆ" ಕಿವಿಯೂದಿದ ಅಣ್ಣ, "ಅವರಿಗೆ ಭಾವ, ಮೈದುನ, ನಾದಿನಿ ಯಾರೂ ಬೇಡ. ತಾನು, ತನ್ನ ಗಂಡ, ಮಕ್ಕಳು ಇಷ್ಟೇ ಸಾಕು. ಸ್ವಾರ್ಥಿಗಳು. ನೀನೋ, ಏನೂ ತಿಳಿಯದ ಹೆಬ್ಬಂಕು."

ಕೇಶವ ಎರಡೂ ಕೈಗಳಿಂದ ತಲೆ ತುರಿಸಿಕೊಂಡ.

"ನಾಳೆಯಿಂದ ನೀನು ದುಡಿದ ಹಣವನ್ನು ನೀನೇ ಇಟ್ಟುಕೋ. ಆದರೂ ಅತ್ತಿಗೆ ಅನ್ನ ಮಾಡಿ ಬಡಿಸಿಯೇ ಬಡಸ್ತಾಳೆ ನಮಗೆ."

"ಅವಳು ಕೋಪ ಮಾಡಿದರೆ?"

"ನೀನು ಇನ್ನೂ ಹಸುಗೂಸು. ಅವಳ ಕೋಪಕ್ಕೆ ಸೊಪ್ಪುಹಾಕಿದರೆ ನಾವು ಉದ್ಧಾರವಾದ ಹಾಗೇ. ಥಿಯೇಟರ್‌ನಲ್ಲಿ ಒಳ್ಳೊಳ್ಳೆ ಹಿಂದೀ ಸಿನಿಮಾ ಬರುತ್ತದೆ. ಒಂದು ದಿನವಾದರೂ ಅತ್ತಿಗೆ, ಹೋಗೋಣ ಮಕ್ಕಳೇ. ಎಂದಿದ್ದಾಳಾ?"

'ಇಲ್ಲ' ಎಂದು ಆಡಿತು ತಲೆ. "'ಸಿನಿಮಾ ನೋಡಿ ಏನ್ಮಾಡ್ತೀರಿ? ಆ ಹಣವನ್ನೆಲ್ಲ ಗಂಟು ಕಟ್ಟಿ ಇಡೋಣ' ಎನ್ತಾಳೆ ನಮ್ಮ ಅತ್ತಿಗಮ್ಮ. ಎಲ್ಲಾ ಅವಳ ಸುಖಕ್ಕೇ! ನಾವು ಕಷ್ಟಪಟ್ಟು ದುಡೀಬೇಕು. ಅವಳ ಕೈಗೆ ಹಾಕಬೇಕು. ಅವಳು ತನ್ನ ಗಂಡ ಮಕ್ಕಳನ್ನು ರಾಜರಂತೆ ಪೋಷಿಸಬೇಕು. ....ನ್ಹಾ ಹಠೀ...."

ನಿಜವಾಗಿಯೂ ಅಣ್ಣನ ಮಾತನ್ನು ನಂಬಿದ ಕೇಶವ. ಆ ರಾತ್ರೆ ಅವನೊಂದಿಗೆ ಹೋಟೆಲ್‌ನಲ್ಲಿ ಹೊಟ್ಟೆತುಂಬಾ ತಿಂದು ಸಿನಿಮಾಗೂ ಹೋಗಿ ಹಿಂದಿರುಗಿದ. ಪ್ರಣಯದೃಶ್ಯಗಳಿಂದ ಕೂಡಿದ ಹಿಂದೀ ಸಿನಿಮಾ ನೋಡಿ ಹೇಗ್ಹೇಗೋ ಆಯಿತು ಮನಸ್ಸು.

"ಇವತ್ತು ಕೆಲಸಕ್ಕೆ ಹೋಗಲಿಲ್ಲವೇನೊ?" ಬಡಿಸುತ್ತಿದ್ದ ಅತ್ತಿಗೆ ಪ್ರಶ್ನೆ.

ಅವನು ಉತ್ತರಿಸಲಿಲ್ಲ. ಪಾಪ, ಅಸೌಖ್ಯ ಎಂದುಕೊಂಡಳು ಶಾಂಭವಿ. ಮರುದಿನ ದುಡಿದ ಹಣದಲ್ಲಿ ತಿಂಡಿಯ ಪಾಲಿಗೆ ಹಾಜರಾದ ಮಾಧವ. ನಾಲ್ಕು ದಿನ ಹೀಗೇ ಕಳೆಯಿತು. ಇಬ್ಬರೂ ಜೊತೆಯಲ್ಲಿ ತಿಂಡಿ ತಿನ್ನುವದು, ಸಿನಿಮಾಗೆ ಹೋಗುವದು. ರಾತ್ರೆ ಖಾಲಿ ಕೈಯಲ್ಲಿ ಮನೆಗೆ ಬರುವದು. ಕೇಶವನಿಗೆ ತಮಾಷೆಯೆನಿಸಿತು. ಆದರೆ ಎಲ್ಲೋ ತಾನು ತಪ್ಪುತ್ತಾ ಇದ್ದೇನೆ ಎಂಬ ಅನಿಸಿಕೆ.

ಆ ದಿನ ಮಸಾಲೆ ದೋಸೆ, ಗುಲಾಬ್ ಜಾಮೂನು ತಿನ್ನುತ್ತ ಮಾಧವ ಹೇಳಿದ: "ಮನೇಲಿ ಇರುವದು ಗಂಜಿ ಉಪ್ಪು ಮಾತ್ರ. ಈ ಸುಖ ನೋಡು!"

"ತುಂಬಾ ರುಚಿಯಾಗಿದೆ ದೋಸೆ, ಜಾಮೂನು."

"ನಾನು ಹೇಳಲಿಲ್ಲವೇ, ಈ ಪ್ರಾಯದಲ್ಲಿ ತಿಂದುಂಡು ಮಜಾ ಮಾಡಿದ್ರೇ ನಮಗೆ ಸುಖ. ಆದರೂ ಅತ್ತಿಗೆ ನಮಗೆ ಎರಡು ಹೊತ್ತು ಹೊಟ್ಟೆತುಂಬಾ ಅನ್ನ ಬಡಿಸ್ತಾಳೆ. ಅದನ್ನು ಉಣ್ಣೋಣ, ಇಲ್ಲಿ ಇದನ್ನು ತಿನ್ನೋಣ!"

ಕೇಶವನ ಮನದಲ್ಲಿ ಕಿರಿಕಿರಿ. ಅತ್ತಿಗೆಯ ಕ್ಷೀಣಶರೀರ ಕಾಣಿಸಿತು ಕಣ್ಣೆದುರು. ತಮಗೆ ತಿಳಿಯದಂತೆ ಅತ್ತಿಗೆ ಗುಟ್ಟಾಗಿ ಏನು ಮಾಡುತ್ತಾಳೆ?

ಗುರುಪುರದಲ್ಲಿ ಅವಳು ತಮಗೋಸ್ಕರ ರಾತ್ರಿ ಹಗಲು ಒದ್ದಾಡುತ್ತಿದ್ದದ್ದು ಕೇವಲ ನಟನೆಯೇ? ಗದ್ದೆ ಕೈಬಿಡುವಾಗ ಶಾಸ್ತ್ರಿಗಳ ಕಾಲುಹಿಡಿದು ಅತ್ತು, ಅನ್ನನೀರು ಮುಟ್ಟದೆ ಹುಚ್ಚಿಯಂತೆ ಅಳುತ್ತಿದ್ದದ್ದೂ ನಟನೆಯೇ? ದಿನವೆಲ್ಲ ಅವಳು ಯಾರಿಗಾಗಿ ಹೊಲಿಯುತ್ತಿದ್ದಳು? ತಮ್ಮ ಜಗಳದಲ್ಲಿ ಮಧ್ಯಸ್ಥಿಕೆ ವಹಿಸಿ ನಂತರ ಪ್ರೀತಿಯಲ್ಲಿ ವೈದಡವಿ ಸಂತೈಸಿದವಳು ಯಾರು? ತಮ್ಮನ್ನು ಇಲ್ಲಿಗೆ ಕರೆತಂದು ಸಹನೆಯಿಂದ ಇಲ್ಲಿ ಹೊಂದಿಕೊಳ್ಳಿ ಎಂದು ಅವಳು ನಮ್ಮಲ್ಲಿ ಧೈರ್ಯ ತುಂಬಿಸುತ್ತಿರುವದೂ ಅವಳ ಸ್ವಾರ್ಥಕ್ಕಾಗಿಯೇ? ಇಲ್ಲ. ಅತ್ತಿಗೆ ಹಾಗಿಲ್ಲ—

ಅವನ ಪ್ಲೇಟಿನ ದೋಸೆ ಹಾಗೇ ಉಳಿಯಿತು. ತಮ್ಮೆಲ್ಲರಂತೆ ಅತ್ತಿಗೆಗೂ ತಿಂಡಿ, ರುಚಿ ರುಚಿ ಊಟವೆಂದರೆ ಬಹಳ ಇಷ್ಟ. ಗುರುಪುರದಲ್ಲಿ ತಮ್ಮ ಸ್ಥಿತಿ ಸುಧಾರಿಸಿದಾಗ ರುಚಿ ರುಚಿ ತಿಂಡಿಗಳನ್ನು ಮಾಡಿ ಬಡಿಸಿದ್ದಾಳೆ. 'ಹೋಟೆಲ್ ತಿಂಡಿಗೆ ಹಣ ಚೆಲ್ಲಬೇಡಿ, ನಾನೇ ಮಾಡಿಕೊಡ್ತೇನೆ' ಎನ್ನುವ ಅತ್ತಿಗೆ ತಮಗಾಗಿ ಎಷ್ಟು ಕಷ್ಟಪಡಲಿಲ್ಲ. ಅನ್ನ ಸಾಲದೆ ತಾನು ಗಲಾಟೆ ಮಾಡುವಾಗ ಅವಳ ಪಾಲಿನ ಅನ್ನವನ್ನು ತನಗೆ ಬಡಿಸಿ ತನ್ನ ಹೊಟ್ಟೆಯನ್ನು ಅರ್ಧ ತುಂಬಿಸಿಕೊಳ್ಳುವ ಅತ್ತಿಗೆ ಕದ್ದು ಮುಚ್ಚಿ ಏನನ್ನು ತಿಂದಿದ್ದಾಳೆ? ಕದ್ದು ಮುಚ್ಚಿ ಎಷ್ಟು ಹಣ ಕೂಡಿಸಿಟ್ಟಿದ್ದಾಳೆ? ತನಗಾಗಿ ಬಟ್ಟೆ ಬರೆಗೂ ಖರ್ಚು ಮಾಡಿದವಳಲ್ಲ. ಹಾಗಾದರೆ ಇದು ಸುಳ್ಳು....ಸುಳ್ಳು ....ಸುಳ್ಳು....

ದೋಸೆಯನ್ನು ಇನ್ನು ತಿನ್ನಲಾಗಲಿಲ್ಲ. ಆ ದಿನವೂ ಸಿನಿಮಾ ಮುಗಿಸಿ ಬಹಳ ತಡವಾಗಿ ಮನೆಗೆ ಬಂದು ಸೇರಿದ. ಶಾಂಭವಿ ಅವನನ್ನೇ ದುರುಗುಟ್ಟಿ ನೋಡಿದರೂ ಏನೂ ಹೇಳದೆ ಬಡಿಸಿದಳು ಮೌನವಾಗಿ. ಮಾಧವ ಹೊಟ್ಟೆ ತುಂಬಾ ಉಂಡ. ಕೇಶವನಿಂದ ಎರಡು ತುತ್ತು ಉಣ್ಣಲಾಗಲಿಲ್ಲ. ಕಳ್ಳನಂತೆ ತಲೆತಗ್ಗಿಸಿದ. ನೇರವಾಗಿ ಅವಳೊಡನೆ ಮಾತನಾಡಲು ಹಿಂಜರಿದ.

ಅವನ ಬದಲಾದ ಸ್ವಭಾವವನ್ನು ಬೇಗನೆ ಕಂಡುಹಿಡಿದಳು ಶಾಂಭವಿ. ಅಂದು ಬೆಳಿಗ್ಗೆ ಕೆಲಸಕ್ಕೆ ಹೊರಡುವ ಸಿದ್ಧತೆಯಲ್ಲಿದ್ದಾಗ ಅವನ ಎದುರಿನಲ್ಲೇ ಬಂದು ನಿಂತಳು. ಕೇಶವನ ಕೈಕಾಲುಗಳು ನಡುಗಿದವು.

"ಮಾಧವನಂತೆ ನೀನೂ ಉಂಡಾಡಿಯಾಗಬೇಕು ಅಂದುಕೊಂಡೆಯಾ? ಮಾಧವ ಇತ್ತೀಚೆಗೆ ತೀರಾ ಕೆಟ್ಟುಹೋಗಿದ್ದಾನೆ. ಅವನ ಜೊತೆ ನೀನೂ

ಸೇರಿಕೊಳ್ತಾ ಇದ್ದೀಯ. ನನಗೆಲ್ಲಾ ತಿಳೀತಾ ಇದೆ. ಅವನು ಕೆಲಸಗಳ್ಳ. ಆದರೆ ನೀನ್ಯಾಕೆ ಹೀಗಾದೆ?"

ಕೇಶವನಿಗೆ ಅತ್ತಿಗೆಯ ಕಣ್ಣುಗಳನ್ನು ನೋಡುವ ಧೈರ್ಯವಿಲ್ಲ.

"ನೀನೊಬ್ಬ ಈ ಮನೆಯಲ್ಲಿ ಸರಿಯಾಗಿ ಇರುವವನು ಎಂದುಕೊಂಡಿದ್ದೆ. ಅದೂ ಸುಳ್ಳಾಯಿತು. ನನ್ನ ಅದೃಷ್ಟ ಹಾಳು. ಸರಿಯಾಗಿ ಕೆಲ್ಸ ಮಾಡಿ ಕೊಂಡು ಜವಾಬ್ದಾರಿ ಹೊರುವ ಗಂಡಸು ನೀನಾಗಬೇಕು. ಕೆಲಸ ಸಿಗದೇ ಹೋದರೆ ಬೇಡ, ಇಲ್ಲೇ ಮನೇಲಿರು. ಆದರೆ ಊರೂರು ಬೀದಿನಾಯಿಗಳಂತೆ ಯಾಕೆ ಅಲೀತಾ ಇದ್ದೀ ?"

ಅತ್ತಿಗೆಯ ಮಾತಿನಿಂದ ತತ್ತರಿಸಿದ ಕೇಶವನ ಕಣ್ಣುಗಳಿಂದ ನೀರಿಳಿಯಿತು. ಪಶ್ಚಾತ್ತಾಪದ ಕಣ್ಣೀರು. ಅವನ ತಲೆ ಸವರಿದಳು, "ಅವನೊಬ್ಬ ಹೇಗೆ ಬೇಕಾದರೂ ಇದ್ದುಕೊಳ್ಳಲಿ. ಅವನ ಸಹವಾಸವನ್ನು ಬಿಟ್ಟುಬಿಡು."

ಆ ದಿನ ಕೇಶವ ಬಹಳ ಬೇಗನೆ ಹಿಂದಿರುಗಿದ ಮನೆಗೆ. ಅಂದು ಆತ ಸಂಪಾದಿಸಿದ ಆರು ರೂಪಾಯಿಗಳೂ ಅತ್ತಿಗೆಯ ಕೈಮೇಲೆ ಬಂದವು.

24

ಹಣ್ಣಿನ ಅಂಗಡಿ ವ್ಯಾಪಾರದಲ್ಲಿ ತಕ್ಕಮಟ್ಟಿಗೆ ಲಾಭ ಬರುತ್ತಿದ್ದರೂ ಕೆಲವು ಬಾರಿ ಅಧಿಕನಷ್ಟ. ಹರಿನಾರಾಯಣ ದಡ್ಡ ಹೆಡ್ಡನಾದರೂ ಹಣ ಕಳೆದು ಕೊಳ್ಳುವವನಲ್ಲ. ಆದಾಯ, ಖರ್ಚಿನ ಲೆಕ್ಕವಿರಿಸಿ, ಸರಿಯಾಗಿ ಹೆಂಡತಿಗೆ ಒಪ್ಪಿಸುತ್ತಾನೆ. ಆದಾಯ, ಖರ್ಚು ಸಮವಾದಾಗ ಅನೇಕ ಸಲ ಬೇರೆ ವ್ಯಾಪಾರ ಪ್ರಾರಂಭ ಮಾಡೋಣವೇ ಎಂದೂ ಅನಿಸಿದ್ದುಂಟು ಶಾಂಭವಿಗೆ. ಆದರೆ ಬೇರೆ ವ್ಯಾಪಾರ ಹೂಡುವದಕ್ಕೆ ಬಂಡವಾಳವೂ ಅಗತ್ಯ.

ಆ ರಾತ್ರಿ ಎಲ್ಲರೂ ಮಲಗಿದಮೇಲೆ ತನ್ನ ಹಳೆಯ ಟ್ರಂಕಿನ ತಳದಲ್ಲಿ ಹರಕು ಗಂಟಿನಲ್ಲಿ ಸುತ್ತಿಟ್ಟ ರೂಪಾಯಿಗಳನ್ನು ಸಣ್ಣದೀಪದ ಬೆಳಕಿನಲ್ಲಿ ಶಾಂಭವಿ ಎಣಿಸಿ ನೋಡಿದಳು. ಸಾವಿರದ ನೂರೈವತ್ತು ರೂಪಾಯಿಗಳಿವೆ. ಆಪತ್ಕಾಲದಲ್ಲಿ ಇರಲಿ ಎಂದು ಹಾಗೇ ಇರಿಸಿಕೊಂಡ ಹಣ. ಅವಳು ಹರಿ ನಾರಾಯಣನ ಕಿವಿಯಲ್ಲಿ ಗುಟ್ಟಾಗಿ ಅಂದಳು :

"ಈ ಹಣ ಹಾಕಿ ಹೊಸ ವ್ಯಾಪಾರ ಪ್ರಾರಂಭ ಮಾಡುವ ಧೈರ್ಯವಿಲ್ಲ. ಈಗ ಹೇಗೋ ನಾವೆಲ್ಲರೂ ಈ ಊರಿಗೆ ಹೊಂದಿಕೊಂಡ್ತಾ ಇದ್ದೇವೆ. ನಮ್ಮ ಶಾರದೆ....ಅವಳು ಮೊದಲಿನ ಹಾಗಿಲ್ಲ. ಸುಂದರೀಬಾಯಿ ಹತ್ರ ಹೇಳಿದ್ದೇನೆ, ಎಲ್ಲಿಯಾದರೂ ಒಬ್ಬ ಹುಡುಗ ಇದ್ದರೆ ತಿಳಿಸಿ ಎಂದು. ಕೈಯಲ್ಲಿರುವ ಹಣ ಮುಗಿಯುವ ಮೊದಲೇ ಅವಳ ಮದುವೆಯನ್ನು ಮಾಡಿಬಿಡಬೇಕು."

ಹಣವನ್ನು ಭದ್ರವಾಗಿ ಟ್ರಂಕಿನ ತಳದಲ್ಲಿಟ್ಟು ಮುಚ್ಚಳ ಮುಚ್ಚಿ ಬೀಗ ಹಾಕುತ್ತ, "ನಿಮ್ಮ ಅಮ್ಮನ ಕಾಲುತುಂಬಾ ಅದೇನೋ ದೊಡ್ಡ ದೊಡ್ಡ ಹುಣ್ಣುಗಳು ಎದ್ದುಕೊಂಡಿವೆ. ಔಷಧಿ ಮಾಡಿಸಿದರೆ ಒಳಿತು" ಎಂದಂದು ಬೀಗದ ಕೈಯನ್ನು ತನ್ನ ಕರಿಮಣಿಸರಕ್ಕೆ ಸಿಕ್ಕಿಸಿಕೊಂಡಳು.

ಹಣ್ಣಿನ ಅಂಗಡಿ ಮುಚ್ಚಿ ಇನ್ನು ಬೇರೆ ಯಾವ ವ್ಯಾಪಾರ ಪ್ರಾರಂಭಿಸ ಬೇಕು ಎಂದು ಮತ್ತೆ ಸ್ವಲ್ಪ ಹೊತ್ತು ಚರ್ಚಿಸಿದರೂ ಯಾವುದೂ ಸರಿಗೂಡ ಲಿಲ್ಲ.

"ಲಾಭವೋ ನಷ್ಟವೋ ಈಗಿರುವದನ್ನೇ ನಡೆಸಿಕೊಂಡು ಹೋಗೋಣ" ಎಂದ ಹರಿನಾರಾಯಣ. ನಿಜ, ತೂಕದ ಮಾತಾಗಿತ್ತು ಇದು.

ಮರುದಿನ ಹೊತ್ತು ಮೇಲೇರಿದರೂ ಮಾಧವ ಹಾಸಿಗೆ ಬಿಟ್ಟೇಳಲಿಲ್ಲ. ಬೆಳಗಿನ ಆಹಾರವನ್ನೂ ಸೇವಿಸಲಿಲ್ಲ. ಸುಮ್ಮನೆ "ಹೊಟ್ಟೆ ನೋಯ್ತಾ ಇದೆ. ಎರಡು ಸಾರಿ ಭೇದಿಯಾಯ್ತು" ಎಂದ ಹೊಟ್ಟೆ ಕಿವುಚಿಕೊಳ್ಳುತ್ತ.

"ಸಿಕ್ಕಿದ ತಿಂಡಿಗಳನ್ನು ಹೋಟೆಲ್‌ನಿಂದ ತಿಂದು ಬನ್ತಿ, ಏನೇನು ಹಾಳು ಮೂಳು ಬೆರೆಸಿರ್ತಾರೋ. ತುಂಬಾ ಹೊಟ್ಟೆನೋವಾ?" ಕೇಳಿದಳು ಅವನ ಹತ್ತಿರ ಕುಳಿತು.

ಎಲ್ಲರೂ ಅವರವರ ಕೆಲಸಕ್ಕೆ ಹೊರಟುಹೋದಮೇಲೆ ಮಾಧವ ಮಲ ಗಿದಲ್ಲೇ ಸಂಕಟಪಡುವದನ್ನು ನೋಡಿ 'ಅಯ್ಯೋ' ಎನಿಸಿತು ಶಾಂಭವಿಗೆ. ಒಂದಷ್ಟು ಒಣಗಿದ ಶುಂಠಿಯನ್ನು ಗುದ್ದಿ ಬೆಲ್ಲದಲ್ಲಿ ಬೆರಸಿ ಕೊಟ್ಟಳು.

"ಹತ್ತಿರದಲ್ಲಿ ಒಬ್ಬರು ಪಂಡಿತರು ಇದ್ದಾರಂತೆ. ನಿನ್ನ ಅಮ್ಮ ಕಾಲಿನ ಹುಣ್ಣಿಗೆ ಅವರ ಹತ್ರ ಔಷಧಿಗೆ ಹೋಗ್ತಾರೆ. ಆಗ ನಿನಗೂ ಒಂದು ದಿನದ ಔಷಧಿ ತರಿಸೋಣ."

ಮಧ್ಯಾಹ್ನದನಂತರ ಪೇಟೆಯಿಂದ ಅಕ್ಕಿ ತರಲು ಹೊರಟವಳು "ಅತ್ತೆ, ಮನೆಯಲ್ಲಿ ಮಾಧವ ಇದ್ದಾನೆ. ಬನ್ನಿ, ನಿಮ್ಮನ್ನು ಪಂಡಿತರಲ್ಲಿಗೆ ಕರ್ಕೊಂಡು ಹೋಗ್ತೇನೆ" ಎಂದಂದು ಹೊರಡಿಸಿದಳು ವೇದಮ್ಮನನ್ನು. "ಅರ್ಧಗಂಟೆಯಲ್ಲಿ

ಬಂದು ಬಿಡ್ತೇನೆ, ಮಾಧೂ. ಮಕ್ಕಳಿಬ್ಬರೂ ನಿನ್ನ ಹತ್ರವೇ ಇದ್ದಾರೆ. ನೋಡ್ಕೋ. ಬರ್ತಾ ನಿನಗೂ ಔಷಧಿ ತರ್ತೇನೆ."

"ನೀನು ಯೋಚಿಸಬೇಡ, ಅತ್ತಿಗೇ. ಇಬ್ಬರನ್ನೂ ನೋಡಿಕೊಳ್ತೇನೆ." ಮಾಧವ ಮೆಲ್ಲನೆ ಎದ್ದು ಅವಳು ಹೋಗುವದನ್ನು ನೋಡುತ್ತ ನಕ್ಕು ಹಾಕಿಕೊಂಡ ಎದುರು ಬಾಗಿಲನ್ನು.

ಶಾಂಭವಿ ಹಿಂದಿರುಗುವಾಗ ತಾಸು ಕಳೆದಿತ್ತು. ಮನೆ ಬಾಗಿಲು ಸಂಪೂರ್ಣ ತೆರೆದಿದ್ದು ಲಕ್ಷ್ಮಣ ಚಂಡಿಬಂದವರಂತೆ ಅಳುತ್ತಿದ್ದ. ಸುಮನ ಹುಹೂ ಎನ್ನುತ್ತಿದ್ದಾಳೆ ಏನು ಮಾಡಬೇಕೆಂದು ತಿಳಿಯದೆ. ಮಾಧವನನ್ನು ಕರೆಯುತ್ತಾ ಒಳಗೆ ಬಂದರೆ ಅವನು ಮಲಗಿದ ಸ್ಥಳ ಖಾಲಿ. ಹೊರಗೆ ಹೋಗಿರಬಹುದೆಂದು ಮಗುವನ್ನು ಸಮಾಧಾನಪಡಿಸುತ್ತ ಅಕ್ಕಿಚೀಲವನ್ನು ಬದಿಗಿರಿಸಿ ಕೋಣೆಗೆ ಬಂದವಳು ಗಕ್ಕನೆ ನಿಂತುಬಿಟ್ಟಳು. ಬೀಗ ಮುರಿದ ಟ್ರಂಕಿನಿಂದ ಬಟ್ಟೆಗಳೆಲ್ಲ ಹೊರಬಿದ್ದಿವೆ. ಕ್ಷಣಾರ್ಧದಲ್ಲಿ ತಿಳಿದುಹೋಯಿತು, ಟ್ರಂಕಿನ ಬಟ್ಟೆಗಳನ್ನು ಸರಸರನೆ ಕೆದಕಿ ಹಾಕಿದಳು, ಹಳೆ ಬಟ್ಟೆಯಲ್ಲಿ ಸುತ್ತಿಟ್ಟ ರೂಪಾಯಿಗಳು ಎಲ್ಲಿ ಹೋದವು? ಎದೆ ಧಸಕ್ಕೆಂದಿತು. ಅಯ್ಯೋ, ಯಾರು ಬಂದರು ಇಲ್ಲಿಗೆ? ಆಭರಣಗಳೂ ಹೋದವೇ? ಬೆಂಡೋಲೆ, ಕೈಗೆ ಮಾಡಿಸಿದ ಬಳೆಯನ್ನು ಮೇಲೆ ಹಲಗೆಯ ಮೂಲೆಯಲ್ಲಿರಿಸಿದ್ದಳು. ಅವಳ ನಡಗುವ ಕೈ ತಡಕಾಡಿತು ಆ ಸ್ಥಳವನ್ನು. ಅಲ್ಲಿಯೂ ಸಾಮಾನುಗಳು ಕೆದರಿದಂತಿದ್ದರೂ ಅವಳು ಜೋಪಾನವಾಗಿರಿಸಿದ ಮುರುಕು ಡಬ್ಬಿ ಹಾಗೇ ಇತ್ತು! ಸಧ್ಯ ಚಿನ್ನ ಉಳಿದಿದೆ. ಆದರೆ ಹಣ? ಅವಳ ದೃಷ್ಟಿ ತೆಗೆದು ಬಿಸಾಡಿದ ಹರಿದ ಲುಂಗಿಯತ್ತ ಹರಿಯಿತು. ಹೊಟ್ಟೆನೋವೆಂದು ಮಲಗಿದ ಮಾಧವ ಎಲ್ಲಿ?

ಶಾಂಭವಿಯ ದುಃಖದ ಕಟ್ಟೆಯೊಡೆಯಿತು. ಒಂದಲ್ಲ ಎರಡಲ್ಲ ರೂಪಾಯಿಗಳು, ಸಾವಿರದ ಇನ್ನೂರೈವತ್ತು! ತಲೆ ಹೊಡೆದುಕೊಂಡಳು. ಹೊರಗೆ ಇರಬಹುದೇ ಎಂದೂ ಹುಡುಕಿ ಸುಂದರೀಬಾಯಿಯ ಮನೆಗೋಡಿದಳು.

"ಸಾವಿರದ ಇನ್ನೂರೈವತ್ತು ರೂಪಾಯಿಗಳನ್ನು ಯಾಕೆ ಮನೇಲಿ ಇಟ್ಟುಕೊಂಡಿರಿ? ಮನೆಗೆ ಬೀಗ ಹಾಕಿ ಹೋಗಲಿಲ್ಲವೇ?"

"ಬೀಗ ಹಾಕಲು ಮಾಧವ ಮನೇಲಿದ್ದ. ಅವನದೇ ಕೆಲಸ. ಒಂದು ರೂಪಾಯಿ ಕೂಡ ಉಳಿಸದೆ ಎಲ್ಲಾ ಹೊತ್ಕೊಂಡು ಹೋದ. ನಾನೀಗಲೇ ಅವರಿಗೆ ಸುದ್ದಿ ಹೇಳಿ ಬರ್ತೀನೆ."

ಸುಂದರೀಬಾಯಿಗೆ ಕನಿಕರವೆನಿಸಿ ಹರಿನಾರಾಯಣನಿಗೆ ತಿಳಿಸಲು ತನ್ನ ಅಡಿಗೆ ಹುಡುಗನನ್ನು ಕಳುಹಿಸಿದಳು. ಸ್ವಲ್ಪ ಹೊತ್ತಿಗೆಲ್ಲಾ ಅಂಗಡಿ ಮುಚ್ಚಿ ಓಡಿಬಂದ ಹರಿನಾರಾಯಣ. ಹಣ ಕದ್ದು ಹೋದ ವಿಷಯ ತಿಳಿದು ಹೌಹಾರಿ ಆ ಗಳಿಗೆಯಲ್ಲಿ ತಮ್ಮನನ್ನು ಹುಡುಕಲು ಧಾವಿಸಿದ ಬಸ್‌ಸ್ಟ್ಯಾಂಡ್‌ಗೆ. ಹೊರಡಲು ಸಿದ್ಧವಾದ ಎಲ್ಲಾ ಬಸ್ಸುಗಳಲ್ಲಿ ಹತ್ತಿ ಇಳಿದ. ಅನೇಕರನ್ನು ವಿಚಾರಿಸಿದ. ಯಾವಾಗಲೂ ಕೆಲಸ ಮಾಡುತ್ತಿದ್ದ ಬಂದರು ಸ್ಥಳದಲ್ಲಿ ಹುಡುಕಿದ. ಸಾಮಾನು ಹೊರುತ್ತಿದ್ದ ಕೇಶವ ಸುದ್ದಿ ಕೇಳಿ ತನ್ನ ಕೆಲಸವನ್ನು ನಿಲ್ಲಿಸಿ ತಾನೂ ಹೊರಟ ಹರಿನಾರಾಯಣನ ಜೊತೆಯಲ್ಲಿ.

ಆದರೆ ಆಗಲೇ ಹಾರಿಹೋಗಿತ್ತು ಹಕ್ಕಿ.

25

ಹಣವನ್ನು ಎತ್ತಿಕೊಂಡು ಮಾಧವ ಓಡಿಹೋದನೆಂದು ತಿಳಿದಮೇಲೆ ಶಾರದೆಗೆ ಮನದಲ್ಲೇ ತೃಪ್ತಿ! ದುಃಖಿಸುತ್ತಿರುವ ಅತ್ತಿಗೆಗೆ ಸಮಯೋಚಿತ ಸಮಾಧಾನವನ್ನೂ ಹೇಳದೆ 'ನಿನಗೆ ಹಾಗೇ ಆಗಬೇಕು' ಎಂದಳು ತನ್ನೊಳಗೆ. ಈಗ ಅನೇಕ ದಿನಗಳಿಂದಲೂ ಅವಳಿಗೆ ಅತ್ತಿಗೆಯ ಮೇಲೆ ವಿನಾಕಾರಣ ಅಸಮಾಧಾನ. ಗುರುಪುರದಿಂದ ಬಂದಮೇಲೆ ಒಂದು ದಿನವೂ ಪ್ರೀತಿಯಿಂದ ಅತ್ತಿಗೆಯೊಡನೆ ಮಾತನಾಡಿಲ್ಲ. ಅವಳ ಮನಸ್ಸು ಈಗಲೂ ಗುರುಪುರದ ಸುತ್ತಲೂ ತಿರುಗುತ್ತಿದೆ. ಆ ಸ್ಥಳವನ್ನು ಬಿಡುವುದಕ್ಕೆ ಕೇವಲ ಅಣ್ಣ ಒಬ್ಬನೇ ಕಾರಣನಲ್ಲ, ಅತ್ತಿಗೆಯ ಒತ್ತಾಸೆಯೂ ಇದ್ದೀತು! ಅವಳಿಗೆ ಪದೇ ಪದೇ ನೆನಪಿಗೆ ಬರುತ್ತಿದ್ದಾನೆ ಜಯರಾಮ. ಆನಂದದ ಬಿರುಗಾಳಿಯನ್ನೆಬ್ಬಿಸಿ, ನೂರು ಸ್ವಪ್ನಗಳ ಸಂಕೋಲೆಯಿಂದ ಬಂಧಿಸಿ, ಕೊನೆಗೆ ಹೀಗೆ ಮೋಸಪಡಿಸಬೇಕೇ? 'ಬಡವರ ಹುಡುಗಿಯಾದರೂ ನನಗೆ ಗುಣ, ರೂಪ ಮುಖ್ಯ' ಎಂದ ಅವನ ಮಾತು ಸುಳ್ಳೇ? ಅವಳನ್ನು ನಿರಾಕರಿಸಿ ಬೇರೆಯವರೊಡನೆ ಮದುವೆಗೆ ಒಪ್ಪಿಕೊಂಡ ಕೃತಘ್ನ. ಕಾಗದ ಬರೆದು ಕೇಳೋಣವೆಂದರೆ ಶಾಂಭವಿ ಬೇಡ ಎನ್ನುತ್ತಾಳೆ. ಆದರೂ ಗುಟ್ಟಾಗಿ ತಾನೇ ಬರೆಯೋಣವೆಂದರೆ ವಿಳಾಸ ಅತ್ತಿಗೆಗೆ ಮಾತ್ರ ಗೊತ್ತು.

ತನ್ನನ್ನು ನಿರಾಕರಿಸಿದ ಜಯರಾಮನ ಮೇಲೆ ಅವಳಿಗೆ ಈಗಲೂ ಕೋಪವಿಲ್ಲ. ಕೋಪ ಬಂದದ್ದು ಕಮಲಮ್ಮ ಮತ್ತು ಅತ್ತಿಗೆಯ ಮೇಲೆ. ಇಬ್ಬರೂ ಅವರವರದೇ ರೀತಿಯಲ್ಲಿ ಸ್ವಾರ್ಥಿಗಳು. ಇನ್ನೊಬ್ಬರ ಸುಖವನ್ನು ನೋಡುವದೂ ಅವರಿಂದಾಗದು. ನೆಮ್ಮದಿ ತಪ್ಪಿದ ಶಾರದೆಯ ಮನಸ್ಸು ಶಾಂಭವಿಯನ್ನು ಕಂಡಾಕ್ಷಣ ರೇಗಿಕೊಳ್ಳಲಾರಂಭಿಸಿದೆ. ತನ್ನನ್ನು ವಿಚಾರಿಸದೆ ಕೇವಲ ಆರ್ಥಿಕ ಚಿಂತೆಯಲ್ಲಿ ಮುಳುಗಿದ್ದ ಅವಳ ಮೇಲಿರುವ ಗೌರವ ಭಾವನೆ ಗುರುಪುರ ತ್ಯಜಿಸಿದಾಗಲೇ ಕಡಿಮೆಯಾಗಿದೆ. ಭಟ್ಕಳಕ್ಕೆ ಬಂದ ಮೇಲೆ ಇನ್ನೂ ಬದಲಾದಳು. ವೈದ್ಯರ ಮನೆಗೆ ಕೆಲಸಕ್ಕೆಂದು ಹೋಗಲು ಪ್ರಾರಂಭಿಸಿದನಂತರ ಒಂದು ಒಳ್ಳೆಯ ಸೀರೆ ರವಿಕೆ ಬೇಕು ಎಂದು ಅತ್ತಿಗೆಯಲ್ಲಿ ಕೇಳಿದಾಗ "ನಿನ್ನ ಹಣ ಬಂದ್ಮೇಲೆ ತೆಗೆದುಕೋ" ಎಂಬ ಉತ್ತರ.

'ಪೆಟ್ಟಿಗೆಯಲ್ಲಿಟ್ಟ ರಾಶಿ ನೋಟುಗಳೂ ಮುಗಿದವೇ?' ಎಂಬ ಶಾರದೆಗೆ ಅನುಮಾನ. ಹಾಗೆಂದು ಕೇಳುವ ಧೈರ್ಯ ಅವಳಲ್ಲಿಲ್ಲ. ಈಗ ಮಾಧವ ಎಲ್ಲಾ ತೆಗೆದುಕೊಂಡು ಪಲಾಯನ ಮಾಡಿದಾಗ ವ್ಯಂಗ್ಯವಾಗಿ ನಕ್ಕಳು.

"ನಮ್ಮೆಲ್ಲರ ಹೊಟ್ಟೆಬಟ್ಟೆ ಕಟ್ಟಿ ಅಡಗಿಸಿ ಇಟ್ಟಿದ್ದಿ. ಬಚ್ಚಿಟ್ಟ ಹಣ ಪರರ ಸೊತ್ತು. ಮಾಧವ ತಗೊಂಡು ಹೋದ. ಇನ್ನು ನಿಶ್ಚಿಂತೆ."

"ಆ ಹಣದಿಂದ ನಿನ್ನ ಮದುವೆ ಮಾಡಬೇಕು ಎಂದಿದ್ದೆ, ಶಾರದೆ. ಆದರೆ ದೈವ ಬೇರೆಯದನ್ನೇ ಯೋಚಿಸಿತು."

"ಏನಂದೆ?" ಹುಬ್ಬುಗಂಟಿಕ್ಕಿದಳು ಶಾರದೆ, "ನೀನು ನನ್ನ ಮದುವೆ ಮಾಡಬೇಕು ಅಂದುಕೊಂಡೆಯಾ? ನಿನಗ್ಯಾಕೆ ನನ್ನ ಚಿಂತೆ?"

"ದೊಡ್ಡವಳಾದ ಹುಡುಗಿ. ಚಿಂತೆಯಾಗುವದು ಸಹಜ."

"ನಿನಗೆ ನಿನ್ನ ಗಂಡ-ಮಕ್ಕಳ ಚಿಂತೆಯೊಂದೇ!"

"ನಿನ್ನ ಮಾತು ಅರ್ಥವಾಗ್ಲಿಲ್ಲ."

"ಅರ್ಥವಾಗದ ನಟನೆ! ಒಟ್ಟಿನಲ್ಲಿ ನಮ್ಮ ಹಣೆಬರಹ ಹಾಳು."

"ನಿನ್ನ ಮಾತನ್ನು ಬಿಡಿಸಿಹೇಳು. ಅರ್ಥವಾಗ್ಲಿಲ್ಲ."

"ಮಾಧವನಂತೆ ನನಗೂ ಓಡಿಹೋಗೋಣ ಎನ್ನಿಸಿದೆ. ಹಾಳುಜೀವನ."

"ಹಾಳುಜೀವನ ಎಂದು ಶಪಿಸ್ತಾ ಇದ್ದರೆ ನಮ್ಮ ಜೀವನ ಸುಧಾರಿಸಲಾರದು. ಇದ್ದುದರಲ್ಲಿ ಸುಧಾರಿಸಿಕೊಂಡು ಹೋಗುವ ಬುದ್ಧಿ ಮಾಧವನಿಗಿಲ್ಲ. ಈಗ ನೀನೂ ಅವನಂತೆ ಹೇಳ್ತಾ ಇದ್ದೀ. ನೀವೆಲ್ಲ ಶ್ರೀಮಂತರ ಮಕ್ಕಳಾಗಿ ಹುಟ್ಟಬೇಕಿತ್ತು."

"ಹುಟ್ಟಲಿಲ್ಲವಲ್ಲ. ಸರಿಯಾಗಿ ನಾವು ಗುರುಪುರದಲ್ಲೇ ಇರಬಹುದಿತ್ತು. ನಿನ್ನಿಂದಾಗಿ ಅಣ್ಣನೂ ಇತ್ತ ಹೊರಟ."

ಶಾಂಭವಿ ಸಿಟಿಡು ಕುಳಿತಳು. ಶಾರದೆಯ ಮುಖದಲ್ಲಿ ಏನೋ ಕಾಠಿಣ್ಯ. ಬಡತನದಲ್ಲಿ ಹುಟ್ಟಿದರೂ ಶ್ರೀಮಂತಿಕೆಯನ್ನು ಉಣ್ಣುವ ಆಸೆ. ತಪ್ಪುಗಳೆಲ್ಲ ತನ್ನ ಮೇಲೆ. ತಾನೊಬ್ಬಳೇ ಕೆಟ್ಟವಳು.

"ಬಹಳ ದಿನಗಳಿಂದಲೂ ನೋಡ್ತಾ ಇದ್ದೇನೆ ಶಾರದೆ, ನೀನು ಮೊದಲಿನಂತೆ ಇಲ್ಲ. ಈ ಪ್ರಾಯದಲ್ಲಿ ಕೆಲವು ಆಸೆಗಳಿರುವದು ಸಹಜ. ಅವೆಲ್ಲ ನೆರವೇರಲಿಲ್ಲವೆಂದು ನನ್ನಮೇಲೆ ತೀರಿಸ್ತಾ ಇದ್ದಿ! ನಿನ್ನ ಸುಖಕ್ಕೆ ನಾನೇನು ಕಲ್ಲುಹಾಕಿದೆ?"

ಶಾರದೆ ಹೊರಳಿ ನೋಡಲಿಲ್ಲ ಅತ್ತಿಗೆಯನ್ನು. ನಿಧಾನವಾಗಿ ಶಾಂಭವಿಯ ಸಹನೆಯೂ ತಪ್ಪಿತು. ಮೊದಲೇ ಹಣ ಹೋದ ದುಃಖ. ಈಗ ಇವಳ ಎದುರುತ್ತರ! ಎಲ್ಲರನ್ನೂ ಸಮಾನದೃಷ್ಟಿಯಲ್ಲಿ ನೋಡಿದ್ದರೂ ತಪ್ಪು ತನ್ನ ಮೇಲೆ! ಅವಳು ಎದ್ದು ಶಾರದೆಯ ಮುಖವನ್ನು ತನ್ನೆರಡು ಕೈಗಳಿಂದ ತಿರುಗಿಸಿಕೊಂಡಳು. ಅತ್ತಿಗೆಯ ಮುಖದಲ್ಲಿ ಕುಣಿಯುತ್ತಿರುವ ಕ್ರೋಧವನ್ನು ಕಂಡು ತಬ್ಬಿಬ್ಬಾಯಿತು.

"ನಾನೊಬ್ಬಳೇ ಕೆಟ್ಟವಳು, ಅಲ್ಲವೇ? ಹಿಡಿ, ಖಾಲಿಯಾದ ಪೆಟ್ಟಿಗೆ ಬೀಗದ ಕೈ. ಇನ್ಮೇಲೆ ನೀವೆಲ್ಲ ಸುಖವಾಗಿ ಈ ಮನೆಯಲ್ಲಿರಿ. ನಾನು ನನ್ನ ಗಂಡ-ಮಕ್ಕಳ ಸಂಗಡ ಬೇರೆ ಹೊರಟುಹೋಗ್ತೇನೆ." ಅವಳ ಸ್ವರ ಭಾರವಾಯಿತು, "ನಾನು ಓದಿದವಳು. ಎಲ್ಲಿಯಾದರೂ ಕೆಲಸ ಸಿಕ್ಕೀತು—ನಾನಿಲ್ಲದೆ ನೀವು ಸುಖವಾಗಿ ಇರ್ತೀರಿ ಎಂದರೆ ನಿಜಕ್ಕೂ ಸಂತೋಷ."

ಅಂಗಳದಲ್ಲಿ ಇವರ ಮಾತುಗಳನ್ನು ಕೇಳುತ್ತಿದ್ದ ಕೇಶವ ಓಡಿಬಂದ ಒಳಗೆ. "ಎಲ್ಲಿಗೆ ಹೋಗ್ತಿ, ಅತ್ತಿಗೇ? ನೀನಿಲ್ಲದೆ ನಾವೂ ಈ ಮನೇಲಿ ಇರುವವರಲ್ಲ. ಹಾಂ, ಅವರೆಲ್ಲ ಇರಲಿ, ನಾನು ನಿನ್ನ ಜೊತೆ ಬರ್ತೇನೆ."

"ಬೇಡಪ್ಪ ಬೇಡ. ನೀವು ಒಬ್ಬೊಬ್ಬರೇ ನನ್ನಮೇಲೆ ತಿರುಗಿ ಬೀಳ್ತಾ ಇದ್ದೀರಿ. ಈವರೆಗೆ ಮಾಧವನಿದ್ದ. ಅವನು ಓಡಿದಾಕ್ಷಣ ಶಾರದೆಗೆ ಹಟ ಪ್ರಾರಂಭವಾಗಿದೆ. ಇನ್ನು ನೀನು, ಈಶ್ವರಿ ಇದ್ದೀರಿ. ಯಾವಾಗ ನಿಮ್ಮ ಬಾಣದ ಗುರಿ ನನ್ನ ಮೇಲೆ ತಿರುಗುತ್ತೋ ನೋಡಬೇಕು."

ಆಗಲೇ ಶಾರದೆಗೆ ತನ್ನ ತಪ್ಪಿನ ಅರಿವು ಆಗಿತ್ತು. ಈವರೆಗೂ ಅವಳು ಅತ್ತಿಗೆಯ ಎದುರಿನಲ್ಲಿ ನಿಂತು ಒಂದೇ ಒಂದು ಮಾತು ಎದುರಾಡಿದವಳಲ್ಲ.

ಯಾವಾಗ ಮಾಧವ ಹಣ ಎತ್ತಿಕೊಂಡು ಸುಖದ ಹಾದಿಯನ್ನರಸಿಕೊಂಡು ಹೋದನೋ ಆಗ ಶಾರದೆಯ ಮನದಲ್ಲಿ ಅಂತಹದೇ ಭಾವನೆ ಉದಯಿಸಿ ಮತ್ಸರದ ಉರಿಯೆದ್ದಿತ್ತು. ತನಗೆ ಆ ಹಣ ಸಿಕ್ಕಿದ್ದರೆ ಎಂಬ ಯೋಚನೆಯಲ್ಲಿ ರೇಗಿಕೊಂಡಿದ್ದಳು ಶಾಂಭವಿಯ ಮೇಲೆ. ಆಮೇಲೆ ಒಳಗೊಳಗೇ ಹೆದರಿಕೆ, ಅತ್ತಿಗೆ ನಿಜವಾಗಿಯೂ ಹೊರಟುಹೋದರೆ? ಅವಳಿಗೆ ಪಶ್ಚಾತ್ತಾಪವೆನಿಸಿ ತಾನು ಆಡಿದ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದುಕೊಳ್ಳುತ್ತಿದ್ದಂತೆ ಆಗಮಿಸಿದರು ಸುಂದರೀಬಾಯಿ.

ಅವರು ಬಂದದ್ದು ಮಾಧವ ಬಂದಿದ್ದಾನೆಯೇ ಎಂದು ನೋಡಲು. ಮಾಧವ ಇನ್ನೆಂದೂ ಬರಲಾರ ಎನ್ನುವುದು ಸತ್ಯಸಂಗತಿ. ಅವನ ಕೈಗೆ ದೊರೆತದ್ದು ಒಂದೆರಡು ರೂಪಾಯಿಗಳಲ್ಲ, ಸಾವಿರದ ಮೊತ್ತ. ಆ ಹಣ ಮುಗಿಯಬೇಕು, ಅನಂತರವೇ ಅವನ ದರ್ಶನ. ಹಣ ಮುಗಿದಮೇಲೆಯೂ ಹಿಂದಿರುಗುತ್ತಾನೋ ಇಲ್ಲವೋ. ಸುಂದರೀಬಾಯಿಗೆ ತನ್ನ ಬಾಡಿಗೆ ಹಣ ಹೇಗೆ ಕೊಡುತ್ತಾರೆ ಎಂಬ ಚಿಂತೆ. ಶಾಂಭವಿ ಅವರ ಮನಸ್ಸು ಅರಿತವಳಂತೆ ಮುಂದಿನ ತಿಂಗಳ ಬಾಡಿಗೆಯನ್ನು ತೆಗೆದು ಅವರ ಕೈಲಿರಿಸಿದಳು.

"ಛೇ ಛೇ....ಅವಸರವಿರಲಿಲ್ಲ." ನೋಟುಗಳನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ನಕ್ಕಳು ಸುಂದರೀಬಾಯಿ, "ಹಾಂ, ಮರೆತುಹೋಗಿತ್ತು ಶಾಂಭವಿ, ಇಲ್ಲೇ ರಂಗಿಕಟ್ಟೆ ಹತ್ತಿರ ಹೊಸದಾಗಿ ಮಹಿಳಾಮಂಡಲ ಪ್ರಾರಂಭವಾಗಿದೆ. ಅಲ್ಲಿ ಶಿಶುವಿಹಾರವನ್ನೂ ನಡಸ್ತಾರಂತೆ. ಶಿಶುವಿಹಾರಕ್ಕೆ ಇಬ್ಬರು ಟೀಚರ್ರು ಬೇಕು ಅಂದಿದ್ದಾರೆ ಮಹಿಳಾ ಮಂಡಲದ ಅಧ್ಯಕ್ಷಿಣಿ."

ಶಾಂಭವಿಯ ಆಸೆ ಚಿಗುರಿತು, "ಅವರಿಗೆ ಕಲಿತವರು ಬೇಕೇ ?"

"ಹಾಗೇನಿಲ್ಲ, ಮಹಿಳಾ ಮಂಡಲದ ಅಧ್ಯಕ್ಷಿಣಿ ನನ್ನ ಪಕ್ಕಾ ಸ್ನೇಹಿತೆ. ನನ್ನ ಹೆಸರು ಹೇಳು. ಒಂದು ಕೆಲಸ ನಿನಗೆ ಕೊಟ್ಟೇ ಕೊಡ್ತಾಳೆ. ನಿನ್ನ ಪರವಾಗಿ ನಾನೂ ಅಷ್ಟಿಷ್ಟು ಶಿಫಾರಸು ಮಾಡ್ತೇನೆ. ತಿಂಗಳ ಸಂಬಳ ಎಂಬತ್ತು ಅಥವಾ ನೂರು ಕೊಡಬಹುದು. ನಿನಗೆ ಇಷ್ಟಾದರೂ ಉಪಕಾರ ವಾಯ್ತಲ್ಲ."

"ಇವತ್ತೇ ಹೋಗಿಬರ್ತೇನೆ. ಜೊತೆಯಲ್ಲಿ ನೀವೂ ಬರ್ತಿರಾ ?" ಶಾಂಭವಿಗೆ ಅವರಿದ್ದರೆ ತನಗೆ ಕೆಲಸ ಖಂಡಿತ ಸಿಗುತ್ತದೆ ಎನ್ನುವ ವಿಶ್ವಾಸ.

ಸುಂದರೀಬಾಯಿ ಬೇರೆ ಏನೋ ಕೆಲಸದ ನಿಮಿತ್ತ ಹೊರಡಲಿಲ್ಲ. ಶಾಂಭವಿ ತಡಮಾಡದೆ ತಾನೊಬ್ಬಳೇ ಹೊರಟಾಗ ಇಷ್ಟುಹೊತ್ತು ಮುನಿದು ಕುಳಿತಿದ್ದ

ಶಾರದೆ ಮೆಲ್ಲನೆ ಹೊರಟಳು ಅವಳ ಜೊತೆಯಲ್ಲಿ. ಇದ್ದಕ್ಕಿದ್ದಂತೆ ಶಾಂಭವಿಗೆ ಯಾವಾಗಲೂ ಹರಿನಾರಾಯಣ ಹೇಳುವ ಹಾಡು ನೆನಪಿಗೆ ಬಂದಿತು:

"ಕರುಣಾಕರ ನೀನೆಂಬುವದೇತಕೋ, ಭರವಸವಿಲ್ಲೆನಗೆ!"

26

ಹುಣ್ಣು ತುಂಬಿದ ತನ್ನ ಕಾಲುಗಳನ್ನು ಕುಂಟಿಸುತ್ತ ಒಳಗೆ ಕಾಲಿರಿಸಿದಳು ವೇದಮ್ಮ. ಈ ದಿನ ಕಾಲಿನ ಹುಣ್ಣುಗಳು ಇನ್ನೂ ಜೋರಾಗಿದ್ದು ನಡೆಯುವದಕ್ಕೇ ಆಗುತ್ತಿರಲಿಲ್ಲ. ಪಂಡಿತರ ಔಷಧಿ ಹಿಡಿಸದೆ ಹೋಗಿತ್ತು. ಬೇರೆ ಡಾಕ್ಟರ ಹತ್ತಿರ ಕರೆದೊಯ್ಯು ಎಂದು ನಿನ್ನೆಯಿಂದಲೇ ಹೇಳಿದ್ದಳು ಸೊಸೆಗೆ. ಆದರೆ ಮಾಧವ ಹೊರಟುಹೋದಮೇಲೆ ಶಾಂಭವಿ ಅತ್ತೆಯ ಕಾಲಿನತ್ತ ಲಕ್ಷ್ಯಕೊಟ್ಟಿಲ್ಲ. ಇವತ್ತೋ ನಾಳೆ ಗುಣವಾಗಬಹುದು, ದೊಡ್ಡ ಡಾಕ್ಟರುಗಳು ಯಾಕೆ?

ಮನೆ ಒಳಗೆ ಬಂದಾಗ ಸೊಸೆ ಮನೆಯಲ್ಲಿಲ್ಲನೆಂದು, ಮಹಿಳಾ ಮಂಡಲಕ್ಕೆ ಹೊರಟುಹೋದಳೆಂದು ಅಡಿಗೆಕೋಣೆಯಲ್ಲಿದ್ದ ಕೇಶವ ಹೇಳಿದಾಗ ಕಿಡಿಕಿಡಿಯಾದಳು ವೇದಮ್ಮ. "ನಾನು ಸಾಯ್ತಾ ಇದ್ದೇನೆ ಇಲ್ಲಿ, ಯಾರಿಗೂ ನನ್ನ ಮೇಲೆ ಲಕ್ಷ್ಯವಿಲ್ಲ. ಶಾಂಭವಿ, ನಾರಾಯಣ ನನ್ನನ್ನು ಮೂಲೆಗುಂಪು ಮಾಡಿದರಲ್ಲೋ? ಒಳಗೆ ನಿನ್ನದೇನು ಕಾರುಭಾರ?"

ಕೇಶವ ಉತ್ತರಿಸಲಿಲ್ಲ. ಮಾಧವ ಹೋಗಿ ನಾಲ್ಕಾರು ದಿನಗಳಾಗಿದ್ದವು. ಈ ದಿನಗಳಲ್ಲಿ ಮನೆಯ ಪರಿಸ್ಥಿತಿ ತುಂಬಾ ಹದಗೆಟ್ಟುಹೋಗಿತ್ತು. ಅತ್ತಿಗೆ ಒಂದು ಪಾವು ಅಕ್ಕಿ ತರುವಾಗಲೂ ಬಹಳ ಅಳತೆಮಾಡುತ್ತಿದ್ದಾಳೆ. ಈ ದಿನ ಕೇಶವ ಬಂದರಿನತ್ತ ಹೋಗಿರಲಿಲ್ಲ. ಯಾವಾಗ ಅತ್ತಿಗೆ ಮತ್ತು ಶಾರದೆ ಮಹಿಳಾಮಂಡಲದತ್ತ ಹೊರಟುಹೋದರೋ ಅವನು ನಿಧಾನವಾಗಿ ಅಡಿಗೆ ಕೋಣೆಗೆ ಬಂದಿದ್ದಾನೆ. ಅವನ ಆಸೆಯ ಕಣ್ಣುಗಳು ಸಾಲುಸಾಲಾಗಿ ಜೋಡಿಸಿಟ್ಟ ಟಿನ್ನಿನ ಡಬ್ಬಿಗಳು, ಮೂಲೆಯಲ್ಲಿರಿಸಿದ ಸಣ್ಣ ಮಣ್ಣಿನ ಹಂಡೆ, ಮಡಿಕೆ, ಬಾಟಲಿಗಳತ್ತ ಹರಿಯಿತು. ಒಲೆಯ ಮೇಲೆ ಅನ್ನದ ಮಡಿಕೆ,

ಬದಿಯಲ್ಲಿ ಪದಾರ್ಥದ ಒಂದು ಮಡಿಕೆ ಹಾಗೂ ದೇವರ ಫೋಟೋ ತೂಗು ಹಾಕಿದ ಸ್ಥಳದಲ್ಲಿ ಕೆಳಗೆ ನೀರಿನ ಪಾತ್ರೆಯಿದೆ.

ಅತ್ತಿಗೆ ಬರುವಾಗ ಹೇಗೂ ತಡವಾಗುತ್ತದೆ. ಅಷ್ಟರಲ್ಲಿ ನಾನೇ ರುಚಿಯಾದ ತಿಂಡಿ ಮಾಡಿಟ್ಟು ಅತ್ತಿಗೆಯನ್ನು ಅಚ್ಚರಿಗೊಳಿಸಬೇಕು. ಅವನು ತನ್ನಲ್ಲೇ ಸಿಳ್ಳುಹಾಕುತ್ತ ನಾಲ್ಕಾರು ತುಂಡು ಕಟ್ಟಿಗೆಯನ್ನು ಒಲೆಯಲ್ಲಿರಿಸಿ ಒಂದೊಂದೇ ಡಬ್ಬಿಗಳ ಮುಚ್ಚಳವನ್ನು ತೆರೆದು ನೋಡಿದ. ಅರೆ, ಎಲ್ಲಾ ಖಾಲಿ ಡಬ್ಬಿಗಳು. ಅಕ್ಕಿ ತುಂಬಿಡುವ ಟಿನ್ನಿನ ಡಬ್ಬಿಯಲ್ಲಿ ನಾಲ್ಕು ಕಾಳು ಅಕ್ಕಿಯಿದೆ. ಬೆಲ್ಲದ ಮಡಿಕೆಯಲ್ಲಿ ಇರುವೆಗೆ ಸಾಲುವಷ್ಟೇ ಬೆಲ್ಲ ಮೆತ್ತಿಕೊಂಡಿದೆ. ಹುಡುಕಿ ತೆಗೆದರೂ ಅವನಿಗೆ ಏನೇನೂ ಆಹಾರದ ವಸ್ತುಗಳು ಸಿಗಲಿಲ್ಲ. ಅತ್ತಿಗೆ ಪ್ರತಿನಿತ್ಯ ಹೇಗೆ ಅಡಿಗೆ ಮಾಡುತ್ತಾಳೆ ? ಅವಳ ಕೈಯಲ್ಲಿ ಯಕ್ಷಿಣಿಯ ಬೆತ್ತವಿದೆಯೆ ? ಖಾಲಿ ಡಬ್ಬಿಗಳನ್ನು ಮಂತ್ರದಿಂದ ತುಂಬಿಸುವ ವಿದ್ಯೆ ತಿಳಿದಿದೆಯೋ ?

ಪಾಪ, ಅವನಿಗೆ ತಿಳಿಯದು ಅತ್ತಿಗೆ ದಿನದ ಖರ್ಚಿಗೆ ಸಾಲುವಷ್ಟು ಮಾತ್ರ ಸಾಮಾನು ತರಿಸುತ್ತಾಳೆ ಎಂದು. ಹಣೆಗೆ ಕೈಯಿರಿಸಿಕೊಂಡು ತನ್ನಲ್ಲೇ ಚಿಂತಿಸಿ ಮೂಲೆಮೂಲೆ ಹುಡುಕಿದ. ಅದೋ, ಅಲ್ಲಿ ಮಣ್ಣಿನ ಹಂಡೆಯಲ್ಲಿ ಒಂದು ಸೇರಿನಷ್ಟು ನುಚ್ಚಕ್ಕಿ. ಇನ್ನೊಂದು ಡಬ್ಬಿಯಲ್ಲಿ ಸ್ವಲ್ಪ ಕಾಫಿಪುಡಿ, ಸಕ್ಕರೆ. ತಡಮಾಡದೆ ಹೊಗೆಯಾಡುವ ಬೆಂಕಿಯನ್ನು ಉರಿಸಿ ಕಷಾಯದಂತಹ ಕಾಫಿಮಾಡಿ ಗುಂಡುಕಲ್ಲಿನ ಮೇಲೆ ರಾಜಠೀವಿಯಲ್ಲಿ ಕುಳಿತು ಹನಿ ಹನಿಯಾಗಿ ಕುಡಿದು ಮುಗಿಸಿದ ತೃಪ್ತಿಯಲ್ಲಿ. ಹಾಲಿಲ್ಲದ ಕಪ್ಪು ಕಷಾಯ !

ಅಷ್ಟರಲ್ಲಿ ಕೇಳಿಸಿತು ವೇದಮ್ಮನ ಸ್ವರ : "ಒಳಗೆ ನಿನ್ನದೇನು ಕಾರುಭಾರ ? ಅಯ್ಯೋ, ಕಾಲಿನ ಹುಣ್ಣುಗಳು ರಸಿಗೆಯಾಗಿ ಒಡೆಯುತ್ತಿದ್ದರೂ ನೋಡುವವರು ಯಾರೂ ಇಲ್ಲ. ನಾನು ಸಾಯದೆ ಬಾಕಿ ಉಳಿದಿದ್ದೇನಪ್ಪೋ...."

ಕೇಶವ ಬಾಯಿಚಪ್ಪರಿಸುತ್ತ ಹೊರಗೆ ಬಂದ, "ಯಾಕೆ ಬೊಬ್ಬೆಹಾಕ್ತಾ ಇದ್ದಿ ? ನಿನ್ನ ಬಾಯಿ ಎರಡು ಗಳಿಗೆ ಸುಮ್ಮನಿರುವದಿಲ್ಲವಲ್ಲ."

"ನನಗೆ ನೀನು ಬುದ್ಧಿ ಹೇಳಬೇಡ. ಕಾಲು ಹೇಗೆ ಊದಿದೆ, ಎಷ್ಟು ಕಷ್ಟಪಡ್ತಾ ಇದ್ದೇನೆ. ಆದರೆ ನಿನ್ನ ಅತ್ತಿಗೆಗೆ ಕನಿಕರವಿಲ್ಲ, ಶನಿ ಹಿಡಿದವಳು."

"ಅವಳನ್ನು ಯಾಕೆ ಬೈಯುತ್ತಿ ? ನಾವೆಲ್ಲರೂ ಶನಿಹಿಡಿದವರು ಎಂದು ತಿಳಿದಿಲ್ಲವೇ ನಿನಗೆ ?"

"ಇದಕ್ಕೆಲ್ಲ ಅವಳೇ ಕಾರಣ. ನಮ್ಮ ಊರನ್ನು ಬಿಟ್ಟು ಒರಲೇಬಾರದಿತ್ತು."

"ಅವಳ ಮೇಲೆ ನಿನಗ್ಯಾಕೆ ಇಷ್ಟು ವೈರ? ಅಂತಹ ಒಳ್ಳೆಯ ಅತ್ತಿಗೆ ನನಗೆ ಇನ್ನೆಲ್ಲೂ ಸಿಗಲಾರಳು, ಅಮ್ಮಾ. ನಿಜ ಹೇಳು, ನಮ್ಮ ದೊಡ್ಡಣ್ಣ ಮೊದಲು ಹೆಡ್ಡ, ಮಂಕನಂತೆ ಇದ್ದು ಊರವರಿಂದ 'ಹುಚ್ಚ' ಎಂದೆನಿಸಿಕೊಂಡಿದ್ದ. ಆದರೂ ಅತ್ತಿಗೆ ಬಂದ್ಮೇಲೆ ಅವನೊಬ್ಬ ಮನುಷ್ಯನಾದ...."

"ಅದೇನು ಮಹಾ, ಅವನ ಗ್ರಹಚಾರ ಬಿಡುಗಡೆಯಾಯ್ತು ಅಷ್ಟೇ. ಅಮ್ಮೋ ಶಿವೋ, ನನ್ನ ಕಾಲುನೋವು."

"ನಿನ್ನ ಕಾಲುನೋವಿನ ಉಪಚಾರಕ್ಕೂ ಅತ್ತಿಗೆ ಬರಬೇಕೇ? ಅವಳಿಗೆ ನೀನೆಷ್ಟು ಉಪಚಾರ ಮಾಡಿದ್ದಿ? ಇರು, ಸಾಯಂಕಾಲ ನಾನೇ ಡಾಕ್ಟರರ ಹತ್ತಿರ ನಿನ್ನನ್ನು ಕರೆದುಕೊಂಡು ಹೋಗ್ತೇನೆ."

"ಏನೋ, ನಾನೊಂದು ಮುದುಕಿ, ಹಗುರವಾಗಿದ್ದೇನೆ ನಿಮಗೆಲ್ಲ. ಆ ಹುಚ್ಚ ಮಗನಿಗೆ ಹೇಳಿದರೆ ಅವನು ಹೆಂಡ್ತಿ ಮುಖ ನೋಡ್ತಾನೆ. ನಿನ್ನ ಹತ್ರ ಹೇಳಿದರೂ ಅದೇ ರೀತಿ. ನಾನ್ಯಾಕೆ ಸತ್ತುಹೋಗ್ಲಿಲ್ಲವ್ಮೋ...."

ಶಾಂಭವಿ ಹಿಂದಿರುಗುವಾಗ ವೇದಮ್ಮನ ನರಳಾಟ ತಾರಕಕ್ಕೇರಿದೆ. ಸೊಸೆಯ ಮ್ಲಾನಮುಖದತ್ತ ನೋಡದೆ ಉಶ್ ಪಿಶ್ ಎನ್ನುತ್ತ ಬೊಬ್ಬಿರಿದಳು, "ನೋಡೇ, ಎಷ್ಟು ಕಷ್ಟಪಡ್ತಾ ಇದ್ದೇನೆ, ಕಾಣುವದಿಲ್ಲವೇ?

"ನಿಮ್ಮ ಹಾಗೆ ನಾನೂ ಕಷ್ಟಪಡ್ತಾ ಇದ್ದೇನೆ, ಕಾಣುವದಿಲ್ಲವೇ?"

"ಮಹಿಳಾ ಮಂಡಲವೆಂದು ಊರೆಲ್ಲ ಸುತ್ತಲು ಹೋಗಿದ್ದಿಯಲ್ಲ...."

"ಹೌದು ಅತ್ತೆ, ಊರೆಲ್ಲ ಸುತ್ತಿಬಂದೆ, ಬಹಳ ಮಜವಾಗಿ! ನಿಮಗೆ ಅಸೂಯೆ ಆಗುತ್ತಾ? ಮಹಿಳಾ ಮಂಡಲದಲ್ಲಿ ಕಾಫಿ ತಿಂಡಿ ಕೊಟ್ಟು ನನ್ನನ್ನು ಎಷ್ಟು ಚೆನ್ನಾಗಿ ಸತ್ಕರಿಸಿದರು! ನಿಮಗೆ ಹೊಟ್ಟೆಕಿಚ್ಚಾಯ್ತೇ?" ಉತ್ತರಿಸಿದಳು ಸೊಸೆ ಎಂದಿಗಿಂತಲೂ ಕಠಿಣಳಾಗಿ.

ನಿಜ, ಅವಳ ಮನಸ್ಸು ಕಠಿಣವಾಗಿದೆ ಈ ದಿನ. ಸಿಡಿದು ಉತ್ತರ ಕೊಡುವಷ್ಟು ಉದ್ವೇಗ ತುಂಬಿದೆ. ಸ್ವಲ್ಪ ಹೊತ್ತಿನ ಮೊದಲು ರಂಗೀಕಟ್ಟೆಯ ಬಳಿ ಇರುವ ಮಹಿಳಾ ಮಂಡಲದಲ್ಲಿ ನಡೆದ ಕಹಿಪ್ರಸಂಗ ಚಿತ್ತವನ್ನು ಕೆಣಕಿಬಿಟ್ಟಿದೆ. 'ಕ್ಷಮಿಸಿ, ಈಗಾಗಲೇ ಬೇರೆ ಇಬ್ಬರನ್ನು ಟೀಚರ್ಸ್ ಕೆಲಸಕ್ಕೆ ತೆಗೆದುಕೊಂಡಾಯ್ತು' ಎಂದು ಅಲ್ಲಿಯ ಅಧ್ಯಕ್ಷಿಣಿ ಹೇಳಿದ್ದರೆ ಅವಳಿಗೆ ಏನೇನೂ ಬೇಸರವಿರಲಿಲ್ಲ; ತನ್ನಂತೆ ಬೇರೆ ಯಾರೋ ಕೆಲಸಕ್ಕೆ ಸೇರಿದರು

ಎಂದುಕೊಳ್ಳುತ್ತಿದ್ದಳೋ ಏನೋ. ಆದರೆ ಅಲ್ಲಿ ನಡೆದದ್ದೇ ಬೇರೆ. ಟೀಚರ್ಸ್ ಕೆಲಸಕ್ಕೆ ಈವರೆಗೆ ಯಾರನ್ನೂ ಸೇರಿಸಿಕೊಂಡಿರಲಿಲ್ಲ. ಆದರೂ ಕೆಲಸ ಕೇಳಿಕೊಂಡು ಬಂದ ಶಾಂಭವಿಯತ್ತ ನೋಡಿ ನಕ್ಕ ನಗೆ....ವಿಚಿತ್ರದ ನಗೆ! ಅದು ನೆನಪಾದರೆ ಶಾಂಭವಿಯ ಮೈ ಆದರುತ್ತದೆ.

“ನಿಮ್ಮ ಬಡತನ, ಅನುಭವ, ನಿಮ್ಮ ನಯವಾದ ಮಾತು ಕೇಳಿದರೆ ಶಿಶುವಿಹಾರದ ಕೆಲಸ ಕೊಡೋಣ ಎನ್ನಿಸುತ್ತದೆ. ಆದರೆ....” ಅಧ್ಯಕ್ಷಿಣಿ ಪಕಪಕನೆ ನಕ್ಕು ಗಂಭೀರವಾಗಿ ಅಂದಳು, “ಮಕ್ಕಳ ಮನಸ್ಸು ಹೂವಿನ್ಹಾಗೆ. ಮನೆಯನ್ನು ಬಿಟ್ಟು ಹೊಸ ವಾತಾವರಣದಲ್ಲಿ ಕಲಿಯುವ ಎಳೆಯರಿಗೆ ಯೋಗ್ಯ ಟೀಚರ್ಸ್ ಬೇಕು. ನಿಮ್ಮನ್ನು ನೋಡಿದರೆ, ಅಬ್ಬ, ಮಕ್ಕಳು ಇಷ್ಟ ಪಡಲಾರರು. ಶಾಲೆ ಬಿಟ್ಟೇ ಓಡಬಹುದು!”

ಶಾಂಭವಿ ನಿಂತಲ್ಲೇ ನಡುಗಿದಳು. ತಾನು ಸುಂದರಿಯಾಗಿ ಯಾಕೆ ಹುಟ್ಟಲಿಲ್ಲ? ದೇವರು ತನ್ನನ್ನು ಸೃಷ್ಟಿಮಾಡುವಾಗ ರೂಪವನ್ನೇಕೆ ಕೊಡಲಿಲ್ಲ? ಬುದ್ಧಿ ಕೊಟ್ಟ, ಸಹನೆಯ ಹೃದಯ ಕೊಟ್ಟ; ಮೃದು ಹಾಗೂ ಕಠಿಣ, ದೃಢ ಹಾಗೂ ಸ್ಥಿರಮನಸ್ಸನ್ನು ಕೊಟ್ಟ; ಆರೋಗ್ಯ ತುಂಬಿದ ಮೈಯನ್ನೂ ಇತ್ತ. ಓ ದೇವರೇ, ಹೆಣ್ಣಿಗೆ ಯಾವುದರ ಅಗತ್ಯವಿತ್ತೋ ಅದನ್ನು ಕೊಡಲಿಲ್ಲ. ಯಾರ ಮನಸ್ಸಿಗೂ ಮೆಚ್ಚುಗೆಯಾಗದ ರೀತಿಯಲ್ಲಿ ತನ್ನನ್ನು ಹುಟ್ಟಿಸಿದ.

ಅವಳಿಗೆ ಅಳು ಬರುವಂತಾಯಿತು. ಕಿವಿಗಳ ಬದಿಯಿಂದ ಎಳೆದು ಬಾಚಿ ಎತ್ತಿ ಕಟ್ಟಿದ ಕೂದಲನ್ನು ಬಿಚ್ಚಿ ಹರಡಿಕೊಂಡಳು. ಕೇವಲ ರೂಪದಿಂದ ಇವರೆಲ್ಲ ಯೋಗ್ಯತೆಯನ್ನು ಅಳೆಯುತ್ತಾರೆಯೇ? ಎಷ್ಟು ಕಷ್ಟಪಟ್ಟರೂ ಯಾವುದೋ ಅದೃಶ್ಯ ವಿಧಿ ಅಣಕಿಸುತ್ತಿದೆ ತನ್ನನ್ನು. ಆಗ ಅವಳಿಗೆ ತನ್ನ ತಂದೆತಾಯಿಯ ನೆನಪು ಬಂತು. ಗುರುಪುರ ಬಿಟ್ಟಮೇಲೆ ಒಂದು ಕಾಗದವನ್ನೂ ಬರೆದಿಲ್ಲ. ತನ್ನ ಬಣ್ಣಗೇಡಾದ ಸಂಸಾರವನ್ನು ನೋಡಿ ಹೆತ್ತವರು ಇನ್ನೂ ಸಂಕಟಪಡಬಾರದು. ‘ಆಗಾಗ ಕಾಗದ ಬರೆಯುತ್ತಾ ಇರು’ ಎಂದಿದ್ದಳು ಗಂಗಾ. ಭಟ್ಕಳದಲ್ಲಿ ನೆಲೆಸಿದಮೇಲೂ ಅವಳಿಗೆ ಕಾಗದ ಬರೆದುಹಾಕುವ ಮನಸ್ಸಿರಲಿಲ್ಲ. ಈ ದಿನ ಅವಳ ನೆನಪು ಪದೇ ಪದೇ ಕಾಡಿತು ಶಾಂಭವಿಯನ್ನು. ತಡಮಾಡದೆ ತನ್ನ ವಿಳಾಸವನ್ನೂ ತಿಳಿಸುತ್ತ ದೀರ್ಘವಾದ ಕಾಗದ ಬರೆದು ಹಾಕಿದಳು ಗಂಗಾಳಿಗೆ.

27

ಯಾವದೇ ಆಧಾರದ ಭರವಸೆಗಳಿಲ್ಲದೆ ಚುಕ್ಕಾಣಿ ಮುರಿದ ದೋಣಿಯಂತೆ ದಿನಗಳನ್ನು ತಳ್ಳತೊಡಗಿತು ಆ ಸಂಸಾರದ ದೋಣಿ. ಎರಡು ತಿಂಗಳು ಕಳೆದವು. ಪ್ರಕೃತಿಗೆ ಈ ತಿಂಗಳು ಅತ್ಯಂತ ಅಲ್ಪದ ಕಾಲ! ಆದರೆ ಈ ಸಂಸಾರಕ್ಕೆ ಅದೇ ಅವಧಿ ಎರಡು ಯುಗಗಳು. ಪ್ರತಿನಿಮಿಷವೂ ಭರವಸೆ ಹುಟ್ಟಿಸುವಂತಹದು.

ರಾತ್ರಿಯಾಯಿತೆಂದರೆ ಆಗಸದ ತುಂಬಾ ಮಿನುಗುವ ಬೆಳ್ಳಿ ಚುಕ್ಕೆಗಳು. ಸಹಸ್ರಯೋಚನೆಗಳ, ಕನಸುಗಳ ಬಣ್ಣಬಣ್ಣದ ಗರಿಗಳು, ಸಹಸ್ರರೂಪುಗಳು. ಮಿನುಗುತ್ತಾ ಮಿನುಗುತ್ತಾ ಇಡೀ ಬದುಕನ್ನು ಕಳೆಯುವ ಹಂಬಲ. ತಾವು ಮಿನುಗುವದನ್ನು ಲೋಕವೂ ನೋಡಲಿ ಎನ್ನುವ ಆಸೆ. ಆದರೆ ಕತ್ತಲೆ ಕಳೆದು ಬೆಳಗಾಯಿತೆಂದರೆ ಆ ಚುಕ್ಕೆಗಳು ಎಲ್ಲೋ ಮಾಯ! ಪ್ರಖರವಾದ ಸೂರ್ಯನ ಬಿಸಿಲಿನಲ್ಲಿ ನಾಪತ್ತೆ! ಮತ್ತೆ ಕತ್ತಲೆಯಾದರೆ ಮಿನುಗುವ ಚುಕ್ಕೆಗಳ ಆಗಮನ!

ಒಂದು ದಿನ ಭಟ್ಕಳದ ಪೇಟೆ ಮಧ್ಯದಲ್ಲಿದ್ದ ಒಂದು ಸಣ್ಣ ಹಣ್ಣಿನಂಗಡಿ ಮುಚ್ಚಿಹೋದುದನ್ನು ಅಲ್ಲಿ ನಿತ್ಯವೂ ಓಡಾಡುವ ಯಾರೊಬ್ಬರೂ ಗಮನಿಸಲಿಲ್ಲ. ಗಮನಿಸುವ ವಿಷಯವೂ ಇದಲ್ಲ. ಇಂತಹ ಚಿಲ್ಲರೆ ಅಂಗಡಿಗಳೆಷ್ಟೋ ತೆರೆದುಕೊಳ್ಳುತ್ತವೆ, ಆದೆಷ್ಟೋ ಮುಚ್ಚುತ್ತವೆ. ಇಂಥವೆಲ್ಲ ಸಾಮಾನ್ಯದ ವಿಷಯಗಳು. ಭಟ್ಕಳದ ಸರಕಾರೀ ಡಾಕ್ಟರರೊಬ್ಬರು ಆಸ್ಪತ್ರೆಯಿಂದ ಬೇರೆ ಕಡೆಗೆ ವರ್ಗವಾಗಿ ತಮ್ಮ ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ಹೊರಟುಹೋದರು. ಅವರ ಸ್ಥಾನಕ್ಕೆ ಬೇರೆ ಯಾರೊ ಬಂದರು. ಇದರಲ್ಲೇನು ಮಹಾ. ಇಂತಹ ಡಾಕ್ಟರರು, ನರ್ಸುಗಳು, ಮಕ್ಕಳನ್ನಾಡಿಸುವ ದಾದಿಗಳು ಬದಲಾಗುತ್ತಲೇ ಇರುತ್ತಾರೆ. ಚಿಂತೆಪಡುವ ವಿಷಯವೂ ಇದಲ್ಲ.

ಆದರೆ ಹಣ್ಣಿನಂಗಡಿ ಮುಚ್ಚಿದ್ದು, ಡಾಕ್ಟರರು ವರ್ಗವಾಗಿ ಹೋದದ್ದು ಆ ಬಡಸಂಸಾರಕ್ಕೆ ಇನ್ನೂ ದೊಡ್ಡ ಆಘಾತ. ಇಂತಹ ಬಿರುಗಾಳಿಯನ್ನೂ ಅಲಕ್ಷಿಸಿ ಧೈರ್ಯದಲ್ಲಿ ಮುಂದುವರಿಯಿತು ಸಂಸಾರದ ದೋಣಿ.

ಅದೊಂದು ದಿನ ಡಬ್ಬಿಯಲ್ಲಿ ಭದ್ರವಾಗಿ ಇರಿಸಿಕೊಂಡಿದ್ದ, ಕಷ್ಟಪಟ್ಟು ಆಸೆಯಿಂದ ಮಾಡಿಸಿದ ಒಂದು ಜೊತೆ ಚಿನ್ನದ ಬಳೆಗಳನ್ನು ಗಾಜಿನ ಬಳೆ ತುಂಬಿದ ಕೈಗಳು ಗಂಡಸಿನ ಹಸ್ತದಲ್ಲಿರಿಸಿದವು. ನಡುಗುವ ಹಸ್ತದ ಮೇಲೆ

ಬಿಸಿಬಿಸಿ ಕಣ್ಣೀರಿನ ತರ್ಪಣ. ಅಕ್ಕಸಾಲಿಗ ಹೊಳೆಯುವ ಚಿನ್ನದ ಬಳೆಗಳನ್ನು ತಿಕ್ಕಿ ತಿಕ್ಕಿ, ಮೂಗಿನ ಕನ್ನಡಕವನ್ನು ಏರಿಸಿ ಇಳಿಸಿ, ತಕ್ಕಡಿಯಲ್ಲಿ ಮತ್ತೆ ಮತ್ತೆ ತೂಗಿ, ಸಂದೂಕದಿಂದ ನೋಟುಗಳನ್ನು ಲೆಕ್ಕಮಾಡಿ ಇರಿಸಿದ ಗಂಡಸಿನ ಹಸ್ತದ ಮೇಲೆ.

ಇನ್ನೂ ಅಂತಹದೇ ಒಂದು ದಿನ ಬಂದಿತು. ಚಿನ್ನದಿಂದ ಕಟ್ಟಿದ ಕರಿಮಣಿ ಸರ ತಾಳಿಯನ್ನು ಕಳಚಿಟ್ಟು ಅಶ್ರುಬಿಂದುಗಳ ಸಂಗಡ ಹರಿನಾರಾಯಣನ ಹಸ್ತವನ್ನು ತುಂಬಿಕೊಂಡವು. ಅಕ್ಕಸಾಲಿಗನ ಅಟ್ಟಹಾಸದ ನಗೆಯಲ್ಲಿ ಆ ಸರ ಸಂದೂಕನ್ನು ಸೇರುತ್ತ ಇನ್ನಾವದೋ ಒಡವೆಗಳ ರೂಪಾಂತರವನ್ನು ಪಡೆಯಲು ಹೊರಟುಹೋಯಿತು. ರೂಪಾಯಿಯ ನೋಟುಗಳು ಬಂದವು ಸರದ ಬದಲಿಗೆ.

ಹೌದು, ಕಾಗದದ ನೋಟುಗಳು ಬಂದವು ಆ ಕೈಮೇಲೆ. ಆದರೆ ಭದ್ರವಾದ ಧನಲಕ್ಷ್ಮಿ ಹೇಳದೆ ಕೇಳದೆ ಹೊರಟೇ ಹೋದಳು. ಇಂತಹದೇ ಇನ್ನೊಂದು ದಿನ ಬಂದಿತು. ಆಗ ಬೇಡಬೇಡವೆಂದರೂ ಕಿವಿಯ ಓಲೆಗಳು ಉರುಳುತ್ತ ಉರುಳುತ್ತ ಅಕ್ಕಸಾಲಿಗನ ಸಂದೂಕವನ್ನು ತುಂಬಿ ತಮ್ಮ ಬದಲಿಗೆ ಕೆಲವು ರೂಪಾಯಿಗಳ ನೋಟುಗಳನ್ನು ಕಳುಹಿಸಿದವು ಆ ಮನೆಗೆ.

ಇನ್ನೊಬ್ಬರ ರೋದನ, ಕಷ್ಟದ ಅರಿವು ಆ ಅಕ್ಕಸಾಲಿಗನಿಗಾಗಲೀ, ಚಿನ್ನದ ಒಡವೆಗಳಿಗಾಗಲೀ ಇಲ್ಲ. ಇಂತಹ ಎಷ್ಟೋ ಬಡಕೈಗಳಿಂದ ಅಕ್ಕಸಾಲಿಗ ಚಿನ್ನವನ್ನು ತಗೆದುಕೊಂಡಿದ್ದಾನೆ. ಅವು ಅಕ್ಕಸಾಲಿಗನ ಕಾದ ಕುಲುಮೆಯಲ್ಲಿ ಉರುಳಿ ಕರಗಿ ಇನ್ನೊಂದು ಥಳಥಳಿಸುವ ಒಡವೆಯ ರೂಪಾಂತರವನ್ನು ಪಡೆದು ಬೇರೆ ಶ್ರೀಮಂತರ ಮನೆ ತುಂಬುತ್ತವೆ. ಆದರೆ ಈ ನೋವು-ಸಂಕಟ ಯಾರಿಗೆ ?

ನಿಧಾನವಾಗಿ ತನ್ನ ಸಹನೆಯನ್ನು ಕಳೆದುಕೊಳ್ಳತೊಡಗಿದಳು ಶಾಂಭವಿ. ಮನೆಯಲ್ಲಿ ಈಗ ಅವಳದೇ ಬೊಬ್ಬೆ, ಕೂಗಾಟ. ದಿನೇ ದಿನೇ ಕೃಶಳಾಗುತ್ತಿದ್ದಾಳೆ. ಈ ಮಧ್ಯೆ ಮೂರು ತಿಂಗಳ ಗರ್ಭಿಣಿ. ಈ ಬಾರಿ ದೇಹ-ಮನಸ್ಸು ಎರಡೂ ಹೊಸ ಮಗುವನ್ನು ಎದುರಿಸುವ ಸ್ಥಿತಿಯಲ್ಲಿರಲಿಲ್ಲ. ಅವಳ ಕ್ರೋಧ ತಿರುಗಿದ್ದು ಹರಿನಾರಾಯಣನ ಮೇಲೆ, ಅವನಿಂದಲೇ ತನಗೆ ಹೀಗಾದದ್ದು ಎನ್ನುತ್ತಿದ್ದಳು.

ಈಗೀಗ ಹರಿನಾರಾಯಣ ಹಾಡುವದೂ ಹೆಚ್ಚಿದೆ. ಎಲ್ಲೆಲ್ಲೋ ಹೋಗಿ ಅಷ್ಟಿಷ್ಟು ಸಂಪಾದಿಸಿದರೂ ಅವನು ಶಾಂಭವಿ ಕೂಗಾಡಿದಾಗಲೆಲ್ಲ ತನ್ಮಯತೆ

ಯಲ್ಲಿ ಹಾಡುತ್ತಲೇ ಇರುತ್ತಾನೆ. ಅವನ ಹಾಡು ಕೇಳಿದಾಕ್ಷಣ ಶಾಂಭವಿಯ ಕೋಪ ಕೆಲವೊಮ್ಮೆ ಭುಗಿಲ್ಲನೆ ಹೊತ್ತಿಕೊಳ್ಳುತ್ತದೆ. "ಕೈಯಲ್ಲೊಂದು ತಾಳ ತಂಬೂರಿ ಹಿಡ್ಕೊಂಡು ದಾಸಯ್ಯನ ಹಾಗೆ ಊರೂರು ತಿರುಗಿ—" ಎನ್ನುತ್ತಾಳೆ.

ಅವನ ಹಾಡು ಕೇಳಿದ ಕೆಲವರು ತಮ್ಮ ದೇವಸ್ಥಾನದ ಉತ್ಸವದಲ್ಲಿ ಹರಿಕೀರ್ತನೆ ಮಾಡಲು ಕೇಳಿಕೊಂಡರು. ಆದರೆ ಹರಿನಾರಾಯಣನಿಗೆ ಹರಿಕೀರ್ತನೆಯ ಗಂಧಗಾಳಿಯಿಲ್ಲ. 'ದೇವರ ನಾಮ ಬೇಕಿದ್ದರೆ ಹಾಡುತ್ತೇನೆ' ಎಂದ. ಅನಂತರ ಆಗಾಗ ಅಲ್ಲಿಲ್ಲಿ ಒಂದೊಂದು ದೇವಸ್ಥಾನಗಳಲ್ಲಿ ರಾತ್ರಿ ಹೊತ್ತು ಅವನ ಹಾಡು, ದೇವರ ನಾಮಗಳು ಕೇಳಲಾರಂಭಿಸಿದವು. ಆಸಕ್ತಿಯಿದ್ದವರ ದೊಡ್ಡ ಗುಂಪು ನೆರೆಯಲಾರಂಭಿಸಿತು ಅವನ ಸುತ್ತಲೂ. ಕೆಲವೇ ದಿನಗಳಲ್ಲಿ ಅವನು ಜನಪ್ರಿಯನಾದ. ಆದರೆ ಇವು ಸಂಪಾದನೆ ತರುವ ಮಾರ್ಗವಾಗಿರಲಿಲ್ಲ. ಸುಮ್ಮನೆ ಕಾಲಕ್ಷೇಪ !

ಇದೇ ಸಮಯದಲ್ಲಿ ಯಾರೋ ಒಂದು ದಿನ ಅಂದರು : "ನಿನ್ನೆ ರಾತ್ರಿ ಹರಿನಾರಾಯಣ ಹಾಡಿದ ದೇವರನಾಮಗಳನ್ನು ಬೆಂಗಳೂರಿನ ಆಕಾಶವಾಣಿಯಿಂದ ನಾವು ಕೇಳಿದೆವು."

ಶಾಂಭವಿಗೆ ನಂಬಿಕೆ ಬರಲಿಲ್ಲ. ಹಾಡಿದವರು ಹರಿನಾರಾಯಣ ಎನ್ನುವ ಹೆಸರಿನ ಬೇರೆ ಯಾರೋ ಇರಬೇಕು. ಆಗ ಫಕ್ಕನೆ ಜಯರಾಮನ ನೆನಪು. ಹೌದು, ಅವನು ಬಹಳ ಹಿಂದೆ ಹರಿನಾರಾಯಣನ ಹಾಡುಗಳನ್ನು ಧ್ವನಿ ಮುದ್ರಣ ಮಾಡಿಕೊಂಡು ಹೋಗಿದ್ದ. ಅವು ರೇಡಿಯೋದಲ್ಲಿ ಪ್ರಸಾರವಾಗಿರಬೇಕು. ಆದರೆ ತಮಗೆ ಕೇಳಲು ಆಗಲೇ ಇಲ್ಲ. ಹರಿನಾರಾಯಣನಿಗೆ ವಿಷಯ ತಿಳಿದಾಗ ಲಘುವಾಗಿ ನಕ್ಕುಬಿಟ್ಟ.

'ನಾನು ಎಂಬುದ ಬಿಟ್ಟು ಧ್ಯಾನಿಗಳೊಡನಾಡಿ.' ಎನ್ನುತ್ತ ತನ್ನ ಪಾಡಿಗೆ ತಾನು ಬೇರೆಲ್ಲೋ ಗಮನವಿರಿಸಿದ, ನಿರ್ಲಿಪ್ತಭಾವ.

28

ಈ ನಡುವೆ ಗುರುಪುರದಿಂದ ಬಂದಿತು ಗಂಗಾನ ಕಾಗದ. ತನಗೆ ಬರೆಯಲು ತಿಳಿಯದಿದ್ದರೂ ಬೇರೆಯವರಿಂದ ಬರೆಸಿದ್ದಳು.

ನಿನ್ನ ಕಾಗದ ಬಂದು ತಲುಪಿತು. ನೀನು ವಿಸ್ತಾರವಾಗಿ ಎಲ್ಲ ವಿಷಯ ಬರೆದುದನ್ನು ಓದಿ ವ್ಯಥೆಯಾಯಿತು. ಇಲ್ಲಿಂದ ನೀವು ಹೊರಟುಹೋದಮೇಲೆ ನಮಗೂ ನಿಮ್ಮ ಸಂಸಾರದ ಒಡನಾಟವಿಲ್ಲದೆ ಬೇಸರವಾಗಿದೆ. ನಮ್ಮಲ್ಲಿ ಶಾಸ್ತ್ರಿಗಳ ಗದ್ದೆ, ತೋಟಗಳನ್ನು ಯಾರೂ ಬಿಟ್ಟುಕೊಟ್ಟಿಲ್ಲ. ಶುಕ್ರ, ತ್ಯಾಂಪ ಇನ್ನೂ ಅನೇಕರೊಡನೆ ದಿನನಿತ್ಯವೂ ಭೂಮಿ ಬಿಟ್ಟುಕೊಡಿ ಎಂದು ಚರ್ಚೆಗಳು ಆಗುತ್ತಲೇ ಇವೆ. ಪರಿಹಾರಧನವನ್ನು ಏರಿಸುತ್ತ ಹೋದರೂ ಒಪ್ಪಿಲ್ಲ ಯಾರೂ. ನೀವೊಬ್ಬರು ಮಾತನಾಡದೆ ಸ್ಥಳ ಬಿಟ್ಟುಕೊಟ್ಟ ಧರ್ಮಾತ್ಮರು. ನೀವಿರುವ ಸ್ಥಳ ಈಗ ಗುರುತಿಸಲಾಗದಷ್ಟು ಬದಲಾಗಿದೆ. ಗದ್ದೆ ಇನ್ನೂ ವಿಶಾಲ ಮಾಡಿ ಎರಡು ಎಕರೆಯಷ್ಟು ಮಾಡಿಕೊಂಡಿದ್ದಾರೆ. ನಿಮ್ಮ ಮನೆ ಸ್ಥಳ ಅಳಿದು ಅಲ್ಲಿ ತಟ್ಟುಮಾಡಿ ತೆಂಗಿನ ಸಸಿಗಳ ಕೃಷಿ! ನೀವು ಉಪಯೋಗಿಸುವ ಭಾವಿ ಇತ್ತಲ್ಲ, ಅಲ್ಲಿ ಕೆರೆಯಾಗಿದೆ. ಪಂಪು ಇಟ್ಟು ನೊಗಾಸದ ಮೂರು ಬೆಳೆ ತೆಗೀತಾ ಇದ್ದಾರೆ ಶಾಸ್ತ್ರಿಗಳು. ನಿಮ್ಮ ಕೈಯಲ್ಲಿಯೂ ಕಾಸಿದ್ದರೆ ಇವೆಲ್ಲ ಬದಲಾವಣೆ ಮಾಡಿಕೊಳ್ಳಬಹುದಿತ್ತು. ಭಟ್ಕಳದಲ್ಲಿ ಹೊಲಿಗೆ ಸಂಪಾದನೆ ಚೆನ್ನಾಗಿಲ್ಲ ಎಂದಿದ್ದೆ. ಇಲ್ಲಿ ಈಗೀಗ ದರ್ಜಿಗಳ ಮಜೂರಿ ವಿಪರೀತ. ನೀನಿಲ್ಲೇ ಇದ್ದಿದ್ದರೆ ಮೊದಲಿನ ಎರಡರಷ್ಟು ಸಂಪಾದನೆ ಮಾಡಬಹುದಿತ್ತು. ನೀವು ಹೋದ ಸ್ಥಳಗಳಲ್ಲಿ ಜೀವನದ ಸ್ಥಿತಿ ಆಶಾದಾಯಕವಾಗಿಲ್ಲದಿದ್ದರೆ ಇಲ್ಲಿಗೇ ಬಂದುಬಿಡಿ. ಬೀಡಿ ಮತ್ತು ಹೊಲಿಗೆ ಸಂಪಾದನೆ ಬೇಕಾದಷ್ಟು ಸಿಕ್ಕೀತು.

ಇನ್ನೊಂದು ವಿಷಯ. ಕಳೆದ ತಿಂಗಳು ಜಯರಾಮ ಬಂದಿದ್ದರು. ಅವರಿಗಿನ್ನೂ ಮದುವೆ ಆಗಿಲ್ಲ. ಅವರ ಮದುವೆ ಊಟದ ಸಿಹಿಕನಸಿನಲ್ಲಿ ನಾವಿದ್ದೇವೆ. ಕಾಗದ ಬರಿ.

ಇಂತಿ, ನಿನ್ನ ಗೆಳತಿ,
ಗಂಗಾ

ಕಾಗದ ಓದುತ್ತ ಭಾರವಾದ ನಿಟ್ಟುಸಿರು ತೆಗೆದಳು ಶಾಂಭವಿ. ಗುರುಪುರದ ಆ ಸಣ್ಣ ಹಳ್ಳಿಯ ತುಂಬಾ ಓಡಾಡಿತು ಅವಳ ಮನಸ್ಸು. ತಮ್ಮ ಗದ್ದೆ ಅನ್ಯರ ಪಾಲಾಗಿಹೋಯಿತು. ಆ ಸಣ್ಣ ಮನೆ, ಅದರ ಸುತ್ತಲೂ ನೆಟ್ಟ ತೆಂಗಿನ ಸಸಿಗಳು, ಬಾಳೆ, ನಿಂಬೆ ಎಲ್ಲಾ ಎಲ್ಲಿ ಹೋಯಿತು? ಅಲ್ಲೀಗ ಮನೆಯಿಲ್ಲ. ತಾನು ಹಂಚು ಹೊದೆಯಿಸಬೇಕೆಂದು ಕನಸು ಕಾಣುತ್ತಿದ್ದ ಮನೆ ಹೊಸ ಮಣ್ಣಿನ ಕೆಂಪಿನಲ್ಲಿ ಮುಚ್ಚಿಹೋಗಿದೆ. ತಾವು ಪ್ರೀತಿಸುತ್ತಿದ್ದ ಒಂದು ಗಿಡ, ಬಳ್ಳಿ ಅಲ್ಲಿಲ್ಲ. ಈಗ ಯಾರೂ 'ಅಲ್ಲೊಂದು ಮುರುಕು ಮನೆಯಿತ್ತು, ಸಂಸಾರವಿತ್ತು' ಎನ್ನುವುದಿಲ್ಲ. ಒಂದು ದಿನ ನಾನೂ ಇಲ್ಲವಾಗುತ್ತೇನೆ. ಈ ಮಣ್ಣಿನಲ್ಲಿ ಅಥವಾ ಇನ್ನೆಲ್ಲಿ ನೀರಿನ ಋಣವಿದೆಯೋ ಅಲ್ಲಿ

ಇಲ್ಲವಾಗುತ್ತೇನೆ. ಆಮೇಲೆ ಶಾಂಭವಿ ಎನ್ನುವವಳು ಹತ್ತೊಂಬತ್ತು ನೂರಾ........ಇಸ್ವಿಯಲ್ಲಿ ಹುಟ್ಟಿದವಳು, ಈಗ ಇಲ್ಲವಾಗಿದ್ದಾಳೆ, ಎಂದು ಯಾರೂ ಹೇಳುವದಿಲ್ಲ, ಸ್ಮರಿಸುವದಿಲ್ಲ. ಕಾಲ ತನ್ನ ಪಾಡಿಗೆ ತಾನು ತಿರುಗುತ್ತಲೇ ಇರುತ್ತದೆ. ನನಗೇಕೆ ಈ ದುಃಖ, ಈ ವ್ಯಗ್ರಮನಸ್ಸು ? ಗುರುಪುರದ ಹಳ್ಳಿಗೆ ಹೋಗುವ ಉತ್ಕಟ ಇಚ್ಛೆ ನನಗೆ. ಯಾಕೆ ಮೋಹ ? ಆ ಹಳ್ಳಿಗೆ ನಾನು ಹೋಗಿ ನೆಲೆಸದಿದ್ದರೆ ಈ ಆಸೆ ಇರುತ್ತಿತ್ತೇ ? ಯಾವದೂ ನನ್ನದಲ್ಲ, ಯಾವದೂ ಸ್ಥಿರವಲ್ಲ. ನಶ್ವರದ ಬಾಳಿನಲ್ಲಿ ನಾವೆಲ್ಲರೂ ಆ ಭಗವಂತನ ನಾಟಕದ ಪಾತ್ರಧಾರಿಗಳು. ಅವನು ಕೊಡುವ ಪಾತ್ರಗಳನ್ನು ಗೊಣಗದೆ ಸ್ವೀಕರಿಸಬೇಕು. ಬೇಕು, ಬೇಡ ಎನ್ನುವ ಹಕ್ಕು ನಮಗಿಲ್ಲ. ಈ ಜಗತ್ತಿನಲ್ಲಿ ನನ್ನದು ಕೇವಲ ಅಭಿನಯ. ಸುಖಕ್ಕಾಗಿ ಹಾರೈಸುವ ಮನಸ್ಸು ಏನೇನೋ ಬಯಕೆಯ ಆಗರ. ಗುರುಪುರಕ್ಕೆ ಹಿಂದಿರುಗಿದರೆ ಜೀವನವುಟ್ಟ ಎಷ್ಟೋ ಸುಧಾರಿಸಬಹುದು. ಮರಳಿ ಅದೇ ನೆಲ, ಅದೇ ಊರು, ಅದೇ ಜೀವನ. ಇದಕ್ಕಿಂತ ಎಷ್ಟೋ ಮೇಲು !

ಅವಳು ಕಾಗದವನ್ನು ಮನೆಮಂದಿಗೆಲ್ಲ ಓದಿ ಹೇಳಿದಳು. ಹರಿನಾರಾಯಣ ಹುಬ್ಬುಗಂಟಿಕ್ಕಿದ, "ನೀನು ಏನು ಆಲೋಚನೆ ಮಾಡಿದಿ ?"

ಶಾಂಭವಿ ಕೆದರಿದ ತಲೆಗೂದಲನ್ನು ಬಿಗಿಯಾಗಿ ಮೇಲಕ್ಕೆತ್ತಿಕಟ್ಟಿ ವ್ಯಂಗ್ಯ ನಗು ನಕ್ಕಳು, "ಇರುವ ಗದ್ದೆಯನ್ನು ಪ್ರೀತಿಯಲ್ಲಿ ಬರೆದುಕೊಟ್ಟು ಕೈಗೆ ಒಂದು ಕರಟ ಕೋಲು ಕೊಟ್ಟದ್ದೀರಲ್ಲ, ಸಾಕು."

"ಹಾಗೋ, ಮತ್ತೆ ಗುರುಪುರಕ್ಕೆ ಹೋಗೋಣ ಎನ್ನುತ್ತೀಯಾ ?"

"ಅಲ್ಲಿ ಹೋಗಿ ಏನು ಮಾಡೋಣ ? ಎಲ್ಲಾ ನೆಲಸಮವಾಗಿದೆ. ನಮ್ಮ ಹೆಣ ಊಳುವದಕ್ಕೂ ಅಲ್ಲಿ ಸ್ಥಳವಿಲ್ಲ ! ನಮ್ಮ ಇಂದಿನ ಅಧೋಗತಿಗೆ ನೀವೇ ಕಾರಣರು. ನೀವೊಬ್ಬರು ಹೆಡ್ಡರು, ಹುಚ್ಚರು...."

ಹರಿನಾರಾಯಣನ ಹುಬ್ಬುಗಳು ಕಮಾನಿನ ಆಕಾರದಲ್ಲಿ ಮೇಲೇರಿಕೊಂಡವು, ಮುಷ್ಟಿ ಬಿಗಿದವು.

"ನಿಮ್ಮ ಹೆಡ್ಡು, ಹುಚ್ಚುತನದ ಲಾಭಪಡೆದು ಶಾಸ್ತ್ರಿಗಳು ನಮ್ಮನ್ನು ಬೀದಿಪಾಲು ಮಾಡಿದರು. ಇಲ್ಲಿ ಬೀದಿನಾಯಿಗಿಂತ ಕಡೆಯಾಗಿದ್ದೇವೆ. ಎಲ್ಲಾ ನಿಮ್ಮಿಂದಲೇ ! ಹುಚ್ಚು ಬುದ್ಧಿ....!"

ಅವನು ವಿಕಟವಾಗಿ ನಕ್ಕ. ಜೋರಾಗಿ ಅಟ್ಟಹಾಸಗೈದ. "ಯಾರಿಗೆ ಹುಚ್ಚು........ಯಾರಿಗೆ ?" ಅವನ ಮುಖ ವಿಕಾರವಾಯಿತು. ಎರಡೂ

ಕೈಗಳಿಂದ ಕಿವಿ ಮುಚ್ಚಿಕೊಂಡು ಮತ್ತೆ ನಗಲಾರಂಭಿಸಿದ.

"ಇನ್ನೂ ಚೆನ್ನಾಗಿ ನಕ್ಕುಬಿಡಿ. ನಮ್ಮ ಈ ದುರ್ಗತಿಗೆ ನೀವೇ ಕಾರಣರು" ಅವನ ನಗು ಮೀರಿಸುವಂತೆ ಶಾಂಭವಿ ಅರಚಿಕೊಂಡಳು. ಅವಳ ಧ್ವನಿ ರಸ್ತೆ ಯಾಚೆಗೂ ಕೇಳಿಸಿತು.

ಎಲ್ಲಿ ಆ ಹಿಂದಿನ ಕರುಣೆ, ಸಹನೆ, ತಾಳ್ಮೆ? ಎಲ್ಲಿ ಹಿಂದಿನ ಪ್ರೀತಿ, ಪ್ರೇಮ? ಹಿಂದೆ ಪಾಲಿಗೆ ಬಂದುದನ್ನೆಲ್ಲ ತೃಪ್ತಿಯಲ್ಲಿ ಸ್ವೀಕರಿಸಿದ ಶಾಂಭವಿ ಯಲ್ಲಿ ಈಗ ಉಳಿದದ್ದು ಕೇವಲ ಕ್ರೋಧಾಗ್ನಿ ಒಂದೇ! ಬೇರೆಯವರನ್ನು ಕ್ಷಮಿಸುವ ಬುದ್ಧಿ ಅವಳದು. ವಿಶಾಲ ಮನಸ್ಸು. ಹರಿನಾರಾಯಣನಿಗೆ ಒಂದು ದಿನವೂ ಎದುರು ವಾದಿಸಿದವಳಲ್ಲ. ಆದರೆ ಈ ದಿನ ಅವಳಿಗೇ ಅದೇನಾಯಿತೋ, ಅನೇಕ ದಿನಗಳಿಂದಲೂ ಅವನ ಮೇಲಿದ್ದ, ಒಳಗೊಳಗೇ ಭುಸುಗುಡುವ ಅಸಮಾಧಾನ ಒಮ್ಮೆಲೇ ಸ್ಫೋಟಗೊಂಡಿದೆ. ಇತ್ತೀಚೆಗೆ ಹರಿನಾರಾಯಣನಲ್ಲಿ ಕಾಣಿಸಿಕೊಂಡ ಬದಲಾವಣೆ 'ಹೆಡ್ಡ, ಹುಚ್ಚ ನೀನಲ್ಲ' ಎಂದು ಅನ್ನಿಸಿಕೊಂಡು ಎಲ್ಲರಂತೆ ವ್ಯವಹರಿಸಿ ಅವಳ ಪ್ರತಿಕಾರ್ಯ ದಲ್ಲಿಯೂ ಹೊಂದಿಕೊಳ್ಳುವಾಗ ಶಾಂಭವಿ ಅವನತ್ತ ಲಕ್ಷ್ಯಕೊಡಲಿಲ್ಲ. ತನ್ನದೇ ಆದ ಸಮಸ್ಯೆ ಆರ್ಥಿಕ ಚಿಂತನೆಯಲ್ಲಿ ಅವಳು ಮುಳುಗಿದಳೇ? ಯಾಕೆ ಈ ದಿನ ಅವಳ ಬಾಯಲ್ಲಿ ಈ ಮಾತು ಬಂದಿತು?

ಹರಿನಾರಾಯಣನ ನಗು ಹೆಚ್ಚುತ್ತಿದ್ದಂತೆ ಶಾಂಭವಿಯ ಕ್ರೋಧವೂ ಏರಿತು. ಹಿಂದಿನ ಹುಚ್ಚಿನಲ್ಲಿ ಅವನು ನಗುತ್ತಿರುವದು ತಿಳಿದರೂ ಅವನ ಮೇಲೆ ಮುನಿಸುಗೊಂಡ ಮನಸ್ಸು ಮೃದುವಾಗದೆ, ಕನಿಕರ ಚಿಮ್ಮದೆ ಸಮಾ ಧಾನ ಹೇಳಲು ಇಚ್ಛಿಸಲಿಲ್ಲ. ನಗೆಯ ತರಂಗಗಳು ಕಿವಿಯ ಮೇಲೆ ಅಪ್ಪಳಿಸು ತ್ತಿದ್ದಂತೆ ತಲೆ ಸಿಡಿದು ಹೋಳಾಗುತ್ತಿದೆಯೆಂದೆನಿಸಿ ಎರಡೂ ಕೈಗಳಿಂದ ಬಿಗಿ ಯಾಗಿ ಹಿಡಿದುಕೊಂಡಳು. ಆಮೇಲೆ ಅದೆ ಉಡುಪಿನಲ್ಲಿ ಅಂಗಳಕ್ಕಿಳಿದು ಸರಸರನೆ ನಡೆಯಲಾರಂಭಿಸಿದಳು. ಚೋಳೇಶ್ವರ ದೇವಸ್ಥಾನ ದಾಟಿ ಇನ್ನೂ ಮುಂದೆ ನಾರಾಯಣ ದೇವಸ್ಥಾನವನ್ನು ಹಾದು ಗೋಪೀನಾಥ ಹೊಳೆಯತ್ತ ಬಂದಳು. ಹರಿಯುವ ಹೊಳೆ ಆಕರ್ಷಿಸಿತು. ತನ್ನ ಬದುಕಿನ ಆಕರ್ಷಣೆಗಿಂತ ಮಿಗಿಲಾದ ಮೋಹ ಇದೋ ಇಲ್ಲಿದೆ. ಹೊಳೆಯ ಉದರ ಸೇರಿದರೆ ಆಮೇಲೆ ನಿಶ್ಚಿಂತೆ!

ಅವಳು ಸರಸರನೆ ಹೊಳೆಯ ಮೆಟ್ಟಲು ಇಳಿಯುತ್ತಿದ್ದಂತೆ ಯಾರೋ ಬಿಗಿಯಾಗಿ ಎರಡೂ ಭುಜಗಳನ್ನು ಹಿಡಿದು ನಿಲ್ಲಿಸಿದಂತಾಯಿತು. ಬೆಚ್ಚಿ

ಬಿದ್ದು ವೈಕೊಡಹಿಕೊಂಡು ನೋಡುತ್ತಾಳೆ, ಕೇಶವ!

"ನೀನ್ಯಾಕೆ ಬಂದೆ ನನ್ನ ಹಿಂದೆ? ಬಿಡು ನನ್ನನ್ನು."

"ಮೊದಲು ಮೇಲೆ ಬಾ. ಆಮೇಲೆ ಹೇಳ್ತೀನೆ—" ಗದರಿದ ಕೇಶವ ಅವಳನ್ನು ಎಳೆದುಕೊಂಡೇ ಮೇಲೆ ರಿದ, "ನೀನು ಮನೆಬಿಟ್ಟು ಓಡಿಬರುವ ಕ್ರಮ ನೋಡಿ ಅನುಮಾನ ಬಂದು ನಿನ್ನನ್ನು ಹಿಂಬಾಲಿಸಿದೆ. ನಾನು ಬಾರದೇ ಹೋಗಿದ್ದರೆ?"

"ಎಲ್ಲಾ ಜಂಜಾಟದಿಂದ ಮುಕ್ತಿ ಸಿಗ್ತಿತ್ತು!" ಮೇಲೇರಿ ಬಂದವಳು ಅಲ್ಲೇ ಕೆಳಗೆ ಕುಸಿದಳು.

"ನೀನೊಬ್ಬಳು ಮುಕ್ತಿ ಅರಸಿದರೆ ಸಾಕೇ? ನಮ್ಮನ್ನೆಲ್ಲರನ್ನೂ ನೀರಿನಲ್ಲಿ ಮುಳುಗಿಸಿ ಆಮೇಲೆ ನೀನು ಹಾರಿಕೊಳ್ಳಬೇಕಿತ್ತು. ಕರೆದಿದ್ದರೆ ನಾವೆಲ್ಲರೂ ಬರ್ತಾ ಇದ್ದೆವಲ್ಲ!"

ಶಾಂಭವಿಗೆ ನಾಚಿಕೆಯಾಗಿಹೋಯಿತು. ತನ್ನದೊಂದು ದುಡುಕು ಬುದ್ಧಿ. ಗಂಗಾನ ಕಾಗದ ನೋಡಿ ಮನಸ್ಸೆಲ್ಲ ವಿಕಾರವಾದದ್ದು ನಿಜ. ಹಾಗೆಂದು ಹೊಳೆಗೆ ಬಂದು ಹಾರಬೇಕು ಎಂದು ಯೋಚಿಸಿರಲಿಲ್ಲ. ತಾನೇಕೆ ಹೀಗೆ ಓಡಿಬಂದೆ? ಓ....ಹರಿನಾರಾಯಣ ನಗುತ್ತಾ ಇದ್ದ, ತನಗೆ ಕೇಳಲಾಗಲಿಲ್ಲ. ಹುಚ್ಚಿಯಂತೆ ತಾನು ಕೂಗಾಡಿಬಿಟ್ಟೆ. ಅವರು ಈಗ ನಗು ನಿಲ್ಲಿಸಿದರೇ? ಅಥವಾ ಹಾಗೇ ಮೂರ್ಛೆತಪ್ಪಿದರೆ?

ಧಿಗ್ಗನೆ ಎದ್ದಳು, "ಬಾ....ಬಾ....ನನ್ನದೊಂದು ದುಡುಕುಬುದ್ಧಿ...." ಎನ್ನುತ್ತ ಬಿರಬಿರನೆ ಹೆಜ್ಜೆಹಾಕಿದಳು ಮನೆಯತ್ತ. ಹಿಂದಿನಿಂದ ಹೆಜ್ಜೆ ಹಾಕಿದ ಕೇಶವ ಏನೇನೋ ಹೇಳುತ್ತಿದ್ದರೂ ಅವಳಿಗೆ ಕೇಳಿಸಲೇ ಇಲ್ಲ.

ಮನೆಗೆ ಬಂದರೆ ಯಾರ ನಗೆಯ ಧ್ವನಿಯೂ ಅವಳನ್ನು ಎದುರುಗೊಳ್ಳಲಿಲ್ಲ. ಹರಿನಾರಾಯಣ ಗೋಡೆಗೊರಗಿ ಕುಳಿತಿದ್ದಾನೆ ವಿಗ್ರಹದಂತೆ. ಕಣ್ಣುಗಳಿಂದ ಇಳಿಯುತ್ತಿದೆ ನೀರು. ಬದಿಯಲ್ಲಿ ಕುಳಿತ ವೇದಮ್ಮ 'ನೀರು ಕುಡಿ' ಎನ್ನುತ್ತಿದ್ದಾಳೆ. ಸೊಸೆಯ ನೆರಳನ್ನು ನೋಡಿದಾಕ್ಷಣ ತಾನು ಕುಳಿತಲ್ಲಿಂದ ಎದ್ದುಬಿಟ್ಟಳು,

"ಇವನಿಗೇನಾದರೂ ಸಮಾಧಾನ ಹೇಳು."

ಸಮಾಧಾನ ಹೇಳುವ ಶಕ್ತಿ ಶಾಂಭವಿಯಲ್ಲಿರಲಿಲ್ಲ. ರಾತ್ರಿ ಮಕ್ಕಳಿಬ್ಬರನ್ನು ಮಲಗಿಸಿ ತಾನು ಮಲಗುವ ಸಿದ್ಧತೆಯಲ್ಲಿರುವಾಗ ಹರಿನಾರಾಯಣ ಮೆಲ್ಲನೆ ಕರೆದ. ಇಷ್ಟುಹೊತ್ತು ಅವಳೊಡನೆ ಮಾತನಾಡಲು ಕಾತರಿಸು

ತ್ತಿತ್ತು ಅವನ ಜೀವ. ಆದರೆ ಶಾಂಭವಿಗೆ ಮಾತೂ ಬೇಡವಾಗಿತ್ತು ಈ ಹೊತ್ತಿನಲ್ಲಿ.

"ನನ್ನನ್ನು ನೋಡಿದರೆ ಈಗ ಯಾರಿಗೂ ಇಷ್ಟವಾಗುವದಿಲ್ಲ ಅಲ್ಲವೇ?" ಸಣ್ಣ ದೀಪದ ಬೆಳಕಿನ ನೆರಳನ್ನು ಗೋಡೆಯ ಮೇಲೆ ನೋಡುತ್ತ ಕೇಳಿದ ಅವನು, "ನನ್ನಂತಹ ಹುಚ್ಚನನ್ನು ಮದುವೆಯಾಗಿ ನೀನು ಯಾವ ಸುಖವನ್ನೂ ಅನುಭವಿಸಲಿಲ್ಲ. ಎಷ್ಟೊಂದು ಕಷ್ಟ ಕೊಟ್ಟೆ ನಾನು!"

ಈಗಲೂ ಉತ್ತರಿಸಲಿಲ್ಲ ಅವಳು.

"ಅಪ್ಪ ಬದುಕಿದ್ದಾಗ ನನ್ನ ನೆರಳು ನೋಡಿದರೇ ಸಿಡಿದೇಳುತ್ತಿದ್ದ. ಅಮ್ಮ ಇಡೀ ದಿನವೆಲ್ಲ ನೀನು ಹುಚ್ಚ ಹುಚ್ಚ ಎನ್ನುತ್ತಲೇ ಬಂದಿದ್ದಾಳೆ. ಪ್ರೀತಿಯಿಂದ ಒಂದು ದಿನವೂ ನನ್ನನ್ನು ಮಾತನಾಡಿಸಿದವಳಲ್ಲ. ತಮ್ಮಂದಿರಿಗೆ ನನ್ನನ್ನು ನೋಡಿದರೆ ತಮಾಷೆ. ಗುರುಪುರದಲ್ಲಿದ್ದಾಗ ಮನೆ ಸುತ್ತಮುತ್ತ, ಹೊರಗೆ ಎಲ್ಲಿ ಹೋದರೂ 'ಅಗೋ ಹೆಡ್ಡ ಭೂಮ ಬಂದ, ಹುಚ್ಚ ಬಂದ' ಎಂದು ಹಾಸ್ಯಮಾಡ್ತಾ ಇದ್ದರಲ್ಲ. ನನಗೆಲ್ಲ ಅರ್ಥವಾಗ್ತಿತ್ತು. ಆದರೆ...."

ಶಾಂಭವಿ ತಾನು ಕುಳಿತ ಸ್ಥಳದಿಂದ ಅಲುಗಾಡಲಿಲ್ಲ. ಗೋಡೆಗೊರಗಿ ಕುಳಿತ ಅವನು ಲಕ್ಷ್ಮಣನ ಮೈಮೇಲೆ ಕೈಯಾಡಿಸುತ್ತ ನುಡಿದ, "ನನ್ನ ಜೊತೆ ಒಬ್ಬಳೇ ಒಬ್ಬಳು ಇದ್ದಳು. ಅವಳು ಎಲ್ಲರಂತೆ ನನ್ನನ್ನು ಅಪ್ಪಿ ತಪ್ಪಿಯೂ ಹಾಸ್ಯಮಾಡಿರಲಿಲ್ಲ. ನೋಡಿ ನಕ್ಕಿರಲಿಲ್ಲ. ಹುಚ್ಚ ಎನ್ನಲಿಲ್ಲ. ಎಷ್ಟು ಪ್ರೀತಿ, ಸುಖ, ಸಂತೋಷ ಎಲ್ಲಾ....ಎಲ್ಲಾ ಕೊಟ್ಟಳು. ಆದರೆ, ಇವತ್ತು...."

ಅವನು ಮಾತು ಮುಗಿಸುವ ಮೊದಲೇ ಪಕ್ಕನೆ ಅವನ ಬಳಿ ಬಂದು ಬಾಯನ್ನು ಮುಚ್ಚಿದಳು ಶಾಂಭವಿ. ಅವನ ನೀರು ತುಂಬಿದ ದೃಷ್ಟಿ ಎದುರಿಸಿದವು ಅವಳ ಓರೆಗಣ್ಣುಗಳನ್ನು.

"ಈಗ ಅವಳೂ ನನ್ನಿಂದ ದೂರ ಸರಿಯುತ್ತಿದ್ದಾಳೆ. 'ನೀವೊಬ್ಬರು ಹುಚ್ಚ, ಹೆಡ್ಡ' ಎಂದು ಅವಳ ಬಾಯಿಂದಲೇ ಕೇಳಬೇಕಾಯ್ತು. ನಿಜ ಶಾಂಭವಿ, ಗದ್ದೆ ಕೈಬಿಟ್ಟುಹೋದಾಗ ನಾನು ವ್ಯಥೆಪಡಲಿಲ್ಲ, ಮಾಧವ ಹಣ ಕದ್ದು ಒಯ್ದಾಗ ದುಃಖಿಸಲಿಲ್ಲ, ನಿನ್ನ ಚಿನ್ನಾಭರಣ ಮಾರುವಾಗಲೂ ನನಗೇನೂ ಅನ್ನಿಸಲಿಲ್ಲ. ನೀನೊಬ್ಬಳು....ನೀನು...."

ಅವನ ನಾಲಿಗೆ ತಡವರಿಸಿತು. ಅವಳ ಭುಜದ ಮೇಲೆ ಕೈಯಿರಿಸಿ ಗದ್ಗದಿತನಾದ, "ನೀನು ಒಬ್ಬಳು ನನ್ನ ಜೊತೆಯಲ್ಲಿದ್ದರೆ ಸಾಕು. ನೂರ್ಮಡಿ

ಉತ್ಸಾಹದಲ್ಲಿ ಕೆಲಸ ಮಾಡುವ ಧೈರ್ಯ, ಹುಮ್ಮಸ್ಸು ಇತ್ತು. ಆದರೀಗ ಆ ಧೈರ್ಯ, ಉತ್ಸಾಹ ಹೊರಟು ಹೋಗ್ತಾ ಇದೆ. ನಿನಗೆ ನಾನು ಬೇಡ, ಅಲ್ಲವೇ ?"

ಶಾಂಭವಿ ಬೆರಗಾಗಿ ನೋಡಿದಳು, ಇವನೇಕೆ ಹೀಗೆ ಹೇಳುತ್ತಿದ್ದಾನೆ ?

"ನನ್ನನ್ನು ಯಾರು ಬೇಕಿದ್ದರೂ ದೂಷಿಸಲಿ, ತೆಗಳಲಿ, ನನಗೆ ಒಂದಿಷ್ಟೂ ಬೇಸರವಿಲ್ಲ. ನೀನೂ ಎಲ್ಲರಂತೆ ನನಗೇ ತಿರುಗಿಬಿದ್ದರೆ ಆಮೇಲೆ ಗೋಪೀನಾಥ ಹೊಳೆಯೇ ನನಗೆ ಗತಿ !"

ಥರಥರನೆ ಕಂಪಿಸಿದಳು. ತಾನೊಬ್ಬಳೇ ನೊಂದವಳಲ್ಲ, ತನ್ನೊಂದಿಗೆ ಇವನೂ ಇದ್ದಾನೆ ! ತನ್ನ ಕಷ್ಟನಷ್ಟಗಳನ್ನು ಹಂಚಿ ಉಣ್ಣಲು ಇವನೂ ಜೊತೆಗೂಡಿ ಇದ್ದಾನೆ. ಅವಳಿಗೆ ತಾನು ಮೊದಲ ಗರ್ಭಿಣಿಯಾದಾಗ ನಗುಮುಖದಲ್ಲಿ ಬೀಳ್ಕೊಡುತ್ತ ಅವನು ಯಾವ ಮಾತನ್ನೂ ಆಡದೆ ನಿಂತದ್ದು ನೆನಪಿಗೆ ಬಂದಿತು. ಅನಂತರ ಕಳೆದ ಯುಗಾದಿಯ ಎರಡು ದಿನಗಳ ಮೊದಲು ತಾನು ಕೋಪಿಸಿಕೊಂಡು ರಾತ್ರಿ ತಡವಾಗಿ ಮಲಗಲು ಬಂದಾಗ ಅವನು ಸಮಾಧಾನ ಹೇಳುತ್ತ, 'ನನ್ನನ್ನು ಆಚೆಗೆ ತೆಗೆದು ಬಿಸಾಡಬೇಡ, ಮಹರಾಯ್ತಿ. ನಿನಗೆ ಯಾರು ಬೇಡವಾದರೂ ನನಗೆ ನೀನು ಬೇಕು !' ಎನ್ನಲಿಲ್ಲವೇ ? ತನ್ನ ರೂಪದ ವಿಷಯದಲ್ಲಿ ಜನ ನೂರು ಆಡಿಕೊಂಡರೂ ಕೈಹಿಡಿದವನಿಂದ, ಯಾರಿಗೆ ತನ್ನ ದೇಹವನ್ನು ಒಪ್ಪಿಸಬೇಕಿತ್ತೋ ಅವನಿಂದ ಒಂದೇ ಒಂದು ಟೀಕೆ ಬರಲಿಲ್ಲ. ಹಾಸ್ಯ ಮಾಡಲಿಲ್ಲ. ತನ್ನನ್ನು ನೋಡಿ ಹಾಗೆ ಹೀಗೆ ಎಂದೂ ನಕ್ಕವನಲ್ಲ. ಇವನನ್ನು ತಾನು ಅರ್ಥಮಾಡಿಕೊಳ್ಳಲಿಲ್ಲವೆ ?

ಅವನ ಭುಜದ ಮೇಲೆ ತಲೆಯಿಂಸಿ ಮೂಕಳಂತೆ ಕುಳಿತುಬಿಟ್ಟಳು. ಹರಿನಾರಾಯಣನಿಗೆ ಇಷ್ಟೇ ಸಾಕಾಯಿತು ಸಮಾಧಾನ. ಮಧುರವಾಗಿ ಹಾಡಲಾರಂಭಿಸಿದ :

"ಇಂದು ಎನಗೆ ಗೋವಿಂದ.. ತೋರೋ ನಿನ್ನ ಪಾದಾರವಿಂದಾ....!"

29

ಇನ್ನೊಂದು ತಿಂಗಳು ಕಳೆಯಿತು. ದಿನೇ ದಿನೇ ಮನೆಯ ಪರಿಸ್ಥಿತಿ ಶೋಚನೀಯವಾಯಿತು. ಕಾಲುತುಂಬಾ ಕಜ್ಜಿಗಳಾಗಿ ವೇದಮ್ಮನಿಗೆ ನಡೆಯುವದೂ ದುಸ್ತರವಾಗಿ ಮಲಗಿದಲ್ಲಿಯೇ ಔಷಧಿ ಮಾಡಲೇಬೇಕಾದ್ದು ಅನಿವಾರ್ಯ. ಖರ್ಚುಗಳ ಪಟ್ಟಿ ಏರಿದವು, ಸಂಪಾದನೆ ಸಾಲದು. ಸುತ್ತಲೂ ಸಾಲಗಳ ಮೊಳಕೆಯೆದ್ದವು. ಇಂದು ಇಲ್ಲಿ, ನಾಳೆ ಅಲ್ಲಿ. ಎರಡು ತಿಂಗಳ ಬಾಡಿಗೆ ಕಟ್ಟುವದಕ್ಕಾಗದೆಹೋಯಿತು. 'ಬೇರೆ ಮನೆ ನೋಡಿಕೊಳ್ಳಿ' ಎಂದರು ಸುಂದರೀಬಾಯಿ.

ನೆಲೆಯೂರಿದ ಊರಿನಿಂದ ತಳ ಕೀಳುವ ಆಲೋಚನೆ ! ಶಾಂಭವಿ ಯಾವ ಆಲೋಚನೆ ಮಾಡದವಳಂತೆ ತಟಸ್ಥಳಾಗಿದ್ದಳು. ಮನೆಯಲ್ಲಿ ಅಕ್ಕಿ ಇದ್ದರೆ ಮಾಡಿ ಬಡಿಸುತ್ತಾಳೆ, ಇಲ್ಲವಾದರೆ ತಣ್ಣಗೆ ಮಲಗುತ್ತಾಳೆ. ಕೊನೆಗೆ ಒಂದು ದಿನ ಹರಿನಾರಾಯಣನೇ ಹೇಳಿದ :

"ಈಗ ಉಳಿದಿರುವದು ಒಂದೇ ದಾರಿ. ಈ ಊರನ್ನು ಬಿಟ್ಟು ದೊಡ್ಡ ಪಟ್ಟಣಕ್ಕೆ ಹೋಗಿಬಿಡೋಣ. ಯಾರೋ ಅಂದರು ಬೆಂಗಳೂರಿಗೆ ಹೋದರೆ ಎಲ್ಲರಿಗೂ ಏನಾದರೊಂದು ಕೆಲಸ ಸಿಕ್ಕಿಯೇ ಸಿಗುತ್ತದೆಯಂತೆ."

"ನಿಮಗಿಷ್ಟಬಂದಂತೆ ಮಾಡಿ."

"ಕೈಯಲ್ಲಿ ಸ್ವಲ್ಪ ಹಣ ಬೇಡವೇ ? ನಿನ್ನ ಸೀರೆ ಹರಿದು ಚೂರಾಗಿ ನೂರು ತೇಪೆ ಹಾಕಿದ್ದಿ. ಅಮ್ಮ ಶಾರದೆಯರಿಗೂ ಸೀರೆಗಳಿಲ್ಲ. ಮಕ್ಕಳ ಸ್ಥಿತಿ ಹೇಗೋ ಆಗುತ್ತದೆ ಅನ್ನು. ಆಮೇಲೆ ಬಸ್ಸಿಗೆ ಹಣ ಬೇಕು."

"ಹಾಗೆ ಹೇಳಿ." ನೆಲದ ಮೇಲೆ ಗೆರೆಯೆಳೆಯುತ್ತ ಅವಳಂದಳು, "ಗುರುಪುರದಿಂದ ಹೊರಟಾಗ ನಮ್ಮ ಕೈಯಲ್ಲಿ ಹಣ ಇತ್ತು. ಲೋಕವನ್ನೇ ನಾವು ಜಯಿಸಬಲ್ಲೆವು ಎಂದುಕೊಂಡಿದ್ದೆವು. ಆದರೆ ಇಲ್ಲಿಗೆ ಬಂದು ನಾವೇನು ಲೋಕ ಜಯಿಸಲಿಲ್ಲ. ಇದ್ದುದನ್ನು ಕಳೆದುಕೊಂಡು ಸೋತೆವು." ಅವಳು ಸುಮ್ಮನೆ ನಗಲಾರಂಭಿಸಿದಳು. "ಎಲ್ಲಾ ಹಣವನ್ನೂ ಮಾಧವ ತಗೊಂಡುಹೋದ. ಚಿನ್ನಾಭರಣಗಳಿಲ್ಲ. ಒಡಕು ಹಿತ್ತಾಳೆಗೂ ಗತಿಯಿಲ್ಲವಾಯ್ತು. ಈಗೀಗ ನಾವೂ ಅರೆಹೊಟ್ಟೆ ಉಂಡು ಹೂವಿಗಿಂತ ಹಗುರವಾಗಿದ್ದೇವೆ. ಆದರೂ ಬಸ್‌ನಲ್ಲಿ ಇಡೀ ಟಿಕೆಟ್ ಕೊಡಲೇಬೇಕು !"

"ಕೊಡೋಣ. ನನಗೊಂದು ಯೋಚ್ನೆ ಬರ್‍ತಾ ಇದೆ. ನಿನ್ನ ಹೊಲಿಗೆಯಂತ್ರ

ಇದೆಯಲ್ಲ, ಅದನ್ನು ಮಾರಿಬಿಡೋಣ. ಐನೂರಕ್ಕೆ ಗಿರಾಕಿ ಸಿಗಬಹುದು." ಚಟ್ಟನೆ ಎದ್ದು ಕುಳಿತ ಶಾಂಭವಿ ನಾಗಿಣಿಯಂತೆ ಫೂತ್ಕರಿಸಿದಳು. "ಎಲ್ಲಾ ಮಾರಿ ತಿಂದು ತೇಗಿಯಾಯ್ತು. ಇನ್ನು ಉಳಿದದ್ದು ಅದೊಂದು. ಆಮೇಲೆ ಕೈಯಲ್ಲಿ ಒಂದು ಜೋಲು, ಪಾತ್ರೆ ಹಿಡ್ಕೊಂಡು ಭಿಕ್ಷೆ ಎತ್ತಬೇಕು ಅನ್ತೀರಾ?"

"ಈಗೇನು ಭಿಕ್ಷೆ ಎತ್ತುತ್ತಾ ಇಲ್ಲ ಅಂದುಕೊಂಡೆಯೇನು? ವಾರಕ್ಕೆ ಎರಡು ಬಾರಿಯಾದರೂ ಕೇಶವ ಎಲ್ಲೆಲ್ಲೋ ಹೋಗಿ ಭಿಕ್ಷೆ ತರ್ತಾನೆ."

ಒಂದು ಕ್ಷಣ ಕಸಿವಿಸಿ. ತನ್ನ ಪ್ರೀತಿಯ ಮೈದುನ ಭಿಕ್ಷೆ ಎತ್ತುತ್ತಾನೆಯೆ? ಯಾಕೆ ಬಂದಿತು ಇಂತಹ ಪರಿಸ್ಥಿತಿ? ಅವಳು ತಲೆಗೂದಲನ್ನು ಹಿಂದಕ್ಕೆ ತಳ್ಳುತ್ತ ಸಿಡುಕಿದಳು, ಮಾತು ಸ್ಪಷ್ಟವಾಗಿ ಹೊರಡಲಿಲ್ಲ ಬಾಯಿಂದ.

"ನನ್ನ ಮಾತು ಕೇಳು, ಈಗ ನಮಗಿರುವದು ಅದೊಂದೇ ವಸ್ತು. ಒಳ್ಳೆಯ ಸ್ಥಿತಿ ಬಂದಾಗ ಬೇರೆ ತೆಗೆಯೋಣ."

"ಇನ್ನು ತೆಗೆಯುವದೇ? ಹೋ! ದರಿದ್ರಲಕ್ಷ್ಮಿಗೆ ನಮ್ಮನ್ನು ಕಂಡರೆ ಬಹಳ ಪ್ರೀತಿ. ಅದಕ್ಕೇ ಯಾರನ್ನೂ ಬೇಡ ಅಂದು ನಮ್ಮ ಹತ್ತಿರವೇ ಬರ್ತಾಳೆ."

"ಹಾಗಾದರೆ ಏನು ಮಾಡೋಣ?"

"ನಾಳೆ ಒಂದಾಣೆ ವಿಷ ತಂದುಬಿಡಿ, ಗಂಜಿ ಜೊತೆ ಬೆರೆಸಿ ಎಲ್ಲರೂ ಉಂಡು ಬಿಡೋಣ!"

ಹರಿನಾರಾಯಣ ಅವಳ ಕೈಯನ್ನು ಬಿಗಿಯಾಗಿ ಹಿಡಿದುಕೊಂಡ. "ಸಾವಿನ ಮಾತು ಆಡಬಾರದು ಅಂತ ಎಷ್ಟು ಬಾರಿ ಹೇಳಿದೆ ನಾನು. ಹೆಚ್ಚು ಹಟ ಮಾಡ್ಬೇಡ. ಮರ್ಯಾದೆಯಿಂದ ನಾವು ಊರನ್ನು ಬಿಟ್ಟುಬಿಡೋಣ."

"ಮರ್ಯಾದೆ ಎಲ್ಲಿದೆ ನಮಗೆ? ಅದೂ ಎಲ್ಲ ಸಾಮಾನುಗಳಂತೆ ಬಹಳ ಮೊದಲೇ ಮಾರಾಟವಾಗಿಹೋಗಿದೆ! ನೆರೆಹೊರೆಯಲ್ಲೆಲ್ಲ ಬೇಕಾದಷ್ಟು ಸಾಲ ಮಾಡಿದ್ದೇನೆ. ಈಗ ಅವರ ಋಣಭಾರದಿಂದ ಹೇಗೆ ಮುಕ್ತರಾಗ ಬೇಕು?"

"ಹೇಳಿದೆನಲ್ಲ, ಉಳಿದಿರುವ ದಾರಿ ಹೊಲಿಗೆಯಂತ್ರದ ಮಾರಾಟ."

"ಅದೆಂದಿಗೂ ಸಾಧ್ಯವಿಲ್ಲ." ಶಾಂಭವಿ ವಿಕಾರಸ್ವರದಲ್ಲಿ ಧ್ವನಿ ತೆಗೆದಳು, "ದಾರಿಯ ತೋರೋ ಮುಕುಂದಾ, ನಾರಾಯಣ ಹರಿ ಗೋವಿಂದಾ! ಎನ್ನಿ. ನೀವು ನಂಬಿದ ದೇವರು ಎಲ್ಲಿಯಾದರೂ ದಾರಿ ತೋರಿಸಬಹುದು."

ನಾಲ್ಕು ದಿನಗಳನಂತರ ಒಬ್ಬಾತ ಮನೆಗೆ ಬಂದು ಹೊಲಿಗೆಯಂತ್ರ

ವನ್ನು ತಜ್ಞನಂತೆ ಪರೀಕ್ಷಿಸಿ ನಾನ್ನೂರ ಐವತ್ತು ರೂಪಾಯಿಗೆ ಬೇಕು ಎಂದ. ಇನ್ನೂ ಹೊಸದರಂತೆ ಕಾಣುವ ಯಂತ್ರಕ್ಕೆ ಕೇವಲ ನಾನ್ನೂರ ಐವತ್ತು ! ಐನೂರಕ್ಕೆ ಪೈ ಕಡಿಮೆ ಕೊಡಲಾರೆ ಎಂದ ಹರಿನಾರಾಯಣ ನಿರ್ದಾಕ್ಷಿಣ್ಯ ದಲ್ಲಿ. ನಾಳೆ ಬರುತ್ತೇನೆಂದು ತಿಳಿಸಿದ ಬಂದವನು.

ಹರಿದ ಸೀರೆಗೆ ಇನ್ನೊಂದು ತೇಪೆ ಹಚ್ಚುತ್ತ ಕುಳಿತ ಶಾಂಭವಿ ಈ ಮಾತು ಕಥೆಯಲ್ಲಿ ಆಸಕ್ತಿವಹಿಸಲಿಲ್ಲ. ಹರಿನಾರಾಯಣನನ್ನೇ ದುರುಗುಟ್ಟಿ ನೋಡಿ ದಳು.

ಮರುದಿನ ಹೊಲಿಗೆಯಂತ್ರನನ್ನು ತೆಗೆದುಕೊಂಡು ಹೋಗಲು ಇಬ್ಬರು ಆಳುಗಳ ಜೊತೆಯಲ್ಲಿ ಬಂದ ನಿನ್ನೆ ನೋಡಿಹೋದವನು. ರೂಪಾಯಿಗಳನ್ನು ಎಣಿಸಿ ಇಟ್ಟ ಹರಿನಾರಾಯಣನ ಕೈಗಳ ಮೇಲೆ. ಹಣ ಎಣಿಸಿದ, ನಾನ್ನೂರ ಐವತ್ತೇ ಇವೆ.

"ಇನ್ನೂ ಐವತ್ತು ಆಗಬೇಕು. ಇಂತಹ ಯಂತ್ರ ನಿಮಗೆಲ್ಲೂ ಸಿಗದು."

ಕಡಿಮೆಗೆ ಸಿಕ್ಕಿದರೆ ಲಾಭ ಹೊಡೆಯುವ ಎಂದುಕೊಂಡಿದ್ದ ಗಿರಾಕಿ ಮಾತನಾಡದೆ ಐವತ್ತನ್ನು ಕೊಟ್ಟು ತನ್ನ ಆಳುಗಳನ್ನು ಕರೆದ. ಯಂತ್ರದ ಮೇಲ್ಭಾಗವನ್ನು ಬೇರ್ಪಡಿಸಿ ಬೇರೆಬೇರೆಯಾಗಿ ಆಳುಗಳ ತಲೆಯ ಮೇಲೆ ಹೊರಿಸಿ "ಬರ್ತೇವೆ ಸ್ವಾಮೀ" ಎಂದಂದು ಹೊರಟುಹೋದ.

ಅರಿಯದೆ ಹರಿನಾರಾಯಣನ ಕಣ್ಣುಗಳೂ ತುಂಬಿಬಂದವು. ಯಾವದೇ ಗಲಾಟೆಯಿಲ್ಲದೆ ಶಾಂಭವಿ ಹೊಲಿಗೆಯಂತ್ರವನ್ನು ಕಳುಹಿಸಿದಳಲ್ಲ ಎಂದು ನೆನಪಾಗಿ ಅಚ್ಚರಿಗೊಂಡ. "ಎಲ್ಲಿದ್ದೀ ?" ಕರೆದ ಅವಳನ್ನು. ಅಲ್ಲಿಯೇ ಇದ್ದ ಶಾರದೆ ಒಳಗೆ ಕೈತೋರಿಸಿದಳು. ನೋಟುಗಳನ್ನು ಸಂಪಡಿಸಿಕೊಳ್ಳುತ್ತ ಅಡಿಗೆ ಕೋಣೆಗೆ ಕಾಲಿರಿಸಿದ, "ಇಕೋ, ಅವನು ಹಣ ಕೊಟ್ಟುಹೋದ."

ಮಾತು ಪೂರ್ಣ ಮುಗಿಸುವ ಮೊದಲೇ ಗಕ್ಕನೆ ನಿಂತುಬಿಟ್ಟ. ತಲೆಗೂದ ಲನ್ನು ಕೆದರಿಹಾಕಿಕೊಂಡು ಶಾಂಭವಿ ಒಂದೇ ಹಾಗೆ ದೇವರ ಫೋಟೋ ಗಳನ್ನು ದಿಟ್ಟಿಸುತ್ತಿದ್ದಾಳೆ. ರೋಷ ಹೆಡೆಯೆತ್ತಿನಿಂತಿದೆ ಮುಖದಲ್ಲಿ. ಹೊಲಿಗೆ ಯಂತ್ರ ಹೋದುದು ಅವಳಿಗೆ ತಿಳಿಯಲೇ ಇಲ್ಲವೇ ? ತಿಳಿದಿತ್ತು ! ಹರಿ ನಾರಾಯಣನ ಕೈಗಳಲ್ಲಿ ತುಂಬಿದ್ದ ನೋಟುಗಳ ಕಟ್ಟನ್ನು ನೋಡಿದಳು ನಿರ್ವಿಕಾರಭಾವದಲ್ಲಿ.

"ನಿಮ್ಮ ಸಹಾಯಕ್ಕೆ ಯಾವ ದೇವರೂ ಬರಲಿಲ್ಲವೇ ? ಹೋಗಿ, ಶಾರದೆ ಯನ್ನು ಕರೆಯಿರಿ." ಅವಳಲ್ಲಿ ಉನ್ಮತ್ತತೆ ಆವರಿಸಿತ್ತು. "ಶಾರದೆಗೆ ಹೇಳಿ,

ಹೊಸ್ತಿಲಿಗೆ ರಂಗವಲ್ಲಿ ಬರೆಯಲಿ. ಇನ್ಮೇಲೆ ನಾವು ದಾರಿದ್ರ್ಯಲಕ್ಷ್ಮಿಯನ್ನು ಸ್ವಾಗತಿಸಬೇಕು."

ಕೆದರಿದ ತಲೆಗೂದಲನ್ನು ಹಿಂದಕ್ಕೆ ಸರಿಸುತ್ತ ಆವೇಶ ಬಂದವಳಂತೆ ಎದ್ದಳು, "ಇಷ್ಟು ವರ್ಷಗಳಿಂದಲೂ ನಂಬಿಕೊಂಡು ಬಂದಿದ್ದ, ಇಲ್ಲಿ ಕುಳಿತು ನಮ್ಮಿಂದ ಪೂಜೆ ತೆಗೆದುಕೊಳ್ಳುವ ದೇವರು ನಮಗೇನು ಕೊಟ್ಟ? ಬಡವರಿಗೆ ದೇವರು ಒಬ್ಬನೇ ಆಧಾರ ಎಂದುಕೊಂಡಿದ್ದೆ. ಇಲ್ಲ, ಸುಳ್ಳು—ಜಗತ್ತಿನಲ್ಲಿ ದೇವರು ಇಲ್ಲವೇ ಇಲ್ಲ!"

ಅವಳ ಕೈಗಳು ಗೋಡೆಯಲ್ಲಿ ತೂಗುಹಾಕಿದ್ದ ಕೆಲವು ದೇವರ ಫೋಟೋಗಳನ್ನು ಸರಸರನೆ ಎಳೆದವು. ಹರಿನಾರಾಯಣ ಸರ್ರನೆ ಮುಂದೆ ಬಂದು ಅವಳನ್ನು ಬಿಗಿಯಾಗಿ ಹಿಡಿದುಕೊಂಡ.

"ನಿನಗೇನಾಗಿದೆ, ನೆಲಕ್ಕಿಡು ಅವನ್ನೆಲ್ಲ."

"ಎಲ್ಲಾ ಎಸೀತೇನೆ ಹೊರಗೆ, ಎತ್ತ ಬೇಕಾದರೂ ಹೋಗಲಿ" ಎನ್ನುತ್ತ ಜೋರಾಗಿ ನಗಲಾರಂಭಿಸಿದಳು. ತಬ್ಬಿಬ್ಬಾದ ಹರಿನಾರಾಯಣ ಅವಳ ಕೈಯಲ್ಲಿರುವದನ್ನು ಕಸಿದಿರಿಸಿ ಕೂಗಿದ,

"ಎಚ್ಚರ ಮಾಡಿಕೋ. ಯಾಕೆ ನಗ್ತಾ ಇದ್ದೀ?"

"ಪ್ರವಾಹ ಬಂದು ಎಲ್ಲಾ ಕೊಚ್ಚಿಕೊಂಡೇ ಹೋಯಿತು! ಇನ್ನೇನೂ ಉಳಿದಿಲ್ಲ."

ಗಲಾಟೆ ಕೇಳಿ ಸುಂದರೀಬಾಯಿ ಓಡಿಬಂದರು. ಆದರೆ ಶಾಂಭವಿಯ ವಿಕಾರಮುಖ ನೋಡಿ ಹೆದರಿ ಹಾಗೇ ಓಡಿಬಿಟ್ಟರು. ಅವಳನ್ನು ಸಮಾಧಾನ ಪಡಿಸಲು ಹರಿನಾರಾಯಣ ಶತಪ್ರಯತ್ನ ಪಡಬೇಕಾಯಿತು. ವೇದಮ್ಮ ತನ್ನಲ್ಲೇ ಗೊಣಗಿಕೊಂಡಳು.

"ಹುಚ್ಚನಂತಿದ್ದ ಮಗ ಸರಿಯಾದ, ಆದರೆ ಸೊಸೆ ಯಾಕೆ ಹೀಗಾದಳು!"

ಅಂದೇ ಮಧ್ಯಾಹ್ನ ಕೇಶವನನ್ನು ಜೊತೆಯಲ್ಲಿ ಕರೆದುಕೊಂಡು ಪೇಟೆಯಿಂದ ಹೆಂಡತಿ, ತಾಯಿ, ಶಾರದೆಗೆ ಕಡಿಮೆ ಕ್ರಯದ ಸೀರೆಗಳನ್ನು, ಕೇಶವ ಮತ್ತು ತನಗಾಗಿ ಒರಟು ನೂಲಿನ ಪಂಚೆಯನ್ನು, ಈಶ್ವರಿಗೆ ಅಂಗಿಯನ್ನು ತೆಗೆದುಕೊಂಡ ಹರಿನಾರಾಯಣ. ಕಡಿಮೆ ಕ್ರಯದ ಸೀರೆಗಳು ಉದ್ದವೂ ಇಲ್ಲ, ಅಗಲವೂ ಸಾಲದು. ಶಾರದೆಯ ಮುಖ ಚಿಕ್ಕದಾಯಿತು.

"ಇಂತಹ ಸೀರೆ ಉಡದೇ ಇದ್ದರೆ ಒಳ್ಳೆಯದಿತ್ತು, ಅಣ್ಣ" ಎಂದಳು.

"ಒಂದ್ನಾಕು ರೂಪಾಯಿ ಜಾಸ್ತಿ ಕೊಟ್ಟು ಬೇರೆ ತೆಗೆಯಬಹುದಿತ್ತು."

"ನಿಜ" ಕೇಶವ ಹೇಳಿದ, "ಕೈಯಲ್ಲಿ ಎಷ್ಟು ಹಣವಿದೆ ಅನ್ನುವದು ಗೊತ್ತು ತಾನೇ ನಿನಗೆ? ಆದಷ್ಟು ಬೇಗ ನಾವು ಊರು ಬಿಡಬೇಕಲ್ಲ."

"ಕೆಲವರು ಅಂದರು, ಬೆಂಗಳೂರಿಗಿಂತ ಹುಬ್ಬಳ್ಳಿ ಒಳ್ಳೆಯದಂತೆ—ಹುಬ್ಬಳ್ಳಿಗೇ ಹೋಗೋಣ." ಹರಿನಾರಾಯಣ ಹೆಂಡತಿಯ ಮುಖ ನೋಡಿದ, "ನೀನು ಏನ್ಹೇಳ್ತಿ? ಹೋಗೋಣವೇ?"

"ನಿಮಗಿಷ್ಟಬಂದಲ್ಲಿಗೆ ಹೋಗೋಣ."

"ಅತ್ತಿಗೆ, ದೊಡ್ಡ ಪಟ್ಟಣ ಸೇರಿದ ಕೂಡಲೆ ನಮ್ಮ ಕಾರುಭಾರ ಏನು ಗೊತ್ತಾ?" ಬೆರಳನ್ನು ಬಾಯಲ್ಲಿರಿಸಿ ಒಂದು ಬಾರಿ ಚೀಪಿದ ಕೇಶವ, "ಒಂದು ಊಟದ ಹೋಟೆಲ್ ಇಡುವದು. ಲಾಭ ಖಂಡಿತಾ ಬರುತ್ತದೆ....ನಾನೇ ಮಂಡಿಗೆ ಮೇಲೆ ಕುಳಿತು ವ್ಯಾಪಾರ ಮಾಡ್ತೇನೆ, ನೋಡು."

ಹರಿನಾರಾಯಣ ತಮ್ಮನ ಬೆನ್ನಮೇಲೆ ಗುದ್ದಿದ, "ಹೆಚ್ಚು ಹೊತ್ತು ಆಸೆಪಟ್ಟು ಬೆರಳು ಚೀಪ್ತಾ ಬಾಯಿ ಚಪ್ಪರಿಸಬೇಡ. ಎಲ್ಲಿ, ನನ್ನ ಜೊತೆ ತಾಳ ಹಾಕು. ಹಾಡು ಹೇಳ್ತೇನೆ,

"ರಾಮನಾಮ ಪಾಯಸಕೆ ಕೃಷ್ಣನಾಮ ಸಕ್ಕರೆ।
ವಿಠಲನಾಮ ತುಪ್ಪ ಬೆರೆಸಿ ಬಾಯಿಚಪ್ಪರಿಸಿರೋ॥"

ಆ ಸಾಯಂಕಾಲ ಹರಿನಾರಾಯಣನಿಗೆ ಈಶ್ವರ ದೇವಸ್ಥಾನದಲ್ಲಿ ಹರಿನಾಮ ಹಾಡಲು ಕರೆದಿದ್ದರು ಅಲ್ಲಿಯ ಅರ್ಚಕರು. ಆದರೆ ಸಧ್ಯದಲ್ಲೇ ಊರು ಬಿಟ್ಟುಬಿಡಲು ಸಿದ್ಧನಾದ ಹರಿನಾರಾಯಣ ಒಂದೆರಡು ಭಜನೆ ಹಾಡುವದಕ್ಕೆ ಮಾತ್ರ ಒಪ್ಪಿಕೊಂಡಿದ್ದರಿಂದ ಶಾರದೆಗೆ ಮನೆಯಲ್ಲಿ ಕುಳಿತಿರಲು ಇಷ್ಟವಾಗದೆ ಅಣ್ಣನ ಹಾಡುಗಳನ್ನು ಕೇಳುವ ನೆಪದಲ್ಲಿ ಅವನ ಜೊತೆಯಲ್ಲಿ ಹೊರಟುಹೊಂದಳು ಈಶ್ವರ ದೇವಸ್ಥಾನಕ್ಕೆ. ವೆದಮ್ಮನ ಕಾಲಿನ ವ್ರಣಗಳು ಅಧಿಕವಾಗಿದ್ದರೂ "ನನ್ನನ್ನು ಯಾರಾದರೂ ದೇವಸ್ಥಾನಕ್ಕೆ ಹೊತ್ತುಕೊಂಡು ಹೋಗಿ, ಭಜನೆ ಕೇಳ್ತೇನೆ" ಎಂದು ಗೊಣಗಿದಳು. ಗೊಣಗುವದು ಅವಳ ನಿತ್ಯ ಅಭ್ಯಾಸ.

ಶಾಂಭವಿ ಮನೆಯಲ್ಲಿರುವ ಸಾಮಾನುಗಳನ್ನು ಒಂದೆಡೆ ರಾಶಿಹಾಕುವ ಕೆಲಸದಲ್ಲಿ ನಿರತಳಾಗಿದ್ದಾಳೆ. ಮನಸ್ಸಿಲ್ಲದ ಮನಸ್ಸಿನಲ್ಲಿ. ಬೆರೆಡೆ ಹೊರಟು ಹೋಗುವ ಉತ್ಸಾಹ, ಧೈರ್ಯ ಅವಳಲ್ಲಿರಲಿಲ್ಲ. ಸುತ್ತಲೂ ಭಯಾನಕವೆನಿಸುವಂತಹ ಕತ್ತಲು ತುಂಬಿದೆ. ಎಲ್ಲೊಂದು ಬೆಳಕು ಕಾಣುವ ಆಸೆ

ಅವಳಿಂದ ಹೊರಟುಹೋಯಿತೇ? ಕರೀಂ ಸಾಬನಂತೆ ಸಹಾಯ ಮಾಡು ವವರು ಯಾರಾದರೂ ಸಿಗಬಹುದೇ?

ಅಷ್ಟರಲ್ಲಿ ಯಾರದೋ ಸ್ವರ ಕೇಳಿಸಿತು ಹೊರಗೆ. ಮೊದಲೇ ಕೇಳಿದ ಧ್ವನಿ: "ಹರಿನಾರಾಯಣನ ಮನೆ ಇದೆ ತಾನೇ?"

ಶಾಂಭವಿ ಕೆಲಸವನ್ನು ಬದಿಗೊತ್ತಿ ಹೊರಗೆ ಬಂದವಳಿಗೆ ತಟ್ಟನೆ ಮಿಂಚು ಸೋಂಕಿದಂತಾಯಿತು. ಒಡನೇ ಹರ್ಷದಲ್ಲಿ ಪುಳಕಿತಗೊಂಡಿತು ಹೃದಯ. ತನ್ನ ಎದುರು ನಿಂತವನನ್ನು ಮತ್ತೆ ಮತ್ತೆ ನೋಡಿದಳು. ಅನುಮಾನವಿಲ್ಲ. ಇದೇನು, ದಾರಿ ತಪ್ಪಿ ಸಧ್ಯ ಇಲ್ಲಿಗೆ ಬರಲಿಲ್ಲವಲ್ಲ.

"ಓ....ಬನ್ನಿ, ಬನ್ನಿ." ನಗುಮುಖದಲ್ಲಿ ಸ್ವಾಗತಿಸಿದಳು ಒಳಗೆ. ಆದರೆ ಕುಳಿತುಕೊಳ್ಳಲು ಅಲ್ಲಿ ಒಂದು ಕುರ್ಚಿಯೂ ಇರಲಿಲ್ಲ. ಸಣ್ಣ ಮಣೆಯನ್ನು ಇರಿಸಿದಳು ಅವನ ಮುಂದೆ.

ಅವನ ದೃಷ್ಟಿ ಸುತ್ತಲೂ ಹರಿಯಿತು. ಕಾಲಿನ ಮೇಲೆ ಕುಳಿತ ನೊಣ ಗಳನ್ನು ಝಾಡಿಸುತ್ತಿದ್ದ ವೇದಮ್ಮ ಹೆದರಿ ಹರಕು ಬಟ್ಟೆಯನ್ನು ಕಾಲಿಗೆ ಎಳೆದುಕೊಳ್ಳುತ್ತ ಬಾಯಿ ಅಗಲಿಸಿದಳು, ನಡುಗುವ ಸ್ವರದಲ್ಲಿ ಕೇಳಿದಳು:

"ಎಲ್ಲಿಂದ ಬರ್ತಾ ಇದ್ದೀರಿ? ಬೆಂಗಳೂರಿನಿಂದಲೇ?"

ಕಪ್ಪು ಸೂಟು, ಬಿಳಿ ಶರ್ಟು ತೊಟ್ಟ ಅವನು ಚೀಲವನ್ನು ನೆಲದ ಮೇಲಿರಿಸಿದ, "ಗುರುಪುರದಿಂದ ಬರ್ತಾ ಇದ್ದೇವೆ. ಈ ಚೀಲದಲ್ಲಿ ಮಕ್ಕಳಿ ಗಾಗಿ ಹಣ್ಣುಗಳಿವೆ. ತಗೊಳ್ಳಿ. ಎಲ್ಲಿ, ಯಾರೂ ಇಲ್ಲವೇ ಮನೆಯಲ್ಲಿ?"

"ಎಲ್ಲರೂ ಇದ್ದಾರೆ. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಬಂದಾರು—" ಶಾಂಭವಿ ತನ್ನ ಹರಕು ಸೀರೆಯಲ್ಲಿ ಮುಜುಗರಪಡುತ್ತಿರುವಾಗಲೇ ಹೊರಗಿ ನಿಂದ ಬಂದ ಕೇಶವ. ಅವನಿಗೂ ಒಳಗೆ ನಿಂತವನನ್ನು ನೋಡಿ ಬೆರಗಾಗಿ ಹೋಯಿತು.

"ಹ್ಯಾಗಿದ್ದೀಯಪ್ಪ? ಈ ದಿನಗಳಲ್ಲಿ ಬಹಳ ಉದ್ದವಾಗಿದ್ದೀಯಲ್ಲ." ಬೆನ್ನುಚಪ್ಪರಿಸಿದ ಬಂದವನು.

"ಹೋಗು, ಸುಂದರೀಬಾಯಿ ಮನೆಯಿಂದ ಒಂದು ಕುರ್ಚಿ ತಗೊಂಡು ಬಾ. ಹೇಳು, ಬೆಂಗಳೂರಿನಿಂದ ನಮಗೆ ಬೇಕಾದ ಇಂಜಿನೀಯರ್ ಒಬ್ಬರು ಬಂದಿದ್ದಾರೆ ಅಂತ." ಅವಸರಪಡಿಸಿದಳು ಶಾಂಭವಿ.

ಒಂದೆ ನಿಮಿಷದಲ್ಲಿ ಕುರ್ಚಿ ಬಂದಿತು. ಅಷ್ಟುಹೊತ್ತಿಗೆ ಶಾಂಭವಿ ಹಳೆ ಸೀರೆಯನ್ನು ಮುದುರಿಸಿ ಮೂಲೆಗೊತ್ತಿ ಮಧ್ಯಾಹ್ನ ಗಂಡ ತಂದ ಸೀರೆ ಸುತ್ತಿ

ಕೊಂಡಿದ್ದಳು. ಹೊರಗೆ ಕೇಳಿಸಿತು ಪ್ರಶ್ನೆ.

"ಮನೆಯಲ್ಲಿ ನೀನೊಬ್ಬನೆಯೇ ? ಉಳಿದವರು ಯಾರ್ಯಾರಿದ್ದಾರೆ ?"

"ಹಣ ಕದ್ದುಕೊಂಡು ಹೋದ ಮಾಧವನ ಹೊರತಾಗಿ ಎಲ್ಲರೂ ಇದ್ದೇವೆ. ಶಾರದಕ್ಕ ದೇವಸ್ಥಾನಕ್ಕೆ ಹೋದ್ಲು. ಅಲ್ಲಿ ಅಣ್ಣನ ಭಜನೆ ಇವತ್ತು."

"ಓ....ನಡಿ, ನಾನೂ ಅವನ ಹಾಡುಗಳನ್ನು ಕೇಳಬೇಕು. ಬಾ, ಹೋಗಿ ಬರೋಣ." ಕುಳಿತವನು ಎದ್ದುಬಿಟ್ಟ

ಶಾಂಭವಿ ಹೊರಗೆ ಬಂದವಳು, ಈಶ್ವರಿಯ ಕಿವಿಯಲ್ಲಿ ಪಿಸುಗುಟ್ಟಿ ಓಡಿಸಿದಳು ಪೇಟೆಗೆ. "ಒಂದ್ನಿಮಿಷದಲ್ಲಿ ಪಾನಕ ಮಾಡಿಕೊಡ್ತೇನೆ. ಕುಡಿದು ಹೋಗಿ. ಅವರ ಭಜನೆ ಪ್ರಾರಂಭವಾಗುವದು ಸಾಯಂಕಾಲ ಆರೂವರೆಗೆ ....ಅದೇನು, ನೀವು ಒಬ್ಬರೇ ಬಂದಿದ್ದೀರಲ್ಲ. ನಿಮ್ಮ ಪರಿಚಯದ ಮನೆ ಇಲ್ಲಿ ಇರಬಹುದಲ್ಲವೇ ?"

"ಹೌದು, ಈಗ ಬಂದಿರುವದು ಪರಿಚಯದವರ ಮನೆಗೇ !"

"ಜೊತೆಯಲ್ಲಿ ನಿಮ್ಮವಳನ್ನೂ ಕರೆದುಕೊಂಡು ಬಂದಿದ್ದರೆ....?" ಪ್ರಶ್ನೆ ಕೇಳುತ್ತ ಅವಳು ಅವನ ಉತ್ತರಕ್ಕಾಗಿ ಕಿವಿಯಾಲಿಸಿದಳು.

"ನನ್ನವಳು ! ನನಗಿನ್ನೂ...." ಅವನು ಹ್ಹೀಹ್ಹೀ ಎನ್ನುತ್ತ ನಕ್ಕ. ಆಮೇಲೆ ಮುಖದಲ್ಲಿ ವಿಷಾದದ ಕಳೆ. ಶಾಂಭವಿ ಪಾನಕ ಮಾಡಿಕೊಡುವಷ್ಟು ಹೊತ್ತು ಅವಳೊಡನೆ ಮಾತಿಗಿಳಿದ. ತನ್ನ ಅಕ್ಕ-ಭಾವನಿಂದ ಅವರ ಗೇಣಿಗದ್ದೆ ಕೈತಪ್ಪಿಹೋದುದಕ್ಕೆ ವಿಷಾದಿಸುತ್ತ ಕನಿಕರ ಸೂಚಿಸಿ ಅಕ್ಕಭಾವನನ್ನೂ ತೆಗಳಿದ. ಆಮೇಲೆ ಕೇಳಿದ ಅನುಮಾನದಲ್ಲಿ :

"ನಿಮ್ಮಿಂದ ಒಂದೇ ಒಂದು ಕಾಗದ ಬರಲಿಲ್ಲ. ನನ್ನ ಕಾಗದವೂ ಸಿಗಲಿಲ್ಲವೇ ನಿಮಗೆ ? ನಾಲ್ಕೈದು ಕಾಗದ ಬರೆದಿದ್ದೆ."

ಬರೆದಿರಬಹುದು, ಆದರೆ ಒಂದು ಕಾಗದವೂ ಅವರಿಗೆ ಸಿಕ್ಕಿರಲಿಲ್ಲ. ಕಮಲಮ್ಮ ಅಂಚೆಯವನ ಕೈಗೆ ಹಣ ಕೊಟ್ಟದ್ದು ಪಾಪ ಇವರಿಗೆ ತಿಳಿದಿತ್ತೇ?

"ನೀವು ಊರು ಬಿಟ್ಟಮೇಲೆ ಗುರುಪುರಕ್ಕೆ ಬಂದಿದ್ದೆ. ಆದರೆ ನಿಮ್ಮ ಸಂಸಾರ ಎಲ್ಲಿದೆ ಅನ್ನುವದು ತಿಳಿಯಲಿಲ್ಲ. ಈಗ ಒಂದೂವರೆ ತಿಂಗಳ ಹಿಂದೆ ರಂಗಪ್ಪಾಚಾರಿ ಸೊಸೆಗೆ ನೀವು ಕಾಗದ ಬರೆದಿದ್ದಿರಲ್ಲ, ನಾನು ಮೊನ್ನೆ ಗುರುಪುರಕ್ಕೆ ಹೋದಾಗ ನನಗೆ ಕೊಟ್ಟಳು ನಿಮ್ಮ ಕಾಗದವನ್ನು. ಅದರಲ್ಲಿದ್ದ ವಿಳಾಸ ನೋಡ್ಕೊಂಡು ಸೀದಾ ಹೊರಟುಬಂದೆ."

"ಕಮಲಮ್ಮ ಏನಂದುಕೊಂಡರೋ, ನೀವು ಇಲ್ಲಿ ಬರುವದು ಗೊತ್ತೇ ಅವರಿಗೆ ?"

"ಅಕ್ಕನನ್ನು ಕೇಳಿಯೇ ನಾನೆಲ್ಲ ಕಡೆ ಹೋಗ್ತೇನೆಯೇ ?"

ಸ್ವಲ್ಪ ಹೊತ್ತಿಗೆ ಪಾನಕವೂ ಸಿದ್ಧವಾಯಿತು. "ಸಂಕೋಚ ಮಾಡದೆ ರಾತ್ರಿ ಊಟ ಮುಗಿಸಿ ಹೋಗಿ." 'ಉಳಿದು ಹೋಗಿ' ಎನ್ನಲು ತಡವರಿಸಿತು ನಾಲಗೆ.

ಸಕ್ಕರೆ ಕಡಿಮೆಯಾದ ಹುಳಿಯೂ ಇಲ್ಲದ ಪಾನಕ ಕುಡಿದು ಮುಗಿಸಿದ. "ಸಂಕೋಚವಿಲ್ಲ, ಊಟಕ್ಕೆ ಬರ್ತೇನೆ. ಹೋಟೆಲ್‌ನಲ್ಲಿ ರೂಮ್ ಮಾಡಿ ನನ್ನ ಸಾಮಾನುಗಳನ್ನು ಅಲ್ಲಿಟ್ಟಿದ್ದೇನೆ. ಮಲಗಲು ಅಲ್ಲಿಗೇ ಹೋಗ್ತೇನೆ."

ಅವನು ಕೇಶವನನ್ನು ಕರೆದುಕೊಂಡು ಭಜನೆ ಕೇಳಲು ಹೋದಮೇಲೆ ಶಾಂಭವಿಯ ಮನಸ್ಸು ಬಲೂನಿನಂತೆ ಹಾರಾಡಿತು. ಶಾರದೆಯನ್ನು ಹುಡುಕಿಕೊಂಡು ಇಷ್ಟು ದೂರ ಬಂದಿದ್ದಾನೆ! ಅಂದರೆ ಅವನಿನ್ನೂ ಅವಳ ಮೇಲೆ ಮನಸ್ಸಿಟ್ಟಿದ್ದಾನೆ. ಆದರೆ ಅವನು ನಮ್ಮ ಸ್ಥಿತಿಗತಿ ನೋಡಿದಮೇಲೆ ಶಾರದೆಯನ್ನು ಒಪ್ಪಿಕೊಳ್ಳುತ್ತಾನೆಯೆ ?

"ಜಯರಾಮ ಹೋದನೇ ?" ಮಲಗಿದ ವೇದಮ್ಮ ಎದ್ದು ಕುಳಿತಳು, "ಯಾಕೆ ಬಂದ ಅವನು ? ಶಾರದೆಯನ್ನು ಮದುವೆಮಾಡಿಕೊಂಡು ಹೋಗುತ್ತಾನೋ ಏನೋ ?"

ಏಳೂವರೆಯ ಹೊತ್ತಿಗೆ ಹರಿನಾರಾಯಣ, ಶಾರದೆ ಇಬ್ಬರೇ ಮನೆಗೆ ಬಂದಾಗ ಒಳಗೆ ವಿಶೇಷ ಅಡಿಗೆಯ ತಯಾರಿ. ಹೊಲಿಗೆಯಂತ್ರದ ಹಣ ಸಿಕ್ಕಿದ್ದರಿಂದ ವಿಶೇಷ ಅಡಿಗೆ ಎಂದುಕೊಂಡರು ಅಣ್ಣ-ತಂಗಿ. ಶಾರದೆ ಸೀರೆ ಬದಲಾಯಿಸಲು ಸಿದ್ಧಳಾದಾಗ ಶಾಂಭವಿಯೇ ತಡೆದಳು,

"ಈಗ್ಯಾಕೆ ಸೀರೆ ಬದಲಾಯಿಸುತ್ತಿ ? ಇರಲಿ ಬಿಡು ಅದೇ. ಅಂದಹಾಗೆ ದೇವಸ್ಥಾನದಲ್ಲಿ ಯಾರೂ ಸಿಗಲಿಲ್ಲವೇ ನಿಮಗೆ ?"

"ಸಿಗೋದಕ್ಕೆ ಯಾರಿದ್ದಾರೆ ನೆಂಟರು ? ಅಣ್ಣ ಒಂದ್ನಾಕು ಭಜನೆ ಹಾಡಿದ. ಆಮೇಲೆ ಬರ್ತಾ ಜೋಯಿಸರಲ್ಲಿ ಹೋಗಿ ಬಂದೆವು."

"ಯಾಕೆ ಹೋದಿರಿ ?" ಕಣ್ಣರಳಿಸಿದಳು ಶಾಂಭವಿ.

ಹರಿನಾರಾಯಣ ಅಂಗಿಯನ್ನು ತೆಗೆದು ಬದಿಗಿರಿಸಿ ಕಳ್ಳನೋಟ ಬೀರಿದ, "ನಮ್ಮಿಬ್ಬರ ಜಾತಕ ತೆಗೆದುಕೊಂಡು ಹೋಗಿ ತೋರಿಸಿದೆ. ಎಂತಹ ಕೆಟ್ಟ ಕಾಲ ಅನ್ನುತ್ತೀಯ, ಇಬ್ಬರಿಗೂ ಉಗ್ರ ಶನಿದೆಸೆಯಂತೆ."

ಶಾಂಭವಿಗೆ ಇಲ್ಲಿ ಬಂದವನು ದೇವಸ್ಥಾನದವರೆಗೂ ಹೋಗಿಲ್ಲವೆಂದು ಖಚಿತವಾಯಿತು. ಹೋಗಿದ್ದರೂ ಅಷ್ಟರಲ್ಲಿ ಹರಿನಾರಾಯಣನ ಭಜನೆ ಮುಗಿದಿರಬೇಕು. ಆದರೆ ಎಲ್ಲಾ ಬಿಟ್ಟು ಜೋಯಿಸರಲ್ಲಿಗೆ ಹೋದುದೇಕೆ?

"ಓ....ಉಗ್ರ ಶನಿದೆಸೆಯಂತೆ. ನಿಜ, ನಿಜ. ನಮ್ಮ ಶನಿದೆಸೆ ಯಾವಾಗ ಬಿಡುತ್ತದೆಯೆಂದೂ ಕೇಳಿದಿರಾ?" ವ್ಯಂಗ್ಯವಾಗಿತ್ತು ಸ್ವರ.

"ಇನ್ನು ಒಂದು ವರ್ಷವಿದೆಯಂತೆ."

"ಒಂದೇ ವರ್ಷ! ಹ್ಹ ಹ್ಹ....ನಮ್ಮಂಥವರಿಗೆ ಜೀವಮಾನವೆಲ್ಲ ಶನಿದೆಸೆ. ಅದು ಮುಗಿದು ಶುಕ್ರದೆಸೆ ಬರುವದೂ ಇಲ್ಲ. ಕಾಲಿಗೆಳೆದರೆ ತಲೆಗಿಲ್ಲ, ತಲೆಗೆಳೆದರೆ ಕಾಲಿಗಿಲ್ಲ ಎನ್ನುವ ಸ್ಥಿತಿ. ಶನಿದೆಸೆಯ ಹೊಟ್ಟೆಯಲ್ಲೇ ನಾವು ನರಳಬೇಕು. ಅದೇ ನಮ್ಮ ಗತಿ."

"ಮಾತಿಗೆ ಮೊದಲು ರೇಗಲು ಪ್ರಾರಂಭ ಮಾಡಿದ್ದಿ." ಗೊಣಗುತ್ತ ಹರಿನಾರಾಯಣ ಅವಳ ಎದುರಿನಿಂದ ಸರಿದ. ಆಗಲೇ ಅವನಿಗೆ ಮೂಲೆಯಲ್ಲಿರಿಸಿದ ಹೊಸ ಚೀಲ ಕಾಣಿಸಿತು, ಒಂದು ಕುರ್ಚಿಯೂ ಇದೆ. ಬಂದವರು ಯಾರೆಂದು ಕೇಳುವದಕ್ಕೂ ಹೆದರಿಕೆಯಾಯಿತು. ಅಮ್ಮನ ಹತ್ತಿರ ಬಂದು ಕುಳಿತ, ಯಾರು ಬಂದಿದ್ದಾರೆಂದು ಕೇಳಿ ತಿಳಿಯಲು.

ಇದ್ದಕ್ಕಿದ್ದಂತೆ ಉತ್ಸಾಹ ಚಿಮ್ಮಿತು ಅವನಲ್ಲಿ. ಎಳೆತರುಣನಂತೆ ಓಡಿದ ಶಾಂಭವಿಯ ಬಳಿಗೆ. ಶಾರದೆಯನ್ನು ಅಲಂಕರಿಸುವಂತೆ ತಿಳಿಸಿ ತಾನೇ ಅಲ್ಲಿರುವ ಧೂಳು ಕಸ ಎಲ್ಲಾ ತೆಗೆದುಹಾಕಿದ.

"ಚಿಂತೆ ಯಾತಕೋ ಬಯಲ ಭ್ರಾಂತಿ ಯಾತಕೋ"

ಅವನ ನಾಲಿಗೆ ನುಡಿಯುತ್ತಿದ್ದಂತೇ ಒಳಗೆ ಕಾಲಿರಿಸಿದರು ಜಯರಾಮ ಮತ್ತು ಕೇಶವ. ಅವರೊಡನೆ ಭಟ್ಕಳ ಮಲ್ಲಿಗೆಯ ಕಂಪು ತುಂಬಿತು ಮನೆಯಲ್ಲಿ. ಶಾರದೆಗೆ ತಂದ ಹೂವು ಹುಡುಗಿಯರ ಮುಡಿಯನ್ನು ಅಲಂಕರಿಸಿತು. ಶಾಂಭವಿ ಗುಟ್ಟಾಗಿ ಮೈದುನನನ್ನು ಒಳಗೆ ಕರೆದು ಕೇಳಿದಳು, ಅವರ ಜೊತೆ ತಿರುಗಾಡಲು ಹೋಗಿದ್ದಿಯಲ್ಲ. ಏನಾದರೂ ಹೊಸ ವಿಷಯ ಹೇಳಿದರೇನು?"

"ಬೆಂಗಳೂರು ವಿಷಯ ಹೇಳಿದರು. ಶಾರದಕ್ಕನ ಬಗ್ಗೆ ಚಕಾರವೆತ್ತಲಿಲ್ಲ."

ಓ....ಮಾಡಿದ ಅಡಿಗೆ ವ್ಯರ್ಥವಾದೀತೇ? ಯಾರಿಗೆ ಈ ಸತ್ಕಾರ? ಶಾರದೆಯ ಅರಳಿದ ಮುಖ ನೋಡಿ 'ಅಯ್ಯೋ' ಎನಿಸಿತು. ಮಾತನಾಡುವ ವಿಷಯಗಳು ಅನೇಕವಿದ್ದರೂ ಪರಸ್ಪರ ಸಲುಗೆಯ ಭಾವ ಅಲ್ಲಿರಲಿಲ್ಲ.

ಜಯರಾಮನ ಕಣ್ಣುಗಳು ಶಾರದೆಗಾಗಿ ಹುಡುಕುತ್ತಿವೆ ಎಂದೂ ಸೂಕ್ಷ್ಮವಾಗಿ ಗಮನಿಸಿದಳು ಶಾಂಭವಿ. ಆದರೂ ಅವನು ಕರೆಯದ ಹೊರತು ಅವಳನ್ನು ತಾನು ಹೊರಗೆ ಕಳುಹಿಸಬಾರದು.

ಊಟದನಂತರ ಜಯರಾಮನಿಗೆ ಹರಿನಾರಾಯಣನ ಹಾಡು ಕೇಳುವ ಮನಸ್ಸಾದುದರಿಂದ ಮಾತಿನ ಬದಲು ಪ್ರಾರಂಭವಾಯಿತು ಹಾಡು, ದೇವರ ನಾಮ. ಶಾಂಭವಿಗೆ ತಡೆಯಲಾರದ ಕುತೂಹಲ. ಹಾಡು ನಿಲ್ಲಿಸಿ ಏನಾದರೂ ಮಾತನಾಡಬಾರದೇ ?

"ನಿನ್ನ ಹಾಡು ಬೆಂಗಳೂರಿನ ಆಕಾಶವಾಣಿಯಿಂದ ಪ್ರಸಾರವಾಗಿತ್ತು. ಪಾಪ, ನಿನಗೆ ಕೇಳುವ ಅವಕಾಶ ಸಿಕ್ಕಿರಲಾರದು. ನೂರೈವತ್ತು ರೂಪಾಯಿ ಕೊಟ್ಟಿದ್ದರು."

ಹರಿನಾರಾಯಣನ ಮುಖ ಗಂಭೀರವಾಗಿತ್ತು.

"ನಿನ್ನ ವಿಳಾಸ ಸಿಕ್ಕದೆ ಹಣ ಕಳುಹಿಸಲಿಲ್ಲ. ಅವರಿಗೆ ನಿನ್ನ ಹಾಡುಗಳು ಇನ್ನೂ ಬೇಕಂತೆ. ಧ್ವನಿಮುದ್ರಣ ಮಾಡಿಕೊಳ್ಳಲು ಏನನ್ನೂ ತಂದಿಲ್ಲ."

ಮಾತು ಹೀಗೇ ಮುಂದುವರಿಯಿತು. ಅಕ್ಕಭಾವನಿಂದ ಆದ ಅನ್ಯಾಯ, ಅವರ ನಿಷ್ಕರುಣಬುದ್ಧಿಯನ್ನು ಹೇಳುತ್ತ ಅವನು ಕೇಳಿದ :

"ನೀವೆಲ್ಲರೂ ಊರು ಬಿಟ್ಟು ಹೋಗ್ತೀರಂತೆ ಎಂದು ಕೇಶವ ಹೇಳಿದ. ಇನ್ನೊಂದೆರಡು ದಿನ ತಡವಾಗಿ ಬಂದಿದ್ದರೆ ನೀವು ಸಿಗ್ತಾ ಇರಲಿಲ್ಲ. ಏನೋ ನನ್ನ ಪುಣ್ಯ ! ಸಕಾಲದಲ್ಲಿ ಬಂದೆ."

ಕೆಲನಿಮಿಷಗಳು ಮೌನವಾಗಿ ಸರಿದವು. ಅವನು ಕೈಗಡಿಯಾರವನ್ನು ನೋಡಿಕೊಳ್ಳುತ್ತ ಅಲ್ಲಿಂದೆದ್ದ.

"ಈಗ ರಾತ್ರಿಯಾಯ್ತು. ಸಾಧ್ಯವಾದರೆ ಎಲ್ಲಾ ನಾಳೆ ಮಾತನಾಡೋಣ. ಬರ್ತೀನೆ" ಎಂದಂದು ಹೊರಟುಹೋದ.

ಹೊಸ ಸೀರೆಯುಟ್ಟು ತಲೆತುಂಬಾ ಮಲ್ಲಿಗೆ ಮುಡಿದ ಹುಡುಗಿ ಮುಖ ಮುಚ್ಚಿಕೊಂಡು ಕುಳಿತುಬಿಟ್ಟಳು ಸುಮ್ಮನೆ. ಮುಡಿದ ಮಲ್ಲಿಗೆ ವ್ಯರ್ಥವಾಯಿತೇ ? ಯಾರಿಗಾಗಿ ನಿರೀಕ್ಷೆ ? ಕಿವಿಗಳು ಕೇಳಲಿರುವ ಪ್ರಶ್ನೆಗಳು ಮೌನದಲ್ಲಿಯೇ ಉಳಿದುಹೋಗಿವೆ ! ಗೋಡೆಯ ಬದಿಯನ್ನಾತು ನಿಂತಿದ್ದ ಶಾಂಭವಿ ಶಕ್ತಿಯಿಲ್ಲದವಳಂತೆ ಅಲ್ಲೇ ಕೆಳಗೆ ಕುಳಿತಳು. ತೆರೆದ ಬಾಗಿಲು ಧಡಾರನೆ ಮುಚ್ಚಿಕೊಂಡಿತು.

30

ಸಾಧ್ಯವಾದರೆ ಬರುತ್ತೇನೆ ಎಂದಿದ್ದ ಜಯರಾಮ. ಭರವಸೆ ಕೊಟ್ಟಿರಲಿಲ್ಲ. ಮರುದಿನ ಹತ್ತು ಗಂಟೆಯಾದರೂ ಅವನ ಸುಳಿವಿಲ್ಲ.

"ಯಾವ ಹೋಟೆಲ್‌ನಲ್ಲಿ ಅವನು ಇಳಿದುಕೊಂಡಿದ್ದಾನೆ ಎಂದು ಕೇಳಿ ಕೊಂಡಿದ್ದರೆ ಹೋಗಿ ಕರೆದುಕೊಂಡು ಬರಬಹುದಿತ್ತು." ಶಾಂಭವಿಗೆ ಇನ್ನೂ ನಿರೀಕ್ಷೆ.

"ಅವನಿಗೆ ಇಷ್ಟವಿದ್ದರೆ ಬಂದೇ ಬರುತ್ತಾನೆ. ಇಲ್ಲಿಗೆ ಬಾ ಎಂದು ನಾವೇನು ಕಾಗದ ಬರೆದು ಆಹ್ವಾನಿಸಿದ್ದೇವೆಯೆ?" ಹೊರಬಾಗಿಲಾಚೆ ನೋಡುತ್ತ ಅಂದಳು ವೇದಮ್ಮ.

"ಅವರು ಬಂದೇ ಬರ್ತಾರೆ, ಅತ್ತಿಗೆ. ನೀನು ಅಡಿಗೆ ಮಾಡಿಡು." ಶಾರದೆ ತನ್ನ ನಾಚಿಕೆಯ ಪರದೆಯೊಳಗೇ ಉಸುರಿದಳು.

ಅವಳ ಮಾತು ನಿಜವಾಯಿತು. ಹನ್ನೊಂದು ಗಂಟೆಯ ಹೊತ್ತಿಗೆ ಹಾಜರಾದ ಜಯರಾಮ. ಅವನ ಹಿಂದೆಯೇ ದೊಡ್ಡ ಸಾಮಾನಿನ ಗಂಟನ್ನು ಹೊತ್ತ ಆಳು. ಅವನನ್ನು ನೋಡಿದಾಕ್ಷಣ ಒಳಗೆಲ್ಲಾ ಅವಸರದ ಓಡಾಟ ಪ್ರಾರಂಭ.

ಜಯರಾಮ ಮೊದಲು ವೇದಮ್ಮನಿಗೆ ನಮಸ್ಕರಿಸಿದ, "ನಿಮ್ಮ ಆಶೀರ್ವಾದ ತಲೆ ಮೇಲೆ ಇರಲಿ, ಅತ್ತೆ" ಎಂದೆಂದು ಜೇಬಿನಿಂದ ಸಣ್ಣ ಪೊಟ್ಟಣವನ್ನು ಹೊರಗೆ ತೆಗೆದು ಶಾಂಭವಿಯ ಕೈಯಲ್ಲಿರಿಸಿದ.

"ಇದನ್ನು ಶಾರದೆಗೆ ಕೊಟ್ಟುಬಿಡಿ. ಈ ಬಟ್ಟೆಗಂಟು ಆವಳಿಗೇ! ಕೇಶವ, ಇಲ್ಲಿ ಬಾ. ಈ ಚೀಲದಲ್ಲಿ ಹಣ್ಣು ತರಕಾರಿ, ಸ್ವಲ್ಪ ಅಕ್ಕಿಬೇಳೆ ಎಲ್ಲಾ ಇದೆ. ಒಳಗಿಡು. ನಾನು ಬರುವಾಗ ಸ್ವಲ್ಪ ತಡವಾಗಿಹೋಯ್ತು."

ಅವನ ದೊಡ್ಡ ಮನಸ್ಸಿನ ಎದುರು ಎಲ್ಲರೂ ಚಿಕ್ಕವರಾಗಿ ಹೋದರು. ಶಾಂಭವಿ ತನ್ನ ಕೈಯಲ್ಲಿರುವ ಸಣ್ಣ ಪೊಟ್ಟಣವನ್ನು ಬಿಚ್ಚಿ ನೋಡುತ್ತಾಳೆ, ಏನಿದು? ಕೆಂಪುಕಲ್ಲಿನ ಚಿನ್ನದ ಬೆಂಡೋಲೆ, ಒಂದೆಳೆಯ ಚಿನ್ನದ ಸರ! ಇನ್ನೊಂದರಲ್ಲಿ ಎಪ್ಪತ್ತು ರೂಪಾಯಿಯ ಗುಲಾಬಿವರ್ಣದ ನೂಲಿನ ಸೀರೆ! ಶಾಂಭವಿಯ ಕಣ್ಣುಗಳು ತುಂಬಿದವು ಸಂತೋಷದಿಂದ. ಶಾರದೆಯ ಬಳಿಗೆ ಓಡಿ, ಅವಳ ದೃಷ್ಟಿ ತೆಗೆದು, ಕೆನ್ನೆ ಹಿಂಡಿದಳು.

"ನೀನು ಬಲು ಘಾಟಿ ಹುಡುಗಿ. ನೋಡಿದೆಯಾ ಇದನ್ನೆಲ್ಲ. ಇವನ್ನು

ಹಾಕಿಕೊಂಡು, ಹೊಸ ಸೀರೆಯುಟ್ಟು, ಮೊದಲು ದೇವರಿಗೆ ನಮಸ್ಕಾರ ಮಾಡು. ಆಮೇಲೆ...." ಅವಳು ಬೆರಳೆತ್ತಿ ಹೊರಗೆ ತೋರಿಸಿದಳು "ಅವರಿಗೆ!"

ಶಾರದೆ ನಾಚಿ ನೀರಾಗಿ ಮುಖ ಮುಚ್ಚಿಕೊಂಡಳು ಹೊಸ ಸೀರೆಯಲ್ಲಿ. ಮಧ್ಯಾಹ್ನದ ಊಟವನ್ನು ಶಾರದೆಯೇ ಬಡಿಸಿದಳು ಎಲ್ಲರಿಗೂ.

"ಸರಿಯಾಗಿ ಈಗಲೇ ನೋಡಿಕೊಳ್ಳಿ." ಶಾಂಭವಿ ನಗುತ್ತ ಕೆಣಕಿದಳು, "ಆಮೇಲೆ ಹುಡುಗಿ ಏನೇನೂ ಚೆನ್ನಾಗಿಲ್ಲ ಎನ್ನಬೇಡಿ."

"ಓ....ಇವಳನ್ನು ಮೊದಲೇ ನೋಡಿದ್ದೇನಲ್ಲ!" ತಲೆ ಎತ್ತದೆ ಹೇಳಿದ ಜಯರಾಮ. ಹೊಸ ಸೀರೆಯ ಗಸ್‌ಗಸ್ ಸದ್ದು ಅವನನ್ನು ತಲೆ ಎತ್ತದಂತೆ ಮಾಡಿದ್ದವು.

"ನಾನೊಂದು ತೀರ್ಮಾನ ಮಾಡಿದ್ದೇನೆ—" ಊಟದನಂತರ ಹೊರಗೆ ಮಾತನಾಡುತ್ತ ಜಯರಾಮ ಮುಂದಿನ ವಿಷಯವನ್ನು ನೇರವಾಗಿ ಅವರಿಗೆ ಮುಂದಿರಿಸಿದ, "ಇನ್ನೆರಡು ದಿನಗಳಲ್ಲಿ ನೀವೆಲ್ಲ ಊರು ಬಿಡುತ್ತೀರಿ. ನನ್ನ ಜೊತೆ ಯಾಕೆ ಬರಬಾರದು?"

"ಎಲ್ಲಿಗೆ?"

"ಗುರುಪುರಕ್ಕೆ! ಅಕ್ಕ-ಭಾವನ ಹತ್ತಿರ ಹೇಳಿ ನಿಮ್ಮ ಗದ್ದೆಯನ್ನು ಹಿಂದಕ್ಕೆ ಕೊಡಿಸ್ತೇನೆ. ಅದರಲ್ಲಿ ಬೇಸಾಯ ಮಾಡ್ಕೊಂಡು ಮೊದಲಿನಂತಿರ ಬಹುದು."

ಶಾಂಭವಿ ಹರಿನಾರಾಯಣನತ್ತ ನೋಡಿದಳು. ಜಯರಾಮನ ಹೃದಯ ಬೆಣ್ಣೆಯಂತೆ ಮೃದುವಾಗಿರಬಹುದು. ಆದರೆ ಈಶ್ವರಶಾಸ್ತ್ರಿಗಳು, ಕಮಲ ಮ್ಮನೂ ಹೀಗಿದ್ದಾರೆಯೇ? ತಮ್ಮ ಹುಡುಗಿ ಜಯರಾಮನ ಹೆಂಡತಿಯಾದ ಳೆಂದು ಆ ದಾಕ್ಷಿಣ್ಯದಲ್ಲಿ ಅವರು ಗದ್ದೆ ಬಿಡುವವರಲ್ಲ.

"ಇನ್ನೊಮ್ಮೆ ಗುರುಪುರ ಸೇರುವದು ಮೂರ್ಖತನದ ಮಾತು. ಇದೇ ಮನೆಯೆದುರು ನನ್ನ ತಂಗಿಯನ್ನು ಯಥಾನುಶಕ್ತಿಯಾಗಿ ನಿಮಗೆ ಧಾರೆ ಎರೆದುಕೊಡ್ತೇನೆ. ನೀವು ಅವಳನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ, ನಮ್ಮ ಪಯಣ ಬೇರೆ ದಿಕ್ಕಿಗೆ."

"ಹಾಗಾದರೆ ಗುರುಪುರಕ್ಕೆ ಹೋಗುವ ಮನಸ್ಸಿಲ್ಲ ಅನ್ನಿ." ಜಯರಾಮ ತನ್ನಲ್ಲೇ ಚಿಂತಿಸಿದ, "ನಿಮ್ಮ ಪಯಣ ಯಾವ ಕಡೆಗೆ? ನಡೀರಿ, ಎಲ್ಲರೂ ಒಟ್ಟಾಗಿ ಬೆಂಗಳೂರಿಗೇ ಹೋಗೋಣ. ದೊಡ್ಡ ಪಟ್ಟಣದಲ್ಲಿ ಕೆಲಸ ಬೊಗಸೆ ಸಿಕ್ಕೀತು."

ಗಂಡ-ಹೆಂಡತಿ ಪರಸ್ಪರ ನೋಡಿಕೊಂಡರು. ತಮ್ಮ ಯೋಚನೆ ಮೊದಲು ಇದೇ ಆಗಿತ್ತು. ಆದರೆ ಜಯರಾಮನ ಜೊತೆಯಲ್ಲಿ ತಾವು ಹೋಗಬೇಕೇ? ಅವನ ಸಹಾಯದಲ್ಲಿ, ಅವನ ಹಂಗಿನಲ್ಲಿ ಉಳಿಯುವ ಬದಲು ದಾರಿಯ ತಿರುವು ಬೇರೆಯಾದರೇ ಒಳಿತು. ಇಬ್ಬರೂ ತಮ್ಮಲ್ಲೇ ಮಾತನಾಡಿಕೊಂಡರು.

"ಹರಿನಾರಾಯಣ ಚೆನ್ನಾಗಿ ಹಾಡುತ್ತಾನೆ—" ಜಯರಾಮ ಅವರಲ್ಲಿ ಉತ್ಸಾಹ ತುಂಬಿಸಿದ, "ಆಕಾಶವಾಣಿಯವರಿಗೆ ಹಾಡುಗಳೂ ಇಷ್ಟವಾಗಿವೆ. ಹಾಡಿನ ಕಂಟ್ರಾಕ್ಟ್ ಖಂಡಿತಾ ಬರುತ್ತೆ. ಅದರ ಜೊತೆ ಆಗಾಗ ಪುರಂದರ ದಾಸರ ಕೀರ್ತನೆಗಳನ್ನು ಸಾಯಂಕಾಲ ಇರಿಸಿದರೆ ಬೆಲ್ಲಕ್ಕೆ ಮುತ್ತುವ ಇರುವೆಗಳಂತೆ ಜನ ತುಂಬ್ತಾರೆ."

"ನನಗೇನು ಕೆಲಸ?" ಬೆರಳು ಚೀಪುತ್ತಿದ್ದ ಕೇಶವನ ಪ್ರಶ್ನೆ.

"ಮೊದ್ಲು ನಿನ್ನ ಹೆಬ್ಬೆರಳನ್ನು ಆಪರೇಶನ್ ಮಾಡಿಸುವದು!"

ಎಲ್ಲರೂ ಹೋ ಎಂದು ನಕ್ಕರು ಜೋರಾಗಿ. ಕೇಶವ ನಾಚಿಕೆ, ಅವಮಾನದಿಂದ ಕೈಯನ್ನು ಹಿಂದಿಟ್ಟುಕೊಂಡ.

"ನೀನು ಬೆರಳು ಚೀಪ್ತಾ ಇದ್ದರೆ ಯಾರೂ ಕೆಲಸ ಕೊಡಲಾರರು. ನನ್ನ ಕಂಪನಿಯಲ್ಲಿ ನಿನಗೆ ಕೆಲಸ ಸಿಗುತ್ತದೋ ಎಂದು ಪ್ರಯತ್ನಿಸ್ತೇನೆ."

"ಊಟದ ಹೋಟೆಲು ಇಡೋಣ ಎಂದುಕೊಂಡಿದ್ದೇನೆ."

"ಹಾಗಿದ್ದರೆ ಇನ್ನೂ ಒಳ್ಳೆಯದು. ನಿನ್ನ ಅತ್ತಿಗೆಗೂ ಕೆಲಸ ಎಲ್ಲಿಯಾದರೂ ಸಿಕ್ಕೀತು. ಇಂತಹ ಸಣ್ಣ ಊರಿನಲ್ಲಿ ನೊಣ ಹೊಡೆಯುವವರೂ ಬೆಂಗಳೂರಿನಲ್ಲಿ ಸ್ಥಿತಿವಂತರಾದದ್ದುಂಟು."

ಶಾಂಭವಿಯ ಹಣೆಯ ಮೇಲೆ ನಿರಿಗೆ ಮೂಡಿದವು. "ನಾವೆಲ್ಲರೂ ಅಲ್ಲಿ ಹೋದರೆ ಉಳಿಯುವ ಏರ್ಪಾಟು?"

"ನನಗೆ ಕೊಟ್ಟ ಗವರ್ನಮೆಂಟ್ ಕ್ವಾರ್ಟರ್ಸ್ ಇದೆ. ನಾಲ್ಕು ಕೋಣೆಗಳಷ್ಟು ದೊಡ್ಡದಿದೆ. ನಿಮ್ಮ ವಾಸಕ್ಕೆ ಕಷ್ಟವಾಗದು. ಒಂದೆರಡು ತಿಂಗಳು ಉಳಿಯಿರಿ. ಆಮೇಲೆ ಬೇರೆ ಮನೆ ನೋಡೋಣ."

ಬಹಳ ಹೊತ್ತು ಶಾಂಭವಿ, ಹರಿನಾರಾಯಣ ಇದೇ ಚರ್ಚೆಯಲ್ಲಿ ಮುಳುಗಿದರು. ಹರಿನಾರಾಯಣ ತುದಿಗಾಲಿನಲ್ಲಿ ಸಿದ್ಧನಾಗಿದ್ದ. ಆದರೆ ಶಾಂಭವಿಗೇ ಮನಸ್ಸಿರಲಿಲ್ಲ. ಕೊನೆಗೆ ಬೆಂಗಳೂರಿಗೆ ಹೊರಡುವದೆಂದೇ ತೀರ್ಮಾನಿಸಲಾಯಿತು. ಕೇಶವ ಕುಣಿದ ಮಂಗನಂತೆ.

"ಮದುವೆ ವಿಷಯ ಏನು ತೀರ್ಮಾನ ಮಾಡಿದಿರಿ ?" ಕೇಳಿದ ಹರಿ ನಾರಾಯಣ.

"ಬೆಂಗಳೂರಿಗೆ ಹೋದ್ಮೇಲೆ ನಮ್ಮ ಅನುಕೂಲ ನೋಡ್ಕೊಂಡು ರಿಜಿಷ್ಟರ್ಡ್ ಮದುವೆ ಮುಗಿಸೋಣ. ಆಮೇಲೆ ಗುರುಪ್ರರಕ್ಕೆ ಹೋಗಿ ಅಕ್ಕ ಭಾವ ಇವರ ಆಶೀರ್ವಾದ ಮತ್ತು ಸನ್ಮಾನದ ಊಟಕ್ಕಾಗಿ ನಾವಿಬ್ಬರೂ ಹೋಗ್ತೀವೆ."

ಬೆಂಗಳೂರಿಗೆ ಮರುದಿನ ಬೆಳಿಗ್ಗೆ ಹೊರಡಲಿರುವ ಬಸ್ಸಿಗೆ ಆ ಸಾಯಂಕಾಲ ಟಿಕೆಟ್ ತೆಗೆಯಲಾಯಿತು. ರಾತ್ರಿಯ ಊಟವನ್ನು ಹರಿನಾರಾಯಣನ ಮನೆಯಲ್ಲಿ ಮುಗಿಸಿ "ನಾಳೆ ಬೆಳಿಗ್ಗೆ ಬಸ್‌ಸ್ಟ್ಯಾಂಡ್‌ನಲ್ಲಿ ಭೇಟಿಯಾಗೋಣ —ನಾನು ಬರಲೇ ?" ಎಂದೆಂದು ತಾನಿಳಿದುಕೊಂಡಿದ್ದ ಹೋಟೆಲ್‌ಗೆ ಹೊರಟುಹೋದ ಜಯರಾಮ. ಆಗ ಬಾಗಿಲು ಮರೆಯಲ್ಲಿ ತನ್ನನ್ನೇ ನೋಡಿ ಮುಗುಳ್ನಗುತ್ತಿರುವ ಶಾರದೆ ಕಣ್ಣಿಗೆ ಬೀಳದಿರಲಿಲ್ಲ.

31

ಅನಿರೀಕ್ಷಿತ ಪ್ರಯಾಣ ಎಲ್ಲರಲ್ಲಿ ಹೊಸ ಧೈರ್ಯ, ಉತ್ಸಾಹ, ಸ್ಫೂರ್ತಿ ತುಂಬಿತು. ಕೇಶವ, ಈಶ್ವರಿಯರಿಗೆ ಆಗಲೇ ಹಗಲುಗನಸು. ಹರಿನಾರಾಯಣ ಬದುಕನ್ನು ಹಿಂದೆ ಹೇಗೆ ಎದುರಿಸುತ್ತಿದ್ದನೋ ಹಾಗೇ ನಿರ್ಲಿಪ್ತ. ಅವನು ಶಾಂಭವಿಯ ಮೇಲೆ ಭಾರ ಹಾಕಿದ್ದಾನೆ ಈಗಲೂ.

ಶಾಂಭವಿಯ ಮುಖದ ಮೇಲೆ ಇನ್ನೂ ಚಿಂತೆಯ ಗೆರೆಗಳು. ಜಯರಾಮನ ಆಶ್ರಯಕ್ಕೆ ಬೀಳುವದು ಅವಳಿಗಿಷ್ಟವಿಲ್ಲ. ಈಗಾಗಲೇ ಅನುಭವ ಪಾಠ ಕಲಿಸಿದೆ ಅವಳಿಗೆ. ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ವಾಸದ ಮನೆ ಸಿಕ್ಕೀತೆಂಬ ಧೈರ್ಯವಿಲ್ಲ. ಮೈಮುಚ್ಚುವ ಉಡುಪು ಆಗಬೇಕು. ಇನ್ನು ಹುಟ್ಟಲಿರುವ ಮಗುವಿನ ತಯಾರಿ ಬೇರೆ. ಮಲಗಿದಲ್ಲೇ ನರಳುತ್ತಿರುವ ಅತ್ತೆಗೆಗೆ ಏನಾದರೂ ವ್ಯವಸ್ಥೆ ಮಾಡಬೇಕು. ಕೇಶವನ ಮೈಮೆಲೆ ಜನಿವಾರ ಹಾಕಿಸದೆ ಇದ್ದರೆ ಹೇಗೆ?

ಕಣ್ಣಂಚು ಒದ್ದೆಯಾಯಿತು. ಈ ಊರಿನಲ್ಲಿ ಏನಿದೆಯೆಂದು ಬಂದು ಉಳಿದೆವೋ ತಮಗೇ ತಿಳಿದಿಲ್ಲ. ಇಲ್ಲಿ ಮುಟ್ಟಿದ್ದೆಲ್ಲವೂ ಮಣ್ಣು ! ಬೆಂಗಳೂರಿ

ಸಲ್ಲಿ ಮುಟ್ಟಿದ್ದೆಲ್ಲ ಚಿನ್ನವಾಗಬಲ್ಲದೇ? ಅಲ್ಲಿಯೂ ತಾವು ಕೈಸುಟ್ಟು ಕೊಂಡರೆ ಅನಂತರದ ಪಯಣ ಇನ್ನೆಲ್ಲಿಗೋ....ಯಾರಿಗೆ ಗೊತ್ತು ?— 'ಅಪರೂಪಕ್ಕೆ ಬ್ರಹ್ಮಸೃಷ್ಟಿಸಿದ ಹೆಣ್ಣು' ಎಂದು ಜನ ಹೇಳುತ್ತಿದ್ದರೂ ನನ್ನಲ್ಲಿ ಎಂತಹ ಉತ್ಸಾಹ, ಧೈರ್ಯ, ಕೆಚ್ಚು ಇತ್ತು ! ನನ್ನದೇ ಆದ ಸ್ವಂತದ ಗದ್ದೆ ಯಲ್ಲಿ ದುಡಿಯುವ ಉತ್ಸಾಹ, ನನ್ನದೇ ಆದ ಪುಟ್ಟ ಹಂಚಿನ ಮನೆಯನ್ನು ಕಟ್ಟಿಕೊಳ್ಳುವ ಕನಸಿನ ಗೋಪುರ. ಯಾವುದೂ ನೆರವೇರಲಿಲ್ಲ. ಇನ್ನು ಮುಂದಿನ ದಾರಿ ಬೇರೆಯೇ ಆಗಬಹುದು. ಹುಚ್ಚ, ಹೆಡ್ಡ ಗಂಡನನ್ನು ಪಡೆದಿದ್ದರೂ ಒಂದಲ್ಲ ಒಂದು ದಿನ ನನ್ನ ಬಾಳಿನಲ್ಲಿ ಮೇಲುಸ್ತರಕ್ಕೆ ಏರಿ ನಾನು ಮಿನುಗುತ್ತೇನೆ ಎಂದುಕೊಂಡಿದ್ದೆ. ಆ ನಂಬಿಕೆ ಈಗೆಲ್ಲಿ ಹೋಯಿತು? ಸುತ್ತಲೂ ತುಂಬಿದೆ ದಟ್ಟವಾದ ಕಾರ್ಮುಗಿಲು. ಕ್ಷೀಣವಾಗಿ ಕಾಣಿಸುವ ಬೆಳಕೂ ಕ್ಷಣದಲ್ಲಿ ಕಣ್ಮರೆಯಾಗುತ್ತದೆ.

ರಾತ್ರಿ ಕಳೆದು ನಸುಕು ಹರಿದರೂ ಶಾಂಭವಿಯ ಚಿಂತೆಯ ಗೆರೆಗಳು ವೃದ್ಧಿಸುತ್ತಲೇ ಹೋದವು. ಹೊಸ ಪಟ್ಟಣಕ್ಕೆ ವಲಸೆಹೋಗಿ ನೆಲೆ ಕಾಣುವ ವರೆಗೂ ಈ ಚಿಂತೆ ಮುಂದುವರಿಯುತ್ತಲೇ ಹೋಗುತ್ತವೆ!

ಅಷ್ಟರಲ್ಲಿ ಕೇಳಿಸಿತು ಹರಿನಾರಾಯಣನ ಸುಪ್ರಭಾತದ ಧ್ವನಿ. ಅನೇಕ ವರ್ಷಗಳಿಂದಲೂ ಅವಳು ಕೇಳುತ್ತಲೇ ಇದ್ದಾಳೆ.

"ಏಳು ನಾರಾಯಣನೆ, ಏಳು ಲಕ್ಷ್ಮೀರಮಣ,
ಏಳು ಗಿರಿಯೊಡೆಯ ಶ್ರೀವೆಂಕಟೇಶಾ....!"

ಕೇಳಿ ಕೇಳಿ ಕಿವಿಗಳಿಗೆ ಅಭ್ಯಾಸವಾಗಿದ್ದರೂ ಅವಳು ಈ ದಿನ ಅದರಲ್ಲೇ ಹೊಸತನವನ್ನು ಕಾಣಲು ಪ್ರಯತ್ನಿಸಿದಳು. ಮುಂದಿನ ದಾರಿಯಲ್ಲಿ ಎಂತಹ ಕಂದಕಗಳಿವೆಯೋ ಅವಳಿಗೆ ತಿಳಿಯದು. ಅವಳ ಎರಡೂ ಕೈಗಳು ಜೋಡಿ ಕೊಂಡವು, ಕಣ್ಣು ಮುಚ್ಚಿ ತನ್ನಲ್ಲೇ ಅಂದುಕೊಂಡಳು:

"ಓ ದೇವರೆ, ಜೀವನದ ಕತ್ತಲೆಯಿಂದ ನಮ್ಮನ್ನು ಬೆಳಕಿನೆಡೆಗೆ ಸಾಗಿಸು!"

ಕೆಲವು ಉತ್ತಮ ಕಾದಂಬರಿಗಳು

ತ್ರಿಶಂಕು—ವಿ. ಎಂ. ಇನಾಂದಾರ್	7 50
ಮನೆ—ಕೆ. ಟಿ. ಗಟ್ಟಿ	6 00
ಅಸ್ಪೃಶ್ಯ—ಮುಲ್ಕ್ ರಾಜ್ ಆನಂದ್ (ಅನು : ಡಿ. ಎ. ಶಂಕರ್)	7 50
ನಾಲ್ಕು x ನಾಲ್ಕು = ಒಂದು—ತ. ರಾ. ಸು.	7 50
ಅನುರಕ್ತೆ—ವ್ಯಾಸರಾಯ ಬಲ್ಲಾಳ	7 50
ರಂಗಣ್ಣನ ಕನಸಿನ ದಿನಗಳು—ಎಂ. ಆರ್. ಶ್ರೀನಿವಾಸಮೂರ್ತಿ	9 00
ಈ ಪರಿಯ ಬದುಕು—ವಿಶುಕುಮಾರ್	4 50
ರಾಗ-ಅನುರಾಗ—ತ. ಪು. ವೆಂಕಟರಾಮ್	10 00
ಗೊಂದಲ—ಪ್ರೇಮಾ ಭಟ್	7 50
ಪರದೆಯ ಹಿಂದೆ—ಡಿ. ವಿ. ಕೆ. ಮೂರ್ತಿ	6 50
ಜ್ಯೋತಿ ಬೆಳಗುತಿದೆ—ಎಚ್. ತಿಪ್ಪೇರುದ್ರಸ್ವಾಮಿ	12 50
ನಿಸರ್ಗ—ಮಿರ್ಜಿ ಅಣ್ಣಾರಾಯ	6 50
ಶಪ್ತವಾಪಿ—ಸಿ. ಎನ್. ಜಯಲಕ್ಷ್ಮೀದೇವಿ	13 50
ಗೆಲುವು—ಈಚನೂರು ಶಾಂತ	5 00
ಇದಿರುಗಾಳಿ—ಅನಸೂಯ ರಾಮರೆಡ್ಡಿ	7 50
ಜೀವನಜಾಲ—ಎ. ಪಂಕಜ	6 00
ಪರಿಗ್ರಹಣ—ಎಚ್. ಎಸ್. ಗೋಪಾಲರಾಯ	8 50
ಸ್ಮರಣೆಯೊಂದೇ ಸಾಲದೆ ?—ನಿರಂಜನ	4 00
ಸ್ವಾಮೀ—ರಣಜಿತ್ ದೇಸಾಯಿ (ಅನು : ಬಿ. ಜಿ. ಗೋಖಲೆ)	15 00
ಬೋರಬನ್ ಕ್ಲಬ್—ಕೃಷ್ಣ ಚಂದರ (ಅನು : ಪಂಚಾಕ್ಷರೀ ಹಿರೇಮಠ)	4 00
ಗಾಲಿ ಉರುಳಿತು—ಥಾಮಸ್ ಹಾರ್ಡಿ (ಅನು : ವಿ. ನಾಗರಾಜರಾವ್)	12 50
ಗುಡಿಯ ಸುತ್ತಮುತ್ತ—ಜನಾರ್ದನ ಗುರ್ಕಾರ	3 50
ಪ್ರತಿಮಾ—ಶೈಲಜಾ ರಾಜೀ (ಅನು : ವಿದ್ಯಾ ಡಿ. ವಿ. ಮೂರ್ತಿ)	5 00
ಬದುಕು ಸುಂದರ ; ಆದರೆ···—ತಕಟಿ ಶಿವಶಂಕರ ಪಿಳ್ಳೈ (ಅನು : ಬಿ. ಕೆ. ತಿಮ್ಮಪ್ಪ)	4 50
ನಾಯಿಕೆ—ವಿಮಲ ಮಿತ್ರ (ಅನು : ಎಸ್. ಕೆ. ರಮಾದೇವಮ್ಮ)	7 50
ಪ್ರೇಮದ ಕೊಡುಗೆ—ಕೆ. ಆರ್. ಪದ್ಮಜೆ	6 50
ಭಗ್ನತಂತು—ಕಲಾಪ್ರಿಯ	5 50
ಶಾಲಿನಿ—ದಯಾನಂದ ತೊರ್ಕೆ	8 50
ಹರಿಯೂಪಿಯಾ—ವೈ. ಎಸ್. ಲೂಯಿಸ್	5 00
ಗೂಡು ಬಿಟ್ಟ ಹಕ್ಕಿ—ಎನ್. ಪಂಕಜ	6 00
ವೀಣಾ—ಡಾ. ಕೆ. ವಿ. ರಾವ್	18 00
ಪುನರ್ಮಿಲನ—ಎ. ಪಿ. ಮಾಲತಿ	6 00

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

ಮಿನುಗಿದ ಚುಕ್ಕೆ / ರೂ. 15.00